ಬುಧವಾರ, ಜೂನ್ 10, 2026 | ₹ 7.00
prajavani.net | prajavani
www.prajavani.net

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಪ್ರೀತಿಯ ಮುತ್ತು...
ಇಂದೋರ್‌ನಲ್ಲಿ ನಡೆದ ನಿರ್ಗಮನ ಪಥಸಂಚಲನದ ಸಂದರ್ಭದಲ್ಲಿ, ನೂತನವಾಗಿ ನೇಮಕಗೊಂಡ ಕಾನ್‌ಸ್ಟೆಬಲ್‌ಗೆ ಕುಟುಂಬವರಿಂದ ಸಿಹಿಮುತ್ತು



ಪ್ರತಿಭಟನೆ
ಮೇಕೆದಾಟು ಯೋಜನೆ ಆರಂಭಕ್ಕೆ ಆಗ್ರಹಿಸಿ ಮೈಸೂರಿನ ಹಳೇ ಡಿ.ಸಿ ಕಚೇರಿ ಎದುರು ಕನ್ನಡಾಂಬೆ ರಕ್ಷಣಾ ವೇದಿಕೆ ಸದಸ್ಯರು ಪ್ರತಿಭಟನೆ ನಡೆಸಿದರು





ಚಳ್ಳಕೆರೆ ಕ್ಷೇತ್ರದ ಅಭಿವೃದ್ಧಿಯ ಹರಿಕಾರರು, ಜನಪರ ನಾಯಕರು, ಗೌರವಾನ್ವಿತ ಶಾಸಕರಾದ

ಶ್ರೀ ಟಿ. ರಘುಮೂರ್ತಿಯವರಿಗೆ ಜನ್ಮದಿನದ ಹಾರ್ದಿಕ ಶುಭಾಶಯಗಳು



ಚಳ್ಳಕೆರೆ ರಾಜಕೀಯ ಇತಿಹಾಸದಲ್ಲಿ ಹೊಸ ಅಧ್ಯಾಯ ಬರೆದ ನಾಯಕ

ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ಕ್ಷೇತ್ರದ ಕಡಬನಕಟ್ಟೆ ಗ್ರಾಮದ ಟಿ. ತಿಪ್ಪಯ್ಯ ಹಾಗೂ ಬಸಮ್ಮ ದಂಪತಿಯ ದ್ವಿತೀಯ ಪುತ್ರರಾಗಿ 1963ರ ಜೂನ್ 10ರಂದು ಜನಿಸಿದ ಟಿ. ರಘುಮೂರ್ತಿ ಅವರು, ದಾವಣಗೆರೆಯ ಯು.ಬಿ.ಡಿ.ಟಿ. ಇಂಜಿನಿಯರಿಂಗ್ ಕಾಲೇಜಿನಲ್ಲಿ ಸಿವಿಲ್ ಎಂಜಿನಿಯರಿಂಗ್ ಪದವಿ ಪಡೆದಿದ್ದಾರೆ.

ವೃತ್ತಿಯಲ್ಲಿ ಕಾರ್ಯಪಾಲಕ ಅಭಿಯಂತರಾಗಿ ಸೇವೆ ಸಲ್ಲಿಸಿದ ಬಳಿಕ ಸ್ವಯಂ ನಿವೃತ್ತಿ ಪಡೆದು, ಕಾಂಗ್ರೆಸ್ ಪಕ್ಷದ ಸಂಘಟನೆ ಹಾಗೂ ಬಲವರ್ಧನೆಗೆ ಶ್ರಮಿಸಿ, 2013ರಲ್ಲಿ ಮೊದಲ ಬಾರಿಗೆ ಚಳ್ಳಕೆರೆ ಕ್ಷೇತ್ರದ ಶಾಸಕರಾಗಿ ಆಯ್ಕೆಯಾದರು. 2018ರಲ್ಲಿ ಎರಡನೇ ಬಾರಿ ಹಾಗೂ 2023ರಲ್ಲಿ ಹ್ಯಾಟ್ರಿಕ್ ಗೆಲುವು ಸಾಧಿಸಿ ಮೂರನೇ ಬಾರಿಗೆ ಶಾಸಕರಾಗಿ ಜನಮನ್ನಣೆ ಪಡೆದರು.

ಚಳ್ಳಕೆರೆ ವಿಧಾನಸಭಾ ಕ್ಷೇತ್ರದ ಇತಿಹಾಸದಲ್ಲೇ ಒಂದೇ ಪಕ್ಷದಿಂದ ಸತತ ಮೂರು ಬಾರಿ ಗೆಲುವು ಸಾಧಿಸಿದ ಏಕೈಕ ಶಾಸಕರಾಗಿ ದಾಖಲೆ ನಿರ್ಮಿಸಿರುವ ಅವರು, ಪಕ್ಷನಿಷ್ಠೆ, ಸಂಘಟನಾ ಚಾತುರ್ಯ ಹಾಗೂ ಜನಸಾಮಾನ್ಯರ ಸಮಸ್ಯೆಗಳಿಗೆ ಸ್ಪಂದಿಸುವ ಸರಳ-ಸಜ್ಜನ ಜನಪ್ರತಿನಿಧಿಯಾಗಿ ಅಭಿವೃದ್ಧಿಯ ಹರಿಕಾರರಾಗಿ ಗುರುತಿಸಿಕೊಂಡಿದ್ದಾರೆ.



2013-2018ರ ಅವಧಿಯಲ್ಲಿ ಶೈನಿಂಗ್ ಇಂಡಿಯಾ ಸಂಸ್ಥೆಯಿಂದ ಅತ್ಯುತ್ತಮ ಶಾಸಕ ಪ್ರಶಸ್ತಿ ಪಡೆದುಕೊಂಡ ರಾಜ್ಯದ 10 ಶಾಸಕರಲ್ಲಿ ಶ್ರೀ ರಘುಮೂರ್ತಿ ಅವರು ಒಬ್ಬರಾಗಿರುತ್ತಾರೆ.

ಶಿಕ್ಷಣ ಕ್ಷೇತ್ರಕ್ಕೆ ನೀಡಿದ ಕೊಡುಗೆ




ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಚಳ್ಳಕೆರೆ



ಕರ್ನಾಟಕ ಪಬ್ಲಿಕ್ ಸ್ಕೂಲ್ ತುರುವನೂರು & ಪರಶುರಾಮಪುರ

- ಚಳ್ಳಕೆರೆ ಸೈನ್ಸ್ ಸಿಟಿಗೆ ಪೂರಕವಾಗಿ ಐಐಎಸ್‌ಸಿ, ಇಸ್ರೋ, ಡಿಆರ್‌ಡಿಒ ಹಾಗೂ ಬಾರ್ಕ್ ಸಂಸ್ಥೆಗಳ ಸಮೀಪ ₹65 ಕೋಟಿ ವೆಚ್ಚದಲ್ಲಿ ಎಂಜಿನಿಯರಿಂಗ್ ಕಾಲೇಜು ಸ್ಥಾಪನೆಗೆ ಮುಂದಾಳತ್ವ.
- ಯುವಕರ ಕೌಶಲ್ಯಾಭಿವೃದ್ಧಿ ಹಾಗೂ ಉದ್ಯೋಗಾವಕಾಶಕ್ಕಾಗಿ ₹48.5 ಕೋಟಿ ವೆಚ್ಚದಲ್ಲಿ ಜಿಟಿಟಿಸಿ (GTTC) ಕೇಂದ್ರ ಸ್ಥಾಪನೆ.
- ಚಳ್ಳಕೆರೆ ಪ್ರಥಮ ದರ್ಜೆ ಕಾಲೇಜನ್ನು ಮೈಸೂರು ವಿಶ್ವವಿದ್ಯಾಲಯದ ಮಾದರಿಯಲ್ಲಿ ಅಭಿವೃದ್ಧಿಪಡಿಸಲಾಗಿದೆ.
- ತುರುವನೂರಿನಲ್ಲಿ ಪದವಿ ಕಾಲೇಜು ಹಾಗೂ ಪಿಯು ಕಾಲೇಜು ಸ್ಥಾಪನೆ.
- ಪರಶುರಾಂಪುರದಲ್ಲಿ ಕೆಪಿಎಸ್ ಶಾಲೆ, ಬಿಎಂಸಿಎಚ್‌ಎಸ್ ಹಾಗೂ ಹೆಗ್ಗೆರೆ ತಾಯಮ್ಮ ಶಾಲೆಗಳ ಅಭಿವೃದ್ಧಿ.
- ಕ್ಷೇತ್ರ ಮಾದರಿ ಶಾಲೆ, ಇಂದಿರಾ ಗಾಂಧಿ ವಸತಿ ಶಾಲೆ ಹಾಗೂ ವಿದ್ಯಾರ್ಥಿ ನಿಲಯಗಳ ನಿರ್ಮಾಣ.
- ಹೈಟೆಕ್ ಮಾದರಿಯ ಶೈಕ್ಷಣಿಕ ಕಟ್ಟಡಗಳ ನಿರ್ಮಾಣಕ್ಕೆ ವಿಶೇಷ ಆದ್ಯತೆ.
- ತುರುವನೂರು ಪದವಿ ಕಾಲೇಜನ್ನು ಬೇರೆಡೆಗೆ ಸ್ಥಳಾಂತರಿಸುವ ಪ್ರಸ್ತಾವನೆಗೆ ಪ್ರತಿಭಟನೆ ಹಾಗೂ ಪಾದಯಾತ್ರೆಯ ಮೂಲಕ ಕಾಲೇಜು ಉಳಿಸಿಕೊಳ್ಳುವಲ್ಲಿ ಯಶಸ್ಸು.

ಗ್ರಾಮೀಣಾಭಿವೃದ್ಧಿಗೆ ಕೊಡುಗೆಗಳು



181.45 MLD ಸಾಮರ್ಥ್ಯದ ಜಲ ಶುದ್ಧೀಕರಣ ಘಟಕ ಕ್ಲ್ಯಾರಿ ಫ್ಲೊಕ್ಯುಲೇಟರ್‌ಗಳು



ಜೆಕ್ ವೆಲ್ ಕಮ್ ಪಂಪ್ ಹೌಸ್ ಮುಂಭಾಗದ ದೃಶ್ಯ

- ₹2,280 ಕೋಟಿ ವೆಚ್ಚದ ತುಂಗಭದ್ರಾ ಹಿನ್ನೀರು ಯೋಜನೆ ಹಾಗೂ ಜಲ್ ಜೀವನ್ ಮಿಷನ್ ಯೋಜನೆಯಡಿ ಕ್ಷೇತ್ರದ ಎಲ್ಲಾ ಗ್ರಾಮಗಳು ಮತ್ತು ಮನೆಗಳಿಗೆ ಶಾಶ್ವತ ಕುಡಿಯುವ ನೀರಿನ ಸಂಪರ್ಕ ಕಲ್ಪಿಸಲಾಗಿದೆ.
- ಕ್ಷೇತ್ರದ ಎಲ್ಲಾ ಗ್ರಾಮಗಳಿಗೆ ರಸ್ತೆ ಸಂಪರ್ಕ ಕಲ್ಪಿಸಲಾಗಿದ್ದು, ಶೇ.70-80ರಷ್ಟು ಸಿಸಿ ರಸ್ತೆಗಳ ನಿರ್ಮಾಣದ ಜೊತೆಗೆ 10,000 ಮನೆಗಳ ನಿರ್ಮಾಣ ಪೂರ್ಣಗೊಂಡಿದ್ದು, ಅಲೆಮಾರಿ ಸಮುದಾಯದ 3,502 ಮನೆಗಳು ನಿರ್ಮಾಣ ಹಂತದಲ್ಲಿವೆ.

ನಗರಾಭಿವೃದ್ಧಿಗೆ ಕೊಡುಗೆಗಳು



ಮಿನಿ ವಿಧಾನಸೌಧ

- ಚಳ್ಳಕೆರೆ ನಗರದಲ್ಲಿ ಕೆಎಸ್‌ಆರ್‌ಟಿಸಿ ಹಾಗೂ ಖಾಸಗಿ ಬಸ್ ನಿಲ್ದಾಣಗಳ ನಿರ್ಮಾಣ.
- ಪಾವಗಡ-ಚಿತ್ರದುರ್ಗ ಹಾಗೂ ಬಳ್ಳಾರಿ-ಬೆಂಗಳೂರು ಮಾರ್ಗಗಳ 100 ಅಡಿ ರಸ್ತೆ ಅಗಲೀಕರಣ ಕಾಮಗಾರಿ ಪ್ರಗತಿಯಲ್ಲಿದೆ.
- ನಗರಸಭೆ ಕಟ್ಟಡ, ಮಿನಿ ವಿಧಾನಸೌಧ, ತಾಲೂಕು ಕಚೇರಿ, ಕೃಷಿ ಇಲಾಖೆ, ಲೋಕೋಪಯೋಗಿ ಇಲಾಖೆ ಸೇರಿದಂತೆ ವಿವಿಧ ಸರ್ಕಾರಿ ಕಟ್ಟಡಗಳ ನಿರ್ಮಾಣ.
- ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಹಯೋಗದೊಂದಿಗೆ 1,170 ಸ್ಲಂ ಬೋರ್ಡ್ ಮನೆಗಳ ನಿರ್ಮಾಣ ಪ್ರಗತಿಯಲ್ಲಿದೆ.
- ಜವಹರಲಾಲ್ ನೆಹರೂ ವೃತ್ತ ನವೀಕರಣ ಹಾಗೂ ಡಾ. ಬಾಬಾಸಾಹೇಬ್ ಅಂಬೇಡ್ಕರ್, ಮಹರ್ಷಿ ವಾಲ್ಮೀಕಿ, ಬಾಬು ಜಗಜೀವನ ರಾಮ್ ಮತ್ತು ಕನಕ ವೃತ್ತಗಳ ನಿರ್ಮಾಣ.

ಸಮುದಾಯ ಭವನಗಳು



ವಾಲ್ಮೀಕಿ ಭವನ, ಚಳ್ಳಕೆರೆ



ಜೆಜಿ ಭವನ, ಚಳ್ಳಕೆರೆ

ಚಳ್ಳಕೆರೆ ಕ್ಷೇತ್ರಕ್ಕೆ ಸಂಬಂಧಿಸಿದಂತೆ 2013 ರಿಂದ ಇಲ್ಲಿಯವರೆಗೆ ಚಳ್ಳಕೆರೆ ನಗರ ಹೋಬಳಿ ಕೇಂದ್ರ, ಪಂಚಾಯತಿ ಕೇಂದ್ರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ವಿವಿದ ಜಾತಿ ಜನಾಂಗಕ್ಕೆ ಅವಶ್ಯಕತೆ ಮತ್ತು ಜನಸಂಖ್ಯೆಗೆ ಅನುಗುಣವಾಗಿ ವಾಲ್ಮೀಕಿ ಭವನ, ಅಂಬೇಡ್ಕರ್ ಭವನ, ಕನಕ ಭವನ, ಶ್ರೀ.ಕೃಷ್ಣ ಭವನ, ಭೋವಿ ಭವನ, ಪದ್ಮಶಾಲಿ ಭವನ, ಈಡಿಗರ ಭವನ, ಸೇವಾಲಾಲ್ ಭವನ ಹೀಗೆ ಒಟ್ಟಾರೆಯಾಗಿ 366 ಭವನಗಳು ಮಂಜೂರಾಗಿದ್ದು ಸುಮಾರು 340 ಭವನಗಳು ಸಂಪೂರ್ಣಗೊಳಿಸಲಾಗಿದೆ.

ಗ್ಯಾರೆಂಟಿ ಯೋಜನೆಗಳ ಅನುಷ್ಠಾನ

ಮೂರನೇ ಬಾರಿ ಶಾಸಕರಾಗಿ ಆಯ್ಕೆಯಾದ ಬಳಿಕ ತಾಲೂಕು ಮಟ್ಟದ ಅಧಿಕಾರಿಗಳೊಂದಿಗೆ 29 ಜನಸಂಪರ್ಕ ಸಭೆಗಳನ್ನು ನಡೆಸಿ, ಗೃಹ ಜ್ಯೋತಿ, ಗೃಹ ಲಕ್ಷ್ಮಿ, ಅನ್ನಭಾಗ್ಯ ಹಾಗೂ ಯುವನಿಧಿ ಸೇರಿದಂತೆ ಸರ್ಕಾರದ ಗ್ಯಾರಂಟಿ ಯೋಜನೆಗಳನ್ನು ಪರಿಣಾಮಕಾರಿಯಾಗಿ ಜನರಿಗೆ ತಲುಪಿಸುವಲ್ಲಿ ಯಶಸ್ವಿಯಾಗಿದ್ದಾರೆ. ಜೊತೆಗೆ, ಜನಪರ ಯೋಜನೆಗಳ ಮೂಲಕ ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷದ ಬಲವರ್ಧನೆಗೂ ಪ್ರಮುಖ ಕೊಡುಗೆ ನೀಡಿದ್ದಾರೆ.

ಆರೋಗ್ಯ ಕ್ಷೇತ್ರಕ್ಕೆ ಕೊಡುಗೆಗಳು



ಮದರ್ & ಚೈಲ್ಡ್ ಆಸ್ಪತ್ರೆ

- ಚಳ್ಳಕೆರೆ ಸಾರ್ವಜನಿಕ ಆಸ್ಪತ್ರೆ ಆವರಣದಲ್ಲಿ ನೂತನ ತಾಯಿ ಮತ್ತು ಮಕ್ಕಳ ಆಸ್ಪತ್ರೆ ನಿರ್ಮಾಣ.
- ಚಳ್ಳಕೆರೆ ಸಾರ್ವಜನಿಕ ಆಸ್ಪತ್ರೆಯಲ್ಲಿ ಡಯಾಲಿಸಿಸ್ ಸೆಂಟರ್, ಐಸಿಯು ವಾರ್ಡ್ ಹಾಗೂ 130 ಹಾಸಿಗೆಗಳ ಎಲ್ಲಾ ವಾರ್ಡ್‌ಗಳಿಗೆ ಆಮ್ಲಜನಕ ಪೂರೈಕೆ ವ್ಯವಸ್ಥೆ ಕಲ್ಪಿಸಲಾಗಿದೆ.
- ಚನ್ನಮ್ಮ ನಾಗತಿಹಳ್ಳಿ, ಮೀರಾಸಾಬಿಹಳ್ಳಿ, ಸಾಣೀಕೆರೆ (ಟಿ.ಎನ್. ಕೋಟೆ) ಹಾಗೂ ದೊಡ್ಡಚೆಲ್ಲೂರಿನಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳ ನಿರ್ಮಾಣ.
- ಪರಶುರಾಂಪುರ ಸಮುದಾಯ ಆರೋಗ್ಯ ಕೇಂದ್ರದ ನವೀಕರಣ ಮತ್ತು ಮೂಲಸೌಕರ್ಯ ಅಭಿವೃದ್ಧಿ. ವಿವಿಧ ಗ್ರಾಮಗಳಲ್ಲಿ ಎ.ಎನ್.ಎಂ. ಉಪಕೇಂದ್ರಗಳ ನಿರ್ಮಾಣದ ಮೂಲಕ ಗ್ರಾಮೀಣ ಪ್ರದೇಶಗಳಲ್ಲಿ ಆರೋಗ್ಯ ಸೇವೆಗಳನ್ನು ಮತ್ತಷ್ಟು ಬಲಪಡಿಸಲಾಗಿದೆ.

ಸಾಮಾಜಿಕ ಕಾರ್ಯಗಳು




ಶಾಸಕರ ಕಚೇರಿಯಲ್ಲಿ 2013 ರಿಂದ ಪ್ರತಿನಿತ್ಯ ಮಧ್ಯಾಹ್ನದ ಊಟದ ವ್ಯವಸ್ಥೆ



ಕೋವಿಡ್ ಸಂದರ್ಭದಲ್ಲಿ ಸಾರ್ವಜನಿಕರಿಗೆ ಆಹಾರದ ಕಿಟ್ ವಿತರಣೆ

- ಬೃಹತ್ ಉದ್ಯೋಗ ಮೇಳ ಆಯೋಜಿಸಿ, 100ಕ್ಕೂ ಹೆಚ್ಚು ಖಾಸಗಿ ಕಂಪನಿಗಳ ಸಹಯೋಗದೊಂದಿಗೆ 10,000+ ವಿದ್ಯಾವಂತ ನಿರುದ್ಯೋಗಿಗಳಿಗೆ ಉದ್ಯೋಗಾವಕಾಶ ಕಲ್ಪಿಸಲಾಗಿದೆ
- 2013ರಿಂದ ಹೊಸ ಮದ್ಯದಂಗಡಿಗಳಿಗೆ ಹೊಸ ಮದ್ಯದಂಗಡಿ - - ಗಳನ್ನು ಸ್ಥಾಪಿಸಲು ಅವಕಾಶ ನೀಡದೆ ಕ್ಷೇತ್ರವನ್ನು ಮದ್ಯಮುಕ್ತ ಮಾದರಿ ಕ್ಷೇತ್ರವಾಗಿದೆ .
- ಕ್ಷೇತ್ರದಲ್ಲಿ ಕಾನೂನು ಬಾಹಿರವಾಗಿ ನಡೆಯುತ್ತಿದ್ದ ಮರಳು ಗಣಿಗಾರಿಕೆ ತಡೆಯೊಡ್ಡಲಾಗಿದೆ.

ಶುಭಕೋರುವವರು:
ಶ್ರೀ ಜಿ.ಟಿ.ಬಾಬುರೆಡ್ಡಿ
ಜಿಲ್ಲಾ ಗ್ಯಾರಂಟಿ ಸಮಿತಿ ಉಪಾಧ್ಯಕ್ಷರು,
ಹೋಟೆಲ್ ದುರ್ಗದ ಸಿರಿ ಪ್ರೈ.ಲಿ,
ಚಿತ್ರದುರ್ಗ.



ಕಾಂಗ್ರೆಸ್ ಪಕ್ಷದ ಬಲವರ್ಧನೆಗೆ ಕೈಗೊಂಡ ಕಾರ್ಯಕ್ರಮಗಳು

- 2022ರ ಭಾರತ್ ಜೋಡೋ ಯಾತ್ರೆಯನ್ನು ಕ್ಷೇತ್ರದಲ್ಲಿ ಯಶಸ್ವಿಯಾಗಿ ಆಯೋಜಿಸಿ, ಚಳ್ಳಕೆರೆ ಕ್ಷೇತ್ರದಲ್ಲಿ 45 ಕಿ.ಮೀ ಹಾಗೂ ಹಿರಿಯೂರು-ಬಳ್ಳಾರಿ ಗಡಿವರೆಗೆ ಸುಮಾರು 150 ಕಿ.ಮೀ ಪಾದಯಾತ್ರೆಯಲ್ಲಿ ಭಾಗವಹಿಸಿದರು.
- 75ನೇ ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ಮೋದೂರಿನಿಂದ ತುರುವನೂರಿನವರೆಗೆ ಪಾದಯಾತ್ರೆ ನಡೆಸಿದರು.
- ಎಐಸಿಸಿ ಮತ್ತು ಕೆಪಿಸಿಸಿ ನಿರ್ದೇಶನದಂತೆ ಪಕ್ಷದ ಎಲ್ಲಾ ಕಾರ್ಯಕ್ರಮಗಳನ್ನು ಕ್ಷೇತ್ರದಲ್ಲಿ ಯಶಸ್ವಿಯಾಗಿ ಅನುಷ್ಠಾನಗೊಳಿಸಿದರು.
- 2013-2023ರ ಅವಧಿಯಲ್ಲಿ ವಿವಿಧ ಚುನಾವಣೆಗಳಲ್ಲಿ ಪಕ್ಷ ಸಂಘಟನೆ ಬಲಪಡಿಸಿ, 78 ಸಾವಿರ ಡಿಜಿಟಲ್ ಸದಸ್ಯತ್ವ ನೋಂದಣಿ ಮೂಲಕ ಚಳ್ಳಕೆರೆ ಕ್ಷೇತ್ರವನ್ನು ರಾಜ್ಯದ ಅಗ್ರ 6 ಕ್ಷೇತ್ರಗಳಲ್ಲಿ ಒಂದಾಗಿಸಿದರು.
- ಬಳ್ಳಾರಿ ಲೋಕಸಭಾ, ಬಳ್ಳಾರಿ ಗ್ರಾಮೀಣ, ನಂಜನಗೂಡು, ಸಂಡೂರು, ದಾವಣಗೆರೆ ಹಾಗೂ ತೆಲಂಗಾಣದ ವಿಧಾನಸಭಾ ಕ್ಷೇತ್ರದ ಉಪಚುನಾವಣೆಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳ ಗೆಲುವಿಗಾಗಿ ಸಕ್ರಿಯವಾಗಿ ಕಾರ್ಯನಿರ್ವಹಿಸಿದರು.



ನೀರಾವರಿಗೆ ಕೊಡುಗೆಗಳು



ವಾಣಿವಿಲಾಸ ಸಾಗರ ಜಲಾಶಯಕ್ಕೆ ಬಾಗಿನ ಸಮರ್ಪಣೆ ಮಾಡಿದ ಕ್ಷಣ



ವೇದಾವತಿ ನದಿ ಬಾರೇಜ್ ನಿರ್ಮಾಣ , ಬೊಂಬೆರಹಳ್ಳಿ

- ಭದ್ರ ಮೇಲ್ದಂಡೆ ಯೋಜನೆಯ ಪರಿಷ್ಕೃತ ಡಿಪಿಆರ್ ಅಡಿಯಲ್ಲಿ ವಾಣಿವಿಲಾಸ ಸಾಗರದಿಂದ ಚಳ್ಳಕೆರೆ ಕ್ಷೇತ್ರದ ಕುಡಿಯುವ ನೀರಿಗಾಗಿ 0.25 ಟಿಎಂಸಿ ನೀರು ಮಂಜೂರು.
- ಭದ್ರಾ ಮೇಲ್ದಂಡೆ ಯೋಜನೆಯಡಿ ಪರಶುರಾಂಪುರದಲ್ಲಿ ಬ್ಯಾರೇಜ್ ಹಾಗೂ ಚೌಳೂರಿನಲ್ಲಿ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಾಣ.
- ಗೋಸಿಕೆರೆ, ತೊರೆಬೀರನಹಳ್ಳಿ ಹಾಗೂ ಮತ್ಸಮುದ್ರದಲ್ಲಿ ಬ್ರಿಡ್ಜ್ ಕಂ ಬ್ಯಾರೇಜ್‌ಗಳಿಗೆ ಮಂಜೂರಾತಿ.
- ಸಣ್ಣ ನೀರಾವರಿ ಇಲಾಖೆಯಿಂದ ಬೊಂಬೇರಹಳ್ಳಿ, ಗೊರ್ಲತ್ತು ಹಾಗೂ ಮೋದೂರಿನಲ್ಲಿ ಬ್ಯಾರೇಜ್ ನಿರ್ಮಾಣ.
- ತುರುವನೂರು ಹೋಬಳಿಯ ಜಿನಗಿಹಳ್ಳಕ್ಕೆ ಪಾಪೇನಹಳ್ಳಿ-ಸುಲ್ತಾನಿಪುರ ಸಮೀಪ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಾಣ.
- ಗಂಗಾ ಕಲ್ಯಾಣ ಯೋಜನೆಯಡಿ ಕ್ಷೇತ್ರದಾದ್ಯಂತ ಕೊಳವೆಬಾವಿಗಳ ನಿರ್ಮಾಣ.
- ತುಂಗಭದ್ರಾ ಹಿನ್ನೀರು ಯೋಜನೆಯಡಿ ಎಲ್ಲಾ ಗ್ರಾಮಗಳಿಗೆ ಶಾಶ್ವತ ಕುಡಿಯುವ ನೀರಿನ ವ್ಯವಸ್ಥೆ.
- ಸೂರನಹಳ್ಳಿ, ಹುಣಸೆಕಟ್ಟೆ, ಕೂನಬೇವು, ಹಾಯ್ಕಲ್ಲು , ಕರಿಯಮ್ಮನಹಟ್ಟಿ ಹಾಗೂ ಪೇಲಾರಹಟ್ಟಿ ಗ್ರಾಮಗಳ ಬಳಿ ಚೆಕ್ ಡ್ಯಾಂಗಳ ನಿರ್ಮಾಣ.

ಕ್ರೀಡಾ ಹಾಗು ಕೈಗಾರಿಕೆ ಕ್ಷೇತ್ರಕ್ಕೆ ಕೊಡುಗೆಗಳು



ಶಾಯಿ ಕಂಪನಿಯ ಬೃಹತ್ ಗಾರ್ಮೆಂಟ್ ಕಾರ್ಖಾನೆ



ನೂತನವಾಗಿ ನಿರ್ಮಾಣವಾಗಲಿರುವ ಕ್ರೀಡಾಂಗಣ ಸಂಕೀರ್ಣ

- 20 ವರ್ಷಗಳ ಅಕ್ರಮ ಚೆಕ್‌ಪೋಸ್ಟ್ ತೆರವುಗೊಳಿಸಿ ಸಾರ್ವಜನಿಕರ ಬೇಡಿಕೆ ಈಡೇರಿಸಲಾಗಿದೆ.
- ಬುಡ್ನಹಟ್ಟಿ ಸಮೀಪ 8,000 ಉದ್ಯೋಗ ಸೃಷ್ಟಿಸುವ ಬೃಹತ್ ಗಾರ್ಮೆಂಟ್ ಕಾರ್ಖಾನೆ ಸ್ಥಾಪನೆಗೆ ಚಾಲನೆ.
- ಕೆಎಸ್‌ಎಸ್‌ಐಡಿಸಿ ವತಿಯಿಂದ ಕೈಗಾರಿಕಾ ನಿವೇಶನ ಹಾಗೂ ಎಸ್‌ಸಿ/ಎಸ್‌ಟಿ ಉದ್ಯಮಿಗಳಿಗೆ ಶೆಡ್‌ಗಳ ನಿರ್ಮಾಣ.
- ಪರಶುರಾಂಪುರ-ಚಳ್ಳಕೆರೆ ರಸ್ತೆಯಲ್ಲಿ 13 ಎಕರೆ ಸುಸಜ್ಜಿತ ಕ್ರೀಡಾಂಗಣ ನಿರ್ಮಾಣ ಪ್ರಗತಿಯಲ್ಲಿದೆ.


ಶ್ರೀ ಕೆ.ಎಸ್. ಈಶ್ವರಪ್ಪ ಅಭಿಮಾನಿ ಬಳಗ ಸಹಕಾರ
ಶ್ರೀಗಂಧ ಸದ್ಭಾವ-ಸದ್ವಿಚಾರ-ಸದಭಿರುಚಿ-ಸತ್ಕಾರ್ಯ ಶ್ರೀ ಮಾರಿಕಾಂಬ ಮೈಕ್ರೋಫೈನಾನ್ಸ್ ಪ್ರೈ ಲಿ.
ಶ್ರೀ ಶ್ರೀ ಶ್ರೀ ವಿಶ್ವಪ್ರಸನ್ನತೀರ್ಥ ಸ್ವಾಮೀಜಿ
ಪೇಜಾವರ ಮಠ, ಉಡುಪಿ.
ಡಾ. ಶ್ರೀ ಮಲ್ಲಿಕಾರ್ಜುನ ಮುರುಘರಾಜೇಂದ್ರ ಸ್ವಾಮೀಜಿ
ಶ್ರೀ ಮುರುಘರಾಜೇಂದ್ರ ಮಹಾಸಂಸ್ಥಾನ ಮಠ, ಆನಂದಪುರ, ಶ್ರೀ ಬೆಕ್ಕಿನ ಕಲ್ಮಠ, ಶಿವಮೊಗ್ಗ.
ಶ್ರೀ ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ
ಶಿವಶರಣ ಮಾದಾರ ಚನ್ನಯ್ಯ ಗುರುಪೀಠ, ಚಿತ್ರದುರ್ಗ.
ಪೂಜ್ಯ ಶ್ರೀ ಶ್ರೀ ನಾದಮಯಾನಂದನಾಥ ಸ್ವಾಮೀಜಿ
ಆದಿಯಂಚನಗಿರಿ ಶಾಖಾ ಮಠ, ಶಿವಮೊಗ್ಗ.
ಶ್ರೀ ರಾಚೋಟೇಶ್ವರ ಶಿವಾಚಾರ್ಯ ಸ್ವಾಮೀಜಿ
ಹಿರೇಮಠ, ಬಿಳಿಕಿ.
ಷ.ಬ್ರ. ಶ್ರೀ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮೀಜಿ
ಮುತ್ತಿನಕಂತಿಮಠ, ಅಕ್ಕಿಆಲೂರು
ಶ್ರೀಯುತ ಕೆ.ಎಸ್. ಈಶ್ವರಪ್ಪನವರ
78ನೇ ಹುಟ್ಟುಹಬ್ಬದ ಪ್ರಯುಕ್ತ
ಸಾಮೂಹಿಕ ಸತ್ಯನಾರಾಯಣ ಪೂಜೆ 1000ಕ್ಕೂ ಹೆಚ್ಚು ದಂಪತಿಗಳಿಂದ
"ಮಂಗಳ ನಿಧಿ ಸಮರ್ಪಣೆ"
ಸಂಗೀತಾಭಿವಂದನೆ 500ಕ್ಕೂ ಹೆಚ್ಚು ಮಾತೆಯರಿಂದ
ಸಮೂಹ ಗಾಯನ
ಕರ್ನಾಟಕ ರಾಜಕಾರಣದ ಪ್ರಬಲ ನಾಯಕರಲ್ಲಿ ಕೆ.ಎಸ್. ಈಶ್ವರಪ್ಪನವರು ಪ್ರಮುಖರು ಶಿವಮೊಗ್ಗದ ಇವರು ಆರ್‌ಎಸ್‌ಎಸ್ ಮತ್ತು ಎಬಿವಿಪಿ ಮೂಲಕ ಸಾರ್ವಜನಿಕ ಜೀವನ ಪ್ರವೇಶಿಸಿ ತುರ್ತು ಪರಿಸ್ಥಿತಿಯಲ್ಲಿ ಜೈಲುವಾಸ ಅನುಭವಿಸಿದವರು ನಂತರ ಬಿಜೆಪಿ ಶಾಸಕರಾಗಿ ಶಿವಮೊಗ್ಗವನ್ನು ಪಕ್ಷದ ಭದ್ರಕೋಟೆಯನ್ನಾಗಿ ಪರಿವರ್ತಿಸಿದರು. ಕೆ.ಎಸ್. ಈಶ್ವರಪ್ಪನವರು ರಾಜ್ಯ ಬಿಜೆಪಿ ಅಧ್ಯಕ್ಷರಾಗಿ ಪಕ್ಷವನ್ನು ತಳಮಟ್ಟದಿಂದ ಸಂಘಟಿಸಿದ ಚತುರರು. ತಮ್ಮ ಸುಧೀರ್ಘ ವೃತ್ತಿ ಜೀವನದಲ್ಲಿ ಕೇಂದ್ರ ರೇಷ್ಮೆ ಮಂಡಳಿಗೆ ಎರಡು ಬಾರಿ ಅಧ್ಯಕ್ಷರಾಗಿ, ವಿರೋಧ ಪಕ್ಷದ ನಾಯಕರಾಗಿ, ಉಪಮುಖ್ಯಮಂತ್ರಿಯಾಗಿ, ಹಾಗೂ ಇಂಧನ ಜಲಸಂಪನ್ಮೂಲ ಮತ್ತು ಗ್ರಾಮೀಣಾಭಿವೃದ್ಧಿ ಸಚಿವರಾಗಿ ಗಮನಾರ್ಹ ಕೆಲಸ ಮಾಡಿದ್ದಾರೆ. * ವಿಶೇಷವಾಗಿ ಗ್ರಾಮೀಣ ರಸ್ತೆಗಳ ಅಭಿವೃದ್ಧಿಗೆ ಇವರು ನೀಡಿದ ಕೊಡುಗೆ ಅಪಾರ. ಸೈದ್ಧಾಂತಿಕವಾಗಿ ಹಿಂದುತ್ವದ ಪ್ರಬಲ ಧ್ವನಿಯಾಗಿ ಗುರುತಿಸಿಕೊಂಡಿರುವ ಇವರು ನೇರ ನುಡಿ ಹಾಗೂ ಕಾರ್ಯಕರ್ತರೊಂದಿಗಿನ ಆಪ್ತ ಸಂಬಂಧಕ್ಕೆ ಹೆಸರಾದವರು. ಸಾಮಾನ್ಯ ಜನರಿಗೂ ಸುಲಭವಾಗಿ ಸಿಗುವ ಇವರು ರಾಜ್ಯ ರಾಜಕಾರಣದಲ್ಲಿ ಅಳಿಸಲಾಗದ ಮುದ್ರೆ ಒತ್ತಿದ್ದಾರೆ. ಆಧ್ಯಾತ್ಮಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಚಟುವಟಿಕೆಗಳಲ್ಲಿ ಸಕ್ರಿಯರಾಗಿರುವ ಇವರು ಯುವರಾಜಕಾರಣಿಗಳಿಗೆ ಸ್ಫೂರ್ತಿದಾಯಕವಾಗಿದೆ. ಸೋಲು-ಗೆಲುವುಗಳ ನಡುವೆಯೂ ಸಿದ್ಧಾಂತಕ್ಕೆ ಬದ್ಧರಾಗಿರುವುದು ಈಶ್ವರಪ್ಪನವರ ಹೆಗ್ಗಳಿಕೆ.
ಕೆ.ಇ. ಕಾಂತೇಶ್ ಈಶ್ವರಪ್ಪ ಜಿಲ್ಲಾ ಪಂಚಾಯ್ತಿ ಮಾಜಿ ಸದಸ್ಯರು
ಹೋರಾಟವೇ ಉಸಿರಾಗಿ, ಜನಸೇವೆಯೇ ಗುರಿಯಾಗಿ ಸಾಗುತ್ತಿರುವ ಶಿವಮೊಗ್ಗದ ಹೆಮ್ಮೆಯ ನಾಯಕ, ಅಭಿವೃದ್ಧಿ ಹಾಗೂ ಹಿಂದುತ್ವದ ಪ್ರಖರ ಧ್ವನಿ, ದಣಿವರಿಯದ ಮುತ್ಸದ್ದಿ ಗೌರವಾನ್ವಿತ ಶ್ರೀ ಕೆ.ಎಸ್. ಈಶ್ವರಪ್ಪನವರ 78ನೇ ಹುಟ್ಟುಹಬ್ಬದ ಈ ಶುಭ ಸಂಧರ್ಭದಲ್ಲಿ ಆ ದೇವರು ನಿಮಗೆ ಆಯುರಾರೋಗ್ಯ, ಸುಖ-ಶಾಂತಿ, ನೆಮ್ಮದಿ ಹಾಗೂ ನಿಮ್ಮ ಇಷ್ಟಾರ್ಥಗಳನ್ನು ಈಡೇರಿಸಲೆಂದು ಶುಭ ಹಾರೈಸುವ.....
ಸರ್ವರಿಗೂ ಸುಸ್ವಾಗತ
10 ಜೂನ್ 2026 ಬೆಳಿಗ್ಗೆ 11:00ಕ್ಕೆ । ಸ್ಥಳ: ಜಯಲಕ್ಷ್ಮಿ ಮಲ್ಲೇಶ್ವರ ನಗರ ಮುಖ್ಯರಸ್ತೆ, ಶಿವಮೊಗ್ಗ.



ಋತುರಾಜ್ ಶತಕ
ಭಾರತ ಎ ತಂಡದ ಬ್ಯಾಟರ್ ಋತುರಾಜ್ ಗಾಯಕವಾಡ್ (101;114ಎ) ಅವರು ತ್ರಿಕೋನ ಏಕದಿನ ಕ್ರಿಕೆಟ್ ಸರಣಿಯಲ್ಲಿ ಮಂಗಳವಾರ ಶ್ರೀಲಂಕಾ ಎ ತಂಡದ ವಿರುದ್ಧ ಶತಕ ದಾಖಲಿಸಿದರು

prajavani.net | prajavani
ಬುಧವಾರ, ಜೂನ್ 10, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 160 | ಪುಟ 16
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ
ಸ್ಕ್ಯಾನ್ ಮಾಡಿ


ಸೆನ್ಸೆಕ್ಸ್ 73,918 | ನಿಫ್ಟಿ 23,242 | $/₹ 95.41 | ಚಿನ್ನ (Std. 10g) ₹1,57,750 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹2,60,000 (ಬೆಂಗಳೂರು)

ಮತ್ತೆ ಶುರುವಾದ ಖಾತೆ ರಗಳೆ

ದೆಹಲಿಗೆ ದೌಡಾಯಿಸಿದ ಕೃಷ್ಣ ಬೈರೇಗೌಡ ವರಿಷ್ಠರ ಭೇಟಿ ಮಾಡಿ ಅಹವಾಲು ಸಲ್ಲಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜಧಾನಿಯ ಸಮಸ್ಯೆಗಳ ನೀಗಿಸಿ, ಹೊಸರೂಪು ಕೊಡುವ ಎಲ್ಲ ಪ್ರಾಧಿಕಾರ, ಸಂಸ್ಥೆಗಳು ಒಳಗೊಳ್ಳದ 'ಬೆಂಗಳೂರು ಅಭಿವೃದ್ಧಿ' ಖಾತೆ ವಹಿಸಿಕೊಳ್ಳಲು ಸಚಿವ ಕೃಷ್ಣ ಬೈರೇಗೌಡ ನಿರಾಕರಿಸುತ್ತಿರುವುದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೇತೃತ್ವದ ಕಾಂಗ್ರೆಸ್ ಸರ್ಕಾರವನ್ನು ಹೊಸ ಸಂಕಷ್ಟಕ್ಕೆ ದೂಡಿದೆ.


ಕೃಷ್ಣ ಬೈರೇಗೌಡ

ತಮಗೆ ಹಂಚಿಕೆ ಮಾಡಿದ್ದ ಜಲಸಂಪನ್ಮೂಲ ಖಾತೆಗೆ ರಾಮಲಿಂಗಾ ರೆಡ್ಡಿ ಮತ್ತು ಆಹಾರ ಖಾತೆಗೆ ಕೆ.ಎಚ್. ಮುನಿಯಪ್ಪ ತಕರಾರು ತೆಗೆದಿದ್ದರು. ಪಕ್ಷದ ನಾಯಕರ ಜೊತೆ ಮಾತುಕತೆ ನಡೆಸಿದ ಬಳಿಕ ಇಬ್ಬರೂ ತಣ್ಣಗಾಗಿದ್ದರು.

ಆದರೆ, ಕೃಷ್ಣ ಬೈರೇಗೌಡ ಅವರು ತಮಗೆ ಹಂಚಿಕೆಯಾಗಿರುವ ಖಾತೆಯ ಬಗ್ಗೆ ಸ್ಪಷ್ಟತೆ ಸಿಗುವವರೆಗೂ ವಹಿಸಿಕೊಳ್ಳದೇ ಇರಲು ನಿರ್ಧರಿಸಿದ್ದಾರೆ.

ತಮ್ಮ ಖಾತೆಯ ಬಗ್ಗೆ ಆಪ್ತ ವಲಯದಲ್ಲಿ ತೀವ್ರ ಅಸಮಾಧಾನ ವ್ಯಕ್ತಪಡಿಸಿರುವ ಕೃಷ್ಣ ಬೈರೇಗೌಡ, ದೆಹಲಿಗೆ ದೌಡಾಯಿಸಿರುವುದು ರಾಜ್ಯ ರಾಜಕೀಯ ವಲಯದಲ್ಲಿ ಹಲವು ಚರ್ಚೆಗಳಿಗೆ ಗ್ರಾಸ ಮಾಡಿಕೊಟ್ಟಿದೆ.

ಶಾಸಕ ರಿಜ್ವಾನ್ ಅರ್ಷದ್ ಮತ್ತು ಮಾಜಿ ಸಚಿವ ಎನ್.ಎಸ್. ಬೋಸರಾಜು ಪುತ್ರ ರವಿ ಬೋಸರಾಜು ಜೊತೆ ಕೃಷ್ಣ ಬೈರೇಗೌಡ ಸೋಮವಾರ ರಾತ್ರಿ ದೆಹಲಿಗೆ ಪ್ರಯಾಣ ಬೆಳೆಸಿದರು. ಹೈಕಮಾಂಡ್ ನಾಯಕರನ್ನು ಮಂಗಳವಾರ ಭೇಟಿ ಮಾಡಿ ತಮ್ಮ ನಿಲುವು ವ್ಯಕ್ತಪಡಿಸಿದ್ದಾರೆ ಎಂದು ಗೊತ್ತಾಗಿದೆ.

ಹಣಕಾಸು ಮತ್ತು ಬೆಂಗಳೂರು ಅಭಿವೃದ್ಧಿ ಖಾತೆಯನ್ನು ತಮ್ಮಲ್ಲಿಯೇ ಉಳಿಸಿಕೊಳ್ಳಲು ಮುಖ್ಯಮಂತ್ರಿ ಮುಂದಾಗಿದ್ದರು. ಆದರೆ, ಹೈಕಮಾಂಡ್ ಸಲಹೆಯಂತೆ ಸಂಪುಟದ ಎಲ್ಲ 13 ಸಚಿವರಿಗೆ ಖಾತೆ ಹಂಚಿಕೆಯಾಗಿದೆ. ಬೆಂಗಳೂರು ಅಭಿವೃದ್ಧಿ ಖಾತೆಯನ್ನು ಕೃಷ್ಣ ಬೈರೇಗೌಡ ಅವರಿಗೆ ವಹಿಸುವಂತೆ ಮುಖ್ಯಮಂತ್ರಿಗೆ ವರಿಷ್ಠರು ಸೂಚಿಸಿದ್ದರು ಎಂದು ಗೊತ್ತಾಗಿದೆ.

ಕೃಷ್ಣ ತಕರಾರು ಏನು?: 'ಬೆಂಗಳೂರಿನ ಚಿತ್ರಣವನ್ನೇ ಬದಲಾಯಿಸುವ ಸಾಮರ್ಥ್ಯ ಹಾಗೂ ಅಧಿಕಾರ ವ್ಯಾಪ್ತಿ ಹೊಂದಿರುವ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಮತ್ತು ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ (ಬಿಎಂಆರ್‌ಡಿಎ) ಸೇರಿದಂತೆ ಹಲವು ಸಂಸ್ಥೆಗಳನ್ನು ಒಳಗೊಳ್ಳದ ಖಾತೆಯನ್ನು ವಹಿಸಿಕೊಳ್ಳುವುದಿಲ್ಲವೆಂದು ಕೃಷ್ಣ ಬೈರೇಗೌಡ ಅವರು, ಶಿವಕುಮಾರ್ ಮತ್ತು ಸುರ್ಜೇವಾಲಾ ಅವರಿಗೆ ಸ್ಪಷ್ಟಪಡಿಸಿದ್ದಾರೆ. ಕೊಡುವುದಾದರೆ ಪೂರ್ತಿ ಖಾತೆ ಕೊಡಿ ಎಂದು ಪಟ್ಟು ಹಿಡಿದಿದ್ದಾರೆ' ಎಂದು ಮೂಲಗಳು ಹೇಳಿವೆ.

'ಬೆಂಗಳೂರು ಅಭಿವೃದ್ಧಿ ಖಾತೆಯನ್ನು ಹಂಚಿಕೆ ಮಾಡುವಾಗ ಬಿಡಿಎ ಮತ್ತು ಬಿಎಂಆರ್‌ಡಿಎ ಹೊರಗಿಡಲಾಗಿದೆ. ಗ್ರೇಟರ್ ಬೆಂಗಳೂರು ಪ್ರಾಧಿಕಾರ ಮತ್ತು ಪ್ರಾಧಿಕಾರದ ವ್ಯಾಪ್ತಿಯ ಐದು ನಗರಪಾಲಿಕೆಗಳು, ಬೆಂಗಳೂರು ಜಲಮಂಡಳಿ ಮತ್ತು ಬೆಂಗಳೂರು ಮೆಟ್ರೊ ರೈಲು ನಿಗಮ ನಿಯಮಿತ ಮಾತ್ರ ಸೇರಿವೆ. ಇದು ಅಸಮಾಧಾನಕ್ಕೆ ಕಾರಣ' ಎಂದು ಮೂಲಗಳು ಹೇಳಿವೆ.

'ಬೆಂಗಳೂರು ಅಭಿವೃದ್ಧಿ ಸಚಿವರು, ನಗರದ ಸಮಗ್ರ ಅಭಿವೃದ್ಧಿಯನ್ನು ದೃಷ್ಟಿಯಲ್ಲಿಟ್ಟು ಕಾರ್ಯಯೋಜನೆಗಳನ್ನು ರೂಪಿಸಬೇಕಾದರೆ ಅನೇಕ ಸರ್ಕಾರಿ ಇಲಾಖೆಗಳ ಜೊತೆ ಪರಿಣಾಮಕಾರಿ ಸಮನ್ವಯ ಅಗತ್ಯವಿದೆ. ಬೆಂಗಳೂರಿನ ಅಭಿವೃದ್ಧಿಯಲ್ಲಿ ತೊಡಗಿರುವ ಏಜೆನ್ಸಿಗಳ ಮೇಲೆ ಆಡಳಿತಾತ್ಮಕ ನಿಯಂತ್ರಣವಿಲ್ಲದೆ, ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವುದು ಸವಾಲಾಗಲಿದೆ. ಹೊರ ವರ್ತುಲ ರಸ್ತೆಯು ಬಿಡಿಎ ವ್ಯಾಪ್ತಿಗೆ ಒಳಪಡುತ್ತದೆ. ಈ ನಿರ್ಣಾಯಕ ಕಾರಿಡಾರ್‌ನಲ್ಲಿ ಪ್ರಮುಖ ಸಮಸ್ಯೆಗಳು ಉಂಟಾದರೆ ಯಾರು ಜವಾಬ್ದಾರರು' ಎಂದು ತಮ್ಮ ಆಪ್ತರ ಬಳಿ ಕೃಷ್ಣ ಬೈರೇಗೌಡ ಮನದ ಇಂಗಿತವನ್ನು ಹಂಚಿಕೊಂಡಿದ್ದಾರೆ.

'ಪ್ರಗತಿಯಲ್ಲಿರುವ ಅನೇಕ ಮೂಲಸೌಕರ್ಯ ಯೋಜನೆಗಳನ್ನು ಬಿಡಿಎ ಕಾರ್ಯಗತಗೊಳಿಸುತ್ತದೆ. ಈ ಯೋಜನೆಗಳ ಅನುಷ್ಠಾನ ವಿಳಂಬವಾಗುತ್ತಲೇ ಹೋದರೆ, ವೆಚ್ಚದ ಮಿತಿಮೀರಿದರೆ ಅಥವಾ ನಿಗದಿತ ಗಡುವಿನ ಒಳಗೆ ಯೋಜನೆಯನ್ನು ಪೂರ್ಣಗೊಳಿಸಲು ವಿಫಲವಾದರೆ, ಆ ನ್ಯೂನತೆಗಳಿಗೆ ಯಾರು ಉತ್ತರಿಸುತ್ತಾರೆ? ಹೊಣೆಗಾರಿಕೆಯನ್ನು ಖಚಿತಪಡಿಸಿಕೊಳ್ಳಲು, ತ್ವರಿತವಾಗಿ ನಿರ್ಧಾರಗಳನ್ನು ತೆಗೆದುಕೊಳ್ಳಲು ಮತ್ತು ಸಮನ್ವಯದಿಂದ ಕಾರ್ಯಗತಗೊಳಿಸಲು, ಬೆಂಗಳೂರಿನ ಅಭಿವೃದ್ಧಿಗೆ ಸಂಬಂಧಿಸಿದ ಎಲ್ಲ ಪ್ರಮುಖ ಇಲಾಖೆಗಳು ಮತ್ತು ಏಜೆನ್ಸಿಗಳು ಬೆಂಗಳೂರು ಅಭಿವೃದ್ಧಿ ಸಚಿವರ ನೇತೃತ್ವದಲ್ಲಿ ಏಕೀಕೃತ ಚೌಕಟ್ಟಿನ ಅಡಿಯಲ್ಲಿ ಕಾರ್ಯನಿರ್ವಹಿಸಬೇಕು. ಆಗ ಮಾತ್ರ ಸಚಿವರು ಕಾರ್ಯನಿರ್ವಹಣೆಯನ್ನು ಪರಿಣಾಮಕಾರಿಯಾಗಿ ಮೇಲ್ವಿಚಾರಣೆ ಮಾಡಬಹುದು, ಅಡೆತಡೆಗಳನ್ನು ಸರಿಪಡಿಸಬಹುದು, ಹೊಣೆಗಾರಿಕೆಯನ್ನು ನಿಗದಿಮಾಡಬಹುದು ಮತ್ತು ಬೆಂಗಳೂರನ್ನು ವಿಶ್ವ ದರ್ಜೆಯ ನಗರವಾಗಿ ಪರಿವರ್ತಿಸುವ ದೃಷ್ಟಿಕೋನವನ್ನು ಜಾರಿಗೆ ತರಬಹುದು' ಎಂದು ಹೇಳಿದ್ದಾರೆ.

ಇಂದಿನಿಂದ ಸಿ.ಎಂ. ದೆಹಲಿ ಪ್ರವಾಸ


ಶಿವಕುಮಾರ್

ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಬುಧವಾರ (ಜೂನ್ 10) ದೆಹಲಿಗೆ ತೆರಳಲಿದ್ದಾರೆ. ಎರಡು ದಿನ ಅವರು ದೆಹಲಿಯಲ್ಲಿ ವಾಸ್ತವ್ಯ ಹೂಡಲಿದ್ದು, ಸಂಪುಟ ವಿಸ್ತರಣೆ ಕುರಿತಂತೆ ಪಕ್ಷದ ವರಿಷ್ಠರನ್ನು ಭೇಟಿ ಮಾಡಿ ಮಹತ್ವದ ಚರ್ಚೆ ನಡೆಸಲಿದ್ದಾರೆ.

ದೆಹಲಿಯಲ್ಲಿ ಜೂನ್ 11ರಂದು ನಡೆಯಲಿರುವ ರಾಷ್ಟ್ರೀಯ ನೀತಿ ಆಯೋಗದ ಸಭೆಯಲ್ಲಿ ಕೂಡಾ ಮುಖ್ಯಮಂತ್ರಿ ಭಾಗವಹಿಸಲಿದ್ದಾರೆ.

ಬುಧವಾರ ಬೆಳಿಗ್ಗೆ 9.30ಕ್ಕೆ ಬೆಂಗಳೂರು ಅಂತರ-ರಾಷ್ಟ್ರೀಯ ವಿಮಾನ ನಿಲ್ದಾಣದಿಂದ ದೆಹಲಿಗೆ ಪ್ರಯಾಣ ಬೆಳೆಸಲಿರುವ ಮುಖ್ಯಮಂತ್ರಿ, ಮಧ್ಯಾಹ್ನ 2 ಗಂಟೆಗೆ ಎಐಸಿಸಿ ನಾಯಕರನ್ನು ಭೇಟಿ ಮಾಡಲಿದ್ದಾರೆ. ಬಳಿಕ, ಎಐಸಿಸಿ ಕಚೇರಿ, ಎನ್‌ಎಸ್‌ಯುಐ, ಯುವ ಕಾಂಗ್ರೆಸ್ ಮತ್ತು ಮಹಿಳಾ ಕಾಂಗ್ರೆಸ್ ಕಚೇರಿಗಳಿಗೂ ಭೇಟಿ ನೀಡಲಿದ್ದಾರೆ.

ಸದ್ಯ ಸೃಷ್ಟಿಯಾಗಿರುವ ಖಾತೆ ಅಸಮಾಧಾನ ಶಮನ ಹಾಗೂ ಮುಂಬರುವ ಸಚಿವ ಸಂಪುಟ ವಿಸ್ತರಣೆ ಕುರಿತು ಹೈಕಮಾಂಡ್ ನಾಯಕರ ಜೊತೆ ಶಿವಕುಮಾರ್ ಮಾತುಕತೆ ನಡೆಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ರಸಗೊಬ್ಬರದ ನಿರೀಕ್ಷೆಯಲ್ಲಿ...

ಪ್ರಜಾವಾಣಿ ಚಿತ್ರ: ತಾಜುದ್ದೀನ್ ಆಜಾದ್



ಕಲಬುರಗಿಯ ನೆಹರೂ ಗಂಜ್‌ನಲ್ಲಿರುವ ಒಕ್ಕಲುತನ ಹುಟ್ಟುವಳಿ ಮಾರಾಟ ಸಹಕಾರ ಸಂಘದ ಆವರಣದಲ್ಲಿ ಮಂಗಳವಾರ ಹಲವು ರೈತ ಮಹಿಳೆಯರು ರಸಗೊಬ್ಬರ ಪಡೆಯಲು ಕಾಯುತ್ತಿದ್ದ ನೋಟ

2,500 ಐ.ಟಿ ಶಿಕ್ಷಕರ ನೇಮಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಶಾಲೆಗಳಲ್ಲಿ ಒಂದನೇ ತರಗತಿಯಿಂದಲೇ ಕಂಪ್ಯೂಟರ್ ಶಿಕ್ಷಣ ಕಲಿಕೆಗೆ ರಾಜ್ಯ ಸರ್ಕಾರ ಅನುಮತಿ ನೀಡಿದ್ದು, ಅದಕ್ಕಾಗಿ ಮಾಹಿತಿ ತಂತ್ರಜ್ಞಾನ (ಐ.ಟಿ) ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲು ಶಾಲಾ ಶಿಕ್ಷಣ ಇಲಾಖೆ ನಿರ್ಧರಿಸಿದೆ.

'ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿಯೇ ಕರ್ನಾಟಕ ಪಬ್ಲಿಕ್ ಶಾಲೆಗಳಿಗೆ (ಕೆಪಿಎಸ್) 2,500 ಐ.ಟಿ ಶಿಕ್ಷಕರನ್ನು ಕಾಯಂ ನೇಮಕ ಮಾಡಲಾಗುವುದು. ಅಗತ್ಯವಿದ್ದರೆ ಇತರೆ ಶಾಲೆಗಳಲ್ಲೂ ಅವಕಾಶ ನೀಡಲಾಗುವುದು. ಅವರಿಗಾಗಿಯೇ ಪ್ರತ್ಯೇಕ ವೃಂದ ರಚಿಸಲು ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ತರಲಾಗುವುದು. ಅರ್ಹತಾ ಮಾನದಂಡಗಳನ್ನು ಶೀಘ್ರ ಪ್ರಕಟಿಸಲಾಗುವುದು' ಎಂದು ಇಲಾಖೆ ಮಾಹಿತಿ ನೀಡಿದೆ.

ಎಂಜಿನಿಯರಿಂಗ್ ಪದವೀಧರರು ಈಗಾಗಲೇ 6ರಿಂದ 8ನೇ ತರಗತಿವರೆಗೆ ಪದವೀಧರ ಪ್ರಾಥಮಿಕ ಶಿಕ್ಷಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಶಾಲೆಗಳು ಮತ್ತು ಕಾಲೇಜುಗಳಲ್ಲಿ ಗಣಿತ ಹಾಗೂ ವಿಜ್ಞಾನ ವಿಷಯಗಳನ್ನು ಬೋಧಿಸಲು ನಿಯಮಗಳಿಗೆ ತಿದ್ದುಪಡಿ ತಂದು ಶಿಕ್ಷಕರ ಅರ್ಹತಾ ಪರೀಕ್ಷೆ (ಟಿಇಟಿ) ಬರೆಯಲು ಅವಕಾಶ ಕಲ್ಪಿಸಲಾಗಿದೆ. ಈಗ ಡಿಪ್ಲೊಮಾ, ಎಂಜಿನಿಯರಿಂಗ್ ಪದವಿ ಪಡೆದವರನ್ನು ಶಾಲೆಗಳಿಗೆ ಐಟಿ ಶಿಕ್ಷಕರಾಗಿ ನೇಮಕ ಮಾಡಿಕೊಳ್ಳಲು ನಿರ್ಧರಿಸಿದೆ. ಹೊಸ ಹುದ್ದೆಗಳಿಗೆ ₹44,425–₹83,700 ವೇತನ ಶ್ರೇಣಿಯನ್ನು ನಿಗದಿ ಮಾಡಲಾಗಿದೆ.

ಸಹಾಯ ಮಾಡುವ ನೆಪದಲ್ಲಿ ಕೃತ್ಯ • ಮೊಬೈಲ್‌ನಲ್ಲಿ ಹರಿದಾಡಿದ ವಿಡಿಯೊಗಳು

ಅತ್ಯಾಚಾರ: 10 ಆರೋಪಿಗಳ ಸೆರೆ

ಪ್ರಜಾವಾಣಿ ವಾರ್ತೆ

ದಾವಣಗೆರೆ: ಜಿಲ್ಲೆಯ ಚನ್ನಗಿರಿ ತಾಲ್ಲೂಕಿನ ಬಸವಾಪಟ್ಟಣ ಪೊಲೀಸ್ ಠಾಣೆ ವ್ಯಾಪ್ತಿಯ ಗ್ರಾಮವೊಂದರ ಬಳಿ 41 ವರ್ಷ ವಯಸ್ಸಿನ ಮಹಿಳೆಯೊಬ್ಬರ ಮೇಲೆ ಜೂನ್ 3ರ ರಾತ್ರಿ ಸಾಮೂಹಿಕ ಅತ್ಯಾಚಾರ ನಡೆದಿದೆ. ಈ ಸಂಬಂಧ ಕಾನೂನು ಸಂಘರ್ಷಕ್ಕೆ ಒಳಗಾಗಿರುವ ಒಬ್ಬ ಬಾಲಕ ಸೇರಿ 10 ಜನ ಆರೋಪಿಗಳನ್ನು ಪೊಲೀಸರು ಮಂಗಳವಾರ ಬಂಧಿಸಿದ್ದಾರೆ.

ಸಂತ್ರಸ್ತೆಯ ನಗ್ನ ಚಿತ್ರಗಳು ಮತ್ತು ವಿಡಿಯೊಗಳನ್ನು ಆರೋಪಿಗಳು ಸೋಮವಾರ ರಾತ್ರಿ ಬೇರೆಯವರ ಮೊಬೈಲ್‌ಗಳಿಗೆ ಹರಿಬಿಟ್ಟಿದ್ದು, ಮನೆಯವರಿಗೆ ವಿಷಯ ಗೊತ್ತಾದ ಬಳಿಕ ಪ್ರಕರಣ ಬೆಳಕಿಗೆ ಬಂದಿದೆ.

ಮದ್ಯಪಾನ ಮಾಡಿದ್ದ ಗಂಡನೊಂದಿಗೆ ಜಗಳ ವಾಡಿದ್ದ ಮಹಿಳೆ ರಾತ್ರಿ 7.30ರ ಸಮಯದಲ್ಲಿ, ಪಕ್ಕದಲ್ಲೇ ಇರುವ ತವರೂರಿನತ್ತ ನಡೆದು ಹೊರಟಿದ್ದಾರೆ. ಆಗ ಯುವಕರ ಗುಂಪು ಇವರಿಗೆ ಸಹಾಯ ಮಾಡುವ ನೆಪದಲ್ಲಿ ಮಾತನಾಡಿಸಿ, ಕುಡಿಯಲು ತಂಪು ಪಾನೀಯ ನೀಡಿದೆ. ಪಾನೀಯ ಕುಡಿದ ತಕ್ಷಣ ಪ್ರಜ್ಞೆ ತಪ್ಪಿದ ಮಹಿಳೆಯನ್ನು ಗ್ರಾಮದಿಂದ ಅನತಿ ದೂರದಲ್ಲಿರುವ ಜಮೀನೊಂದಕ್ಕೆ ಕರೆದೊಯ್ದು ಅತ್ಯಾಚಾರ ಎಸಗಿದೆ.

ಮುಖ್ಯಾಂಶಗಳು
- ಆರೋಪಿಗಳಲ್ಲಿ ಕಾನೂನು ಸಂಘರ್ಷ-ಕ್ಕೊಳಗಾದ ಬಾಲಕ
- 6 ದಿನಗಳ ಬಳಿಕ ಪ್ರಕರಣ ಬೆಳಕಿಗೆ



ಪ್ರಜ್ಞೆ ಕಳೆದುಕೊಂಡಿದ್ದ ಸಂತ್ರಸ್ತೆಯು ಜೂನ್ 4ರಂದು ಬೆಳಗಿನಜಾವ 3 ಗಂಟೆ ವೇಳೆಗೆ ಎಚ್ಚರಗೊಂಡು ತವರೂರಿಗೆ ಹೋಗಿದ್ದರು. ಅಲ್ಲಿಂದ ಬೆಳಿಗ್ಗೆ ತಮ್ಮ ಸಂಬಂಧಿಯೊಬ್ಬರ ಊರಿಗೆ ತೆರಳಿದ್ದರು. ಗ್ರಾಮಸ್ಥರ ಮೊಬೈಲ್‌ಗಳಲ್ಲಿ ವಿಡಿಯೊ ಹರಿದಾಡಿದ ನಂತರ ಪೊಲೀಸ್ ಠಾಣೆಗೆ ತೆರಳಿ ದೂರು ಸಲ್ಲಿಸಿದ್ದಾರೆ.

> **ಸಂತ್ರಸ್ತೆ ದೂರು ನೀಡಿದ ಕೆಲವೇ ಗಂಟೆಗಳಲ್ಲಿ ಆರೋಪಿಗಳನ್ನು ಬಂಧಿಸಿ ವೈದ್ಯಕೀಯ ತಪಾಸಣೆಗೆ ಒಳಪಡಿಸಲಾಗಿದೆ**
> **ಎಚ್‌.ಟಿ.ಶೇಖರ್**
> ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ

ಸಾಮೂಹಿಕ ಅತ್ಯಾಚಾರ, ವಿಡಿಯೊ ಚಿತ್ರೀಕರಣ ಹಾಗೂ ಕೃತ್ಯಕ್ಕೆ ಕುಮ್ಮಕ್ಕು ನೀಡಿದ ಆರೋಪದಡಿ 20ರಿಂದ 30 ವರ್ಷ ವಯಸ್ಸಿನ ಯುವಕರಾದ ಚಟಾಕಿ ನಾಗರಾಜ, ಇಸ್ತ್ರೀ ನಾಗರಾಜ, ಮಧು, ಅರ್ಜುನ, ಬಸವಂತ, ಕುಂದೂರ ಮಾರುತಿ, ಮನು, ಜೋಗಿ ಸುನೀಲ, ಪ್ರದೀಪ ಹಾಗೂ ಕಾನೂನು ಸಂಘರ್ಷಕ್ಕೆ ಒಳಗಾಗಿರುವ ಒಬ್ಬ ಬಾಲಕನನ್ನು ಬಂಧಿಸಿರುವ ಬಸವಾಪಟ್ಟಣ ಠಾಣೆಯ ಪೊಲೀಸರು ತನಿಖೆ ಕೈಗೊಂಡಿದ್ದಾರೆ.

ವಿಷಯ ತಿಳಿಯುತ್ತಿದ್ದಂತೆ ಪೊಲೀಸ್ ಠಾಣೆಯ ಎದುರು ನೂರಾರು ಸಂಖ್ಯೆಯಲ್ಲಿ ಗ್ರಾಮಸ್ಥರು ಜಮಾಯಿಸಿದ್ದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಚ್‌.ಟಿ. ಶೇಖರ್, ಎಎಸ್‌ಪಿ ಪರಮೇಶ್ವರ ಹೆಗಡೆ, ಡಿವೈಎಸ್‌ಪಿ ರುದ್ರಪ್ಪ ಉಜ್ಜಿನಿಕೊಪ್ಪ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಮೊಹಮ್ಮದ್ ನಲಪಾಡ್‌ಗೆ ಇ.ಡಿ ತನಿಖೆ ಬಿಸಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಾಂತಿನಗರ ವಿಧಾನಸಭಾ ಕ್ಷೇತ್ರದ ಶಾಸಕ ಎನ್.ಎ.ಹ್ಯಾರಿಸ್ ಅವರ ಪುತ್ರ, ಕಾಂಗ್ರೆಸ್ ಮುಖಂಡ ಮೊಹಮ್ಮದ್ ನಲಪಾಡ್ ಅವರಿಗೆ 'ಬಿಟ್ ಕಾಯಿನ್ ಹಗರಣ'ದಲ್ಲಿ ಜಾರಿ ನಿರ್ದೇಶನಾಲಯದ (ಇ.ಡಿ) ತನಿಖೆ ಬಿಸಿ ಎದುರಾಗಿದೆ.

ವಿಚಾರಣೆಗೆ ಹಾಜರಾಗುವಂತೆ ಇ.ಡಿ ಮೂರನೇ ಬಾರಿಗೆ ಸಮನ್ಸ್ ಜಾರಿ ಮಾಡಿದೆ.


ಮೊಹಮ್ಮದ್ ನಲಪಾಡ್

ಬಿಟ್ ಕಾಯಿನ್ ಹಗರಣದ ಪ್ರಮುಖ ಆರೋಪಿ ಶ್ರೀಕೃಷ್ಣ ಅಲಿಯಾಸ್ ಶ್ರೀಕಿಯೊಂದಿಗೆ ಹಣಕಾಸು ವಹಿವಾಟು ನಡೆಸಿದ್ದ ಆರೋಪದ ಮೇಲೆ ಹ್ಯಾರಿಸ್ ಅವರ ಮಕ್ಕಳು ಹಾಗೂ ಕೇಂದ್ರದ ಮಾಜಿ ಸಚಿವ, ಹಿರಿಯ ಕಾಂಗ್ರೆಸ್ ನಾಯಕ ರೆಹಮಾನ್ ಖಾನ್ ಅವರ ಮೊಮ್ಮಗನ ನಿವಾಸವೂ ಸೇರಿ ಒಟ್ಟು 12 ಸ್ಥಳಗಳಲ್ಲಿ ಕಳೆದ ಏಪ್ರಿಲ್ 20ರಂದು ಜಾರಿ ನಿರ್ದೇಶನಾಲಯದ ಅಧಿಕಾರಿಗಳು ದಾಳಿ ನಡೆಸಿ, ಪರಿಶೀಲಿಸಿದ್ದರು.

ಡಿಜಿಟಲ್ ಉಪಕರಣ ಹಾಗೂ ಕೆಲವು ದಾಖಲೆಗಳನ್ನು ಇ.ಡಿ ಅಧಿಕಾರಿಗಳು ಜಪ್ತಿ ಮಾಡಿದ್ದರು. ಬಳಿಕ ವಿಚಾರಣೆಗೆ ಹಾಜರಾಗುವಂತೆ ಮೊಹಮ್ಮದ್ ನಲಪಾಡ್‌ಗೆ ಎರಡು ಬಾರಿ ಇ.ಡಿ ಸಮನ್ಸ್ ಜಾರಿ ಮಾಡಲಾಗಿತ್ತು. ಆದರೆ, ಮುಖ್ಯಮಂತ್ರಿ ಬದಲಾವಣೆ ಸೇರಿದಂತೆ ಇತರೆ ಕಾರಣಗಳನ್ನು ನೀಡಿ ಅವರು ವಿಚಾರಣೆಗೆ ಗೈರಾಗಿದ್ದರು.

ಮತ್ತೊಮ್ಮೆ ನೋಟಿಸ್ ಜಾರಿ ಮಾಡಿರುವ ಇ.ಡಿ, ಖುದ್ದು ವಿಚಾರಣೆಗೆ ಹಾಜರಾಗುವಂತೆ ಸೂಚಿಸಿ ಪ್ರಕರಣದ ತನಿಖೆ ಚುರುಕುಗೊಳಿಸಿದೆ.

ರಾಜ್ಯಸಭೆ: ಮೀನಾಕ್ಷಿ ನಟರಾಜನ್ ನಾಮಪತ್ರ ತಿರಸ್ಕೃತ

ಭೋಪಾಲ್ (ಪಿಟಿಐ): ಮಧ್ಯಪ್ರದೇಶ ವಿಧಾನಸಭೆಯಿಂದ ಮೂರು ರಾಜ್ಯಸಭಾ ಸ್ಥಾನಗಳಿಗೆ ನಡೆಯಲಿರುವ ಚುನಾವಣೆ ಮಂಗಳವಾರ ನಾಟಕೀಯ ತಿರುವು ಪಡೆದುಕೊಂಡಿದ್ದು, ಪ್ರಮಾಣಪತ್ರದಲ್ಲಿ ಪ್ರಕರಣವೊಂದರ ಮಾಹಿತಿಯನ್ನು ಮರೆಮಾಚಿದ್ದಾರೆ ಎಂಬ ಆರೋಪದ ಮೇಲೆ ಕಾಂಗ್ರೆಸ್ ಅಭ್ಯರ್ಥಿ ಮೀನಾಕ್ಷಿ ನಟರಾಜನ್ ಅವರ ನಾಮಪತ್ರವನ್ನು ಚುನಾವಣಾ ಅಧಿಕಾರಿ ತಿರಸ್ಕರಿಸಿದ್ದಾರೆ.


ಮೀನಾಕ್ಷಿ ನಟರಾಜನ್

'ಪ್ರಕರಣವೊಂದರ ಕುರಿತು ಮಾಹಿತಿ ಬಚ್ಚಿಟ್ಟಿದ್ದಾರೆ ಎಂಬ ಆರೋಪದಲ್ಲಿ ಮೀನಾಕ್ಷಿ ನಟರಾಜನ್ ಅವರ ನಾಮಪತ್ರವನ್ನು ಚುನಾವಣಾ ಅಧಿಕಾರಿ ತಿರಸ್ಕರಿಸಿದ್ದಾರೆ' ಎಂದು ಮಧ್ಯಪ್ರದೇಶ ವಿಧಾನಸಭೆಯ ಅಧಿಕಾರಿಯೊಬ್ಬರು ಖಚಿತಪಡಿಸಿದ್ದಾರೆ.

ರಾಜ್ಯಸಭೆಯ ಮೂರನೆಯ ಸ್ಥಾನಕ್ಕೆ ಸ್ಪರ್ಧಿಸಿರುವ ಬಿಜೆಪಿ ಅಭ್ಯರ್ಥಿ ಮಹೇಶ್ ಕೇವಟ್ ಅವರು ಮೀನಾಕ್ಷಿ ವಿರುದ್ಧ ಚುನಾವಣಾ ಅಧಿಕಾರಿಗೆ ದೂರು ನೀಡಿದ್ದಾರೆ.

▶ 5

ಚಿನಕುರುಳಿ ಪ್ರಕಾಶ್ ಶೆಟ್ಟಿ



ಸೂರ್ಯೋದಯ: 5:53 ಸೂರ್ಯಾಸ್ತ: 6:45 | ಚಂದ್ರೋದಯ: ರಾ. 12:42 ಚಂದ್ರಾಸ್ತ: ಮ. 1:04 | ಮಂಗಳವಾರದ ಉಷ್ಣಾಂಶ : ಗರಿಷ್ಠ 30° ಕನಿಷ್ಠ 21°

ಬುಧವಾರ • ಜೂನ್ 10, 2026

ಬುಧವಾರದ ಉಷ್ಣಾಂಶ 30° ಗರಿಷ್ಠ | 31° ಕನಿಷ್ಠ | ಗುರುವಾರ 30° : 21° | ಶುಕ್ರವಾರ 31° : 22° | ಶನಿವಾರ 31° : 22°

ಪ್ರಜಾವಾಣಿ

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಸಾಧಾರಣ ಮಳೆಯಾಗುವ ಸಾಧ್ಯತೆ ಇದೆ

ಅಂಚೆ ವಿಮೆ ಪ್ರತಿನಿಧಿ: ಸಂದರ್ಶನ ಇಂದು

ಬೆಂಗಳೂರು: ಅಂಚೆ ಜೀವ ವಿಮೆ ಹಾಗೂ ಗ್ರಾಮೀಣ ಜೀವ ವಿಮೆ ಪಾಲಿಸಿಗಳನ್ನು ಮಾರಾಟ ಮಾಡಲು ಪ್ರತಿನಿಧಿಗಳ ನಿಯುಕ್ತಿಗಾಗಿ ಅಂಚೆ ಇಲಾಖೆಯು ಜೂನ್ 10ರಂದು ಮತ್ತು 26ರ ಬೆಳಿಗ್ಗೆ 11 ಗಂಟೆಗೆ ಅಭ್ಯರ್ಥಿಗಳಿಗೆ ನೇರ ಸಂದರ್ಶನ ಏರ್ಪಡಿಸಿದೆ.

ಅಭ್ಯರ್ಥಿಗಳು ತಮ್ಮ ಇತ್ತೀಚಿನ ಭಾವಚಿತ್ರಗಳೊಂದಿಗೆ ಸ್ವವಿವರ, ಶೈಕ್ಷಣಿಕ ಪ್ರಮಾಣ ಪತ್ರದ ನಕಲು ಪ್ರತಿಗಳೊಂದಿಗೆ ಮಹಾಲಕ್ಷ್ಮಿಪುರ ಪೊಲೀಸ್ ಠಾಣೆ ಬಳಿ ಇರುವ ಬೆಂಗಳೂರು ಪಶ್ಚಿಮ ಅಂಚೆ ವಿಭಾಗ, ವರಿಷ್ಠ ಅಂಚೆ ಅಧೀಕ್ಷಕರ ಕಾರ್ಯಾಲಯದಲ್ಲಿ ಸಂದರ್ಶನಕ್ಕೆ ಹಾಜರಾಗಬೇಕು ಎಂದು ಪ್ರಕಟಣೆ ತಿಳಿಸಿದೆ.

ನಿರುದ್ಯೋಗಿಗಳು, ಸ್ವಯಂ ಉದ್ಯೋಗಿಗಳು, ವಿಮಾ ಕಂಪನಿಗಳ ಮಾಜಿ ಏಜೆಂಟರು, ಮಾಜಿ ಸೈನಿಕರು, ಅಂಗನವಾಡಿ ಕಾರ್ಯಕರ್ತೆಯರು, ಗ್ರಾಮ ಪಂಚಾಯಿತಿಗಳ ಮಾಜಿ ಸದಸ್ಯರು, ಮಹಿಳಾ ಮಂಡಲದ ಕಾರ್ಯಕರ್ತೆಯರು ಭಾಗವಹಿಸಬಹುದು. ಅಭ್ಯರ್ಥಿಗಳು 10ನೇ ತರಗತಿ ಉತ್ತೀರ್ಣ ಆಗಿರಬೇಕು, 18ರಿಂದ 50 ವರ್ಷ ಒಳಗಿನವರಾಗಿರಬೇಕು. ಆಯ್ಕೆಯಾಗುವ ಅಭ್ಯರ್ಥಿಗಳು ರಾಷ್ಟ್ರೀಯ ಉಳಿತಾಯ ಪತ್ರದ ರೂಪದಲ್ಲಿ ₹5,000 ಭದ್ರತಾ ಠೇವಣಿ ಇಡಬೇಕು. ಅಭ್ಯರ್ಥಿಗಳಿಗೆ ವ್ಯವಹಾರಕ್ಕೆ ತಕ್ಕಂತೆ ಕಮಿಷನ್ ನೀಡಲಾಗುವುದು. ವಿವರಗಳಿಗೆ 7975127704/080-23493283 ಸಂಪರ್ಕಿಸುವುದು.

ನಾಮನಿರ್ದೇಶನ

ಬೆಂಗಳೂರು: ನಗರದ ಲೆಕ್ಕಪರಿಶೋಧಕ ವಿನಯ್ ಮೃತ್ಯುಂಜಯ ಅವರನ್ನು 2026-27ನೇ ಸಾಲಿಗೆ ಐಸಿಎಐನ 'ಇನ್‌ಸಾಲ್ವನ್ಸಿ, ಬ್ಯಾಂಕ್ರಪ್ಸಿ ಆ್ಯಂಡ್ ವ್ಯಾಲ್ಯುಯೇಷನ್ ಬೋರ್ಡ್ ಕಮಿಟಿ' ಸದಸ್ಯರನ್ನಾಗಿ ನಾಮನಿರ್ದೇಶನ ಮಾಡಲಾಗಿದೆ.



ವಿನಯ್

ಪರಿಸರ ಜಾಗೃತಿ ಜಾಥಾ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: ಮತ್ತಿಕೆರೆಯ ರಾಯಲ್ ಕಾಲೇಜಿನ ನೂರಾರು ವಿದ್ಯಾರ್ಥಿಗಳು ಪರಿಸರ ಸಂರಕ್ಷಣೆಯ ಜಾಗೃತಿ ಜಾಥಾ ಮೂಲಕ ವಿಶ್ವ ಪರಿಸರ ದಿನ ಆಚರಿಸಿದರು.

ಪ್ರಮುಖ ರಸ್ತೆಗಳಲ್ಲಿ ಸಂಚರಿಸಿ ಪರಿಸರ ಸ್ನೇಹಿ ಘೋಷಣೆಗಳನ್ನು ಕೂಗಿದ ವಿದ್ಯಾರ್ಥಿಗಳು, ಮನೆಗಳಿಗೆ ತೆರಳಿ ಜಾಗೃತಿ ಮೂಡಿಸಿದರು. 'ಮನೆಯ ಒಳಗೆ-ಹೊರಗೆ ಸ್ವಚ್ಛತೆ ಕಾಪಾಡಬೇಕು. ಮನೆ ಅಂಗಳ, ರಸ್ತೆ ಮುಂಭಾಗ, ಹಸಿ ಮತ್ತು ಒಣ ಕಸ ಹಾಕಬಾರದು. ಗಿಡ ನೆಟ್ಟು ಪೋಷಿಸಬೇಕು' ಎಂದು ಮನವಿ ಮಾಡಿದರು.

'ಅತಿ ವೇಗವಾಗಿ ಬೆಳೆಯುತ್ತಿರುವ ಬೆಂಗಳೂರು ನಗರವನ್ನು ಸಂರಕ್ಷಿಸುವುದು ಎಲ್ಲರ ಜವಾಬ್ದಾರಿ. ತಾಪಮಾನ ಹೆಚ್ಚಳದ ದುಷ್ಪರಿಣಾಮಗಳನ್ನು ಎದುರಿಸಲು ಪರಿಸರ ಸ್ನೇಹಿ ಜೀವನ ಶೈಲಿಯನ್ನು ರೂಢಿಸಿಕೊಳ್ಳಬೇಕು' ಎಂದು ಕೋರಿದರು.

ಮತ್ತಿಕೆರೆಯ ಮಸೀದಿ ಸಮಿತಿಯ ಅಧ್ಯಕ್ಷ ಸಮೀವುಲ್ಲಾ ಖಾನ್ ಅವರು ಗಿಡಕ್ಕೆ ನೀರೆರೆದು ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.



ವಿಶ್ವ ಪರಿಸರ ದಿನಾಚರಣೆಯ ಪ್ರಯುಕ್ತ ಮತ್ತಿಕೆರೆಯ ರಾಯಲ್ ಕಾಲೇಜಿನ ನೂರಾರು ವಿದ್ಯಾರ್ಥಿಗಳು ಪರಿಸರ ಸಂರಕ್ಷಣೆಯ ಜಾಗೃತಿ ಜಾಥಾ ನಡೆಸಿದರು

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

(ಸಿ.ಐ.ಎನ್: ಯು40109ಕೆಎ1999ಎಸ್‌ಜಿಸಿ025521)

ಸಂ:ಅ.ಇಂ(ವಿ)/ಪ್ರ(ಕಾ)/ವೃ.ದ/ಕಾ.ನಿ.ಇಂ(ವಿ)/ಕಿ.ಇಂ(ವಿ)-1/ಕ-393(4)/2026-27/1078-83 ದಿನಾಂಕ:08.06.2026

ಟೆಂಡರ್ ಅಧಿಸೂಚನೆ

(ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಕವಿಪ್ರನಿನಿಯು ಕೆಳಕಂಡ ಬಿಡ್ ವಿಚಾರಣೆ ಸಂಖ್ಯೆಯ ಮೂಲಕ ಕೆಳಕಂಡ ಕಾಮಗಾರಿಗೆ ಟೆಂಡರನ್ನು ಆಹ್ವಾನಿಸಿದೆ.

ಕವಿಪ್ರನಿನಿ/ಅ.ಇಂ/ಪ್ರ(ಕಾ)/ವೃತ್ತ-ದಕ್ಷಿಣ/ಕಾ.ನಿ.ಇಂ(ವಿ)/ಸ.ಕಾ.ಇಂ(2)/ಕಿ.ಇಂ-1/ 25-26/ಇ.ಪಿ.ಆರ್-26 ಕರೆ-2 ದಿನಾಂಕ: 26.02.2026 ರ ಅನ್ವಯ ಕವಿಪ್ರನಿನಿಯ ಬೆಂಗಳೂರು, ಪ್ರಸರಣ(ಕಾರ್ಯಾಚರಣೆ) ವೃತ್ತ-ದಕ್ಷಿಣ ವ್ಯಾಪ್ತಿಯಲ್ಲಿರುವ "ವಿವಿಧ ಉಪಕೇಂದ್ರಗಳಿಗೆ ಅವಶ್ಯವಿರುವ 66ಕೆವಿ ಪೊಟೆನ್ಷಿಯಲ್ ಟ್ರಾನ್ಸ್‌ಫಾರ್ಮರ್ ಸರಬರಾಜು ಮಾಡಲು ತಯಾರಿಕೆ, ಪರೀಕ್ಷಿಸುವುದು ಮತ್ತು ಸರಬರಾಜು F.O.R.D ಉಗ್ರಾಣ / ಪ್ರದೇಶದ ಆಧಾರದಲ್ಲಿ ಇನ್ಶೂರೆನ್ಸ್, ಸಾಗಾಣಿಕೆ ಮತ್ತು ಇಳಿಸುವಿಕೆಯನ್ನು ಒಳಗೊಂಡಂತೆ".

ಬಿಡ್‌ಗಳನ್ನು ಎಲೆಕ್ಟ್ರಾನಿಕ್ ಟೆಂಡರಿಂಗ್ ವಿಧಾನದ ಮೂಲಕ ಮಾತ್ರ ಸ್ವೀಕರಿಸಲಾಗುವುದು. ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವುದರ ಕುರಿತಾದ ವಿವರಗಳನ್ನು ಕವಿಪ್ರನಿನಿಯ ವೆಬ್‌ಸೈಟ್ **https://kptcl.karnataka.gov.in** ನ ಹೈಪರ್‌ಲಿಂಕ್ "E Procurement KPTCL" ಅಥವಾ **https://kppp.karnataka.gov.in** ನಲ್ಲಿ **ದಿನಾಂಕ 10.06.2026ರಂದು ಅಥವಾ ತದನಂತರ** ಪಡೆಯಬಹುದು. ಹೆಚ್ಚಿನ ಮಾಹಿತಿಯನ್ನು ಕೆಳಸಹಿದಾರರ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದು.

ಸಹಿ/- ಅಧೀಕ್ಷಕ ಇಂಜಿನಿಯರ್(ವಿ),
ಪ್ರಸರಣ (ಕಾರ್ಯಾಚರಣೆ) ವೃತ್ತ-ದಕ್ಷಿಣ, ಕ.ವಿ.ಪ್ರ.ನಿ.ನಿ.
ನೆಲ ಮಹಡಿ, ಕಛೇರಿ ಸಂಕೀರ್ಣ, ಆನಂದರಾವ್ ವೃತ್ತ, ಬೆಂಗಳೂರು.

ಸಿಬ್ಬಂದಿಯೂ ಇಲ್ಲ, ಅನುದಾನವೂ ಇಲ್ಲ

10 ವರ್ಷಗಳ ಹಿಂದೆ ಆರಂಭವಾದ ಡಾ.ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ಯೂನಿವರ್ಸಿಟಿ

• ಎ.ಎಂ.ಸುರೇಶ

ಬೆಂಗಳೂರು: ಭಾರಿ ಮಹತ್ವಾಕಾಂಕ್ಷೆಯೊಂದಿಗೆ ಹತ್ತು ವರ್ಷಗಳ ಹಿಂದೆ ಆರಂಭವಾಗಿರುವ 'ಡಾ. ಬಿ.ಆರ್. ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ಯೂನಿವರ್ಸಿಟಿ'ಗೆ ಇದುವರೆಗೆ ಸಿಬ್ಬಂದಿಯೂ ನೇಮಕವಾಗಿಲ್ಲ, ಸರ್ಕಾರದ ಅನುದಾನವೂ ಬಿಡುಗಡೆಯಾಗಿಲ್ಲ.

ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್ ಅನ್ನು ಮಾದರಿಯಾಗಿ ಪರಿಗಣಿಸಿ, ನಗರದ ಜ್ಞಾನ ಭಾರತಿ ಆವರಣದಲ್ಲಿ 2016-17ರಲ್ಲಿ ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ಯೂನಿವರ್ಸಿಟಿ ಆರಂಭಿಸಲಾಯಿತು. 43 ಎಕರೆ ವಿಶಾಲವಾದ ಕ್ಯಾಂಪಸ್‌ನಲ್ಲಿ ವಿಶ್ವವಿದ್ಯಾಲಯಕ್ಕೆ ಅಗತ್ಯವಿರುವ ಕಟ್ಟಡಗಳ ನಿರ್ಮಾಣವಾಗಿದ್ದು, ಮೂಲಸೌಕರ್ಯಗಳ ಕೊರತೆ ಇಲ್ಲ.

'ವಿಶ್ವವಿದ್ಯಾಲಯ ಆರಂಭವಾದಾಗ 15 ಬೋಧಕ ಮತ್ತು 49 ಬೋಧಕೇತರ ಹುದ್ದೆಗಳನ್ನು ಮಂಜೂರು ಮಾಡಲಾಗಿದೆ. ಆದರೆ, ಇದುವರೆಗೂ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರೂಪಿಸದ ಕಾರಣ ನೇಮಕಾತಿ ನಡೆದಿಲ್ಲ. ಹಿಂದೆ ಒಮ್ಮೆ ನಿಯಮಗಳನ್ನು ರೂಪಿಸಲಾಗಿತ್ತು. ಆದರೆ, ಅವು ಯುಜಿಸಿಗೆ ಅನುಗುಣವಾಗಿ ಇರಲಿಲ್ಲ. ಹೀಗಾಗಿ ಮತ್ತೊಮ್ಮೆ ನಿಯಮಗಳನ್ನು ರೂಪಿಸಿ ಹಣಕಾಸು ಇಲಾಖೆಗೆ ಕಳುಹಿಸಲಾಗಿದೆ. ಅದಕ್ಕೆ ಇನ್ನೂ ಒಪ್ಪಿಗೆ ಸಿಕ್ಕಿಲ್ಲ' ಎಂದು ಕುಲಪತಿ ಪ್ರೊ. ವಿಶ್ವನಾಥ್ 'ಪ್ರಜಾವಾಣಿ'ಗೆ ತಿಳಿಸಿದರು.

> ಅಂತರರಾಷ್ಟ್ರೀಯ ಮಟ್ಟಕ್ಕೆ ವಿ.ವಿ. ಬೆಳೆಸಬೇಕಾದರೆ, ಸರ್ಕಾರವು ವಿಶೇಷ ಕಾಳಜಿ ವಹಿಸಿ ಅನುದಾನ ಬಿಡುಗಡೆ ಮಾಡುವುದರ ಜೊತೆಗೆ ಸಿಬ್ಬಂದಿ ನೇಮಕಾತಿ ಮಾಡಬೇಕು
> **ಪ್ರೊ.ವಿಶ್ವನಾಥ್,** ಕುಲಪತಿ

'ಬೋಧಕ ಸಿಬ್ಬಂದಿಯನ್ನು ಸದ್ಯಕ್ಕೆ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲಾಗಿದೆ. ಹೊರ ಗುತ್ತಿಗೆ ಮೂಲಕ ಬೋಧಕೇತರ ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದಾರೆ. ಕಾಯಂ ಸಿಬ್ಬಂದಿ ಇಲ್ಲದ ಕಾರಣ ಪಿಎಚ್.ಡಿ ಸೇರಿದಂತೆ ಹೊಸ ಕೋರ್ಸ್‌ಗಳ ಆರಂಭ, ಶೈಕ್ಷಣಿಕ ಚಟುವಟಿಕೆಗಳ ವಿಸ್ತರಣೆಗೆ ಅಡ್ಡಿಯಾಗಿದೆ. ಹಣಕಾಸು ಇಲಾಖೆ ಆದಷ್ಟು ಬೇಗ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ಅನುಮೋದನೆ ನೀಡಿ, ಹುದ್ದೆಗಳ ಭರ್ತಿಗೆ ಅವಕಾಶ ನೀಡಿದರೆ ಅನುಕೂಲವಾಗಲಿದೆ' ಎಂದರು.

ವಿಶ್ವವಿದ್ಯಾಲಯದಲ್ಲಿ ಇದುವರೆಗೆ ಮೂರು ಕೋರ್ಸ್‌ಗಳು ಅಷ್ಟೇ ಇದ್ದವು. ಈ ವರ್ಷದಿಂದ ಹೊಸದಾಗಿ ಆರು ಕೋರ್ಸ್‌ಗಳನ್ನು ಆರಂಭಿಸಲಾಗುತ್ತಿದೆ. ಇದಕ್ಕೆ ಹೆಚ್ಚಿನ ಸಿಬ್ಬಂದಿ ಅಗತ್ಯವಿದ್ದು ಹೊಸದಾಗಿ 35 ಬೋಧಕ ಹುದ್ದೆಗಳನ್ನು ಮಂಜೂರು ಮಾಡುವಂತೆ ಕೋರಿ ಹಣಕಾಸು ಇಲಾಖೆಗೆ ಪ್ರಸ್ತಾವ ಸಲ್ಲಿಸಲಾಗಿದೆ. ಆದರೆ, ಇನ್ನೂ ಒಪ್ಪಿಗೆ ಸಿಕ್ಕಿಲ್ಲ.

ಅನುದಾನ ಇಲ್ಲ: 'ವಿಶ್ವವಿದ್ಯಾಲಯ ಆರಂಭವಾದಾಗ ₹150 ಕೋಟಿ ನೀಡುವುದಾಗಿ ಸರ್ಕಾರ ಘೋಷಿಸಿತ್ತು. ಇದಲ್ಲದೆ, 2017-18ರಿಂದ ಐದು ವರ್ಷಗಳ ಕಾಲ ವಾರ್ಷಿಕ ₹10 ಕೋಟಿಯಂತೆ ಒಟ್ಟು ₹50 ಕೋಟಿ ಅನುದಾನ ನೀಡುವುದಾಗಿ ಹೇಳಿತ್ತು. ಆದರೆ, ಮೊದಲ ವರ್ಷ ₹5 ಕೋಟಿ ಅಷ್ಟೇ ನೀಡಿದರು. ಉಳಿದ ₹45 ಕೋಟಿಯನ್ನು ಇದುವರೆಗೂ ನೀಡಿಲ್ಲ' ಎಂದು ವಿಶ್ವನಾಥ್ ಅವರು ತಿಳಿಸಿದರು.



'ಡಾ.ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ಯೂನಿವರ್ಸಿಟಿ'ಯ ಬೋಧನಾ ವಿಭಾಗದ ಕಟ್ಟಡ —ಪ್ರಜಾವಾಣಿ ಚಿತ್ರ

'ವಿಶ್ವವಿದ್ಯಾಲಯದ ನಿರ್ವಹಣೆಗೂ ಹಣ ಇಲ್ಲದ ಪರಿಸ್ಥಿತಿ ಇದೆ. ವಿಶ್ವವಿದ್ಯಾಲಯ ವ್ಯಾಪ್ತಿಯಲ್ಲಿ ಸಂಯೋಜನೆ ಹೊಂದಿದ ಕಾಲೇಜುಗಳು ಇಲ್ಲದ ಕಾರಣ ವಿ.ವಿ.ಗೆ ಆಂತರಿಕ ಸಂಪನ್ಮೂಲಗಳು ಇಲ್ಲ. ಈಗ 270 ವಿದ್ಯಾರ್ಥಿಗಳು ಇದ್ದು, ಅವರಿಂದ ಬರುವ ಶುಲ್ಕ ಬಹಳ ಕಡಿಮೆ. ಆ ಹಣವನ್ನೇ ಈಗಿರುವ ಸಿಬ್ಬಂದಿಗೆ ಸಂಬಳ ನೀಡಲು ಬಳಸಲಾಗುತ್ತಿದೆ' ಎಂದು ವಸ್ತುಸ್ಥಿತಿಯನ್ನು ಅವರು ವಿವರಿಸಿದರು.

2016-17ರಲ್ಲಿ ನೀಡಿದ್ದ ₹5 ಕೋಟಿ ಅನುದಾನವನ್ನು ಸಂಬಳ ಇತ್ಯಾದಿಗೆ ಬಳಸಲಾಗಿದೆ. 2024-25ರಲ್ಲಿ ₹2 ಕೋಟಿ ನೀಡಲಾಗಿತ್ತು. ವಿದ್ಯುತ್ ಬಿಲ್ ಜಾಸ್ತಿ ಬರುತ್ತಿದ್ದ ಕಾರಣ ಸೌರವಿದ್ಯುತ್ ಘಟಕ ಅಳವಡಿಸಲು ಅದನ್ನು ಬಳಸಲಾಗಿದೆ. 2025-26ರಲ್ಲಿ ₹1 ಕೋಟಿ ಅನುದಾನ ನೀಡಿದ್ದು, ತರಗತಿಯ ಕೊಠಡಿಗಳಲ್ಲಿ ಮೂಲಸೌಕರ್ಯಗಳನ್ನು ಕಲ್ಪಿಸಲು ಬಳಸಲಾಗಿದೆ. ಇದುವರೆಗೆ ನೀಡಿರುವ ಅನುದಾನ ಯಾವುದಕ್ಕೂ ಸಾಲದು. ವಿಶ್ವವಿದ್ಯಾಲಯ ಆರಂಭವಾದಾಗ ಘೋಷಿಸಿದ ಪ್ರಕಾರ ಅನುದಾನ ನೀಡಿದರೆ ವಿಶ್ವವಿದ್ಯಾಲಯದ ಅಭಿವೃದ್ಧಿಗೆ ನೆರವಾಗಲಿದೆ ಎಂದರು.

ಕಾಂಪೌಂಡ್ ಹಾಕಲು ಹಣ ಇಲ್ಲ

'ವಿಶ್ವವಿದ್ಯಾಲಯಕ್ಕೆ ಸೇರಿದ ಜಾಗದ ಬಗ್ಗೆ ಎರಡು ವಿವಾದಗಳು ಇದ್ದವು. ಒಂದು ಪ್ರಕರಣ ಇತ್ಯರ್ಥವಾಗಿದ್ದು, ಮತ್ತೊಂದು ಪ್ರಕರಣ ನ್ಯಾಯಾಲಯದಲ್ಲಿ ಇದೆ. ಈಗಾಗಲೇ ಇತ್ಯರ್ಥವಾಗಿರುವ ಪ್ರಕರಣದ ಜಾಗ ಒತ್ತುವರಿ ಆಗುವುದನ್ನು ತಡೆಯಲು ಕಾಂಪೌಂಡ್ ನಿರ್ಮಾಣ ಮಾಡುವ ಅಗತ್ಯವಿದೆ. ಆದರೆ, ಇದಕ್ಕೂ ಹಣ ಇಲ್ಲ' ಎಂದು ಕುಲಪತಿ ವಿಶ್ವನಾಥ್ ಅವರು ಬೇಸರ ವ್ಯಕ್ತಪಡಿಸಿದರು.

'ಕಾವೇರಿ' ಕ್ವಾಂಟಮ್ ಚಿಪ್

ತಂತ್ರಜ್ಞಾನ ಕ್ಷೇತ್ರದ ಮೈಲಿಗಲ್ಲು



ಕ್ವಾಂಟಮ್ ಪ್ರೊಸೆಸರ್ 'ಕಾವೇರಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರಿನ 'ಕ್ಯುಪಿಐಎಐ' ಸಂಸ್ಥೆಯು ಸಂಪೂರ್ಣ ಸ್ವದೇಶಿ 64-ಕ್ಯುಬಿಟ್ ಸೂಪರ್ ಕಂಡಕ್ಟಿಂಗ್ ಕ್ವಾಂಟಮ್ ಪ್ರೊಸೆಸರ್ 'ಕಾವೇರಿ' ಅನ್ನು ನಿರ್ಮಿಸಿದೆ. ಈ ತಂತ್ರಜ್ಞಾನ ನಿರ್ಮಿಸಿದ ಎಂಟನೇ ರಾಷ್ಟ್ರವಾಗಿ ಭಾರತ ಹೊರಹೊಮ್ಮಿದೆ ಎಂದು ಗೃಹ ಮತ್ತು ಐಟಿ-ಬಿಟಿ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.

'ತಂತ್ರಜ್ಞಾನ ಕ್ಷೇತ್ರದಲ್ಲಿ ಇದೊಂದು ಮಹತ್ವದ ಮೈಲಿಗಲ್ಲಾಗಿದೆ. ಕ್ವಾಂಟಮ್ ಪ್ರೊಸೆಸರ್ ವಿನ್ಯಾಸ ಮತ್ತು ತಯಾರಿಕಾ ಸಾಮರ್ಥ್ಯದ ಕೀರ್ತಿ ಕರ್ನಾಟಕಕ್ಕೂ ಸಲ್ಲುತ್ತದೆ. ಈವರೆಗೆ ಏಳು ದೇಶಗಳು ಮಾತ್ರ ಇಂತಹ ತಂತ್ರಜ್ಞಾನ ಹೊಂದಿದ್ದವು' ಎಂದು ಅವರು 'ಎಕ್ಸ್' ಮೂಲಕ ಪೋಸ್ಟ್ ಮಾಡಿದ್ದಾರೆ.

'ಕಾವೇರಿ' ಅತ್ಯಂತ ಶಕ್ತಿಶಾಲಿ ಕ್ವಾಂಟಮ್ ಚಿಪ್ ಆಗಿದೆ. ಇದು ನಿರ್ದಿಷ್ಟ ಸವಾಲುಗಳ ಕ್ಷೇತ್ರಗಳಲ್ಲಿ ಕ್ವಾಂಟಮ್ ವ್ಯವಸ್ಥೆಗಳು ಸಾಂಪ್ರದಾಯಿಕ ಕಂಪ್ಯೂಟರ್‌ಗಳನ್ನು ಮೀರಿಸಲು ಪ್ರಾರಂಭಿಸುವ ಹಂತವಾಗಿ ವಿಜ್ಞಾನಿಗಳು ಜಾಗತಿಕವಾಗಿ ಗುರುತಿಸುವ ನಿರ್ಣಾಯಕ 50 ಕ್ಯುಬಿಟ್ ಮಿತಿಯನ್ನು ದಾಟಿದೆ ಎಂದಿದ್ದಾರೆ.

'ಬೆಂಗಳೂರಿನ ತಂತ್ರಜ್ಞಾನ ವ್ಯವಸ್ಥೆಯು ದೇಶಕ್ಕೆ ನೀಡಬಹುದಾದ ಕೊಡುಗೆಗೆ 'ಕಾವೇರಿ' ಒಂದು ನಿದರ್ಶನ. ಕರ್ನಾಟಕವು ಭಾರತದ ಮೊದಲ ವಾಣಿಜ್ಯ ನಿಯೋಜನೆಯ ಕ್ವಾಂಟಮ್ ಕಂಪ್ಯೂಟರ್ ಅನ್ನು ಐಐಐಟಿ ಧಾರವಾಡ ಮತ್ತು ಐಐಐಟಿ-ರಾಯಚೂರುಗಳಲ್ಲಿ ಸ್ಥಾಪಿಸಿದೆ. ಇದು ಐಟಿ- ಬಿಟಿ ಇಲಾಖೆಯ ಲೀಪ್ ಕಾರ್ಯಕ್ರಮದಡಿ ನಡೆದಿದ್ದು, ಭಾರತದ ಕ್ವಾಂಟಮ್ ಕಂಪ್ಯೂಟಿಂಗ್ ಪಯಣದಲ್ಲಿ ರಾಜ್ಯವನ್ನು ಮುಂಚೂಣಿಯಲ್ಲಿರಿಸಿದೆ' ಎಂದು ತಿಳಿಸಿದ್ದಾರೆ.

ನೆಹರೂ ದಾಖಲೆ ಮುರಿದ ಪ್ರಧಾನಿ ನರೇಂದ್ರ ಮೋದಿ

ಪ್ರಜಾವಾಣಿ ವಾರ್ತೆ



ನರೇಂದ್ರ ಮೋದಿ

ನವದೆಹಲಿ: ದೇಶದ ಮೊದಲ ಪ್ರಧಾನಿ ಜವಾಹರ ಲಾಲ್ ನೆಹರೂ ಅವರ ಆಡಳಿತ ಅವಧಿಯ ದಾಖಲೆಯನ್ನು ಪ್ರಧಾನಿ ನರೇಂದ್ರ ಮೋದಿ ಅವರು ಮೀರಿಸಿರುವ ಕಾರಣ ಎನ್‌ಡಿಎ ಕೂಟವು ಬುಧವಾರ ಸಭೆ ನಡೆಸಿ, ಅಭಿನಂದನಾ ನಿರ್ಣಯವನ್ನು ಅಂಗೀಕರಿಸಲು ಸಜ್ಜಾಗಿದೆ.

ಮೋದಿ ನೇತೃತ್ವದ ಬಿಜೆಪಿ ಸರ್ಕಾರವು ಕೇಂದ್ರದಲ್ಲಿ 12 ವರ್ಷಗಳ ಆಡಳಿತ ಪೂರೈಸಿದೆ. 4,399 ದಿನಗಳ ಕಾಲ ಪ್ರಧಾನಿಯಾಗಿ ಮೋದಿ ಅವರು ಕಾರ್ಯನಿರ್ವಹಿಸಿದ್ದಾರೆ. ಈ ಮೂಲಕ ನೆಹರೂ ಅವರಿಗಿಂತ ಒಂದು ದಿನ ಹೆಚ್ಚಿಗೆ ಮೋದಿ ಅವರು ಆಡಳಿತದಲ್ಲಿ ಇದ್ದಂತಾಗಿದೆ. ಹೀಗಾಗಿ ಎನ್‌ಡಿಎ ಕೂಟದ 72-75 ನಾಯಕರ ಉಪಸ್ಥಿತಿಯಲ್ಲಿ ಸಭೆ ನಡೆಸಿ, ಅಭಿನಂದನಾ ನಿರ್ಣಯ ಅಂಗೀಕರಿಸಲು ನಿರ್ಧರಿಸಲಾಗಿದೆ ಎಂದು ಬಿಜೆಪಿಯ ಹಿರಿಯ ಸಚಿವರೊಬ್ಬರು ಹೇಳಿದ್ದಾರೆ.

ನೆಹರೂ ಅವರನ್ನು 1947ರಲ್ಲಿ ದೇಶದ ಪ್ರಧಾನಿಯಾಗಿ ನಾಮನಿರ್ದೇಶನ ಮಾಡಲಾಗಿತ್ತಾದರೂ ಅಂದಿನಿಂದ 1952ರವರೆಗಿನ ಅವರ ಅಧಿಕಾರದ ಅವಧಿಯನ್ನು ಬಿಜೆಪಿ ಪರಿಗಣಿಸಿಲ್ಲ. ಬದಲಿಗೆ 1952ರ ಮೇ 13ರಂದು ಚುನಾಯಿತ ಪ್ರಧಾನಿಯಾಗಿ ನೆಹರೂ ಅವರು ಅಧಿಕಾರ ವಹಿಸಿಕೊಂಡಾಗಿನಿಂದ 1964ರ ಮೇ 27ರವರೆಗಿನ ಅವರ ಅಧಿಕಾರವಧಿಯನ್ನು ಪರಿಗಣಿಸಿದೆ. ಇದರೊಂದಿಗೆ ಅವರು 4398 ದಿನಗಳ ಕಾಲ ಪ್ರಧಾನಿಯಾಗಿ ಕಾರ್ಯನಿರ್ವಹಿಸಿದಂತಾಗಿದೆ ಎಂದೂ ಸಚಿವರು ತಿಳಿಸಿದ್ದಾರೆ.

ಇಂದಿರಾ ಗಾಂಧಿ ಅವರು 14 ವರ್ಷಗಳ ಕಾಲ ಪ್ರಧಾನಿಯಾಗಿ ಕಾರ್ಯನಿರ್ವಹಿಸಿದ್ದಾರಾದರೂ ನಿರಂತರವಾಗಿ ಅಧಿಕಾರದಲ್ಲಿ ಇರಲಿಲ್ಲ ಎಂದೂ ಸಚಿವ ಹೇಳಿದ್ದಾರೆ.

ವಿಜ್ಞಾನ–ತಂತ್ರಜ್ಞಾನ, ಕೈಗಾರಿಕಾ ವಲಯದ ಪ್ರತಿನಿಧಿಗಳು ಭಾಗಿ

13ರಿಂದ 'ರೈಸ್–2026' ಸಮ್ಮೇಳನ

ಪ್ರಜಾವಾಣಿ ವಾರ್ತೆ

ಮೈಸೂರು: ತಂತ್ರಜ್ಞಾನದ ವಿನಿಮಯ, ನವೋದ್ಯಮಗಳಿಗೆ ಉತ್ತೇಜನದ ಆಶಯದೊಂದಿಗೆ ಜೂನ್ 13, 14ರಂದು ಬೆಂಗಳೂರಿನ ಎಚ್‌ಎಎಲ್ ವಿಮಾನ ನಿಲ್ದಾಣ ರಸ್ತೆಯ ವಿ.ಎಂ. ಘಾಟ್ಗೆ ಕನ್ವೆನ್ಶನ್ ಸೆಂಟರ್‌ನಲ್ಲಿ 'ರೈಸ್-2026' ಸಮ್ಮೇಳನ ನಡೆಯಲಿದೆ.

ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನಾ ಮಂಡಳಿಯ ಅಂಗಸಂಸ್ಥೆಗಳಾದ ಸಿಎಸ್‌ಐಆರ್ ರಾಷ್ಟ್ರೀಯ ಏರೋಸ್ಪೇಸ್ ಪ್ರಯೋಗಾಲಯ, ಸಿಎಫ್‌ಟಿಆರ್‌ಐ ಸಹಯೋಗದಲ್ಲಿ ಸಮ್ಮೇಳನ ನಡೆಯಲಿದೆ.

'ವಿಕಸಿತ ಭಾರತ-2047ಕ್ಕಾಗಿ ನವೋದ್ಯಮ ಮತ್ತು ಉದ್ಯಮಶೀಲತೆಯಿಂದ ಚಾಲಿತ ಬೆಳವಣಿಗೆ' ಎಂಬ ಧ್ಯೇಯವಾಕ್ಯದೊಂದಿಗೆ ನಡೆಯಲಿರುವ ಈ ಸಮಾವೇಶವು ನವೋದ್ಯಮ ಆಧಾರಿತ ಆರ್ಥಿಕ ಬೆಳವಣಿಗೆ ಮತ್ತು ತಾಂತ್ರಿಕ ಸ್ವಾವಲಂಬನೆಯನ್ನು ಉತ್ತೇಜಿಸುವ ಉದ್ದೇಶ ಹೊಂದಿದೆ. ಸಿಎಸ್‌ಐಆರ್, ಇಸ್ರೊ, ಡಿಎಸ್‌ಟಿ, ಡಿಬಿಟಿ, ಐಸಿಎಆರ್, ಐಸಿಎಂಆರ್ ಸೇರಿದಂತೆ ದೇಶದ 100ಕ್ಕೂ ಹೆಚ್ಚು ಪ್ರತಿಷ್ಠಿತ ಸಂಸ್ಥೆಗಳು, ನವೋದ್ಯಮ, ಕೈಗಾರಿಕೆಗಳ ಪ್ರದರ್ಶಕರು ತಮ್ಮ ಹೊಸ ಆವಿಷ್ಕಾರ ಹಾಗೂ ಅನುಷ್ಠಾನಗೊಳ್ಳಬಹುದಾದ ತಂತ್ರಜ್ಞಾನಗಳನ್ನು ಪ್ರದರ್ಶಿಸಲಿದ್ದಾರೆ. ತಂತ್ರಜ್ಞಾನ ವರ್ಗಾವಣೆ, ವಾಣಿಜ್ಯೀಕರಣ, ಕೈಗಾರಿಕಾ ಸಹಭಾಗಿತ್ವ, ಹೂಡಿಕೆ ಜಾಲತಾಣ ನಿರ್ಮಾಣ ಮತ್ತು ಉದ್ಯಮಶೀಲತೆಯ ಅಭಿವೃದ್ಧಿಗೆ ಈ ಸಮಾವೇಶ ವೇದಿಕೆಯಾಗಲಿದೆ

ಈ ವಿಜ್ಞಾನ ಮತ್ತು ತಂತ್ರಜ್ಞಾನ ಸಮ್ಮೇಳನದಲ್ಲಿ ದೇಶದ ವಿವಿಧ ಸಂಶೋಧನಾ ಸಂಸ್ಥೆಗಳು, ಸ್ಟಾರ್ಟ್ ಅಪ್, ಹೂಡಿಕೆ ಹಾಗೂ ಕೈಗಾರಿಕಾ ವಲಯದ ಪ್ರತಿನಿಧಿಗಳು ಭಾಗವಹಿಸಲಿದ್ದಾರೆ. ಸಾರ್ವಜನಿಕರಿಗೂ ಮುಕ್ತ ಪ್ರವೇಶವಿದೆ ಎಂದು ಸಿಎಫ್‌ಟಿಆರ್‌ಐ ನಿರ್ದೇಶಕ ಗಿರಿಧರ್ ಪರ್ವತಂ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಈ ಹಿಂದೆ ಜಮ್ಮು, ಹೈದರಾಬಾದ್, ಮುಂಬೈ, ಲಖನೌ ಮತ್ತು ಚೆನ್ನೈಗಳಲ್ಲಿ ಈ ಸಮಾವೇಶ ನಡೆದಿದ್ದು, ಈ ವರ್ಷ ಬೆಂಗಳೂರು ಆತಿಥ್ಯ ವಹಿಸಲಿದೆ. 13ರಂದು ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಭೂ ವಿಜ್ಞಾನಗಳ ಖಾತೆ ರಾಜ್ಯ ಸಚಿವ ಜಿತೇಂದ್ರ ಸಿಂಗ್ ಸಮ್ಮೇಳನ ಉದ್ಘಾಟಿಸುವರು. ಸಿಎಸ್‌ಐಆರ್ ಮಹಾನಿರ್ದೇಶಕಿ ಎನ್.ಕಲೈಸೆಲ್ವಿ ಪಾಲ್ಗೊಳ್ಳಲಿದ್ದಾರೆ. 14ರಂದು ಸಮಾರೋಪ ಸಮಾರಂಭ ನಡೆಯಲಿದ್ದು, ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಸಂಸದ ತೇಜಸ್ವಿ ಸೂರ್ಯ ಭಾಗವಹಿಸಲಿದ್ದಾರೆ ಎಂದರು.

ವಿಜ್ಞಾನಿಗಳಾದ ಪ್ರೊ.ಆರ್.ಎಸ್. ಮಾಚೆ, ವಿಕಾಸ್‌ಸಿಂಗ್ ಚೌಹಾಣ್, ಎ.ಎ.ಇನಾಮ್‌ದಾರ್, ಎಂ.ವಿ. ರಘುನಂದನ್, ಟಿ.ಆರ್. ರಾಮಪ್ರಸಾದ್, ಆರ್. ಸುಹಾಸ್ ಇದ್ದರು.

ಮುಖ್ಯಾಂಶಗಳು

- ವಿ.ಎಂ. ಘಾಟ್ಗೆ ಕನ್ವೆನ್ಶನ್ ಸೆಂಟರ್‌ನಲ್ಲಿ ಕಾರ್ಯಕ್ರಮ
- ವಿವಿಧ ಅಧಿವೇಶನ, ಪ್ರದರ್ಶನ ಆಯೋಜನೆ
- ನೂರಕ್ಕೂ ಹೆಚ್ಚು ಸಂಸ್ಥೆಗಳ ಪ್ರತಿನಿಧಿಗಳು ಭಾಗಿ

'ಪರಿಣತರಿಂದ ಉಪನ್ಯಾಸ'

'ಸಮಾವೇಶದಲ್ಲಿ ಹಲವು ವಿಷಯಗಳ ಕುರಿತು ವಿಶೇಷ ಅಧಿವೇಶನ ನಡೆಯಲಿವೆ. ವಿಶೇಷವಾಗಿ ಏರೋಸ್ಪೇಸ್ ತಂತ್ರಜ್ಞಾನದ ಕುರಿತು ಬೆಳಕು ಚೆಲ್ಲಲಾಗುತ್ತದೆ. ವಿಜ್ಞಾನ ಸಂವಹನ, ಕೃತಕ ಬುದ್ಧಿಮತ್ತೆ (ಎಐ), ಕೃಷಿ ಉತ್ಪನ್ನಗಳ ಮೌಲೀಕರಣ, ವೆಂಚರ್ ಕ್ಯಾಪಿಟಲ್, ಹೂಡಿಕೆ ಮತ್ತು ನವೋದ್ಯಮ ಪರಿಸರ ವ್ಯವಸ್ಥೆಗಳು, ಶೈಕ್ಷಣಿಕ ಸಂಶೋಧನೆಯನ್ನು ಕೈಗಾರಿಕಾ ಅಗತ್ಯಗಳಿಗೆ ಹೊಂದಾಣಿಕೆ ಮಾಡುವ ವಿಷಯಗಳ ಕುರಿತು ಪರಿಣತರು ಮಾತನಾಡಲಿದ್ದಾರೆ' ಎಂದು ಗಿರಿಧರ್ ಪರ್ವತಂ ಹೇಳಿದರು.



ಕಾನೂನು ಜಾಗೃತಿ ಕಾರ್ಯಾಗಾರದಲ್ಲಿ ಮೋಹನ್ ರಾವ್ ನಲವಡೆ, ನ್ಯಾ.ಬಿ.ವೀರಪ್ಪ, ಎಚ್.ಶಶಿಧರ ಶೆಟ್ಟಿ, ಸಚಿನ್ ಘೋರ್ಪಡೆ ಪಾಲ್ಗೊಂಡಿದ್ದರು —ಪ್ರಜಾವಾಣಿ ಚಿತ್ರ

'ಭ್ರಷ್ಟಾಚಾರದ ವಿರುದ್ಧ ಮಾಧ್ಯಮ ಬಂದೂಕಾಗಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗ ಸೇರಿ ಎಲ್ಲ ಕ್ಷೇತ್ರಗಳಲ್ಲೂ ಭ್ರಷ್ಟಾಚಾರ ವ್ಯಾಪಿಸಿದ್ದು, ಅದರ ವಿರುದ್ಧ ಮಾಧ್ಯಮಗಳು ಬಂದೂಕಾಗಬೇಕು' ಎಂದು ಉಪ ಲೋಕಾಯುಕ್ತ, ನ್ಯಾಯಮೂರ್ತಿ ಬಿ.ವೀರಪ್ಪ ಪ್ರತಿಪಾದಿಸಿದರು.

ರಾಜ್ಯ ಸರ್ಕಾರಿ ನೌಕರರ ಸಂಘದ ಎನ್‌ಜಿಒ ಸಭಾಂಗಣದಲ್ಲಿ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ಮತ್ತು ಮಾನವ ಹಕ್ಕುಗಳು ಹಾಗೂ ಭ್ರಷ್ಟಾಚಾರ ವಿರೋಧಿ ಸಂಸ್ಥೆಯು ಮಂಗಳವಾರ ಆಯೋಜಿಸಿದ್ದ ರಾಜ್ಯ ಮಟ್ಟದ ಕಾನೂನು ಜಾಗೃತಿ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು.

'ಸಂವಿಧಾನವು ಸಮಾನ ಹಕ್ಕುಗಳನ್ನು ನೀಡಿ ಗೌರವದಿಂದ ಬದುಕುವಂತೆ ಮಾಡಿದೆ. ಆದರೆ, ಜನರು ಕರ್ತವ್ಯ ಪಾಲಿಸಲು ಮರೆತಿದ್ದಾರೆ. ಸರ್ಕಾರಿ ಹುದ್ದೆಗಳು ಭ್ರಷ್ಟಾಚಾರಕ್ಕೆ ಪರವಾನಗಿಯಂತಾಗಿವೆ. ಈ ಕ್ಯಾನ್ಸರ್ ಅನ್ನು ಶಮನಗೊಳಿಸಲು ಜನರು ಮನಸ್ಸು ಮಾಡದಿದ್ದರೆ ದೇಶವು ಮತ್ತೊಮ್ಮೆ ಗುಲಾಮಗಿರಿಯತ್ತ ಸಾಗಬೇಕಾಗುತ್ತದೆ' ಎಂದರು.

'ವಿದ್ಯಾವಂತರಿಂದಲೇ ಭ್ರಷ್ಟಾಚಾರ ಹೆಚ್ಚಾಗಿದೆ. ಮಕ್ಕಳಿಗೆ ನೀಡುವ ಮೊಟ್ಟೆಯನ್ನೂ ಅಂಗನವಾಡಿ ಕಾರ್ಯಕರ್ತೆಯರು ಕಸಿದು ಮಾರಾಟ ಮಾಡುವಷ್ಟು ಅಕ್ರಮಗಳು ನಡೆದಿವೆ' ಎಂದರು.

ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಎಚ್. ಶಶಿಧರ ಶೆಟ್ಟಿ ಮಾತನಾಡಿ, ' ಅನ್ಯಾಯ, ಅಪರಾಧ, ಹಗರಣಗಳು ನಡೆದಾಗ ಯುವ ಸಮುದಾಯ ಪ್ರಶ್ನಿಸಬೇಕು. ಕಾನೂನು ಮಾಹಿತಿಗಳನ್ನು ಪಡೆದು ಹೋರಾಟ ನಡೆಸಬೇಕು' ಎಂದರು.

ನಾರ್ಕೊಟಿಕ್ಸ್ ಕಂಟ್ರೋಲ್ ಬ್ಯೂರೊ ವಲಯ ನಿರ್ದೇಶಕ ಸಚಿನ್ ಘೋರ್ಪಡೆ, ಎನ್‌ಫೋಲ್ಡ್ ಪ್ರೊಆ್ಯಕ್ಟೀವ್ ಹೆಲ್ತ್ ಟ್ರಸ್ಟ್‌ನ ನಿರ್ದೇಶಕಿ ಖುಷಿ ಕುಶಾಲಪ್ಪ, ಪ್ರಾಧಿಕಾರದ ಸದಸ್ಯ ಮೋಹನ್ ರಾವ್ ನಲವಡೆ ಪಾಲ್ಗೊಂಡಿದ್ದರು.

ಮುಖ್ಯಾಂಶಗಳು

- ಅಪ್ರಾಮಾಣಿಕ ಸಂಪಾದನೆ: ಕುಟುಂಬ ನಿರಾಕರಿಸಲಿ
- ಮನೆಗಳಿಂದಲೇ ಭ್ರಷ್ಟಾಚಾರದ ವಿರುದ್ಧ ಹೋರಾಟ ಶುರುವಾಗಲಿ

'ಭ್ರಷ್ಟಾಚಾರಿಗಳನ್ನು ಅಸ್ಪೃಶ್ಯರನ್ನಾಗಿಸಬೇಕು'

'ಜಾತಿ ಹೆಸರಿನಲ್ಲಿ ಅಸ್ಪೃಶ್ಯತೆ ಆಚರಿಸುವ ಬದಲು ಭ್ರಷ್ಟಾಚಾರಿಗಳನ್ನು ಅಸ್ಪೃಶ್ಯರನ್ನಾಗಿಸಬೇಕು. ಮದುವೆ ಸಮಾರಂಭಗಳಿಗೂ ಕರೆಯಬಾರದೆಂಬ ಸಂಕಲ್ಪ ಮಾಡಬೇಕು. ಅಪ್ರಾಮಾಣಿಕ ಸಂಪಾದನೆಯಿಂದ ಕೊಡಿಸಿದ ಆಭರಣ, ಆಸ್ತಿಯನ್ನು ತಾಯಿ, ಪತ್ನಿ, ಮಕ್ಕಳು ನಿರಾಕರಿಸಬೇಕು. ಮನೆಯಿಂದಲೇ ಈ ಹೋರಾಟ ಆರಂಭವಾಗಬೇಕು' ಎಂದು ವೀರಪ್ಪ ಹೇಳಿದರು.



ಒಡಂಬಡಿಕೆಯ ಪತ್ರಗಳನ್ನು ಡಾ.ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಬಿ.ರಮೇಶ್ ಹಾಗೂ ಅಮೆರಿಕದ ಕ್ಯಾಲಿಫೋರ್ನಿಯಾದ ರಾಡಾಪ್ಟೀವ್ ಇಂಕ್ ಸಂಸ್ಥೆಯ ಉಪಾಧ್ಯಕ್ಷೆ ಸುಧಾ ದೇವ್ ವಿನಿಮಯ ಮಾಡಿಕೊಂಡರು

'ಕೌಶಲ ಆಧಾರಿತ ಉದ್ಯೋಗ ಸೃಷ್ಟಿ'

ಪ್ರಜಾವಾಣಿ ವಾರ್ತೆ

ಡಾ.ಮನಮೋಹನ್ ಸಿಂಗ್ ವಿಶ್ವವಿದ್ಯಾಲಯ ಒಡಂಬಡಿಕೆ

ಬೆಂಗಳೂರು: ವಿದ್ಯಾರ್ಥಿಗಳಿಗೆ ಕೌಶಲ ಆಧಾರಿತ ಉದ್ಯೋಗ ಅವಕಾಶಗಳನ್ನು ಸೃಷ್ಟಿಸಲು ಡಾ.ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯವು ಅಮೆರಿಕದ ಕ್ಯಾಲಿಫೋರ್ನಿಯಾದ ರಾಡಾಪ್ಟೀವ್ ಇಂಕ್ ಸಂಸ್ಥೆಯೊಂದಿಗೆ ಒಡಂಬಡಿಕೆ ಮಾಡಿಕೊಂಡಿದೆ.

ಈ ಸಂಬಂಧ ನಗರದಲ್ಲಿ ಮಂಗಳವಾರ ವಿಶ್ವವಿದ್ಯಾಲಯದ ಕುಲಸಚಿವ ಎ.ನವೀನ್ ಜೋಸೆಫ್ ಹಾಗೂ ಸಂಸ್ಥೆಯ ಉಪಾಧ್ಯಕ್ಷೆ ಸುಧಾ ದೇವ್ ಅಂಕಿತ ಹಾಕಿದರು.

ಪತ್ರವನ್ನು ವಿನಿಮಯ ಮಾಡಿಕೊಂಡ ಕುಲಪತಿ ಪ್ರೊ.ಬಿ.ರಮೇಶ್ ಮಾತನಾಡಿ, 'ಸಮಾಜ ವಿಜ್ಞಾನ ಅಧ್ಯಯನದ ವಿದ್ಯಾರ್ಥಿಗಳಿಗೆ ತಂತ್ರಜ್ಞಾನ ಕೌಶಲ ತರಬೇತಿ ಒದಗಿಸಲು ಈ ಪ್ರಯತ್ನ ನಡೆದಿದೆ' ಎಂದರು.

ಸುಧಾ ದೇವ್ ಮಾತನಾಡಿ, ವಿದ್ಯಾರ್ಥಿಗಳಲ್ಲಿ ಕೌಶಲ ಅಭಿವೃದ್ಧಿಗೆ ಪೂರಕವಾಗಿ ಬೋಧಕರಿಗೂ ಮಾರ್ಗದರ್ಶನ ನೀಡುವ ಜೊತೆಗೆ ಉದ್ಯಮ ಕ್ಷೇತ್ರದ ಅಗತ್ಯಗಳಿಗೆ ಅನುಗುಣವಾಗಿ ಪಠ್ಯಕ್ರಮ ಪರಿಷ್ಕರಣೆಯ ಬಗ್ಗೆ ಪ್ರಸ್ತಾಪಿಸಿದರು.

ಸಮಾಜಕಾರ್ಯ ಶಿಕ್ಷಣವನ್ನು ಕೃತಕ ಬುದ್ಧಿಮತ್ತೆಯೊಂದಿಗೆ ಸಮನ್ವಯಗೊಳಿಸಬೇಕು. ಆ ಮೂಲಕ ಸಮುದಾಯ ಸಂಪರ್ಕ ಮತ್ತು ಒಳಗೊಳ್ಳುವಿಕೆಯನ್ನು ಹೆಚ್ಚಿಸಬೇಕು ಎಂಬ ಅಂಶಗಳು ಒಡಂಬಡಿಕೆಯಲ್ಲಿವೆ.

ಮೌಲ್ಯಮಾಪನ ವಿಭಾಗದ ಕುಲಸಚಿವ ಪ್ರೊ. ರಮೇಶ ಬಿ.ಕುಡೇನಟ್ಟಿ, ಸಿಂಡಿಕೇಟ್ ಸದಸ್ಯರಾದ ಡಾ.ಎಚ್.ಕೃಷ್ಣರಾಂ, ಫ್ರಾನ್ಸಿಸ್ ಅಸ್ಸಿಸಿ ಅಲ್ಮೈಡಾ, ವಿದ್ಯಾವಿಷಯಕ ಪರಿಷತ್ತಿನ ಸದಸ್ಯರಾದ ಡಾ.ಅಬ್ದುಲ್ ಖಾದರ್, ಪ್ರೊ.ಎಂ.ನಿರ್ಮಲಾ, ಪ್ರೊ.ರಿತಿಕಾ ಸಿನ್ಹಾ, ಪ್ರೊ. ಮೇಧಾ ಇಟಗಿ ಹುಯಿಲಗೋಳ ಹಾಗೂ ಡಾ. ಟಿ.ಎನ್. ತಾಂಡವಗೌಡ ಪಾಲ್ಗೊಂಡಿದ್ದರು.

'ಆಂತರಿಕ ಪ್ರಜಾಪ್ರಭುತ್ವ ಅತ್ಯಗತ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜಕೀಯ ಪಕ್ಷಗಳಲ್ಲಿ ಆಂತರಿಕ ಪ್ರಜಾಪ್ರಭುತ್ವ ಇಲ್ಲದೆ ಹೋದಾಗ ಮತ್ತು ವ್ಯಾಪಾರವೇ ಸಿದ್ಧಾಂತವಾದಾಗ ಪ್ರಜಾಪ್ರಭುತ್ವಕ್ಕೆ ಉಳಿಗಾಲವಿಲ್ಲ ಎಂದು ಮಾಜಿ ಸಚಿವ ಕೆ.ಆರ್.ರಮೇಶ್ ಕುಮಾರ್ ಅವರು ಹೇಳಿದರು.

ನಗರದ ನ್ಯಾಷನಲ್ ಕಾಲೇಜಿನಲ್ಲಿ ಕನ್ನಡ ಜನಶಕ್ತಿ ಮತ್ತು ಶಾಂತವೇರಿ ಗೋಪಾಲಗೌಡ ಸಮಾಜವಾದಿ ಪ್ರತಿಷ್ಠಾನ ಆಯೋಜಿಸಿದ್ದ ಶಾಂತವೇರಿ ಗೋಪಾಲಗೌಡ ಸಂಸ್ಮರಣೆ ಹಾಗೂ ರಾಜಕೀಯ ಸಂತ ಗೋಪಾಲಗೌಡ ಕೃತಿ ಜನಾರ್ಪಣೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ದೇಶದಲ್ಲಿ ಪ್ರಜಾಪ್ರಭುತ್ವ ಇದೆಯೇ ಅಥವಾ ಸಮಾಜವಾದ ಇದೆಯೇ ಎಂಬ ಪ್ರಶ್ನೆ ಕಾಡುತ್ತಿದೆ. ಪ್ರಸ್ತುತ ದಿನಗಳಲ್ಲಿ ಸರ್ವಾಧಿಕಾರಿ ಪ್ರಜಾಪ್ರಭುತ್ವ ಎಂಬ ಹೊಸ ಪರಿಭಾಷೆ ಸೃಷ್ಟಿಯಾಗಿದೆ. ಕಮ್ಯುನಿಸ್ಟ್ ಸಿದ್ಧಾಂತಗಳಿಗಿಂತ ಭಿನ್ನವಾಗಿ, ಈ ದೇಶದ ಪರಿಸರಕ್ಕೆ ಹೊಂದುವಂತಹ ಪ್ರಜಾಪ್ರಭುತ್ವವಾದಿ ಸಮಾಜವಾದ ಇಂದಿನ ಅಗತ್ಯವಾಗಿದೆ ಎಂದು ಹೇಳಿದರು.

'ಗೋಪಾಲಗೌಡರು ಎಂದಿಗೂ ತಪ್ಪು ಹಾದಿ ಹಿಡಿಯಲಿಲ್ಲ. ಅಂದು ನಾಯಕರಾಗಿದ್ದ ನಿಜಲಿಂಗಪ್ಪ, ದೇವರಾಜ ಅರಸು ಅಥವಾ ಶಾಂತವೇರಿ ಗೋಪಾಲಗೌಡರು ಅನಾರೋಗ್ಯ ಪೀಡಿತರಾದಾಗ ಬೌರಿಂಗ್ ಹಾಗೂ ವಿಕ್ಟೋರಿಯಾದಂತಹ ಸರ್ಕಾರಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದಿದ್ದರು. ಆದರೆ, ಇಂದು ರಾಜ್ಯ ಆಳುವವರೇ ಪ್ರತಿಷ್ಠಿತ ಖಾಸಗಿ ಆಸ್ಪತ್ರೆಗಳಿಗೆ ಹೋಗುತ್ತಾರೆ. ಹಾಗಾದರೆ ಸರ್ಕಾರಿ ಶಾಲೆ, ಆಸ್ಪತ್ರೆಗಳು ಇರುವುದು ಕೇವಲ ಬಡ ಜನರಿಗೆ ಮಾತ್ರವೇ' ಎಂದು ಪ್ರಶ್ನಿಸಿದರು.



'ರಾಜಕೀಯ ಸಂತ ಶಾಂತವೇರಿ ಗೋಪಾಲಗೌಡ' ಕೃತಿ ಜನಾರ್ಪಣೆ ಕಾರ್ಯಕ್ರಮದಲ್ಲಿ ಶೂದ್ರ ಶ್ರೀನಿವಾಸ್, ಬಂಜಗೆರೆ ಜಯಪ್ರಕಾಶ, ಬಿ.ಆರ್.ಪಾಟೀಲ, ಕೆ.ಆರ್.ರಮೇಶ್ ಕುಮಾರ್, ರಾಮ ಮನೋಹರ್ ಮತ್ತು ಸಿ.ಕೆ.ರಾಮೇಗೌಡ ಪಾಲ್ಗೊಂಡಿದ್ದರು —ಪ್ರಜಾವಾಣಿ ಚಿತ್ರ

ಶಾಸಕ ಬಿ.ಆರ್.ಪಾಟೀಲ ಮಾತನಾಡಿ, 'ಚುನಾವಣೆ ಮುಗಿದ ನಂತರ ಆಯೋಗಕ್ಕೆ ನಾವ್ಯಾರೂ ಸತ್ಯದ ಲೆಕ್ಕ ಕೊಡುವುದಿಲ್ಲ, ಎಲ್ಲರೂ ಸುಳ್ಳೇ ಬರೆಯುತ್ತೇವೆ. ಅಲ್ಲಿಗೇ ನಮ್ಮ ನೈತಿಕತೆ ಪತನಗೊಳ್ಳುತ್ತದೆ. ಇನ್ನು ಮುಂದೆ ದುಬಾರಿ ರಾಜಕಾರಣದಲ್ಲಿ ನಮ್ಮಂತಹವರು ಉಳಿಯುವುದು ಕಷ್ಟ' ಎಂದರು.

'ಶಾಸನ ಸಭೆಗಳು ಕೇವಲ ಹೆಸರಿಗಷ್ಟೇ ಉಳಿಯುತ್ತಿವೆ. ಸದನದಲ್ಲಿ ಗಂಭೀರತೆಯೇ ಇಲ್ಲದಂತಾಗಿದೆ. ಮುಂದಿನ ದಿನಗಳಲ್ಲಿ ಶಾಸನ ಸಭೆಗಳು ಕೇವಲ ಹೆಸರಿಗೆ ಮಾತ್ರ ಇದ್ದು, ಆಡಳಿತ ಬೇರೆಯವರ ಕೈ ಸೇರಲಿದೆ' ಎಂದು ಹೇಳಿದರು.

ಕನ್ನಡ ಪುಸ್ತಕ ಪ್ರಾಧಿಕಾರದ ಮಾಜಿ ಅಧ್ಯಕ್ಷ ಬಂಜಗೆರೆ ಜಯಪ್ರಕಾಶ್, ಲೇಖಕ ಶೂದ್ರ ಶ್ರೀನಿವಾಸ್, ಪ್ರತಿಷ್ಠಾನದ ಕಾರ್ಯದರ್ಶಿ ರಾಮ ಮನೋಹರ್, ಕನ್ನಡ ಜನಶಕ್ತಿ ಕೇಂದ್ರದ ಅಧ್ಯಕ್ಷ ಸಿ.ಕೆ.ರಾಮೇಗೌಡ ಇದ್ದರು.

ಸಿ.ಎಂ ಸಭೆಯಲ್ಲಿ ಟಿಎಂಸಿ ಸಂಸದರು

ಕೋಲಾಘಾಟ್/ ಕೋಲ್ಕತ್ತ (ಪಿಟಿಐ): ಟಿಎಂಸಿಯ ಭಿನ್ನಮತೀಯ ಸಂಸದರಾದ ಜೂನ್ ಮಾಲಿಯಾ ಮತ್ತು ದೀಪಕ್ ಅಧಿಕಾರಿ (ದೇವ್) ಅವರು ಪೂರ್ವ ಮೇದಿನಿಪುರ ಜಿಲ್ಲೆಯಲ್ಲಿ ನಡೆದ ಮುಖ್ಯಮಂತ್ರಿ ಸುವೇಂದು ಅಧಿಕಾರಿ ಅವರ ಆಡಳಿತಾತ್ಮಕ ಸಭೆಯಲ್ಲಿ ಮಂಗಳವಾರ ಭಾಗಿಯಾಗಿದ್ದರು.

ಟಿಎಂಸಿ ಸಂಸದೀಯ ಘಟಕದಲ್ಲಿ ಬಿರುಕು ಮೂಡಿರುವ ನಡುವೆಯೇ ಅವರು ಸಭೆಯಲ್ಲಿ ಭಾಗಿಯಾಗಿದ್ದರು.

ಮೇದಿನಿಪುರ ಸಂಸದೆ ಮಾಲಿಯಾ ಮತ್ತು ಘಾಟಾಲ್ ಸಂಸದ ದೇವ್ ಅವರು ಟಿಎಂಸಿ ಬಂಡಾಯ ಗುಂಪಿನಲ್ಲಿ ಗುರುತಿಸಿಕೊಂಡಿದ್ದಾರೆ. ಸಭೆಯಲ್ಲಿ ಬಂಡಾಯ ಶಾಸಕಿ ಶೆವುಲಿ ಸಾಹಾ ಅವರೂ ಪಾಲ್ಗೊಂಡಿದ್ದರು.

ಸಬ್ಯಸಾಚಿ ಬಂಧನ: ಸುಲಿಗೆ ಮತ್ತು ಬೆದರಿಕೆ ಆರೋಪದ ಮೇಲೆ ಟಿಎಂಸಿ ನಾಯಕ ಸಬ್ಯಸಾಚಿ ದತ್ ಅವರನ್ನು ಉತ್ತರ ಪರಗಣ 24ರಲ್ಲಿರುವ ಅವರ ನಿವಾಸದಲ್ಲಿ ಮಂಗಳವಾರ ಬಂಧಿಸಲಾಗಿದೆ. ಉದ್ಯಮಿಯೊಬ್ಬರ ದೂರಿನ ಆಧಾರದ ಮೇಲೆ ಪೊಲೀಸರು ಎಫ್‌ಐಆರ್ ದಾಖಲಿಸಿದ್ದರು.

ಮೇಲ್ಸೇತುವೆ ನಿರ್ಮಾಣಕ್ಕೆ ಶೀಘ್ರ ಟೆಂಡರ್

ಪ್ರಜಾವಾಣಿ ವಾರ್ತೆ

ವಿವಿಧ ಕಾಮಗಾರಿಗಳ ಪರಿಶೀಲನೆ: ಸಂಸದ ಡಾ.ಸಿ.ಎನ್. ಮಂಜುನಾಥ್ ಮಾಹಿತಿ

ಆನೇಕಲ್: ಪಟ್ಟಣದ ರೈಲ್ವೆ ನಿಲ್ದಾಣದ ಬಳಿ ವಾಹನ ದಟ್ಟಣೆ ಸಮಸ್ಯೆ ನಿವಾರಣೆಗೆ ₹70 ಕೋಟಿ ವೆಚ್ಚದಲ್ಲಿ ಮೇಲ್ಸೇತುವೆ ನಿರ್ಮಿಸಲಾಗುವುದು ಎಂದು ಸಂಸದ ಡಾ.ಸಿ.ಎನ್.ಮಂಜುನಾಥ್ ತಿಳಿಸಿದರು.

ಆನೇಕಲ್ ರೈಲು ನಿಲ್ದಾಣದಲ್ಲಿ ಕೈಗೊಂಡಿರುವ ಕಾಮಗಾರಿಗಳ ಪ್ರಗತಿಯನ್ನು ಮಂಗಳವಾರ ಪರಿಶೀಲಿಸಿದ ನಂತರ ಮಾತನಾಡಿದ ಅವರು, 'ಆನೇಕಲ್ ರೈಲ್ವೆ ನಿಲ್ದಾಣದ ರೈಲ್ವೆ ಗೇಟ್ ಹಾಕಿದಾಗ ವಾಹನ ದಟ್ಟಣೆ ಹೆಚ್ಚಾಗುತ್ತಿರುವುದು ಗಮನಕ್ಕೆ ಬಂದಿದೆ. ಈ ಬಗ್ಗೆ ರೈಲ್ವೆ ಸಚಿವರಾದ ಅಶ್ವಿನಿ ವೈಷ್ಣವ್ ಮತ್ತು ಸೋಮಣ್ಣ ಅವರಿಗೆ ತಿಳಿಸಲಾಗಿದೆ. ₹70 ಕೋಟಿ ವೆಚ್ಚದಲ್ಲಿ ರಸ್ತೆ ಮೇಲ್ಸೇತುವೆ ಕಾಮಗಾರಿಗೆ ಕ್ರಿಯಾಯೋಜನೆ ರೂಪಿಸಲಾಗಿದ್ದು ಶೀಘ್ರ ಟೆಂಡರ್ ಆಹ್ವಾನಿಸಲಾಗುವುದು. ರೈಲ್ವೆ ನಿಲ್ದಾಣದ ಅಭಿವೃದ್ಧಿ ಕಾಮಗಾರಿ ಪ್ರಗತಿಯಲ್ಲಿದೆ' ಎಂದರು.

ಪಟ್ಟಣದ ರೈಲು ನಿಲ್ದಾಣವನ್ನು ಸುಸಜ್ಜಿತವಾಗಿ ರೂಪಿಸಲು ಕ್ರಮ ವಹಿಸಲಾಗಿದೆ. ರೈಲ್ವೆ ನಿಲ್ದಾಣದ ಸಂಪರ್ಕ ರಸ್ತೆಗಳನ್ನು ಅಭಿವೃದ್ಧಿ ಪಡಿಸಲಾಗುತ್ತಿದೆ. ಒಂದು ರೈಲು ಆನೇಕಲ್‌ನಲ್ಲಿ ನಿಲ್ಲುವುದರಿಂದ ಬೇರೆ ರೈಲುಗಳ ಸಮಯ ಬದಲಾವಣೆಯಾಗುತ್ತಿದೆ. ತಾಂತ್ರಿಕ ಕಾರಣಗಳನ್ನು ಕೇಳಲಾಗಿದ್ದು ಮುಂದಿನ ದಿನಗಳಲ್ಲಿ ಎಕ್ಸ್‌ಪ್ರೆಸ್ ರೈಲುಗಳ ನಿಲುಗಡೆಗೆ ಕ್ರಮ ವಹಿಸಲಾಗುವುದು. ರೈಲು ನಿಲ್ದಾಣದ ಸಂಪರ್ಕ ರಸ್ತೆಗಳನ್ನು ಮುಂದಿನ ಮೂರು ತಿಂಗಳಲ್ಲಿ ಅಭಿವೃದ್ಧಿ ಪಡಿಸಲಾಗುವುದು. ₹45 ಲಕ್ಷ ವೆಚ್ಚದಲ್ಲಿ ಟೆಂಡರ್ ಕರೆಯಲಾಗಿದೆ ಎಂದು ತಿಳಿಸಿದರು.

ಜಿಬಿಎ: ಶೇ44ರಷ್ಟು ಆಸ್ತಿ ತೆರಿಗೆ ಸಂಗ್ರಹ

ಐದು ನಗರ ಪಾಲಿಕೆಗಳ ಸಾಧನೆ; ಪೂರ್ವ ಮೊದಲು, ಉತ್ತರ ಕೊನೆ



ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಿಬಿಎ ವ್ಯಾಪ್ತಿಯ ಐದು ನಗರ ಪಾಲಿಕೆಗಳು ಪ್ರಸಕ್ತ ಆರ್ಥಿಕ ವರ್ಷದ ಎರಡು ತಿಂಗಳು ಒಂಬತ್ತು ದಿನದಲ್ಲಿ (ಜೂನ್ 9ರವರೆಗೆ) ಒಟ್ಟಾರೆ ₹2,949.56 ಕೋಟಿ ಆಸ್ತಿ ತೆರಿಗೆಯನ್ನು ಸಂಗ್ರಹಿಸಿವೆ.

ಶೇಕಡ 5ರಷ್ಟು ರಿಯಾಯಿತಿ ಮೇ 31ರಂದು ಅಂತ್ಯಗೊಂಡಿದ್ದು, ಆಸ್ತಿ ಮಾಲೀಕರು ಈ ಕೊಡುಗೆಯನ್ನು ಉಪಯೋಗಿಸಿಕೊಂಡಿದ್ದಾರೆ. ಹೀಗಾಗಿ, ಅತಿಹೆಚ್ಚು ತೆರಿಗೆ ಸಂಗ್ರಹವಾಗಿದೆ. ಕಳೆದ ವರ್ಷದಿಂದ ಆಸ್ತಿ ತೆರಿಗೆ ಜೊತೆಗೆ ತ್ಯಾಜ್ಯ ನಿರ್ವಹಣಾ ಬಳಕೆದಾರರ ಶುಲ್ಕ ಜಾರಿ ಮಾಡಲಾಗಿದ್ದು, ಅದರಿಂದ ತೆರಿಗೆ ಸಂಗ್ರಹದ ಪ್ರಮಾಣ ಹೆಚ್ಚಾಗುತ್ತಿದೆ.

2025–26ರ ಆರ್ಥಿಕ ವರ್ಷದಲ್ಲಿ ಬಿಬಿಎಂಪಿ, ಮೇ ತಿಂಗಳ ಅಂತ್ಯಕ್ಕೆ ₹2,424.93 ಕೋಟಿ ಆಸ್ತಿ ತೆರಿಗೆಯನ್ನು ಸಂಗ್ರಹಿಸಿ ದಾಖಲೆ ಬರೆದಿತ್ತು. ಪ್ರಸಕ್ತ ಆರ್ಥಿಕ ವರ್ಷದ ಮೇ ಅಂತ್ಯಕ್ಕೆ ₹2,892.11 ಕೋಟಿ ಸಂಗ್ರಹವಾಗಿತ್ತು.

2026–27ನೇ ಸಾಲಿನಲ್ಲಿ ಐದು ನಗರ ಪಾಲಿಕೆಗಳಿಂದ ಒಟ್ಟಾರೆ ಆಸ್ತಿ ತೆರಿಗೆ/ ಇತರೆ ಕಂದಾಯ ಸಂಗ್ರಹ ಗುರಿ ₹6,700 ಕೋಟಿಯಾಗಿದೆ (ಸುಸ್ತಿದಾರರ ₹623 ಕೋಟಿ ಸೇರಿ). ಇತರೆ ಕಂದಾಯ ಬಾಬ್ತಿನಲ್ಲಿ ₹12 ಕೋಟಿ ಮಾತ್ರ ಸಂಗ್ರಹವಾಗಿದೆ. ಆಸ್ತಿ ತೆರಿಗೆ ಸಂಗ್ರಹದಲ್ಲಿ ಕಳೆದ ಆರ್ಥಿಕ ವರ್ಷದ ಕೊನೆ ಆರು ತಿಂಗಳಲ್ಲಿ ಅಂತಿಮ ಸ್ಥಾನದಲ್ಲಿದ್ದ ಪಶ್ಚಿಮ ನಗರ ಪಾಲಿಕೆ, ಈ ಎರಡು ತಿಂಗಳಲ್ಲಿ ಶೇ 45ರಷ್ಟು ತೆರಿಗೆ ಸಂಗ್ರಹಿಸಿದ್ದು, ಐದು ನಗರ ಪಾಲಿಕೆಗಳಲ್ಲಿ ಎರಡನೇ ಸ್ಥಾನದಲ್ಲಿದೆ. ಪೂರ್ವ ನಗರ ಪಾಲಿಕೆ ಎಂದಿನಂತೆ ಮೊದಲ ಸ್ಥಾನದಲ್ಲಿದೆ. ಉತ್ತರ ನಗರ ಪಾಲಿಕೆ ಶೇ 36ರಷ್ಟು ಸಂಗ್ರಹದೊಂದಿಗೆ ಕೊನೆಯ ಸ್ಥಾನದಲ್ಲಿದೆ.


2025–26ನೇ ಸಾಲಿಗೆ ಹೋಲಿಸಿದರೆ ಎರಡು ತಿಂಗಳಲ್ಲಿ (ಮೇ ಅಂತ್ಯಕ್ಕೆ) ಐದು ನಗರ ಪಾಲಿಕೆಗಳ ಸಾಧನೆ ಶೇ 1.21ರಷ್ಟು ಹೆಚ್ಚಾಗಿದೆ. ಪೂರ್ವ ನಗರ ಪಾಲಿಕೆ ತೆರಿಗೆ ಸಂಗ್ರಹದಲ್ಲಿ ಮೊದಲ ಸ್ಥಾನದಲ್ಲಿದ್ದು, ಕಳೆದ ವರ್ಷಕ್ಕಿಂತ ಶೇ 2.57ರಷ್ಟು ಸಂಗ್ರಹ ಹೆಚ್ಚಾಗಿದೆ. ಕೇಂದ್ರ– ಶೇ 1.95, ದಕ್ಷಿಣ– ಶೇ 1.95, ಪಶ್ಚಿಮ ನಗರ ಪಾಲಿಕೆ ಶೇ 1.66ರಷ್ಟು ಹೆಚ್ಚು ತೆರಿಗೆ ಸಂಗ್ರಹಿಸಿದ್ದರೆ, ಉತ್ತರ ನಗರ ಪಾಲಿಕೆ ಶೇ 2.06ರಷ್ಟು ಕಡಿಮೆ ಸಂಗ್ರಹಿಸಿದೆ.

ಆಸ್ತಿ ತೆರಿಗೆ ಪಾವತಿಸದ ಸುಸ್ತಿದಾರರ ಮೇಲೆ ಈ ಆರ್ಥಿಕ ವರ್ಷದ ಎರಡು ತಿಂಗಳಲ್ಲಿ ಜಪ್ತಿ, ಹರಾಜು, ಬೀಗ ಮುದ್ರೆಯಂತಹ ಯಾವುದೇ ಪ್ರಕ್ರಿಯೆಯನ್ನು ನಡೆಸಿಲ್ಲ ಎಂದು ಜಿಬಿಎ ಅಂಕಿ–ಅಂಶಗಳು ತಿಳಿಸಿವೆ.

ಆಸ್ತಿ/ ಇತರೆ ತೆರಿಗೆ ಸಂಗ್ರಹ (ಜೂನ್ 9ರ ಅಂತ್ಯಕ್ಕೆ)

ನಗರ ಪಾಲಿಕೆ	2026-27ರ ಗುರಿ	ಸಂಗ್ರಹ (₹ ಕೋಟಿಗಳಲ್ಲಿ)	ಶೇಕಡ
ಪೂರ್ವ	1,673.46	792.51	47.35
ಪಶ್ಚಿಮ	1,281.59	580.17	45.26
ಕೇಂದ್ರ	1,273.78	576.43	45.25
ದಕ್ಷಿಣ	1,228.85	542.0	44.10
ಉತ್ತರ	1,242.33	458.40	36.89
ಒಟ್ಟು	6,700	2,949.56	44.02

ಆಸ್ತಿವಾರು ತೆರಿಗೆ ಸಂಗ್ರಹ



ಚಿಟಿಕೆ ಸುದ್ದಿ

ಯತೀಂದ್ರ ಆಪ್ತ ಕಾರ್ಯದರ್ಶಿಯಾಗಿ ರಕ್ಷಿತ್ ನೇಮಕ



ಮೈಸೂರು: ಇಲ್ಲಿನ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ವಿಶೇಷ ಭೂಸ್ವಾಧೀನಾಧಿಕಾರಿ ಹಾಗೂ ಪ್ರಭಾರ ಆಯುಕ್ತ ಕೆ.ಆರ್.ರಕ್ಷಿತ್ ಅವರನ್ನು ನಗರಾಭಿವೃದ್ಧಿ ಸಚಿವ ಡಾ. ಯತೀಂದ್ರ ಸಿದ್ದರಾಮಯ್ಯ ಅವರ ಆಪ್ತ ಕಾರ್ಯದರ್ಶಿಯಾಗಿ ನೇಮಕ ಮಾಡಿ ಸರ್ಕಾರ ಆದೇಶ ಹೊರಡಿಸಿದೆ.

2014ನೇ ಬ್ಯಾಚ್‌ನ ಕೆಎಎಸ್ ಅಧಿಕಾರಿಯಾದ ರಕ್ಷಿತ್ ಮೈಸೂರಿನಲ್ಲಿ ಸಹಾಯಕ ಆಯುಕ್ತರಾಗಿ ಕಾರ್ಯನಿರ್ವಹಿಸಿದ್ದು, 2025ರ ಮೇನಲ್ಲಿ ಮೈಸೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ನೇಮಕಗೊಂಡಿದ್ದರು. ಎಂಡಿಎಗೆ ಸೇರಿದ ಹಲವು ಆಸ್ತಿಗಳ ಅತಿಕ್ರಮಣ ತೆರವು ಕಾರ್ಯಾಚರಣೆ ಮೂಲಕ ಗಮನ ಸೆಳೆದಿದ್ದರು.

ಅ.15ರಿಂದ ಕೃಷಿಮೇಳ

ಬೆಂಗಳೂರು: 60ನೇ ವರ್ಷದ ಸಂಭ್ರಮಾಚರಣೆಯಲ್ಲಿರುವ ಬೆಂಗಳೂರು ಕೃಷಿ ವಿಶ್ವವಿದ್ಯಾಲಯವು ಅಕ್ಟೋಬರ್ 15ರಿಂದ 18ರವರೆಗೆ ಕೃಷಿ ಮೇಳ ಆಯೋಜಿಸಿದೆ.

'**ವೈವಿಧ್ಯಮಯ ಕೃಷಿ**: ಮುಂದಿನ ಪೀಳಿಗೆಗೆ' ಶೀರ್ಷಿಕೆಯಡಿ ಮೇಳ ಆಯೋಜಿಸಲಾಗಿದ್ದು, ವಸ್ತು ಪ್ರದರ್ಶನ, ಬೆಳೆ ಪ್ರಾತ್ಯಕ್ಷಿಕೆ, ಚರ್ಚಾಗೋಷ್ಠಿ, ಸಾಧಕ ಕೃಷಿಕರಿಗೆ ಪ್ರಶಸ್ತಿ, ಸಾವಯವ ಮತ್ತು ನೈಸರ್ಗಿಕ ಕೃಷಿ– ಮಣ್ಣುರಹಿತ ಕೃಷಿ ಕುರಿತು ಸಲಹೆ ಸೇರಿದಂತೆ ವಿವಿಧ ಕಾರ್ಯಕ್ರಮಗಳು ನಡೆಯಲಿವೆ' ಎಂದು ವಿಶ್ವವಿದ್ಯಾಲಯದ ಕೆ.ಪಿ.ರಘುಪ್ರಸಾದ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಾ.ರಾ.ಗೋವಿಂದುಗೆ ಚಂಪಾ ಪ್ರಶಸ್ತಿ

ಬೆಂಗಳೂರು: ಕರ್ನಾಟಕ ಸ್ವಾಭಿಮಾನಿ ವೇದಿಕೆ ನೀಡುವ 2026ನೇ ಸಾಲಿನ ಚಂಪಾ ಸಿರಿಗನ್ನಡ ಪ್ರಶಸ್ತಿಗೆ ಹೋರಾಟಗಾರ ಸಾ.ರಾ.ಗೋವಿಂದು ಆಯ್ಕೆಯಾಗಿದ್ದು, ಜೂನ್ 26ರಂದು ಕನ್ನಡ ಸಾಹಿತ್ಯ ಪರಿಷತ್ತಿನ ಕುವೆಂಪು ಸಭಾಂಗಣದಲ್ಲಿ ವಿಮರ್ಶಕ ಪ್ರೊ.ಎಸ್. ಜಿ.ಸಿದ್ಧರಾಮಯ್ಯ ಪ್ರಶಸ್ತಿ ಪ್ರದಾನ ಮಾಡುವರು.

ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷೆ ಜಯಮಾಲಾ, ಚಂಪಾ ಪುತ್ರಿ ಮೀನಾ ಪಾಟೀಲ, ಹೋರಾಟಗಾರ ಸಿ.ಕೆ. ರಾಮೇಗೌಡ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಪ್ರಶಸ್ತಿಯು ₹ 10 ಸಾವಿರ ನಗದು, ಫಲಕ ಹಾಗೂ ಪ್ರಶಸ್ತಿ ಪತ್ರ ಒಳಗೊಂಡಿದೆ ಎಂದು ವೇದಿಕೆ ಅಧ್ಯಕ್ಷ ಶಂಕರ ಹೂಗಾರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಿಸಿಯು: ಪ್ರವೇಶ ಅವಧಿ ವಿಸ್ತರಣೆ

ಬೆಂಗಳೂರು: ಡಾ.ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ 2026–27ನೇ ಸಾಲಿನ ಪದವಿ ಕೋರ್ಸ್‌ಗಳಿಗೆ ಪ್ರವೇಶ ಪಡೆಯಲು ಅಂತಿಮ ದಿನಾಂಕವನ್ನು ಜೂನ್ 15ರವರೆಗೆ ವಿಸ್ತರಿಸಲಾಗಿದೆ.

ಯುಯುಸಿಎಂಎಸ್ ಪೋರ್ಟಲ್‌ನಲ್ಲಿ ಕಂಡುಬಂದಿದ್ದ ತಾಂತ್ರಿಕ ಸಮಸ್ಯೆಗಳ ಕಾರಣ ಪ್ರವೇಶದ ಕಾಲಾವಕಾಶ ವಿಸ್ತರಿಸಲಾಗಿದೆ ಎಂದು ಕುಲಸಚಿವರಾದ ಎ. ನವೀನ್ ಜೋಸೆಫ್ ಅವರು ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

ಹರಿಪ್ರಸಾದ್ ಪದಗ್ರಹಣ 21ರಂದು

ಬೆಂಗಳೂರು: ಕೆಪಿಸಿಸಿ ಅಧ್ಯಕ್ಷರಾಗಿ ನೇಮಕಗೊಂಡಿರುವ ವಿಧಾನ ಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್ ಅವರ ಪದಗ್ರಹಣ ಸಮಾರಂಭ ಅರಮನೆ ಮೈದಾನದಲ್ಲಿ ಇದೇ 21ರಂದು ನಡೆಯಲಿದೆ. ಕಾಂಗ್ರೆಸ್ ಪಕ್ಷದ ರಾಜ್ಯ, ರಾಷ್ಟ್ರೀಯ ನಾಯಕರು ಈ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.



'ದೆಹಲಿಗೆ ಬುಧವಾರ ತೆರಳಲಿರುವ ಹರಿಪ್ರಸಾದ್ ಅವರು ಎಐಸಿಸಿ ನಾಯಕರನ್ನು ಭೇಟಿ ಮಾಡಿ ಪದಗ್ರಹಣ ಸಮಾರಂಭಕ್ಕೆ ಆಮಂತ್ರಣ ನೀಡಲಿದ್ದಾರೆ. ಗುರುವಾರ ಸಂಜೆ ಅವರು ನಗರಕ್ಕೆ ವಾಪಸ್ ಆಗಲಿದ್ದಾರೆ' ಎಂದು ಅವರ ಆಪ್ತ ಮೂಲಗಳು ತಿಳಿಸಿವೆ.

28ರಂದು ಜಾನಪದ ಸಮಾವೇಶ

ಬೆಂಗಳೂರು: ನಗರದ ಶೇಷಾದ್ರಿಪುರಂ ಕಾಲೇಜಿನಲ್ಲಿ ಸಿದ್ಧನಹಳ್ಳಿಯ 'ಬುದ್ಧ, ಬಸವ, ಗಾಂಧಿ ಸಾಂಸ್ಕೃತಿಕ ಟ್ರಸ್ಟ್' ಜೂನ್ 28ರಂದು ಬೆಳಿಗ್ಗೆ 9ರಿಂದ ಮಧ್ಯಾಹ್ನ 3ರ ವರೆಗೆ 'ರಾಜ್ಯ ಮಟ್ಟದ ಜಾನಪದ ಸಾಹಿತ್ಯ ಸಂಸ್ಕೃತಿ ಸಮಾವೇಶ' ಆಯೋಜಿಸಿದೆ. ಲೇಖಕ ಸಾ.ಮ.ಶಿವಮಲ್ಲಯ್ಯ ಸಮಾವೇಶದ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಕವಿಗೋಷ್ಠಿ, ಜಾನಪದ ಗೀತಗಾಯನ, ಸಾಧಕರಿಗೆ ಸನ್ಮಾನ ನಡೆಯಲಿದ್ದು, ಅರ್ಹರು ಅರ್ಜಿ ಸಲ್ಲಿಸಬಹುದು. ನೋಂದಣಿಗೆ ಜೂನ್ 15 ಕೊನೇ ದಿನ. ಮಾಹಿತಿಗೆ ಮೊ. 94488 80985 ಸಂಪರ್ಕಿಸಬಹುದು.

ಅಗ್ನಿ ಅವಘಡ, ಮುನ್ನೆಚ್ಚರಿಕೆ ಬಗ್ಗೆ ಜಿಬಿಎ ಮುಖ್ಯ ಆಯುಕ್ತರಿಂದ ಪರಿಶೀಲನೆ

ಕೆ.ಆರ್. ಮಾರುಕಟ್ಟೆ: 'ಫೈರ್‌ಆಡಿಟ್'ಗೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆ.ಆರ್. ಮಾರುಕಟ್ಟೆಯಲ್ಲಿ ಅಗ್ನಿ ಅವಘಡಗಳು ಸಂಭವಿಸುವುದನ್ನು ತಡೆಯಲು 'ಫೈರ್ ಆಡಿಟ್' ನಡೆಸಬೇಕು ಎಂದು ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಬೆಂಗಳೂರು ಕೇಂದ್ರ ನಗರ ಪಾಲಿಕೆ ವ್ಯಾಪ್ತಿಯ ಕೆ.ಆರ್. ಮಾರುಕಟ್ಟೆಗೆ ಅಧಿಕಾರಿಗಳೊಂದಿಗೆ ಮಂಗಳವಾರ ಭೇಟಿ ನೀಡಿ ಪರಿಶೀಲನೆ ನಡೆಸಿದ ಅವರು, ಮಾರುಕಟ್ಟೆಯಲ್ಲಿ ಅಗ್ನಿಯಿಂದ ಉಂಟಾಗಬಹುದಾದ ಅಪಾಯಗಳು, ಅಗ್ನಿಶಾಮಕ ವ್ಯವಸ್ಥೆ ಹಾಗೂ ತುರ್ತು ಪರಿಸ್ಥಿತಿಯಲ್ಲಿ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಕೂಡಲೇ 'ಫೈರ್ ಆಡಿಟ್' ನಡೆಸುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಅಗ್ನಿ ಅವಘಡದ ಸಂದರ್ಭದಲ್ಲಿ ಸುರಕ್ಷಿತವಾಗಿ ಹೊರಬರಲು ತುರ್ತು ನಿರ್ಗಮನ ವ್ಯವಸ್ಥೆ ಸಮರ್ಪಕವಾಗಿರಬೇಕು. ಜೊತೆಗೆ ಅಗ್ನಿಯನ್ನು ತ್ವರಿತವಾಗಿ ನಿಯಂತ್ರಿಸುವ ಉದ್ದೇಶದಿಂದ ಅಗ್ನಿಶಾಮಕ ಪೈಪ್‌ಗಳನ್ನು ಅಳವಡಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಿದರು.

ಕೆ.ಆರ್. ಮಾರುಕಟ್ಟೆ ಕಟ್ಟಡದಲ್ಲಿರುವ ಮಳಿಗೆಗಳ ಮುಂಭಾಗದಲ್ಲಿ ಒತ್ತುವರಿಯನ್ನು ಗುರುತಿಸಿ, ಸಂಬಂಧಪಟ್ಟವರಿಗೆ ದುಪ್ಪಟ್ಟು ದಂಡ ವಿಧಿಸಿ ತೆರವುಗೊಳಿಸುವ ಕಾರ್ಯ ಕೈಗೊಳ್ಳಬೇಕು. ನಾಗರಿಕರಿಗೆ ಯಾವುದೇ ರೀತಿಯ ಅಡಚಣೆ ಉಂಟಾಗದಂತೆ ನೋಡಿಕೊಳ್ಳಬೇಕು. ಜೊತೆಗೆ ಮಾರುಕಟ್ಟೆ ಮುಂಭಾಗದಲ್ಲಿರುವ ಮಾರಾಟಗಾರರು ಅವರಿಗೆ ಮೀಸಲಾದ ಸ್ಥಳಗಳಲ್ಲಿಯೇ ವ್ಯಾಪಾರ ನಡೆಸುವಂತೆ ನೋಡಿಕೊಳ್ಳಬೇಕು ಎಂದು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಆದೇಶ ನೀಡಿದರು.

ಶೌಚಾಲಯಗಳನ್ನು ಸಮರ್ಪಕವಾಗಿ ನಿರ್ವಹಣೆ ಮಾಡಿ ಸಾರ್ವಜನಿಕ ಬಳಕೆಗೆ ಅನುಕೂಲವಾಗುವಂತೆ ನೋಡಿಕೊಳ್ಳಬೇಕು ಎಂದು ಸೂಚಿಸಿದರು.

ಶೆಡ್ ತೆರವು: ಬೆಂಗಳೂರು ದಕ್ಷಿಣ ನಗರ ಪಾಲಿಕೆಯ ಜಯನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಜೆ.ಪಿ.ನಗರ 2ನೇ ಹಂತ, ಕೆ.ಎಸ್.ಆರ್.ಟಿ.ಸಿ ಲೇಔಟ್ 5ನೇ ಅಡ್ಡರಸ್ತೆಯ ಎಚ್.ಟಿ. ಲೈನ್ ಕೆಳಭಾಗದಲ್ಲಿನ ಉದ್ಯಾನದಲ್ಲಿ ಒತ್ತುವರಿಯಾಗಿದ್ದ ಜಾಗವನ್ನು ಅಧಿಕಾರಿಗಳು ಮಂಗಳವಾರ ತೆರವುಗೊಳಿಸಿದರು. ಒಟ್ಟು 1,495 ಚದರ ಅಡಿ ವಿಸ್ತೀರ್ಣದ ಅಂದಾಜು ₹2 ಕೋಟಿ ಮೌಲ್ಯದ ಜಾಗದಲ್ಲಿ ಕೆಲವರು ಅನಧಿಕೃತವಾಗಿ ಶೆಡ್‌ಗಳನ್ನು ನಿರ್ಮಿಸಿಕೊಂಡಿದ್ದರು.



ಕೆ.ಆರ್. ಮಾರುಕಟ್ಟೆಯಲ್ಲಿ ಸ್ವಚ್ಛತಾ ಕಾರ್ಯವನ್ನು ಮಹೇಶ್ವರ್ ರಾವ್ ಪರಿಶೀಲಿಸಿದರು. ಕೇಂದ್ರ ನಗರ ಪಾಲಿಕೆ ಆಯುಕ್ತ ಜಿ. ಜಗದೀಶ್, ಮುಖ್ಯ ಎಂಜಿನಿಯರ್ ವಿಜಯ್‌ಕುಮಾರ್ ಹರಿದಾಸ್ ಇದ್ದರು

ಸಾರ್ವಜನಿಕ ಸ್ಥಳಗಳಲ್ಲಿ ಕಸ: ಕಾನೂನು ಕ್ರಮಕ್ಕೆ ಆದೇಶ

ಸಾರ್ವಜನಿಕ ಸ್ಥಳಗಳಲ್ಲಿ ಕಸ ಹಾಕುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ಸ್ವಚ್ಛಗೊಳಿಸಿದ ಸ್ಥಳಗಳಲ್ಲಿ ಪುನಃ ಕಸ ಹಾಕುತ್ತಿರುವುದು ಕಂಡುಬಂದಲ್ಲಿ ಸಾಕ್ಷ್ಯಾಧಾರಗಳೊಂದಿಗೆ ಎಫ್‌ಐಆರ್ ದಾಖಲಿಸಿ, ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಉತ್ತರ ನಗರ ಪಾಲಿಕೆ ಆಯುಕ್ತ ಪೊಮ್ಮಲ ಸುನೀಲ್‌ಕುಮಾರ್ ಸೂಚಿಸಿದರು.

ವಿವಿಧ ಇಲಾಖೆಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ಕಸ ಸಂಗ್ರಹಿಸುವ ವಾಹನಗಳ ಸಿಬ್ಬಂದಿ ಸರಿಯಾಗಿ ಕಾರ್ಯನಿರ್ವಹಿಸದ ಕಾರಣ 'ಬ್ಲ್ಯಾಕ್‌ಸ್ಪಾಟ್' ನಿರ್ಮಾಣವಾಗಿದ್ದು, ಆ ಪ್ರದೇಶಗಳನ್ನು ತಕ್ಷಣ ಸ್ವಚ್ಛಗೊಳಿಸಬೇಕು. ಯುಬಿ–100 ಅಭಿಯಾನದಡಿ ಗುರುತಿಸಲಾದ ಬ್ಲ್ಯಾಕ್‌ಸ್ಪಾಟ್‌ಗಳಲ್ಲಿ ವಿಶೇಷ ಕಾರ್ಯಾಚರಣೆ ನಡೆಸಿ ಸ್ವಚ್ಛತೆ ಕಾಪಾಡಬೇಕು ಎಂದು ನಿರ್ದೇಶನ ನೀಡಿದರು.

ಜೂನ್ 15ರೊಳಗೆ ರಸ್ತೆಗಳ ಬದಿಯಲ್ಲಿ ಬಿದ್ದಿರುವ ಮರದ ಅವಶೇಷಗಳು ಹಾಗೂ ತ್ಯಾಜ್ಯವನ್ನು ತೆರವುಗೊಳಿಸಬೇಕು. ಜೂನ್ 21ರೊಳಗೆ, 25 ಸಾವಿರಕ್ಕೂ ಹೆಚ್ಚು ಗಿಡ ನೆಡುವ ಕಾರ್ಯಕ್ಕೆ ಸಿದ್ಧತೆ ಮಾಡಿಕೊಳ್ಳಬೇಕು ಎಂದರು.

ಕೆರೆಗೆ ಕೊಳಚೆ ನೀರು ಕ್ರಮಕ್ಕೆ ಸೂಚನೆ

ಹಲಗೆವಡೇರಹಳ್ಳಿ ಕೆರೆಗೆ ಕೊಳಚೆ ನೀರು ಸೇರದಂತೆ ನಿರ್ಮಿಸುತ್ತಿರುವ ತಿರುವು ಗಾಲುವೆ ಕಾಮಗಾರಿಯನ್ನು 15 ದಿನಗಳಲ್ಲಿ ಪೂರ್ಣಗೊಳಿಸುವಂತೆ ಅರಣ್ಯ, ಪರಿಸರ ಮತ್ತು ಹವಾಮಾನ ಬದಲಾವಣೆ (ಎಫ್‌ಇಸಿಸಿ) ವಿಭಾಗದ ವಿಶೇಷ ಆಯುಕ್ತೆ ಸುಷಮಾ ಗೋಡಬೋಲೆ ಅವರು ಅಧಿಕಾರಿಗಳಿಗೆ ಸೂಚಿಸಿದರು.

ರಾಜರಾಜೇಶ್ವರಿ ನಗರ ವ್ಯಾಪ್ತಿಯ ಪ್ರವಾಹ ಪೀಡಿತ ಪ್ರದೇಶಗಳು ಹಾಗೂ ಹಲಗೆವಡೇರಹಳ್ಳಿ ಕೆರೆಯನ್ನು ಪರಿಶೀಲಿಸಿ ಅವರು ಮಾತನಾಡಿದರು. ಕೆರೆಗೆ ಕೊಳಚೆ ನೀರು ಸೇರದಂತೆ ತಿರುವು ಗಾಲುವೆ ನಿರ್ಮಾಣ ಕಾಮಗಾರಿ ಶೇ 60ರಷ್ಟು ಪೂರ್ಣಗೊಂಡಿದ್ದು, ಉಳಿದ ಕಾಮಗಾರಿಯನ್ನು 15 ದಿನಗಳಲ್ಲಿ ಪೂರ್ಣಗೊಳಿಸಬೇಕು. ರಾಜಕಾಲುವೆಯ ತಡೆಗೋಡೆಯ ಎತ್ತರವನ್ನು ಹೆಚ್ಚಿಸುವಂತೆ ಸಲಹೆ ನೀಡಲಾಯಿತು.

ಬಿಡಿಎಗೆ ರೇರಾ ಕಾಯ್ದೆ ಅನ್ವಯ: ಹೈಕೋರ್ಟ್ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ವ್ಯಾಪ್ತಿಯಲ್ಲಿ 2016ಕ್ಕೂ ಮೊದಲು ರೂಪುಗೊಂಡಿರುವ ವಸತಿ ವಿನ್ಯಾಸಗಳು ಮತ್ತು ಯೋಜನೆಗಳಿಗೆ ರಿಯಲ್ ಎಸ್ಟೇಟ್ ನಿಯಂತ್ರಣ ಮತ್ತು ಅಭಿವೃದ್ಧಿ ಕಾಯ್ದೆ–2016 (ರೇರಾ) ಅನ್ನು ಅನ್ವಯಿಸಿ ಕಾರ್ಯಾಚರಣೆ ನಡೆಸುವುದಕ್ಕೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ.

ಬಿಡಿಎಗೆ ರೇರಾ ಕಾಯ್ದೆ ಅನ್ವಯಿಸಿ, ರೇರಾ ಪ್ರಾಧಿಕಾರ ಹೊರಡಿಸಿದ್ದ ಆದೇಶವನ್ನು ಪ್ರಶ್ನಿಸಿ ಬಿಡಿಎ ವಕೀಲರಾದ ಬಿ.ವಚನ್ ಸಲ್ಲಿಸಿರುವ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

ಬಿಡಿಎ ಪರ ಹಾಜರಾಗಿದ್ದ ಪದಾಂಕಿತ ಹಿರಿಯ ವಕೀಲ ಕೆ.ಶಶಿಕಿರಣ ಶೆಟ್ಟಿ ಅವರು, 'ಬಿಡಿಎ ಎಂಬುದು ಒಂದು ಸ್ವತಂತ್ರ ಮತ್ತು ಶಾಸನಬದ್ಧ ಸಂಸ್ಥೆಯಾಗಿದ್ದು, ಬಿಡಿಎ–1976ರ ಕಾಯ್ದೆಯಡಿ ಕಾರ್ಯ ನಿರ್ವಹಿಸುತ್ತಿದೆ. ವಿಶೇಷತಃ ಇದು ಬೆಂಗಳೂರು ನಗರದ ಅಭಿವೃದ್ಧಿಗೆ ಯೋಜನೆ ರೂಪಿಸುವ ಜವಾಬ್ದಾರಿಗಳನ್ನು ಕಾಲಕಾಲಕ್ಕೆ ನಿಭಾಯಿಸುತ್ತದೆ. ಆದರೆ, ನಿವಾಸಿಗಳ ಲೇಔಟ್ ಅಥವಾ ಯೋಜನೆಗಳಿಗೆ ಅನ್ವಯವಾಗುವಂತೆ ರೂಪಿಸಲಾಗಿರುವ, ರಿಯಲ್ ಎಸ್ಟೇಟ್ ನಿಯಂತ್ರಣ ಮತ್ತು ಅಭಿವೃದ್ಧಿ ಕಾಯ್ದೆ–2016 ಅನ್ನು ಬಿಡಿಎಗೂ ಅನ್ವಯಿಸಲು ಅವಕಾಶ ನೀಡುವುದು ತರವಲ್ಲ. ಈ ಮೂಲಕ ಬಿಡಿಎ ಕಾರ್ಯನಿರ್ವಹಣೆಯ ಮೇಲೆ ನಿಯಂತ್ರಣ ಹೊಂದುವ ಅಥವಾ ಮೇಲ್ವಿಚಾರಣೆ ನಡೆಸುವ ಪ್ರಯತ್ನ ಬಿಡಿಎಗೆ ಅನಪೇಕ್ಷಿತ ಹಾನಿ ಉಂಟು ಮಾಡುತ್ತದೆ' ಎಂದರು.

'ಸರ್ಕಾರ ರೈತರಿಂದ ಜಮೀನನ್ನು ಸ್ವಾಧೀನಕ್ಕೆ ಪಡೆದು ನಂತರ ಅದನ್ನು ಬಿಡಿಎಗೆ ನೀಡುತ್ತದೆ. ಬಿಡಿಎ ಅಂತಹ ಜಮೀನುಗಳಲ್ಲಿ ಯೋಜನಾಬದ್ಧ ವಸತಿ ನಿವೇಶನಗಳನ್ನು ರೂಪಿಸಿ ಹಂಚಿಕೆ ಮಾಡುತ್ತದೆ. ಬಹಳಷ್ಟು ಸಂದರ್ಭಗಳಲ್ಲಿ ಸರ್ಕಾರ ರೈತರಿಂದ ಜಮೀನನ್ನು ಸ್ವಾಧೀನಕ್ಕೆ ಪಡೆಯುವಾಗ ರೈತರು ತಮ್ಮ ಹಕ್ಕುಗಳನ್ನು ಪ್ರಶ್ನಿಸಿ ಕೋರ್ಟ್‌ಗೆ ಹೋಗುವುದುಂಟು ಅಥವಾ ಪರಿಹಾರ ಸಾಲದು ಎಂಬ ಆಕ್ಷೇಪ ಎತ್ತುವುದುಂಟು. ಹಾಗಾಗಿ, ಸರ್ಕಾರ ಎಷ್ಟು ಪ್ರಮಾಣದ ಜಮೀನನ್ನು ಕಾನೂನುಬದ್ಧವಾಗಿ ವಶಪಡಿಸಿಕೊಂಡಿರುತ್ತದೆಯೋ ಅಷ್ಟೇ ಜಮೀನಿನಲ್ಲಿ ಬಿಡಿಎ ಹಂತಹಂತವಾಗಿ ನಿವೇಶನ ರೂಪಿಸಿ ಅರ್ಹರಿಗೆ ಹಂಚುತ್ತಾ ಹೋಗುತ್ತದೆ. ಹೀಗಾಗಿ, ಯೋಜಿತ ನಿವೇಶನಗಳು ಒಮ್ಮೆಗೇ ಪೂರ್ಣ ಪ್ರಮಾಣದಲ್ಲಿ ಅಭಿವೃದ್ಧಿ ಹೊಂದುವುದಿಲ್ಲ. ಇಂತಹ ಸಂದರ್ಭಗಳಲ್ಲಿ ಉಂಟಾಗುವ ಎಲ್ಲ ತಕರಾರುಗಳಿಗೆ ರೇರಾ ಕಾಯ್ದೆಯನ್ನು ಅನ್ವಯಗೊಳಿಸುತ್ತಾ ಹೋಗುವುದು ಸಮರ್ಥನೀಯವಲ್ಲ' ಎಂದು ಪ್ರತಿಪಾದಿಸಿದರು.

'ಬಿಡಿಎಗೆ ಬರೀ ನಗರ ಯೋಜನೆ ಮಾತ್ರವಲ್ಲ ಅದಕ್ಕೆ ಪೂರಕವಾದ ನಗರದ ಅಭಿವೃದ್ಧಿ ಬಗ್ಗೆಯೂ ಬಹಳಷ್ಟು ಜವಾಬ್ದಾರಿಗಳಿರುತ್ತವೆ. ಆದ್ದರಿಂದ, ರೇರಾದ 'ಪ್ರಮೋಟರ್' (ಪ್ರವರ್ತಕ ಅಥವಾ ಅಭಿವೃದ್ಧಿ ಮಾಡಿ ಮುಂದಕ್ಕೆ ಬೆಳೆಸಿಕೊಂಡು ಹೋಗುವವರು) ಎಂಬ ವ್ಯಾಖ್ಯಾನವು ರೇರಾ ಕಾಯ್ದೆಯ ಕಲಂ 2ರ (ಝಡ್‌ಕೆ) ಅಡಿಯಲ್ಲಿ ಬಿಡಿಎ ಒಳಪಡಬಾರದು' ಎಂದು ನ್ಯಾಯಪೀಠಕ್ಕೆ ವಿವರಿಸಿದರು.

'ಒಂದು ಸೂಚಿತ ನಿವೇಶನದ ಅಭಿವೃದ್ಧಿಗೆ ಸಂಗ್ರಹಿಸಲಾದ ಹಣವನ್ನು ಅದೇ ಯೋಜನೆಗೆ ಮಾತ್ರವೇ ಉಪಯೋಗಿಸಬೇಕು ಎಂಬ ರೇರಾ ನಿಯಮ ಪಾಲನೆ ಯಥೋಚಿತವಲ್ಲ. ಯಾಕೆಂದರೆ, ನಿವೇಶನ ರೂಪಿಸುವುದರ ಹೊರತಾಗಿ ನಗರದ ಅಭಿವೃದ್ಧಿಗೆ ಅನುವಾಗುವಂತಹ ಮೇಲ್ಸೇತುವೆ, ಅಂಡರ್‌ಪಾಸ್... ಹೀಗೆ ಹತ್ತಾರು ಬಹುಮುಖಿ ಅಭಿವೃದ್ಧಿ ಕಾರ್ಯಗಳ ಅನುಷ್ಠಾನಕ್ಕೆ ಅದು ಹೆಣಗಬೇಕಾಗುತ್ತದೆ. ಇಂತಹ ಸಂದರ್ಭಗಳಲ್ಲಿ ಸಂಗ್ರಹಿತ ನಿವೇಶನಗಳ ಹಣವನ್ನು ಬಳಕೆ ಮಾಡಿಕೊಳ್ಳಬೇಕಾಗುತ್ತದೆ. ಒಂದು ವೇಳೆ ಅನ್ವಯಿಸುವುದೇ ಆದಲ್ಲಿ ರೇರಾ ಕಾಯ್ದೆಯನ್ನು ಜಾರಿಗೆ ತಂದ 2016ಕ್ಕೂ ಮೊದಲಿನ ವಸತಿ ನಿವೇಶನ ಯೋಜನೆಗಳಿಗೆ ಅನ್ವಯಗೊಳಿಸದೆ ನಂತರ ರೂಪುಗೊಂಡ ಯೋಜನೆಗಳಿಗೆ ಅನ್ವಯಿಸುವಂತೆ ಆದೇಶಿಸಬೇಕು' ಎಂದು ಮನವಿ ಮಾಡಿದರು.

ಈ ವಾದಾಂಶಗಳನ್ನು ಮಾನ್ಯ ಮಾಡಿರುವ ನ್ಯಾಯಪೀಠ, 'ರೇರಾ ಕಾಯ್ದೆಯು ಬಿಡಿಎದ ಯಾವ ರೀತಿಯ ಹಂಚಿಕೆಗಳಿಗೆ ಅನ್ವಯಿಸುತ್ತದೆ ಮತ್ತು ಯಾವ ರೀತಿಯ ಹಂಚಿಕೆಗಳಿಗೆ ಅನ್ವಯಿಸುವುದಿಲ್ಲ ಎಂಬುದನ್ನು ನಿರ್ಧರಿಸುವ ಅವಶ್ಯಕತೆ ಇದೆ. ಹೀಗಾಗಿ, ಬಿಡಿಎಗೆ ರೇರಾ ಕಾಯ್ದೆಯನ್ನು ಅನ್ವಯಿಸುವ ಕ್ರಮದ ಬಗ್ಗೆ ಸಮಗ್ರ ಪರಿಶೀಲನೆ ನಡೆಸುವ ಅಗತ್ಯವಿದೆ' ಎಂಬ ಅಭಿಪ್ರಾಯ ವ್ಯಕ್ತಪಡಿಸುವ ಮೂಲಕ 'ರೇರಾ ಕಾಯ್ದೆಯ ಕಾರ್ಯಾಚರಣೆ ಮತ್ತು ಅನ್ವಯವನ್ನು ಬಿಡಿಎಗೆ ಮುಂದುವರಿಸಬಾರದು' ಎಂಬ ಅರ್ಜಿದಾರರ ಮನವಿಯನ್ನು ಮಾನ್ಯ ಮಾಡಿ ಮಧ್ಯಂತರ ತಡೆ ನೀಡಿದೆ. ಅಂತೆಯೇ, ರೇರಾ ಕಾರ್ಯದರ್ಶಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿರುವ ನ್ಯಾಯಪೀಠ ವಿಚಾರಣೆಯನ್ನು ಜುಲೈ 6ಕ್ಕೆ ಮುಂದೂಡಿದೆ.

ಹೆಲಿಕಾಪ್ಟರ್ ಹೊಡೆದುರುಳಿಸಿದ ಇರಾನ್

ದುಬೈ(ಎಪಿ): ತಮ್ಮ ಸೇನಾ ಹೆಲಿಕಾಪ್ಟರ್ ಒಂದನ್ನು ಇರಾನ್ ಹೊಡೆದುರುಳಿಸಿದೆ ಎಂದು ಖಚಿತಪಡಿಸಿರುವ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್, 'ಈ ದಾಳಿಗೆ ತಕ್ಕ ಪ್ರತ್ಯುತ್ತರ ನೀಡಬೇಕಿದೆ' ಎಂದಿದ್ದಾರೆ.

ಅಮೆರಿಕದ ಸೇನೆಯು ಬಳಸುತ್ತಿದ್ದ ಅತ್ಯಾಧುನಿಕ ಅಪಾಚೆ ಹೆಲಿಕಾಪ್ಟರ್ ಇರಾನ್‌ನ ನಿಯಂತ್ರಣದಲ್ಲಿರುವ ಹೊರ್ಮುಜ್ ಜಲಸಂಧಿಯ ಬಳಿ ಪತನಗೊಂಡಿತ್ತು. ಹೆಲಿಕಾಪ್ಟರ್‌ನಲ್ಲಿದ್ದ ಇಬ್ಬರು ಸೈನಿಕರನ್ನು ಡ್ರೋನ್ ಬೋಟ್‌ಗಳನ್ನು ಬಳಸಿ ರಕ್ಷಿಸಲಾಗಿತ್ತು.

ಈ ಕುರಿತು ಸಾಮಾಜಿಕ ಮಾಧ್ಯಮದಲ್ಲಿ ಮಾಹಿತಿ ಹಂಚಿಕೊಂಡಿರುವ ಟ್ರಂಪ್, 'ನಮ್ಮ ಅತ್ಯಾಧುನಿಕ ಅಪಾಚೆ ಹೆಲಿಕಾಪ್ಟರ್ ಒಂದನ್ನು ಇರಾನ್‌ನವರು ಹೊಡೆದುರುಳಿಸಿದ್ದಾರೆ ಎಂಬ ಮಾಹಿತಿಯನ್ನು ಸೇನೆಯ ಅಧಿಕಾರಿಗಳು ನೀಡಿದ್ದಾರೆ. ಹೆಲಿಕಾಪ್ಟರ್‌ನಲ್ಲಿದ್ದ ಇಬ್ಬರೂ ಸೈನಿಕರು ಸುರಕ್ಷಿತವಾಗಿದ್ದು, ಯಾರಿಗೂ ಗಾಯಗಳಾಗಿಲ್ಲ' ಎಂದು ತಿಳಿಸಿದ್ದಾರೆ.

'ಏನೇ ಆದರೂ, ಈ ದಾಳಿಗೆ ಅಮೆರಿಕವು ಕಡ್ಡಾಯವಾಗಿ ತಕ್ಕ ಪ್ರತ್ಯುತ್ತರ ನೀಡಬೇಕಿದೆ' ಎಂದು ಪೋಸ್ಟ್‌ನಲ್ಲಿ ಹೇಳಿದ್ದಾರೆ.



ಬಿ.ಪ್ರಕಾಶ್ ಅವರಿಗೆ ಮಂಗಿಲಾಲ್ ಜಾಟ್ ಫೆಲೊ ಪ್ರಶಸ್ತಿಯನ್ನು ಪ್ರದಾನ ಮಾಡಿದರು

ಎನ್.ಬಿ.ಪ್ರಕಾಶ್‌ಗೆ ಎನ್‌ಎಎಎಸ್ ಫೆಲೊ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನವದೆಹಲಿಯಲ್ಲಿ ನಡೆದ ಸಮಾರಂಭದಲ್ಲಿ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಡೀನ್ ಎನ್.ಬಿ.ಪ್ರಕಾಶ್ ಅವರಿಗೆ ರಾಷ್ಟ್ರೀಯ ವಿಜ್ಞಾನ ಅಕಾಡೆಮಿ (ಎನ್‌ಎಎಎಸ್) ಫೆಲೊ ಪ್ರಶಸ್ತಿಯನ್ನು ಭಾರತೀಯ ಕೃಷಿ ಸಂಶೋಧನಾ ಮಂಡಳಿಯ (ಐಸಿಎಆರ್) ಮಹಾ ನಿರ್ದೇಶಕ ಮಂಗಿಲಾಲ್ ಜಾಟ್ ಪ್ರದಾನ ಮಾಡಿದರು.

ಈ ಪ್ರತಿಷ್ಠಿತ ಪ್ರಶಸ್ತಿಯನ್ನು ಕೃಷಿ ವಿಶ್ವವಿದ್ಯಾಲಯದ ವಿಜ್ಞಾನಿಯೊಬ್ಬರು 2004ರಲ್ಲಿ ಪಡೆದಿದ್ದರು. ಪ್ರಕಾಶ್ ಅವರು 31 ವರ್ಷ ಕೃಷಿ ಸಂಶೋಧನೆಗೆ ನೀಡಿದ ಉತ್ಕೃಷ್ಟ ಕೊಡುಗೆ, ವಿಶೇಷವಾಗಿ ಮಣ್ಣಿನ ಫಲವತ್ತತೆಯ ನಿರ್ವಹಣೆ ಹಾಗೂ ಸುಸ್ಥಿರ ಕೃಷಿ ಕ್ಷೇತ್ರಗಳಲ್ಲಿನ ಕೊಡುಗೆಗಾಗಿ ಈ ಮಾನ್ಯತೆ ನೀಡಲಾಗಿದೆ.

ಕೇಂದ್ರ ವಾಣಿಜ್ಯ, ಕೈಗಾರಿಕೆ ಸಚಿವಾಲಯದ ಹೆಚ್ಚುವರಿ ಕಾರ್ಯದರ್ಶಿ ದರ್ಪಣ್ ಜೈನ್

12 ವರ್ಷದಲ್ಲಿ ರಫ್ತು ದುಪ್ಪಟ್ಟು: ಕೇಂದ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಳೆದ 12 ವರ್ಷಗಳಲ್ಲಿ ದೇಶದ ರಫ್ತು ಪ್ರಮಾಣದ ವಹಿವಾಟು 46 ಸಾವಿರ ಕೋಟಿ ಡಾಲರ್‌ಗಳಿಂದ 90 ಸಾವಿರ ಕೋಟಿ ಡಾಲರ್ ಮುಟ್ಟಿದೆ. ಇದರಲ್ಲಿ ಸೇವಾ ಕ್ಷೇತ್ರದ ರಫ್ತು ವಹಿವಾಟು ಪ್ರಮುಖ ಪಾತ್ರ ವಹಿಸಿದೆ. ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕೆ ಸಚಿವಾಲಯದ ಹೆಚ್ಚುವರಿ ಕಾರ್ಯದರ್ಶಿ ದರ್ಪಣ್ ಜೈನ್ ತಿಳಿಸಿದರು.

'ಮುಕ್ತ ವ್ಯಾಪಾರ ಒಪ್ಪಂದ ಹಾಗೂ ಐಟಿ ಸೇವೆಗಳ ಕ್ಷೇತ್ರದಲ್ಲಿ ಭಾರತದ 12 ವರ್ಷಗಳ ಪ್ರಗತಿ' ಕುರಿತು ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

ಕೋವಿಡ್ ಬಿಕ್ಕಟ್ಟು, ಉಕ್ರೇನ್–ರಷ್ಯಾ ನಡುವಿನ ಯುದ್ಧ ಸೇರಿ ಜಾಗತಿಕ ಅನಿಶ್ಚಿತತೆ ನಡುವೆಯೂ ಈ ಸಾಧನೆ ಮಾಡಲಾಗಿದೆ.' ಎಂದರು.

'ಮುಕ್ತ ವ್ಯಾಪಾರ ಒಪ್ಪಂದದ ಮೂಲಕ ರಫ್ತಿಗೆ ಹೆಚ್ಚಿನ ಮಾರುಕಟ್ಟೆ ಅವಕಾಶಗಳನ್ನು ಸೃಷ್ಟಿಸುವ ಪ್ರಯತ್ನಗಳು ನಡೆದಿವೆ. ಕಳೆದ ಐದು ವರ್ಷದಲ್ಲಿ 38 ದೇಶಗಳ ಜೊತೆಗೆ 9 ಒಪ್ಪಂದಗಳು ಏರ್ಪಟ್ಟಿದ್ದು, ಇದರಿಂದ ಜಾಗತಿಕ ಆರ್ಥಿಕತೆಯ ಒಟ್ಟು 53 ಲಕ್ಷ ಕೋಟಿ ಡಾಲರ್‌ನಷ್ಟು ವಹಿವಾಟು ಭಾರತದ ಮಾರುಕಟ್ಟೆಗೇ ಸಿಗಲಿದೆ. ಜೊತೆಗೆ, 12 ದಶ ಲಕ್ಷ ಕೋಟಿ ಡಾಲರ್‌ನಷ್ಟು ಆಮದು ವಹಿವಾಟಿನೊಂದಿಗೂ ದೇಶವು ಪೈಪೋಟಿ ನಡೆಸಲು ಸಾಧ್ಯವಾಗುತ್ತದೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.



> ಅಮೆರಿಕ, ಯೂರೋಪ್ ಜತೆಗೆ ಮುಕ್ತ ವ್ಯಾಪಾರ ಒಪ್ಪಂದ ನಡೆದಿದ್ದು, ಇದೇ ವರ್ಷ ಕೆನಡಾದೊಂದಿಗೂ ಒಪ್ಪಂದಕ್ಕೆ ಪ್ರಯತ್ನಿಸಲಾಗುವುದು
>
> **ದರ್ಪಣ್ ಜೈನ್,** ಹೆಚ್ಚುವರಿ ಕಾರ್ಯದರ್ಶಿ, ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕೆ ಸಚಿವಾಲಯ

ತೆರಿಗೆ ಕಡಿತ: 'ಕೆಲವು ದೇಶಗಳಲ್ಲಿ ಶೇ 12ರಿಂದ 20ರವರೆಗೂ ರಫ್ತು ತೆರಿಗೆ ಪಾವತಿಸಬೇಕಾಗುತ್ತಿತ್ತು. ಆದರೆ ಮುಕ್ತ ವ್ಯಾಪಾರ ಒಪ್ಪಂದದಿಂದ ಈ ತೆರಿಗೆಗಳು ಮನ್ನಾ ಆಗುತ್ತವೆ. ಅನಿಶ್ಚಿತವಾದ ಜಾಗತಿಕ ಸನ್ನಿವೇಶದಲ್ಲಿ ನಮ್ಮ ರಫ್ತುದಾರರಿಗೆ ಇದು ಹೆಚ್ಚಿನ ಅನುಕೂಲ ಕಲ್ಪಿಸುತ್ತದೆ. ಜೊತೆಗೆ ನಮ್ಮ ಉತ್ಪನ್ನಗಳು ಏಕಕಾಲಕ್ಕೆ ಹಲವು ದೇಶಗಳಿಗೆ ಸಲೀಸಾಗಿ ರಫ್ತಾಗುತ್ತವೆ. ವಿಕಸಿತ ಭಾರತ ಪರಿಕಲ್ಪನೆಯನ್ನು ಸಂಪೂರ್ಣವಾಗಿ ಜಾರಿಗೊಳಿಸಲು ಇದು ಮುಖ್ಯ' ಎಂದರು.

'ಮುಕ್ತ ವ್ಯಾಪಾರ ಒಪ್ಪಂದಕ್ಕೆ ಅನುಕೂಲಕರವಾಗಿಯೇ ಎರಡು ವರ್ಷದ ಹಿಂದೆ ಡಿಜಿಟಲ್ ವೇದಿಕೆಯನ್ನು ರೂಪಿಸಲಾಗಿದೆ. ರಫ್ತುದಾರರಿಗೆ ಏಕಗವಾಕ್ಷಿ ವ್ಯವಸ್ಥೆಯನ್ನು ತರಲಾಗಿದೆ. ಮೊಬೈಲ್ ಆ್ಯಪ್ ಕೂಡ ಕಾರ್ಯನಿರ್ವಹಿಸುತ್ತಿದೆ. ರಫ್ತುದಾರ ಸ್ನೇಹಿ ಯೋಜನೆಗಳನ್ನು ರೂಪಿಸಿರುವುದರ ಪರಿಣಾಮವಾಗಿಯೇ ದೇಶದ ಅಭಿವೃದ್ಧಿಯ ವೇಗವೂ ಹೆಚ್ಚುತ್ತಿದೆ' ಎಂದು ಹೇಳಿದರು.

'ಉದ್ದಿಮೆದಾರರಿಗೆ ಉತ್ತೇಜನ'

'ರಫ್ತು ಕ್ಷೇತ್ರದಲ್ಲಿ ಕರ್ನಾಟಕವು ಇತರೆ ರಾಜ್ಯಗಳಿಗೆ ಹೋಲಿಸಿದರೆ ಮೊದಲ ಸ್ಥಾನದಲ್ಲಿದೆ. ಅಂತರರಾಷ್ಟ್ರೀಯ ಮಟ್ಟದಲ್ಲಿ ಗಮನ ಸೆಳೆದಿರುವ ಬೆಂಗಳೂರಿನ ಉದ್ದಿಮೆದಾರರನ್ನು ಉತ್ತೇಜಿಸುವ ಸಲುವಾಗಿಯೇ ನಾಸ್ಕಾಂ ಸಹಯೋಗದಲ್ಲಿ ಸಮಾಲೋಚನಾ ಸಭೆಗಳನ್ನು ನಡೆಸಲಾಗಿದೆ' ಎಂದು ದರ್ಪಣ್ ಜೈನ್ ತಿಳಿಸಿದರು.

'ಬೃಹತ್ ಉದ್ದಿಮೆದಾರರು ಹಾಗೂ ಸಣ್ಣ–ಮಧ್ಯಮ ಉದ್ದಿಮೆದಾರರೊಂದಿಗೆ ಪ್ರತ್ಯೇಕವಾಗಿ ಸಭೆಗಳನ್ನು ನಡೆಸಲಾಯಿತು. ರಫ್ತು ಕ್ಷೇತ್ರದ ಅವಕಾಶಗಳ ಬಗ್ಗೆ ಸರಳವಾಗಿ ವಿವರಿಸಲಾಗಿದೆ. ಹಲವರ ಅನುಮಾನಗಳನ್ನು ಪರಿಹರಿಸಲಾಗಿದೆ. ಇದು ರಫ್ತು ಕ್ಷೇತ್ರದಲ್ಲಿ ಕರ್ನಾಟಕವನ್ನು ಬಲಪಡಿಸುವಲ್ಲಿ ಆರಂಭಿಕ ಪ್ರಯತ್ನ. ರಫ್ತುದಾರರಿಗೆ ಅನುಕೂಲಕರ ವ್ಯವಸ್ಥೆಯನ್ನು ರೂಪಿಸುವ ಈ ಪ್ರಯತ್ನ ಜಾರಿಯಲ್ಲಿರಲಿದೆ' ಎಂದರು.

ಕೋಟಿ–ಕೋಟಿ ನುಂಗುವ ಪಾಲಿಕೆ: ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಾಮಗಾರಿಗಳನ್ನೇ ಕೈಗೊಳ್ಳದೆ ಮತ್ತು ರಸ್ತೆಯನ್ನೇ ನಿರ್ಮಿಸದೆ ಬಿಲ್ ಪಡೆಯುವ ಪರಂಪರೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ (ಈಗ ಜಿಬಿಎ) ಸರ್ವೇ ಸಾಮಾನ್ಯ' ಎಂದು ಹೈಕೋರ್ಟ್ ಪ್ರಕರಣವೊಂದರಲ್ಲಿ ಮೌಖಿಕವಾಗಿ ವ್ಯಂಗ್ಯವಾಡಿದೆ.

'ನನ್ನ ವಿರುದ್ಧ ಸಿಟಿ ಸಿವಿಲ್ ಮತ್ತು ಸೆಷನ್ಸ್ 23ನೇ ಕೋರ್ಟ್‌ನಲ್ಲಿರುವ (ಲೋಕಾಯುಕ್ತ ವಿಶೇಷ ನ್ಯಾಯಾಲಯ) ಕ್ರಿಮಿನಲ್ ಪ್ರಕರಣದ ವಿಚಾರಣೆ ರದ್ದುಪಡಿಸಬೇಕು' ಎಂದು ಕೋರಿ ಬಿಬಿಎಂಪಿ ನಿವೃತ್ತ ಮುಖ್ಯ ಎಂಜಿನಿಯರ್ ಎನ್.ವಿಜಯ ಕುಮಾರ್ ಸಲ್ಲಿಸಿರುವ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.



ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರು, 'ಪ್ರಕರಣದಲ್ಲಿ ದೂರು ದಾಖಲಾದ ನಾಲ್ಕು ವರ್ಷಗಳ ನಂತರ ಎಫ್‌ಐಆರ್ ದಾಖಲಿಸಲಾಗಿದೆ. ಈಗಾಗಲೇ ಇಲಾಖಾ ವಿಚಾರಣೆಯೂ ನಡೆದಿದ್ದು, ಅದರಲ್ಲಿ ಅರ್ಜಿದಾರರ ವಿರುದ್ಧದ ಆರೋಪಗಳನ್ನು ಸಾಬೀತುಪಡಿಸುವ ಯಾವುದೇ ಸಾಕ್ಷ್ಯಾಧಾರಗಳು ಮೇಲ್ನೋಟಕ್ಕೆ ಕಂಡುಬಂದಿಲ್ಲ ಎಂಬ ಕಾರಣಕ್ಕೆ ಅವರನ್ನು ಆರೋಪ ಮುಕ್ತಗೊಳಿಸಲಾಗಿದೆ' ಎಂದು ವಿವರಿಸಿದರು.

ಒಂದು ಹಂತದಲ್ಲಿ, 'ಪ್ರಕರಣ ₹250 ಕೋಟಿ ಮೊತ್ತದ್ದು' ಎಂಬ ಅರ್ಜಿದಾರರ ಪರ ವಕೀಲರ ವಿವರಣೆಗೆ ತೀವ್ರ ಅಚ್ಚರಿ ವ್ಯಕ್ತಪಡಿಸಿದ ನ್ಯಾಯಪೀಠ, 'ಈ ಪ್ರಕರಣದಲ್ಲಿ ಯಾವುದೇ ಕಾಮಗಾರಿ ನಡೆಸದೆ ಬಿಲ್ ಪಡೆಯಲಾಗಿದೆ. ಆದಾಗ್ಯೂ, ಇಂತಹ ಪ್ರಕರಣಗಳಲ್ಲಿ ಇಲಾಖೆಯ ಶಿಸ್ತುಕ್ರಮ ವಿಚಾರಣಾ ಪ್ರಕ್ರಿಯೆಯಲ್ಲಿ ಆರೋಪ ಮುಕ್ತಗೊಳ್ಳುವುದು ಸಹಜ. ಹಾಗೆಂದು, ನ್ಯಾಯಾಲಯ ಅದಕ್ಕೆಲ್ಲಾ ಬದ್ಧವಾಗಿರಬೇಕು ಎಂದೇನಿಲ್ಲ' ಎಂದು ನುಡಿಯಿತು.

ಪ್ರಕರಣದಲ್ಲಿ ಎರಡನೇ ಆರೋಪಿಯ ವಿರುದ್ಧದ ವಿಚಾರಣೆಗೆ ಈಗಾಗಲೇ ತಡೆ ನೀಡಿರುವುದನ್ನು ಪರಿಗಣಿಸಿದ ನ್ಯಾಯಪೀಠ ಅರ್ಜಿದಾರರ ವಿರುದ್ಧದ ವಿಚಾರಣೆಗೂ ತಡೆ ನೀಡಿ ಆದೇಶಿಸಿತು. ಅಂತೆಯೇ, ಪ್ರತಿವಾದಿ ಲೋಕಾಯುಕ್ತ ಪೊಲೀಸರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆ ಮುಂದೂಡಿತು.

ಪ್ರಕರಣ: 'ರಾಜರಾಜೇಶ್ವರಿ ನಗರ ವಿಧಾನಸಭಾ ಕ್ಷೇತ್ರದ ವಿವಿಧ ಯೋಜನೆಗಳ ಅನುದಾನದಲ್ಲಿ ಬಿಬಿಎಂಪಿ ವತಿಯಿಂದ ನಡೆದ ಅಭಿವೃದ್ಧಿ ಕಾಮಗಾರಿಗಳಲ್ಲಿ ಕಳಪೆ ಗುಣಮಟ್ಟದ ಕೆಲಸ ಮಾಡಿ ಮತ್ತು ಕಾಮಗಾರಿ ನಿರ್ವಹಿಸದೆ ಹಣ ಪಡೆದು ಸರ್ಕಾರದ ಬೊಕ್ಕಸಕ್ಕೆ ಕೋಟ್ಯಂತರ ರೂಪಾಯಿಗಳ ನಷ್ಟ ಉಂಟು ಮಾಡಲಾಗಿದೆ ಎಂಬ ಪ್ರಕರಣಕ್ಕೆ ಸಂಬಂಧಿಸಿದಂತೆ ಲೋಕಾಯುಕ್ತರ ಪೊಲೀಸರು ದಾಖಲಿಸಿರುವ ಎಫ್‌ಐಆರ್ ರದ್ದುಪಡಿಸಬೇಕು' ಎಂದು ಅರ್ಜಿದಾರರು ಕೋರಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಮಾಜಿ ಸಂಸದ ಡಿ.ಕೆ.ಸುರೇಶ್ 2021ರ ಸೆಪ್ಟೆಂಬರ್ 2ರಂದು ದೂರು ನೀಡಿದ್ದರು. ಇದರ ವಿಚಾರಣೆ ನಡೆಸಿದ್ದ ಲೋಕಾಯುಕ್ತ ಪೊಲೀಸರು ಅರ್ಜಿದಾರರೂ ಸೇರಿದಂತೆ ಇತರರ ವಿರುದ್ಧ 2025ರಲ್ಲಿ; ಭ್ರಷ್ಟಾಚಾರ ನಿಗ್ರಹ ಕಾಯ್ದೆ–1988ರ ಕಲಂ 13(1) ಮತ್ತು ಭಾರತೀಯ ದಂಡ ಸಂಹಿತೆ–1860ರ ಕಲಂ 120-ಬಿ, 409, 419, 420 ಮತ್ತು 417ರ ಅಡಿಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

ಬ್ಯಾಂಕಾಕ್‌ನಿಂದ ತಂದಿದ್ದ ₹5.23 ಕೋಟಿಯ ಗಾಂಜಾ ಜಪ್ತಿ

ಪ್ರಜಾವಾಣಿ ವಾರ್ತೆ



ದೇವನಹಳ್ಳಿ: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಬ್ಯಾಂಕಾಕ್‌ನಿಂದ ಬಂದ ಪ್ರಯಾಣಿಕರೊಬ್ಬರಿಂದ 14.93 ಕೆ.ಜಿ ಹೈಡ್ರೋಪೋನಿಕ್ ಗಾಂಜಾವನ್ನು ಕಸ್ಟಮ್ಸ್ ಅಧಿಕಾರಿಗಳು ಮಂಗಳವಾರ ಜಪ್ತಿ ಮಾಡಿದ್ದಾರೆ.

ಖಚಿತ ಮಾಹಿತಿ ಮೇರೆಗೆ ಕಟ್ಟುನಿಟ್ಟಿನ ತಪಾಸಣೆ ನಡೆಸಿದ ಅಧಿಕಾರಿಗಳು ಪ್ರಯಾಣಿಕನ ಬ್ಯಾಗ್‌ಗಳಲ್ಲಿ ಅಡಗಿಸಿಟ್ಟಿದ್ದ ಗಾಂಜಾ ಪತ್ತೆ ಹಚ್ಚಿದ್ದಾರೆ. ಜಪ್ತಿ ಮಾಡಲಾದ ಮಾದಕ ವಸ್ತುವಿನ ಅಂದಾಜು ಮೌಲ್ಯ ₹5.23 ಕೋಟಿ ಎಂದು ಮೂಲಗಳು ತಿಳಿಸಿವೆ.

ಆರೋಪಿಯನ್ನು ಬಂಧಿಸಿರುವ ಕಸ್ಟಮ್ಸ್ ಅಧಿಕಾರಿಗಳು, ಮಾದಕ ವಸ್ತುಗಳ ನಿಯಂತ್ರಣ ಕಾಯ್ದೆ (ಎನ್‌ಡಿಪಿಎಸ್) ಅಡಿ ಪ್ರಕರಣ ದಾಖಲಿಸಿದ್ದಾರೆ.

₹14.94 ಲಕ್ಷದ ಮಾದಕ ವಸ್ತು ವಶ

ಬೆಂಗಳೂರು: ಮಾರತ್‌ಹಳ್ಳಿ, ಬೊಮ್ಮನಹಳ್ಳಿ, ಪುಲಕೇಶಿನಗರ, ಭಾರತೀನಗರ ಠಾಣಾ ವ್ಯಾಪ್ತಿಯಲ್ಲಿ ಡ್ರಗ್ಸ್ ವಿರುದ್ಧ ವಿಶೇಷ ಕಾರ್ಯಾಚರಣೆ ಮುಂದುವರಿಸಿರುವ ಪೊಲೀಸರು, ಹೊರರಾಜ್ಯದ ಮೂವರು ಸೇರಿ ನಾಲ್ವರನ್ನು ಬಂಧಿಸಿದ್ದಾರೆ.

ಬಂಧಿತರಿಂದ ₹14.94 ಲಕ್ಷ ಮೌಲ್ಯದ 10 ಕೆ.ಜಿ 200 ಗ್ರಾಂ ಗಾಂಜಾ, 20 ಗ್ರಾಂ ಎಂಡಿಎಂಎ, 10 ಗ್ರಾಂ ಮೆಥಾಂಫೆಟಮೈನ್, 2.5 ಕೆ.ಜಿ ಕೊಡೈನ್ ಕೆಮ್ಮಿನ ಸಿರಪ್ ಹಾಗೂ ಕೃತ್ಯಕ್ಕೆ ಬಳಸಿದ ಕಾರು ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ಹೇಳಿದರು.

‘ನಾಲ್ವರು ಆರೋಪಿಗಳನ್ನು ಕಸ್ಟಡಿಗೆ ತೆಗೆದುಕೊಂಡು ವಿಚಾರಣೆ ನಡೆಸಲಾಗುತ್ತಿದೆ. ಈ ಪ್ರಕರಣದಲ್ಲಿ ಇನ್ನೂ ಹಲವರು ಶಾಮೀಲಾಗಿರುವ ಶಂಕೆಯಿದೆ. ಪ್ರಕರಣದ ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸರು ತಿಳಿಸಿದರು.

‘ಬೇರೆ ರಾಜ್ಯಗಳ ಮಧ್ಯವರ್ತಿಗಳಿಂದ ಕಡಿಮೆ ಬೆಲೆಗೆ ಮಾದಕ ವಸ್ತುಗಳನ್ನು ಖರೀದಿಸಿ ನಗರಕ್ಕೆ ತಂದು, ಮಾರಾಟ ಮಾಡುತ್ತಿದ್ದರು ಎಂಬುದು ತನಿಖೆಯಿಂದ ಗೊತ್ತಾಗಿದೆ’ ಎಂದು ಮೂಲಗಳು ಹೇಳಿವೆ.

231 ಜಿಲೆಟಿನ್ ಕಡ್ಡಿ, 50 ಡಿಟೊನೇಟರ್ ಜಪ್ತಿ

ಕ್ವಾರಿಯಲ್ಲಿ ಬಳಸಲು ಅಕ್ರಮವಾಗಿ ಸ್ಫೋಟಕ ವಸ್ತುಗಳ ಸಂಗ್ರಹ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಕ್ವಾರಿಯಲ್ಲಿ ಸ್ಫೋಟಿಸಲು ಅಕ್ರಮವಾಗಿ ಜಿಲೆಟಿನ್ ಕಡ್ಡಿ ಹಾಗೂ ಡಿಟೊನೇಟರ್‌ಗಳನ್ನು ದಾಸ್ತಾನು ಮಾಡಿದ್ದ ಸ್ಥಳದ ಮೇಲೆ ಆವಲಹಳ್ಳಿ ಠಾಣೆ ಪೊಲೀಸರು ದಾಳಿ ನಡೆಸಿ, 231 ಜಿಲೆಟಿನ್ ಕಡ್ಡಿಗಳು ಹಾಗೂ 50 ಡಿಟೊನೇಟರ್ ಜಪ್ತಿ ಮಾಡಿದ್ದಾರೆ.

ಆವಲಹಳ್ಳಿ ಠಾಣೆಯ ಹೆಡ್ ಕಾನ್‌ಸ್ಟೆಬಲ್ ರಾಜೇಂದ್ರ ನೀಡಿದ ದೂರಿನ ಮೇಲೆ ಐವರ ವಿರುದ್ಧ ಎಫ್‌ಐಆರ್ ದಾಖಲು ಮಾಡಿಕೊಳ್ಳಲಾಗಿದೆ ಎಂದು ಮೂಲಗಳು ಹೇಳಿವೆ.

‘ವೆಂಕಟೇಶ್ವರ ಗ್ರಾನೈಟ್ಸ್ ಮಾಲೀಕ ವೆಂಕಟರಮಣ ರೆಡ್ಡಿ, ಕ್ರಷರ್ ಉಸ್ತುವಾರಿ ಲೋಕೇಶ್ ರೆಡ್ಡಿ, ವಿಕಾಸ್, ತೋಹಿದ್, ಸಂದೀಪ್ ವಿರುದ್ಧ ಪ್ರಕರಣ ದಾಖಲು ಮಾಡಿಕೊಂಡು ತನಿಖೆ ನಡೆಸಲಾಗುತ್ತಿದೆ. ಐವರಿಗೂ ವಿಚಾರಣೆಗೆ ಹಾಜರಾಗುವಂತೆ ನೋಟಿಸ್ ಜಾರಿ ಮಾಡಲಾಗಿದೆ. ವಿಚಾರಣೆಗೆ ಬಂದ ಬಳಿಕ ಮುಂದಿನ ಕಾನೂನು ಕ್ರಮ ತೆಗೆದುಕೊಳ್ಳಲಾಗುವುದು’ ಎಂದು ವೈಟ್‌ಫೀಲ್ಡ್ ವಿಭಾಗದ ಡಿಸಿಪಿ ತಿಳಿಸಿದರು.

‘ಜೂನ್ 4ರ ರಾತ್ರಿ ಠಾಣೆಯ ಹೆಡ್ ಕಾನ್‌ಸ್ಟೆಬಲ್ ರಾಜೇಂದ್ರ ಗಸ್ತು ತಿರುಗುವಾಗ ಯರಪ್ಪನಹಳ್ಳಿಯ ವಿಧಾನಸೌಧ ಲೇಔಟ್ ಸಮೀಪದ ವೆಂಕಟೇಶ್ವರ ಗ್ರಾನೈಟ್ಸ್ ಕಂಪನಿ ಮಾಲೀಕತ್ವದ ಕ್ವಾರಿಯಲ್ಲಿ ಜಿಲೆಟಿನ್ ಕಡ್ಡಿ ಹಾಗೂ ಡಿಟೊನೇಟರ್‌ಗಳನ್ನು ದಾಸ್ತಾನು ಮಾಡಿರುವ ಮಾಹಿತಿ ಸಿಕ್ಕಿತ್ತು. ಅಂದೇ ನಸುಕಿನ ವೇಳೆ ಕಾರ್ಯಾಚರಣೆ ನಡೆಸಿ, 231 ಜಿಲೆಟಿನ್ ಕಡ್ಡಿಗಳು ಹಾಗೂ 50 ಡಿಟೊನೇಟರ್‌ಗಳನ್ನು ಪತ್ತೆ ಮಾಡಲಾಯಿತು. ಜತೆಗೆ, ಕ್ವಾರಿಯಲ್ಲಿದ್ದ ವಿಕಾಸ್, ತೋಹಿದ್ ಮತ್ತು ಸಂದೀಪ್ ಅವರನ್ನು ವಶಕ್ಕೆ ಪಡೆದುಕೊಂಡು ವಿಚಾರಣೆ ನಡೆಸಲಾಯಿತು. ಮಾಲೀಕ ವೆಂಕಟರಮಣ ರೆಡ್ಡಿ ಮತ್ತು ಕ್ರಷರ್ ಉಸ್ತುವಾರಿ ಲೋಕೇಶ್ ರೆಡ್ಡಿ ಸೂಚನೆ ಮೇರೆಗೆ ಕಲ್ಲು ಸ್ಫೋಟಕ್ಕೆ ಸಿದ್ಧತೆ ನಡೆಸಿರುವುದು ಗೊತ್ತಾಗಿದೆ’ ಎಂದು ಪೊಲೀಸರು ಹೇಳಿದರು.

ಆರೋಪಿಗಳು ಯಾವುದೇ ಪ್ರಾಧಿಕಾರದಿಂದ ಅನುಮತಿ ಪಡೆಯದೆ ಕ್ವಾರಿಯಲ್ಲಿ ಅಕ್ರಮವಾಗಿ ಸ್ಫೋಟಕ ವಸ್ತುಗಳನ್ನು ದಾಸ್ತಾನು ಮಾಡಿಕೊಂಡಿದ್ದರು ಎಂದು ಮೂಲಗಳು ಹೇಳಿವೆ.



ಜಿಲೆಟಿನ್ ಕಡ್ಡಿ, ಡಿಟೊನೇಟರ್ ಜಪ್ತಿ ಮಾಡಿದ ಆವಲಹಳ್ಳಿ ಠಾಣೆಯ ಪೊಲೀಸರು

ವೇಶ್ಯಾವಾಟಿಕೆ: ಮಹಿಳೆ ಬಂಧನ



ಬೆಂಗಳೂರು: ಚಿಕ್ಕಬಾಣಾವರ ಠಾಣಾ ವ್ಯಾಪ್ತಿಯ ದಾಸಪ್ಪನ ಪಾಳ್ಯದಲ್ಲಿ ಮನೆ ಬಾಡಿಗೆಗೆ ಪಡೆದು ವೇಶ್ಯಾವಾಟಿಕೆ ನಡೆಸುತ್ತಿದ್ದ ಆರೋಪದಡಿ ಮಹಿಳೆಯೊಬ್ಬರನ್ನು ಸಿಸಿಬಿ ಮಹಿಳಾ ಸಂರಕ್ಷಣಾ ದಳದ ಅಧಿಕಾರಿಗಳು ಇತ್ತೀಚೆಗೆ ಬಂಧಿಸಿದ್ದು, ಇಬ್ಬರು ಮಹಿಳೆಯರನ್ನು ರಕ್ಷಿಸಿದ್ದಾರೆ.

ಮಾಹಿತಿ ಮೇರೆಗೆ ರುದ್ರಪ್ಪ ಲೇಔಟ್‌ನ ಮನೆಯ ಮೇಲೆ ಪೊಲೀಸರು ದಾಳಿ ನಡೆಸಿದ್ದರು. ದೂರವಾಣಿ ಮೂಲಕ ಗ್ರಾಹಕರನ್ನು ಸಂಪರ್ಕಿಸಿ ಮನೆಗೆ ಕರೆಸಿಕೊಳ್ಳುತ್ತಿದ್ದುದಾಗಿ ಆರೋಪಿ ಒಪ್ಪಿಕೊಂಡಿದ್ದು, ತನಿಖೆ ಮುಂದುವರಿದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

‘ದಿ ಆರ್ಟ್ ಆಫ್ ಲಿವಿಂಗ್’ನ 45ನೇ ವಾರ್ಷಿಕೋತ್ಸವದಲ್ಲಿ ಭಾಗವಹಿಸಲು ಮೇ 10ರಂದು ಪ್ರಧಾನಿ ನರೇಂದ್ರ ಮೋದಿ ಅವರು ನಗರಕ್ಕೆ ಬಂದಿದ್ದರು. ಅವರು ಸಂಚರಿಸಿದ ನೈಸ್ ರಸ್ತೆಯ ಸಮೀಪದಲ್ಲೇ ಎರಡು ಜಿಲೆಟಿನ್ ಕಡ್ಡಿಗಳು ಪತ್ತೆಯಾಗಿ, ಆತಂಕಕ್ಕೆ ಕಾರಣವಾಗಿತ್ತು.

‘ಜೂಮ್ ಆ್ಯಪ್’ನಲ್ಲಿ ಬುಕ್ ಮಾಡಿದ್ದ ಕಾರು ಕಳವು: ಆರೋಪಿ ಸೆರೆ

ಬೆಂಗಳೂರು: ಬಾಡಿಗೆ ಆಧಾರಿತ ಕಾರು ಸೇವೆ ಒದಗಿಸುವ ‘ಜೂಮ್ ಆ್ಯಪ್’ನಲ್ಲಿ ಬುಕ್ ಮಾಡಿದ್ದ ಕಾರನ್ನು ಕಳವು ಮಾಡಿದ್ದ ಅಂತರ ರಾಜ್ಯ ಆರೋಪಿಯನ್ನು ಮಲ್ಲೇಶ್ವರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಕೇರಳದ ಶಫೀಕ್ ಬಂಧಿತ.



ಶಫೀಕ್

ಪಾದರಾಯನಪುರದ ನಿವಾಸಿ ಸೈಯದ್ ಕದೀರ್ ಪಾಷಾ ಅವರ ಕಾರನ್ನು ಆರೋಪಿ ಕಳವು ಮಾಡಿದ್ದ ಎಂದು ಪೊಲೀಸರು ತಿಳಿಸಿದರು.

‘ಕಂಪನಿಯೊಂದರಲ್ಲಿ ವ್ಯವಸ್ಥಾಪಕರಾಗಿ ಸೈಯದ್ ಕೆಲಸ ಮಾಡುತ್ತಿದ್ದಾರೆ. 2023ರಲ್ಲಿ ಕಾರು ಖರೀದಿಸಿದ್ದ ಅವರು, ಮನೆಯ ಬಳಿ ಜಾಗವಿಲ್ಲದ ಕಾರಣ ಮಲ್ಲೇಶ್ವರ 15ನೇ ಅಡ್ಡರಸ್ತೆಯ ಎಂಇಎಸ್ ಕಾಲೇಜು ಬಳಿ ಕಾರು ನಿಲ್ಲಿಸುತ್ತಿದ್ದರು. ಕಾರನ್ನು ತಮ್ಮ ಸಹೋದರ ಫೈಸಲ್ ಖಾನ್ ಹೆಸರಿನಲ್ಲಿ ‘ಜೂಮ್ ಕಾರ್ ಆ್ಯಪ್’ನಲ್ಲಿ ನೋಂದಣಿ ಮಾಡಿಸಿದ್ದರು’ ಎಂದು ಪೊಲೀಸರು ಹೇಳಿದರು.

‘ಜೂಮ್ ಕಾರ್ ಆ್ಯಪ್’ ಮೂಲಕ ಏಪ್ರಿಲ್ 22ರಂದು ಸೈಯದ್ ಅವರ ಕಾರನ್ನು ಆರೋಪಿ ಬುಕ್ ಮಾಡಿದ್ದ. ಬಳಿಕ, ಫೈಸಲ್ ಖಾನ್ ಅವರು ಶಫೀಕ್‌ನನ್ನು ಭೇಟಿಯಾಗಿ ಕಾರು ಕೊಟ್ಟು ಆತನ ಡಿ.ಎಲ್ ಮತ್ತು ಆಧಾರ್ ಕಾರ್ಡ್ ಪಡೆದುಕೊಂಡಿದ್ದರು. ಆರೋಪಿ ಕಾರನ್ನು ವಾಪಸ್ ಮಾಡದೇ ತಲೆಮರೆಸಿಕೊಂಡಿದ್ದ’ ಎಂದು ಪೊಲೀಸರು ಹೇಳಿದರು.

ಫೈಸಲ್ ಖಾನ್ ಅವರು ನೀಡಿದ ದೂರು ಆಧರಿಸಿ ಆರೋಪಿಯನ್ನು ಬಂಧಿಸಲಾಗಿದೆ.

‘ಬಾಡಿಗೆಯ ನೆಪದಲ್ಲಿ ಕಾರು ಪಡೆದು ಆರೋಪಿ ಕೇರಳಕ್ಕೆ ಹೋಗಿದ್ದ. ಕಾರಿನ ಜಿಪಿಎಸ್ ಉಪಕರಣ ಮತ್ತು ಫಾಸ್ಟ್‌ಟ್ಯಾಗ್ ಕಿತ್ತು ಹಾಕಿದ್ದ. ಜೂಮ್ ಕಂಪನಿಯವರು ಸಂಪರ್ಕಿಸಿದಾಗ ಕೆಲಸದ ನಿಮಿತ್ತ ಕೇರಳಕ್ಕೆ ಹೋಗಿದ್ದು, ಶೀಘ್ರವೇ ಕಾರು ವಾಪಸ್ ಕೊಡುವುದಾಗಿ ಹೇಳಿದ್ದ. ಬಳಿಕ ಬೇರೆಯವರಿಗೆ ಕಾರು ಕೊಟ್ಟು ಬೆಂಗಳೂರಿಗೆ ಬಂದು ತಲೆಮರೆಸಿಕೊಂಡಿದ್ದ. ಮೊಬೈಲ್ ಕರೆ ಆಧರಿಸಿ, ಆರೋಪಿಯನ್ನು ಎಲೆಕ್ಟ್ರಾನಿಕ್ ಸಿಟಿ ಬಳಿ ಬಂಧಿಸಲಾಯಿತು’ ಎಂದು ಹಿರಿಯ ಪೊಲೀಸ್ ಅಧಿಕಾರಿಗಳು ತಿಳಿಸಿದರು.

ಚಿಟಿಕೆ ಸುದ್ದಿ

ಗಡಿ ನಿಯಂತ್ರಣ ರೇಖೆ ದಾಟಿದ ಪಾಕ್ ಬಾಲಕ

ಮೆಂಡರ್/ಜಮ್ಮು (ಪಿಟಿಐ): ಗಡಿ ನಿಯಂತ್ರಣ ರೇಖೆ ದಾಟಿ ಭಾರತದ ಭೂಪ್ರದೇಶ ಪ್ರವೇಶಿಸಿದ್ದ ಪಾಕಿಸ್ತಾನದ 14 ವರ್ಷದ ಬಾಲಕನೊಬ್ಬನನ್ನು ಸೇನಾ ಸಿಬ್ಬಂದಿ ಮಂಗಳವಾರ ಜಮ್ಮು ಮತ್ತು ಕಾಶ್ಮೀರದ ಪೂಂಛ್ ಜಿಲ್ಲೆಯಲ್ಲಿ ಬಂಧಿಸಿದ್ದಾರೆ.

‘ಮೆಂಡರ್ ವಲಯದ ನಾಗರಿ ಟೇಕರಿಯ ಮುಂಚೂಣಿ ಪ್ರದೇಶದಲ್ಲಿ ಗಡಿ ದಾಟಿದ ಕೂಡಲೇ ಬಾಲಕನನ್ನು ಜಾಗೃತ ಪಡೆಗಳು ವಿಚಾರಣೆ ನಡೆಸಿವೆ. ಬಾಲಕ ಆಕಸ್ಮಿಕವಾಗಿ ಪಾಕ್ ಆಕ್ರಮಿತ ಕಾಶ್ಮೀರದಿಂದ ಗಡಿ ನಿಯಂತ್ರಣ ರೇಖೆ ದಾಟಿ ಒಳಬಂದಿರಬಹುದು ಎಂದು ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿದೆ’ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

‘ಭದ್ರತಾ ಸಂಸ್ಥೆಗಳು ಹೆಚ್ಚಿನ ವಿಚಾರಣೆ ಕೈಗೊಂಡಿವೆ. ವಿಚಾರಣೆ ಬಳಿಕ ಅವನನ್ನು ಸ್ವದೇಶಕ್ಕೆ ವಾಪಸ್ ಕಳುಹಿಸುವ ಸಾಧ್ಯತೆ ಇದೆ’ ಎಂದು ಅವರು ತಿಳಿಸಿದ್ದಾರೆ.’

ಜಮೀರ್ ಗೌರವಕ್ಕೆ ಧಕ್ಕೆ ತರದಂತೆ ತಡೆಯಾಜ್ಞೆ

ಬೆಂಗಳೂರು: ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ನಡೆದ ಉಪ ಚುನಾವಣೆ ವಿಚಾರವಾಗಿ ಬೆಂಗಳೂರು ನಗರದ ಚಾಮರಾಜಪೇಟೆ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಶಾಸಕ ಜಮೀರ್ ಅಹಮದ್ ಖಾನ್ ಅವರ ಗೌರವಕ್ಕೆ ಧಕ್ಕೆ ತರುವಂತಹ ಯಾವುದೇ ಮಾನ ಹಾನಿಕರ ಸುದ್ದಿ ಪ್ರಕಟಿಸದಂತೆ 57ನೇ ಹೆಚ್ಚುವರಿ ಸಿಟಿ ಸಿವಿಲ್ ಹಾಗೂ ಸೆಷನ್ಸ್ ನ್ಯಾಯಾಲಯ (ಸಿಸಿಎಚ್-58) ಮಧ್ಯಂತರ ತಡೆಯಾಜ್ಞೆ ನೀಡಿದೆ.

ಲೇಖನ, ಆಡಿಯೊ–ವಿಡಿಯೊ, ಚಿತ್ರಗಳನ್ನು ಮುದ್ರಣ, ವಿದ್ಯುನ್ಮಾನ, ಸಾಮಾಜಿಕ ಜಾಲತಾಣ, ಡಿಜಿಟಲ್, ಆನ್‌ಲೈನ್, ವೆಬ್ ಪೋರ್ಟಲ್, ವಾಟ್ಸ್‌ಆ್ಯಪ್ ಸೇರಿದಂತೆ ಯಾವುದೇ ಸಾಮಾಜಿಕ ಮಾಧ್ಯಮಗಳಲ್ಲಿ ಪ್ರಸಾರ, ಅಪ್‌ಲೋಡ್, ಪೋಸ್ಟ್, ಮರು ಪೋಸ್ಟ್ ಮಾಡದಂತೆ ನ್ಯಾಯಾಧೀಶರು ಆದೇಶ ಹೊರಡಿಸಿದ್ದಾರೆ.

ಮರಣ ಶಯ್ಯೆಯಲ್ಲಿ ತಾತ: ಆರೈಕೆಗೆ ಪೆರೋಲ್

ಬೆಂಗಳೂರು: ‘ಮರಣ ಶಯ್ಯೆಯಲ್ಲಿರುವ 97 ವರ್ಷದ ತಾತನ ಕೊನೆ ದಿನಗಳಲ್ಲಿ ಬಳಿ ಇದ್ದು ಆರೈಕೆ ಮಾಡುವುದಕ್ಕಾಗಿ ಪೆರೋಲ್ ಮೇಲೆ ಬಿಡುಗಡೆ ಮಾಡಬೇಕು’ ಎಂದು ಕೋರಿದ್ದ ಜೀವಾವಧಿ ಶಿಕ್ಷೆಗೆ ಒಳಗಾಗಿ ಜೈಲಿನಲ್ಲಿರುವ ಅಪರಾಧಿಗೆ ಹೈಕೋರ್ಟ್ ಅನುಮತಿ ನೀಡಿದೆ.

ಈ ಸಂಬಂಧ ಮೈಸೂರು ಕೇಂದ್ರ ಕಾರಾಗೃಹದಲ್ಲಿರುವ ಎನ್.ಡಿ.ನವೀನ್ ಅಲಿಯಾಸ್ ಸಬ್ಸಿಡಿ ನವೀನ್ ಎಂಬಾತನ ತಂದೆ ಚನ್ನರಾಯಪಟ್ಟಣ ತಾಲ್ಲೂಕು ನುಗ್ಗೇಹಳ್ಳಿಯ ಎನ್.ಎನ್. ದೇವರಾಜು ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿತು.

ಅರ್ಜಿದಾರರ ಪರ ಹೈಕೋರ್ಟ್ ವಕೀಲ ಡಿ.ಮೋಹನಕುಮಾರ್, ‘ಕೊಲೆ ಪ್ರಕರಣದಲ್ಲಿ ನವೀನ್‌ಗೆ 2024ರ ಡಿಸೆಂಬರ್ 18ರಂದು ಜೀವಾವಧಿ ಶಿಕ್ಷೆ ವಿಧಿಸಲಾಗಿದೆ. ಈಗ ಅವರ 97 ವರ್ಷದ ತಾತ ಮರಣ ಶಯ್ಯೆಯಲ್ಲಿದ್ದು, ಅವರನ್ನು ಕಾಣಲು ಪೆರೋಲ್ ಮಂಜೂರು ಮಾಡಬೇಕು’ ಎಂದು ನ್ಯಾಯಪೀಠಕ್ಕೆ ಮನವಿ ಮಾಡಿದರು. ಅಪರಾಧಿಗೆ 15 ದಿನಗಳ ತುರ್ತು ಪೆರೋಲ್ ಮಂಜೂರು ಮಾಡಿದೆ.

ವಿಧಾನಸೌಧ ಬಳಿ ಆತ್ಮಹತ್ಯೆಗೆ ಯತ್ನಿಸಿದ ರೈತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆದ್ದಾರಿ ನಿರ್ಮಾಣಕ್ಕೆ ಸ್ವಾಧೀನಪಡಿಸಿಕೊಂಡಿರುವ ಜಮೀನಿಗೆ ಪರಿಹಾರ ನೀಡುವಂತೆ ಆಗ್ರಹಿಸಿ ವಿಧಾನಸೌಧದ ಬಳಿ ಮಂಗಳವಾರ ಮಧ್ಯಾಹ್ನ ರೈತರೊಬ್ಬರು ಆತ್ಮಹತ್ಯೆಗೆ ಯತ್ನಿಸಿದ್ದು, ಸ್ಥಳದಲ್ಲಿದ್ದ ಪೊಲೀಸರು ಅವರನ್ನು ರಕ್ಷಿಸಿದರು.

ಚಿಕ್ಕಮಗಳೂರು ಜಿಲ್ಲೆ ಹಳಿಯೂರು ಗ್ರಾಮದ ವಿಶುಕುಮಾರ್ ಆತ್ಮಹತ್ಯೆಗೆ ಯತ್ನಿಸಿದ ಶ್ರೀಗಂಧದ ಬೆಳೆಗಾರ.

ವಿಧಾನಸೌಧದ ಬಳಿಗೆ ಬಂದಿದ್ದ ಅವರು ಆವರಣದಲ್ಲಿರುವ ಶ್ರೀಗಂಧದ ಮರವೊಂದಕ್ಕೆ ನೇಣು ಹಾಕಿಕೊಳ್ಳಲು ಮುಂದಾಗಿದ್ದರು. ಮಾಹಿತಿ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ಬಂದ ಪೊಲೀಸರು, ವಿಶುಕುಮಾರ್ ಅವರನ್ನು ಮರದಿಂದ ಕೆಳಕ್ಕೆ ಇಳಿಸಿ ಠಾಣೆಗೆ ಕರೆದೊಯ್ದರು.

ಹಿಂದೆಯೂ ಪ್ರತಿಭಟನೆ: ‘ಪರಿಹಾರದ ಹಣ ಬಿಡುಗಡೆಗೆ ಆಗ್ರಹಿಸಿ ಎರಡು ವರ್ಷದ ಹಿಂದೆಯೂ ವಿಧಾನ ಸೌಧದ ಹಿಂಭಾಗದಲ್ಲಿದ್ದ ಶ್ರೀಗಂಧ ಮರವೊಂದನ್ನು ಕಡಿದು ವಿಶುಕುಮಾರ್ ಸರ್ಕಾರದ ಗಮನ ಸೆಳೆದಿದ್ದರು. ಪರಿಹಾರದ ಹಣ ಬಿಡುಗಡೆ ಆಗದೇ ಇರುವುದಕ್ಕೆ ನೊಂದು ಆತ್ಮಹತ್ಯೆಗೆ ಮುಂದಾಗಿದ್ದರು’ ಎಂದು ಮೂಲಗಳು ಹೇಳಿವೆ.

‘ಹೆದ್ದಾರಿ ನಿರ್ಮಾಣಕ್ಕೆಂದು 2015ರಲ್ಲಿ ಹೆದ್ದಾರಿ ಪ್ರಾಧಿಕಾರದವರು ಜಮೀನು ಸ್ವಾಧೀನಪಡಿಸಿಕೊಂಡಿದ್ದರು. ಸ್ವಾಧೀನ ಆಗಿರುವ ಜಾಗಕ್ಕೆ (ಒಂದೂವರೆ ಎಕರೆ) ಹೆದ್ದಾರಿ ಪ್ರಾಧಿಕಾರದಿಂದ ಹೆಚ್ಚಿನ ಪರಿಹಾರ ಬರಬೇಕು. ಆದರೆ, ಅರಣ್ಯ ಇಲಾಖೆಯ ಅಧಿಕಾರಿಗಳು ಕಡಿಮೆ ಪರಿಹಾರ ನಿಗದಿ ಪಡಿಸಿ, ಹೆದ್ದಾರಿ ಪ್ರಾಧಿಕಾರಕ್ಕೆ ಪ್ರಸ್ತಾವ ಸಲ್ಲಿಸಿದ್ದರು. ಆದರೆ, ಅರಣ್ಯ ಇಲಾಖೆಯ ಅಧಿಕಾರಿಗಳು ವೈಜ್ಞಾನಿಕವಾಗಿ ಪರಿಹಾರ ನಿಗದಿಪಡಿಸಿರುವ ಕಾರಣ ಇನ್ನೂ ಪರಿಹಾರ ಸಿಕ್ಕಿಲ್ಲ’ ಎಂದು ವಿಶುಕುಮಾರ್ ಹೇಳಿದರು.

ಪ್ರಬಂಧ, ಓದು–ವ್ಯಾಖ್ಯಾನ, ಭಾಷಣ ಸ್ಪರ್ಧೆ

ಬೆಂಗಳೂರು: ಸಂತಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರವು ಪದವಿ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳಿಗಾಗಿ ಶರಣ ಸಾಹಿತ್ಯ, ತತ್ವಪದ, ಅನುಭಾವ ಮತ್ತು ಕೀರ್ತನ ಸಾಹಿತ್ಯದ ಕುರಿತು ನಗರ ಜಿಲ್ಲಾ ಮಟ್ಟದಲ್ಲಿ ಪ್ರಬಂಧ ರಚನೆ, ಓದು–ವ್ಯಾಖ್ಯಾನ ಮತ್ತು ವೈಚಾರಿಕ ಭಾಷಣ ಸ್ಪರ್ಧೆಯನ್ನು ಏರ್ಪಡಿಸಿದೆ ಎಂದು ಪ್ರಕಟಣೆ ತಿಳಿಸಿದೆ

ಪ್ರತಿ ವಿಭಾಗದಲ್ಲೂ 15 ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ ನೀಡಲಾಗುವುದು. ಪ್ರಬಂಧಕ್ಕೆ ₹2ಸಾವಿರ, ಉಳಿದ ಎರಡು ಸ್ಪರ್ಧೆಗಳಿಗೆ ತಲಾ ₹1ಸಾವಿರ ಬಹುಮಾನ ನೀಡಲಾಗುವುದು. ಆಸಕ್ತರು ಜೂನ್ 30ರ ಒಳಗೆ ಅರ್ಜಿ ಸಲ್ಲಿಸಬೇಕು. ಜುಲೈ 20ರ ಒಳಗೆ ಪ್ರಬಂಧ ಕಳಿಸಬೇಕು. ಸ್ಪರ್ಧೆಯ ನಿಯಮಗಳು ಮತ್ತು ಅರ್ಜಿ ನಮೂನೆಗಾಗಿ kanakadasaresearchcenter.karnataka.gov.in ವೆಬ್‌ಸೈಟ್ ಸಂಪರ್ಕಿಸಬಹುದು.

ಅರ್ಜಿಯನ್ನು ಡೌನ್‌ಲೋಡ್ ಮಾಡಿ, ಮಾಹಿತಿ ತುಂಬಿ ಇ–ಮೇಲ್/ ಕೊರಿಯರ್ ಮೂಲಕ ಕಳಿಸಬಹುದು. ಅರ್ಜಿ ಕಳಿಸಬೇಕಾದ ಮೇಲ್: kanakaresearchcentre@gmail.com ಹಾಗೂ ಪ್ರಬಂಧಗಳನ್ನು ಕಳಿಸಬೇಕಾದ ಮೇಲ್: sumamakamshankar@gmail.com

ಹೆಚ್ಚಿನ ಮಾಹಿತಿಗೆ: ಸುಮಾ ಸತೀಶ್ 94814 80220, ಅಧ್ಯಯನ ಕೇಂದ್ರ: 080 22113147 ಸಂಪರ್ಕಿಸಬಹುದು ಎಂದು ಸದಸ್ಯ ಕಾರ್ಯದರ್ಶಿ ಎನ್.ಕರಿಯಪ್ಪ ತಿಳಿಸಿದ್ದಾರೆ.

ನಗರದಲ್ಲಿ ಇಂದು

ಪದವೀಧರರ ದಿನಾಚರಣೆ: ಉದ್ಘಾಟನೆ: ಡಾ.ಶರಣಪ್ರಕಾಶ ಆರ್.ಪಾಟೀಲ, ಮೊಹಮ್ಮದ್ ಮೊಹ್ಸಿನ್, ಡಾ.ಬಿ.ಎಲ್.ಸುಜಾತಾ ರಾಥೋಡ್, ಡಾ.ವಸಂತ ಕಾಮತ್, ಜಿ.ಟಿ.ಸುಭಾಷ್, ಡಾ.ಎಸ್.ಟಿ.ಕಾವ್ಯಾ, ಆಯೋಜನೆ ಮತ್ತು ಸ್ಥಳ: ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಬೆಳಿಗ್ಗೆ 8


‘ಪ್ರಚಲಿತ ಭಾರತದಲ್ಲಿ ಸಾಂವಿಧಾನಿಕ ಸುರಕ್ಷತೆಗಳು ಹಾಗೂ ಸಾಮಾಜಿಕ ಪರಿವರ್ತನೆ’ ಕುರಿತು ವಿಚಾರ ಸಂಕಿರಣ: ಉದ್ಘಾಟನೆ: ರಮೇಶ್ ಬಾಬು, ಅತಿಥಿ: ಎಚ್.ಕಾಂತರಾಜ, ಆಯೋಜನೆ ಮತ್ತು ಸ್ಥಳ: ಸೆಂಟ್ರಲ್ ಕಾಲೇಜಿನ ಜ್ಞಾನಜ್ಯೋತಿ ಸಭಾಂಗಣ, ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ಬೆಳಿಗ್ಗೆ 10

‘ಮಧ್ಯಮ ವ್ಯಾಯೋಗ’ ನಾಟಕ ಪ್ರದರ್ಶನ: ರಚನೆ: ಭಾಸ, ರೂಪಾಂತರ ಮತ್ತು ನಿರ್ದೇಶನ: ಪುರುಷೋತ್ತಮ ಆರ್. ಕಾಕಂಬಿ, ತಂಡ: ಆಯಾಮ, ಆಯೋಜನೆ ಮತ್ತು ಸ್ಥಳ: ರಂಗಶಂಕರ, ಸಂಜೆ 7.30

‘ಆಮಿಯೊಟ್ರೋಫಿಕ್ ಲ್ಯಾಟರಲ್ ಸ್ಲೆರೋಸಿಸ್ (ಎಎಲ್‌ಎಸ್) ರಹಸ್ಯ: ಪರಿಹರಿಸಬಹುದೇ?’ ಕುರಿತು ಉಪನ್ಯಾಸ: ಅಮ್ಮರ್ ಅಲ್‌ಚಲಾಬಿ, ಡಾ.ಪ್ರಭಾ ಎಸ್.ಚಂದ್ರ, ಡಾ.ಎ.ನಳಿನಿ, ಆಯೋಜನೆ ಮತ್ತು ಸ್ಥಳ: ನಿಮ್ಹಾನ್ಸ್, ಹೊಸೂರು ರಸ್ತೆ, ಮಧ್ಯಾಹ್ನ 3

ಅಂತರರಾಷ್ಟ್ರೀಯ ಆರ್ಕೈವ್ಸ್ ಸಪ್ತಾಹ: ‘ಆರ್ಕೈವಿಂಗ್’ ಕುರಿತು ಕಾರ್ಯಾಗಾರ, ಆಯೋಜನೆ: ಭಾರತೀಯ ಕಲಾ ಪ್ರತಿಷ್ಠಾನ (ಐಎಫ್‌ಎ), ಸ್ಥಳ: ‘ಅಪೂರ್ವ’ ನೆಲಮಹಡಿ, ನಂ.259, 4ನೇ ಕ್ರಾಸ್, ರಾಜ್ ಮಹಲ್ 4ನೇ ಹಂತ, ಸಂಜಯ್‌ನಗರ, ಮಧ್ಯಾಹ್ನ 3

ಯುವ ಸಂಗೀತೋತ್ಸವ: ವೀಣಾ ವಾದನ: ಎಂ.ಕೆ.ಶ್ರೀದೇವಿ, ಕರ್ನಾಟಕ ಸಂಗೀತ ಗಾಯನ: ಶ್ರದ್ಧಾ ಕೋಟೆ, ಆಯೋಜನೆ ಮತ್ತು ಸ್ಥಳ: ಬೆಂಗಳೂರು ಗಾಯನ ಸಮಾಜ, ಕೃಷ್ಣರಾಜೇಂದ್ರ ರಸ್ತೆ, ಸಂಜೆ 5.15



ಶ್ರದ್ಧಾ ಕೋಟೆ

26ನೇ ವರ್ಷದ ಪ್ರವಚನ ವಾಹಿನಿ: ‘ವಿದುರ ನೀತಿ’ ವಿಷಯದ ಬಗ್ಗೆ ಪ್ರವಚನ: ಕಡೂರ್ ಶ್ರೀಧರಾಚಾರ್ಯ, ಆಯೋಜನೆ ಹಾಗೂ ಸ್ಥಳ: ಸಾಂಸ್ಕೃತಿಕ ಮಂದಿರ, ರಾಗೀಗುಡ್ಡದ ಶ್ರೀ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ 9ನೇ ಬಡಾವಣೆ, ಸಂಜೆ 6.30

‘ಅಪರಿಧಿ’ ನಾಟಕ ಪ್ರದರ್ಶನ: ರಚನೆ: ರಾಣಿ ಪಿ.ವಿಶ್ವನಾಥ್, ತಂಡ: ನಂಕಂಪನಿ, ನಿರ್ದೇಶನ: ಸುರಭಿ ವಶಿಷ್ಠ, ಆಯೋಜನೆ: ಚಿಗುರು, ಕುಸುಮಾಲೆ– ಗಿರೀಶ್ ಕಾರ್ನಾಡ್ ಕನ್ನಡ ನಾಟಕ ರಚನಾ ಫೆಲೋಶಿಪ್, ಭಾಷಾ ಕೇಂದ್ರ, ಸಮಾಗತ ಫೌಂಡೇಷನ್, ಸ್ಥಳ: ಪ್ರೆಸ್ಟೀಜ್ ಸೆಂಟರ್ ಫಾರ್ ಪರ್ಫಾರ್ಮಿಂಗ್ ಆರ್ಟ್ಸ್, ಅಂಜನಾದ್ರಿ ಬಡಾವಣೆ, ಕೋಣನಕುಂಟೆ, ಸಂಜೆ 7.30

ಸಾಹಿತ್ಯ, ಸಾಂಸ್ಕೃತಿಕ, ಶೈಕ್ಷಣಿಕ ಸೇರಿ ವಿವಿಧ ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ– ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

ವಿಶಾಖಪಟ್ಟಣ: ಘಟನಾ ಸ್ಥಳಕ್ಕೆ ಕೇಂದ್ರ ಸಚಿವ ಎಚ್‌.ಡಿ. ಕುಮಾರಸ್ವಾಮಿ ಭೇಟಿ

ಮೃತರ ಕುಟುಂಬಸ್ಥರಿಗೆ ₹25 ಲಕ್ಷ ಪರಿಹಾರ

ಪ್ರಜಾವಾಣಿ ವಾರ್ತೆ

ವಿಶಾಖಪಟ್ಟಣ (ಪಿಟಿಐ): ಇಲ್ಲಿನ ಉಕ್ಕು ಸ್ಥಾವರದಲ್ಲಿ ಸಂಭವಿಸಿದ ಅವಘಡದಲ್ಲಿ ಮೃತಪಟ್ಟ ಸಂತ್ರಸ್ತರ ಕುಟುಂಬಸ್ಥರಿಗೆ ತಲಾ ₹25 ಲಕ್ಷ ಪರಿಹಾರ ಮತ್ತು ಕುಟುಂಬದ ಸದಸ್ಯರೊಬ್ಬರಿಗೆ ಕಾಯಂ ಉದ್ಯೋಗ ನೀಡುವುದಾಗಿ ಕೇಂದ್ರದ ಬೃಹತ್ ಕೈಗಾರಿಕೆ ಮತ್ತು ಉಕ್ಕು ಖಾತೆ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರು ತಿಳಿಸಿದರು.


‘ಗಂಭೀರವಾಗಿ ಗಾಯಗೊಂಡ ಕಾರ್ಮಿಕರಿಗೆ ತಲಾ ₹10 ಲಕ್ಷ ಪರಿಹಾರ ನೀಡಲಾಗುವುದು ಮತ್ತು ಗಾಯಾಳುಗಳ ವೈದ್ಯಕೀಯ ವೆಚ್ಚವನ್ನು ಸಂಪೂರ್ಣವಾಗಿ ಕಾರ್ಖಾನೆಯೇ ಭರಿಸಲಿದೆ’ ಎಂದು ಹೇಳಿದರು.

ಉಕ್ಕನ್ನು ಕರಗಿಸುವ ಘಟಕದಲ್ಲಿ ದ್ರವ ರೂಪದ ಲೋಹ ಸೋರಿಕೆಯಾದ ಪರಿಣಾಮ ಸಂಭವಿಸಿದ ಅಗ್ನಿ ಅವಘಡದಲ್ಲಿ ಎಂಟು ಕಾರ್ಮಿಕರು ಮೃತಪಟ್ಟು, ಆರು ಮಂದಿ ಗಾಯಗೊಂಡಿದ್ದಾರೆ.

ಅವಘಡದ ಸುದ್ದಿ ತಿಳಿಯುತ್ತಿದ್ದಂತೆಯೇ ಸೋಮವಾರ ರಾತ್ರಿಯೇ ಕುಮಾರಸ್ವಾಮಿ, ಕೇಂದ್ರ ವಿಮಾನಯಾನ ಸಚಿವ ಕೆ.ರಾಮ್ ಮೋಹನ್ ನಾಯ್ಡು, ವಿಶಾಖಪಟ್ಟಣ ಸಂಸದ ಶ್ರೀಭರತ್ ಮತ್ತು ಆಂಧ್ರ ಪ್ರದೇಶದ ಗೃಹ ಸಚಿವೆ ವಂಗಲಪುಡಿ ಅನಿತಾ ಅವರು ಘಟನಾ ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿದರು.

₹1.72 ಕೋಟಿ ಪರಿಹಾರ- ಪವನ್ ಕಲ್ಯಾಣ್: ಅವಘಡದಲ್ಲಿ ಮೃತಪಟ್ಟ ಕಾಯಂ ಉದ್ಯೋಗಿಗಳ ಕುಟುಂಬಸ್ಥರಿಗೆ ತಲಾ ₹1.72 ಕೋಟಿ ಮತ್ತು ಗುತ್ತಿಗೆ ನೌಕರರಿಗೆ ತಲಾ ₹45.75 ಲಕ್ಷ ಪರಿಹಾರ ನೀಡಲಾಗುವುದು ಎಂದು ಆಂಧ್ರ ಪ್ರದೇಶದ ಉಪ ಮುಖ್ಯಮಂತ್ರಿ ಪವನ್ ಕಲ್ಯಾಣ್ ಮಂಗಳವಾರ ಘೋಷಿಸಿದರು.

‘ಜೊತೆಗೆ ಮೃತರ ಕುಟುಂಬಸ್ಥರಿಗೆ ತಲಾ ₹10 ಲಕ್ಷ ಹಣಕಾಸು ನೆರವನ್ನೂ ನೀಡಲಾಗುವುದು. ಗಂಭೀರವಾಗಿ ಗಾಯಗೊಂಡವರಿಗೆ ತಲಾ ₹10 ಲಕ್ಷ ನೀಡಲಾಗುವುದು’ ಎಂದು ತಿಳಿಸಿದರು.



ಕೇಂದ್ರ ಸಚಿವ ಕುಮಾರಸ್ವಾಮಿ ಅವರು ಆಸ್ಪತ್ರೆಗೆ ಭೇಟಿ ನೀಡಿ ಗಾಯಾಳುಗಳ ಆರೋಗ್ಯ ವಿಚಾರಿಸಿದರು

ಬೀದಿಬದಿ ವ್ಯಾಪಾರಿಗಳಿಗೆ ಸೂರಾಗದ ಮಾರುಕಟ್ಟೆ • ಹಂಚಿಕೆಯಾಗದ ಮಳಿಗೆಗಳು

ವಿಜಯನಗರ: ‘ಪಾಲಿಕೆ ಬಜಾರ್’ ನನೆಗುದಿಗೆ

• ಮೋಹನ್ ಕುಮಾರ ಸಿ.

ಬೆಂಗಳೂರು: ಬೀದಿಬದಿ ವ್ಯಾಪಾರಿಗಳಿಗೆ ಸೂರಾಗಬೇಕಿದ್ದ ವಿಜಯನಗರದ ‘ಶ್ರೀಕೃಷ್ಣದೇವರಾಯ ಪಾಲಿಕೆ ಬಜಾರ್’ ಪೂರ್ಣ ಪ್ರಮಾಣದಲ್ಲಿ ಇನ್ನೂ ಆರಂಭವಾಗಿಲ್ಲ. ಟೆಂಡರ್ ಪ್ರಕ್ರಿಯೆಗೆ ವ್ಯಾಪಾರಿಗಳು ಒಲವು ತೋರಿಸುತ್ತಿಲ್ಲ. ಹೀಗಾಗಿ, ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಹಿಂದಿನ ಬಿಬಿಎಂಪಿ) ಮಾದರಿ ಯೋಜನೆ ನನೆಗುದಿಗೆ ಬಿದ್ದಿದೆ.

ಪಶ್ಚಿಮ ನಗರ ಪಾಲಿಕೆ ವ್ಯಾಪ್ತಿಯ ವಿಜಯನಗರ ಮೆಟ್ರೊ ನಿಲ್ದಾಣದ ಪಕ್ಕದಲ್ಲಿ ₹13 ಕೋಟಿ ವೆಚ್ಚದಲ್ಲಿ ನಿರ್ಮಾಣವಾಗಿರುವ ಹವಾನಿಯಂತ್ರಿತ ಬಜಾರ್‌ನಲ್ಲಿ ಅಗತ್ಯ ಸೌಲಭ್ಯಗಳಿದ್ದರೂ ಬೀದಿಬದಿ ವ್ಯಾಪಾರಿಗಳು ಇನ್ನೂ ಮಾಗಡಿ ಕಾರ್ಡ್ ರಸ್ತೆ ಮತ್ತು 17ನೇ ಅಡ್ಡ ರಸ್ತೆಗಳಲ್ಲಿ ತಳ್ಳುಗಾಡಿಗಳಲ್ಲಿಯೇ ವಹಿವಾಟು ನಡೆಸುತ್ತಿದ್ದಾರೆ. ಇದರಿಂದ ವಾಹನಗಳ ಸುಗಮ ಸಂಚಾರಕ್ಕೂ ತೊಂದರೆಯಾಗಿದೆ.

₹ 13 ಕೋಟಿ ವೆಚ್ಚ: 2017ರಲ್ಲಿ ನಗರೋತ್ಥಾನ ಯೋಜನೆಯಡಿ ₹ 5 ಕೋಟಿ ವೆಚ್ಚದಲ್ಲಿ ಆರಂಭವಾದ ಕಾಮಗಾರಿ ₹ 13 ಕೋಟಿ ವೆಚ್ಚದಲ್ಲಿ 2024ರಲ್ಲಿ ಪೂರ್ಣಗೊಂಡಿತ್ತು. 136 ಮೀಟರ್ ಉದ್ದ, 11 ಮೀಟರ್ ಅಗಲವಿರುವ ನೆಲ ಮಾಳಿಗೆಯ ಬಜಾರ್‌ನಲ್ಲಿ 79 ಮಳಿಗೆಗಳಿವೆ. ಬಜಾರ್ ಆರಂಭಗೊಂಡು 2 ವರ್ಷ ಆಗಿದೆ.

ವ್ಯಾಪಾರವಿಲ್ಲ: ಬಾಡಿಗೆ ₹3 ಸಾವಿರ ಇದೆ. ಮೇಲಿನ ರಸ್ತೆ ಬದಿಯಲ್ಲೇ ಚೆನ್ನಾಗಿ ವಹಿವಾಟು ನಡೆದಿರುವುದರಿಂದ ನೆಲಮಾಳಿಗೆಯ ಬಜಾರ್‌ಗೆ ಯಾರೂ ಕಾಲಿಡುತ್ತಿಲ್ಲ. ಅಲ್ಲಿ ವ್ಯಾಪಾರ ನಡೆಸದಂತೆ ಕಟ್ಟುನಿಟ್ಟಾಗಿ ಕ್ರಮವಹಿಸಬೇಕಿದೆ ಎನ್ನುತ್ತಾರೆ ಬಜಾರ್ ವ್ಯಾಪಾರಿಗಳು.

‘1984ರಲ್ಲಿ ಇದೇ ರಸ್ತೆಯಲ್ಲಿದ್ದ ಚಿಕ್ಕ ಮಾರುಕಟ್ಟೆ ನೆಲಸಮ ಮಾಡಲಾಯಿತು. ಎ.ಕೆ.ಕಾಲೊನಿ ಸ್ಲಂ, ಬಿಟಿಎಸ್ ಗ್ಯಾರೇಜ್ ಹೀಗೆ ಅಲೆಯುತ್ತಲೇ ಇದ್ದೆ. ಕೊನೆಗೆ ಇಲ್ಲಿಗೆ ಬಂದಿರುವೆ. ಪೂಜಾ ಸಾಮಗ್ರಿ ವ್ಯಾಪಾರ ಬಿಟ್ಟು ಜೀವನಕ್ಕೆ ಬೇರೆ ಆಧಾರವಿಲ್ಲ. ಇಲ್ಲಿಗೆ ಜನರೂ ಬರುತ್ತಿಲ್ಲ’ ಎಂದು ವ್ಯಾಪಾರಿ ಕೆಂಪರಾಜು ‘ಪ್ರಜಾವಾಣಿ’ಗೆ ತಿಳಿಸಿದರು.

ದೆಹಲಿ ಮಾದರಿ ಮಾರುಕಟ್ಟೆ: ದೆಹಲಿಯ ರಾಜೀವ್ ಚೌಕ ಮೆಟ್ರೊ ನಿಲ್ದಾಣದಲ್ಲಿನ ಬಜಾರ್ ಮಾದರಿಯಲ್ಲಿ ಕಟ್ಟಡ ಕಟ್ಟಲಾಗಿದೆ. ಬೀದಿಬದಿ ವ್ಯಾಪಾರಿಗಳಿಗೆ ಶಾಶ್ವತ ನೆಲೆ ಹಾಗೂ ವಾಹನ ಸಂಚಾರ ಸುಗಮಗೊಳಿಸುವ ಉದ್ದೇಶವಿರುವ ಕಟ್ಟಡದಲ್ಲಿ 31 ಎ.ಸಿ. ಯುನಿಟ್‌ಗಳು, 1 ಲಿಫ್ಟ್, 2 ಎಸ್ಕಲೇಟರ್, 8 ಪ್ರವೇಶದ್ವಾರ ಹಾಗೂ 145 ವಿದ್ಯುತ್ ದೀಪಗಳಿವೆ.

ಎರಡು ವರ್ಷದಿಂದ ನಿರ್ವಹಣೆ ಇಲ್ಲದ್ದರಿಂದ ಮಾರುಕಟ್ಟೆಯ ಮಧ್ಯಭಾಗದಲ್ಲಿ ಬೆಳಕಿಗೆ ನಿರ್ಮಿಸಿದ್ದ ಪಾರದರ್ಶಕ ಶೀಟ್‌ಗಳು ಒಡೆದಿದ್ದು, ಮಳೆನೀರು ಒಳಸೇರುತ್ತಿದೆ. ನೀರು ಹರಿದುಹೋಗಲು ಇರುವ ಕಿರು ಚರಂಡಿಯಲ್ಲಿ ಮಣ್ಣು ತುಂಬುತ್ತಿದ್ದು, ದುರಸ್ತಿ ಕೆಲಸಗಳೂ ಬಾಕಿ ಇವೆ.

‘ಟೆಂಡರ್ ಕರೆದು ಶೀಘ್ರವೇ ಹಂಚಿಕೆ’



ವಿಜಯನಗರದ ‘ಶ್ರೀಕೃಷ್ಣದೇವರಾಯ ಪಾಲಿಕೆ ಬಜಾರ್’ ಎದುರು ಬೀದಿಬದಿ ವ್ಯಾಪಾರಿಗಳ ವಹಿವಾಟು ನಡೆದಿದೆ

–ಪ್ರಜಾವಾಣಿ ಚಿತ್ರಗಳು/ ಪ್ರಶಾಂತ್ ಎಚ್.ಜಿ.

ಇ- ಟೆಂಡರ್ ಕರೆದು ಶೀಘ್ರದಲ್ಲಿಯೇ ವ್ಯಾಪಾರಿಗಳಿಗೆ ಪಾಲಿಕೆ ಬಜಾರ್ ಮಳಿಗೆಗಳನ್ನು ಹಂಚಿಕೆ ಮಾಡಲಾಗುವುದು. ಈ ಹಿಂದೆ ಎರಡು ಬಾರಿ ಟೆಂಡರ್ ಕರೆದಿದ್ದರೂ ಕೆಲವರಷ್ಟೇ ನೋಂದಣಿ ಮಾಡಿಕೊಂಡಿದ್ದರು. ಸುತ್ತಮುತ್ತಲು ಬೀದಿಬದಿ ವ್ಯಾಪಾರ ಮಾಡುತ್ತಿರುವವರಿಗೆ ಬಜಾರ್‌ನಲ್ಲಿ ನಿಯಮದಂತೆ ಟೆಂಡರ್ ಪ್ರಕ್ರಿಯೆ ನಡೆಸಿ ಅವಕಾಶ ನೀಡಲಾಗುವುದು. ಈ ಬಗ್ಗೆ ಸ್ಥಳೀಯ ಶಾಸಕರೊಂದಿಗೆ ಸಭೆ ನಡೆಸಿ, ಅರಿವು ಮೂಡಿಸಲಾಗುವುದು. ವಾಹನ ಸಂಚಾರಕ್ಕೆ ತೊಂದರೆ ಮಾಡಿದರೆ ಅಲ್ಲಿಂದ ತೆರವುಗೊಳಿಸಲಾಗುವುದು



ಡಾ.ಕೆ.ವಿ.ರಾಜೇಂದ್ರ, ಆಯುಕ್ತ, ಬೆಂಗಳೂರು ಪಶ್ಚಿಮ ನಗರ ಪಾಲಿಕೆ




ಬೆಳಿಗ್ಗೆಯೇ ಬಂದು ಕೂತಿರುವೆ ಒಬ್ಬ ಗಿರಾಕಿಯೂ ಬಂದಿಲ್ಲ. 40 ವರ್ಷದಿಂದ ಸೊಪ್ಪು ಮಾರಾಟ ಮಾಡುತ್ತಿದ್ದೆ. ಯಾರೂ ಬಾರದ್ದರಿಂದ ಪ್ಲಾಸ್ಟಿಕ್ ವ್ಯಾಪಾರ ಮಾಡುತ್ತಿರುವೆ

ನಾಗರಾಜ, ವ್ಯಾಪಾರಿ



ಒಂದು ವರ್ಷ ತುಂಬಾ ಚೆನ್ನಾಗಿ ಮಾರುಕಟ್ಟೆ ನಡೆಯಿತು. ಹಳೆಯ ಗ್ರಾಹಕರು ಮಾತ್ರ ಬರುತ್ತಿದ್ದಾರೆ. ಉಳಿದವರು ಮೇಲಿನ ರಸ್ತೆ ಬದಿಯಲ್ಲೇ ಸಾಮಗ್ರಿ ಕೊಳ್ಳುತ್ತಿದ್ದಾರೆ. ಎಲ್ಲರನ್ನೂ ಇಲ್ಲಿಗೆ ಕಡ್ಡಾಯವಾಗಿ ಕಳುಹಿಸಲಿ

ಕೆಂಪರಾಜು, ಪೂಜಾ ಸಾಮಗ್ರಿ ವ್ಯಾಪಾರಿ



37 ವರ್ಷದಿಂದ ಹಣ್ಣು– ತರಕಾರಿ ವ್ಯಾಪಾರ ಮಾಡುತ್ತಿದ್ದೆ. ಖಾಲಿ ಕೂರುವ ಬದಲು ಬೇರೆ ದಿನಸಿ ಅಂಗಡಿಯಲ್ಲಿ ಕೆಲಸ ಮಾಡುತ್ತಿರುವೆ

ತಮ್ಮಯ್ಯ, ವ್ಯಾಪಾರಿ



ಆ್ಯಪಲ್ ಕಂಪನಿಯು ತನ್ನ ಐಫೋನ್ ಮತ್ತು ಐಪ್ಯಾಡ್ ಸಾಧನಗಳಿಗಾಗಿ ಸುಧಾರಿತ 'ಸಿರಿ ಎಐ' ಮತ್ತು ಮಕ್ಕಳಿಗಾಗಿ ಹೊಸ ಸುರಕ್ಷತಾ ವೈಶಿಷ್ಟ್ಯಗಳನ್ನು ಪರಿಚಯಿಸಿದೆ

ಗೋಸ್ಟ್ ಮರ್ಮರ್: ಕ್ವಾಂಟಂ ವಿಸ್ಮಯ!



ಗೋಸ್ಟ್‌ಮರ್ಮರ್ ಎನ್ನುವುದು ಅಮೆರಿಕ ಅತ್ಯಂತ ರಹಸ್ಯವಾಗಿಟ್ಟಿರುವ ತಂತ್ರಜ್ಞಾನ. ಅಮೆರಿಕ ಮತ್ತು ಇರಾನ್ ಯುದ್ಧದ ಸಮಯದಲ್ಲಿ ಇದರ ಬಳಕೆಯಾಗಿದೆ

• ವಿಕ್ರಮ ಜೋಶಿ

ಅಮೆರಿಕ ತನ್ನ ವಾಯುಸೇನೆಯ 'ಏರ್‌ಮ್ಯಾನ್'ನನ್ನು ಸಿನಿಮಾದ ರೀತಿಯಲ್ಲಿ ಬಚಾವ್ ಮಾಡಿದ್ದು, ಅಮೆರಿಕ–ಇರಾನ್ ಸಮರದ ಸಮಯದಲ್ಲಿ ಇಡೀ ಜಗತ್ತನ್ನು ಬೆರಗುಗೊಳಿಸಿದ ಸಂಗತಿಗಳಲ್ಲೊಂದು.

ಏಪ್ರಿಲ್ 3ರ ಬೆಳಿಗ್ಗೆ ಅಮೆರಿಕದ 'F-15E' ಯುದ್ಧವಿಮಾನವನ್ನು ಇರಾನ್ ಹೊಡೆದುರುಳಿಸಿತು; ಅದರಲ್ಲಿದ್ದ ಪೈಲಟ್ ಹಾಗೂ ವೆಪನ್ ಸಿಸ್ಟಮ್ ಆಫೀಸರ್ (ಏರ್‌ಮ್ಯಾನ್) ಇಬ್ಬರೂ ಆ ಕ್ಷಣ ಜೀವವನ್ನು ಉಳಿಸಿಕೊಳ್ಳಲು ಯುದ್ಧವಿಮಾನದಿಂದ ಚಿಮ್ಮಿ ಪಾರಾಗಿದ್ದು ನಿಜ. ಆದರೆ ಪ್ಯಾರಾಚೂಟ್ ಮೂಲಕ ತಲುಪಿದ್ದು ವೈರಿಯ ನೆಲವನ್ನು. ಇದು ಗೊತ್ತಾದ ತಕ್ಷಣವೇ ಅಮೆರಿಕದ ಸೈನ್ಯವು ಕಾರ್ಯಾಚರಣೆ ನಡೆಸಿ ಪೈಲಟ್‌ನನ್ನೇನೋ ರಕ್ಷಿಸಿತು, ಆದರೆ ಏರ್‌ಮ್ಯಾನ್ ಮಾತ್ರ ಕಣ್ಮರೆಯಾಗಿದ್ದ. ಆತನನ್ನು ಹುಡುಕಲು ಸಜ್ಜಾಗಿ ಸಿಐಎ ಪ್ರವೇಶ ಮಾಡಿದ್ದು ಮರುದಿನ. ಅಷ್ಟರೊಳಗೆ ಆ ಯೋಧನು ಎರಡು ಸಾವಿರ ಮೀಟರ್‌ಗಳಷ್ಟು ದೂರ ಪರ್ವತಾರೋಹಣ ಮಾಡಿ ಗಿಡಪೊದೆಗಳ ಸಂದಿಯಲ್ಲಿ ಅವಿತುಕೊಂಡಿದ್ದ. ಈತನಿಗಾಗಿ 36 ತಾಸು ಇರಾನ್ ಹಾಗೂ ಅಮೆರಿಕ – ಎರಡೂ ದೇಶಗಳ ತುಕಡಿಗಳ ಶೋಧ ಮುಂದುವರಿಯಿತು. ಇರಾನಿಗೆ ಚಳ್ಳೆಹಣ್ಣನ್ನು ತಿನ್ನಿಸಿ ತನ್ನ ಏರ್‌ಮ್ಯಾನ್‌ನನ್ನು ಸಿಐಎ ಪತ್ತೆ ಮಾಡಿತ್ತು. ಅದಕ್ಕಾಗಿ ಅವರು ಬಳಸಿದ್ದು ಈ ಹಿಂದೆ ಎಂದೂ ಜಗತ್ತಿನೆದುರಿಗೆ ತೆರದ ಹೊಚ್ಚ ಹೊಸ ತಂತ್ರಜ್ಞಾನ – 'ಗೋಸ್ಟ್ ಮರ್ಮರ್'! ಆ ಸೈನಿಕ ಅವಿತುಕೊಂಡಿದ್ದ ಜಾಗ ಪತ್ತೆಯಾಗಿದ್ದೇ, ತಾಪಡತೋಪ್ ಅಮೆರಿಕದ ನೇವಿ ಸೀಲ್ಸ್ ಯೋಧರು ಧರೆಗಿಳಿದು ಇರಾನ್ ಸೈನ್ಯದೊಡನೆ ಕಾದಾಡಲು ಆರಂಭಿಸಿದರು; ಯುದ್ಧವಿಮಾನಗಳ ದೊಡ್ಡ ದಂಡೇ ಬಂತು; ಎಲ್ಲರೂ ಸೇರಿ ಆ ಏರ್‌ಮ್ಯಾನ್ ಅವಿತುಕೊಂಡಿದ್ದ ಜಾಗಕ್ಕೆ ಹೋಗಿ ಏರ್‌ಲಿಫ್ಟ್ ಮಾಡಿ ಆತನನ್ನು ಕರೆದೊಯ್ದರು. ಇರಾನ್ ಪಡೆಗೆ ಕಾಣದ ಆ ಏರ್‌ಮ್ಯಾನ್ ಸಿಐಎ ಕಣ್ಣಿಗೆ ಬಿದ್ದಿದ್ದು ಹೇಗೆ? ಅದಕ್ಕುತ್ತರ - ಕ್ವಾಂಟಮ್ ಕಾಂತಮಾಪಕ ಹಾಗೂ ಕೃತಕಬುದ್ಧಿಮತ್ತೆಯ ಮೇಲೆ ಸಿದ್ಧ ಮಾಡಿದ ಉಪಕರಣ: 'ಗೋಸ್ಟ್ ಮರ್ಮರ್'! ಜಗತ್ತಿನೆದುರಿಗೆ ಇದು ಇನ್ನೂ ರಹಸ್ಯವಾಗಿಯೇ ಇದೆ; ನ್ಯೂಯಾರ್ಕ್ ಪೋಸ್ಟ್ ಒಂದನ್ನು ಬಿಟ್ಟು ಇನ್ನಾರಿಗೂ ಈ ಕುರಿತು ಹೆಚ್ಚು ಮಾಹಿತಿ ಲಭಿಸಿಲ್ಲ!

'ಗೋಸ್ಟ್ ಮರ್ಮರ್' ಎನ್ನುವುದು ಅಮೆರಿಕ ತನ್ನೊಳಗೆ ಅತ್ಯಂತ ರಹಸ್ಯವಾಗಿಟ್ಟ ತಂತ್ರಜ್ಞಾನ. ಅವರ ದಾವೆಯ ಪ್ರಕಾರ ಸುಮಾರು 50–55 ಕಿಲೋಮೀಟರ್ ದೂರದಿಂದಲೇ ಕೇವಲ ಹೃದಯಬಡಿತದ ತರಂಗಗಳನ್ನಾಲಿಸಿ ಮನುಷ್ಯರನ್ನು ಹುಡುಕಬಹುದಂತೆ. 'ಹೃದಯವು ಕಂಪಿಸುತ್ತಿದ್ದರೆ ಸಾಕು, ಪಾತಾಳದಲ್ಲೇ ಇರಿ ಯಾರನ್ನೇ ಆಗಲಿ ನಾವು ಹುಡುಕಬಲ್ಲೆವು' ಎಂದು ಎದೆತಟ್ಟಿಕೊಂಡು ಅಮೆರಿಕ ಗರ್ಜಿಸುತ್ತಿದೆ. ಗೋಸ್ಟ್ ಮರ್ಮರ್ ತಂತ್ರಜ್ಞಾನ ಇದು ದೀರ್ಘ ವ್ಯಾಪ್ತಿಯ ಕ್ವಾಂಟಮ್ ಕಾಂತಮಾಪಕ ಹಾಗೂ ಕೃತಕ ಬುದ್ಧಿಮತ್ತೆ – ಎರಡರ ಸಮಾಗಮ! ನಮ್ಮ ಹೃದಯದ ಪ್ರತಿ ಬಡಿತದಲ್ಲೂ ವಿದ್ಯುದಾವೇಶದ ಪ್ರಚೋದನೆಯಾಗಿ, ಅದು ಸ್ನಾಯುವಿನ ಮುಖಾಂತರ ಹರಿಯುತ್ತಿರುತ್ತದೆ. ಮ್ಯಾಕ್ಸ್‌ವೆಲ್‌ನ ಸಿದ್ಧಾಂತದ ಪ್ರಕಾರ ಚಲಿಸುವ ವಿದ್ಯುದಾವೇಶವು ಕಾಂತೀಯ ಕ್ಷೇತ್ರವನ್ನು ಸೃಷ್ಟಿಸುತ್ತದೆ; ಇದನ್ನು 'ಮ್ಯಾಗ್ನಟೋಕಾರ್ಡಿಯೋಗ್ರಾಮ್' ಎನ್ನುತ್ತಾರೆ. ಪಾರಂಪರಿಕ ಕಾಂತಮಾಪಕವು ಈ ಸೂಕ್ಷ್ಮ ಕಾಂತೀಯ ಕ್ಷೇತ್ರವನ್ನು ಗುರುತಿಸುವುದು ಅಸಾಧ್ಯ. ಅದಕ್ಕಾಗಿ ಕ್ವಾಂಟಮ್ ಕಾಂತಮಾಪಕವನ್ನು ಬಳಸುತ್ತಾರೆ. ಇದು ಪರಮಾಣುವಿನ ಭ್ರಮಣವನ್ನು ಅಥವಾ ಅತಿವಾಹಕದಲ್ಲಿನ ತಾಮ್ರದ ಜೋಡಿಯ ನಡವಳಿಕೆಯ ವೈಪರೀತ್ಯಗಳನ್ನು ಗ್ರಹಿಸಿ ಅತಿಸೂಕ್ಷ್ಮ ಕಾಂತಕ್ಷೇತ್ರವನ್ನೂ ಅಳೆಯಬಲ್ಲದು. ಗಣಿಗಾರಿಕೆ, ವೈದ್ಯಕೀಯ ಕ್ಷೇತ್ರಗಳಲ್ಲಿ ಇದರ ಬಳಕೆಯಾಗುತ್ತಿದೆ. ಆದರೆ ಇದರ ಉಪಯೋಗಕ್ಕೆ ಇರುವ ದೊಡ್ಡ ತೊಡಕೆಂದರೆ ಇದರಲ್ಲಿಯ ಸಂವೇದಕ ಹಾಗೂ ಉಪಕರಣಗಳನ್ನು ಶೂನ್ಯಕ್ಕೂ ಕಡಿಮೆಯ ತಾಪಮಾನದಲ್ಲಿ ಬಳಸಬೇಕು; ಅಂದಾಗಲೇ ಇದು ಪರಿಣಾಮಕಾರಿಯಾಗಿ ಕೆಲಸಮಾಡಬಲ್ಲದು. ಈ ತೊಡಕಿಗೆ ಪರಿಹಾರವೇ ಗೋಸ್ಟ್ ಮರ್ಮರ್‌ನಲ್ಲಿ ಬಳಸಿರಬಹುದೆನ್ನಲಾದ 'ನೈಟ್ರೋಜನ್ ವೆಕೆನ್ಸಿ ಡೈಮಂಡ್' (ಎನ್‌ವಿಡಿ). ಇದೊಂದು ಬಗೆಯ ಕೃತಕವಾಗಿ ತಯಾರಿಸಿದ ವಜ್ರವಾಗಿದ್ದು ಇದರಲ್ಲಿ ಸೂಕ್ಷ್ಮವಾದ ದೋಷಗಳಿರುತ್ತವೆ. ಆ ದೋಷಗಳಿಗೆ 'ಎನ್‌ವಿ ಕೇಂದ್ರ'ಗಳೆಂದು ಗುರುತು. ಈ ಕೇಂದ್ರಗಳಲ್ಲಿ ಕಾಂತೀಯ ಕ್ಷೇತ್ರಕ್ಕೆ ವೇದನಾಶೀಲವಾಗಿರುವ ಪರಮಾಣುಗಳಿರುತ್ತದೆ. ಕಾಂತೀಯ ಕ್ಷೇತ್ರದಲ್ಲಿ ಬದಲಾವಣೆಯಾದಾಗ, ಎಂದರೆ ಉದಾಹರಣೆಗೆ, ಮನುಷ್ಯನ ಹೃದಯದ ಬಡಿತದಿಂದ ಉತ್ಪಾದನೆಯಾದ ಕಾಂತೀಯ ಕ್ಷೇತ್ರದ ಮೇಲೆ ಪ್ರಭಾವವುಂಟಾದಾಗ ಎನ್‌ವಿ ಕೇಂದ್ರಗಳಲ್ಲಿ ಚಲಾವಣೆಯಾಗಿ, ಅಲ್ಲಿ ಹರಿಯುತ್ತಿರುವ ಲೇಸರ್ ಬೆಳಕಿನ ತೀವ್ರತೆಯಲ್ಲಿ ಏರುಪೇರಾಗುತ್ತದೆ; ಈ ಸಂಜ್ಞೆಯನ್ನು ಬಳಸಿ ಮನುಷ್ಯರನ್ನು ಪತ್ತೆ ಹಚ್ಚಬಹುದು.

ಕೇವಲ ದೀರ್ಘ ವ್ಯಾಪ್ತಿಯ ಕಾಂತಮಾಪಕದಿಂದ ಈ ಕೆಲಸ ಸಾಧ್ಯವೇ? ಇಲ್ಲ. ಏಕೆಂದರೆ ಅಕ್ಕಪಕ್ಕದಲ್ಲಿ ಇನ್ನಿತರೆ ಜೀವಿಗಳಿಂದ ಉತ್ಪತ್ತಿಯಾದ ಅಥವಾ ಇನ್ನಾವುದೇ ಮೂಲದ ಕಾಂತೀಯ ಅಲೆಗಳೂ ಕಾಂತೀಯ ಕ್ಷೇತ್ರದಲ್ಲಿ ಏರುಪೇರನ್ನು ಸೃಷ್ಟಿಸಿ ಹುಡುಕಾಟದ ಪ್ರಕ್ರಿಯೆಗೆ ಅಡ್ಡವಾಗಬಹುದು, ಅದಕ್ಕಾಗಿ ಕೃತಕ ಬುದ್ಧಿಮತ್ತೆಯು ಇಲ್ಲಿ ನೆರವಾಗುವುದು. ಪ್ರತಿ ಪ್ರಾಣಿಯ ಹೃದಯಬಡಿತವೂ ಅದರದ್ದೇ ಆದ ವೈಶಿಷ್ಟ್ಯವಾದ ನಮೂನೆಯನ್ನು ಹೊಂದಿದ್ದು ತನ್ನದೇ ಆದ ಜೈವಿಕ ಲಯದಿಂದ ಹೃದಯದ ವೀಣೆ ಮಿಡಿಯುತ್ತಿರುತ್ತದೆ; ಆ ರಾಗಕ್ಕೆ ತಕ್ಕನಾದ ಕಾಂತೀಯ ಕ್ಷೇತ್ರವೂ ಮೂಡುವುದು ಸಹಜ. ಇದನ್ನೇ 'ವಿದ್ಯುತ್ಕಾಂತೀಯ ವೈಶಿಷ್ಟ್ಯ' ಎನ್ನುವುದು. ಈ ವೈಶಿಷ್ಟ್ಯವನ್ನು ಗುರುತಿಸುವುದು ಕೃತಕ ಬುದ್ಧಿಮತ್ತೆಯಲ್ಲಿನ ಒಂದು ಭಾಗವಾದ 'ನ್ಯೂರಲ್ ನೆಟ್‌ವರ್ಕ್'ನಿಂದ ಸಾಧ್ಯ. ಅದನ್ನು ದೀರ್ಘ ವ್ಯಾಪ್ತಿಯ ಕಾಂತಮಾಪಕದಲ್ಲಿ ಬಳಸಿದಾಗ ಸುತ್ತಮುತ್ತ ಎಷ್ಟೇ ಶಬ್ಧಗಳಿದ್ದರೂ ಗೋಸ್ಟ್ ಮರ್ಮರ್ ಮನುಷ್ಯನ ಹೃದಯಗೀತೆಯನ್ನು ಕೇಳಬಲ್ಲದು!

ಈ ತಂತ್ರಜ್ಞಾನದ ಬಳಕೆಯ ಬಗೆಗೆ ಮಿಶ್ರ ಪ್ರತಿಕ್ರಿಯೆಗಳಿವೆ. ಬಹಳಷ್ಟು ವಿಜ್ಞಾನಿಗಳ ಪ್ರಕಾರ ಅಷ್ಟು ದೂರದಿಂದ ಜೈವಿಕ ಕಾಂತೀಯ ಕ್ಷೇತ್ರವನ್ನು ಗುರುತಿಸುವುದು ಅಸಾಧ್ಯವಾದ ಮಾತು. ಹೀಗೆಂದು ಎಲ್ಲರೂ ಇದನ್ನು ನಿರಾಕರಿಸಿಲ್ಲ. ಇದಕ್ಕೆ ನಿಜವಾದ ಉತ್ತರವು ಅಮೆರಿಕದ ರಕ್ಷಣಾ ಇಲಾಖೆಯಿಂದಲೇ ಬರಬೇಕು!

ವೈರಾಣುಸಂಹಾರಕ್ಕೆ ಪ್ಲಾಸ್ಟಿಕ್ ರಾಳ

• ಬಿಂಡಿಗನವಿಲೆ ಭಗವಾನ್


'ದುರ್ಬಲ ವೈರಸ್ ತನ್ನ ಅತಿಥೇಯನನ್ನು ಕೊಲ್ಲುತ್ತದೆ, ಸಬಲ ವೈರಸ್ ಆತನೊಂದಿಗಿರುತ್ತದೆ' ಎಂದರು ಬ್ರಿಟನ್ನಿನ ಖ್ಯಾತ ಪರಿಸರತಜ್ಞ ಹಾಗೂ ವೈದ್ಯವಿಜ್ಞಾನಿ ಜೇಮ್ಸ್ ಲವ್‌ಲಾಕ್. ಕೃತಕ ಪ್ಲಾಸ್ಟಿಕ್ ನಾರೊಂದು ರೋಗಾಣುಗಳ ವಿರುದ್ಧ ಹೋರಾಡುವುದೆ? ಇದು ನಿಜ.

ವಿಜ್ಞಾನಿಗಳು ಸಿದ್ಧಪಡಿಸಿರುವ ಈ ಪ್ಲಾಸ್ಟಿಕ್ ಪದರವು ರೋಗಾಣುಗಳನ್ನು ನಾಶಪಡಿಸಬಲ್ಲದು. ಇದರಲ್ಲಿ ಬಹುಸೂಕ್ಷ್ಮವಾದ ನ್ಯಾನೊ ಕಂಬಗಳಿರುತ್ತವೆ. ಕಂಬಗಳ ನಡುವಿನ ಅಂತರ ಕಡಿಮೆಯಾದಷ್ಟು ನ್ಯಾನೋ ರಚನೆ ನಾಜೂಕಾಗಿ ಪದರ ಸಮರ್ಥವಾಗಿ ಕಾರ್ಯ ನಿರ್ವಹಿಸುತ್ತದೆ. ಸೋಂಕುನಿವಾರಕ ಕಟು ರಾಸಾಯನಿಕಗಳ ಬದಲು ಈ ವಿಶಿಷ್ಟ ಪ್ಲಾಸ್ಟಿಕ್ ಹೊದಿಕೆ ವೈರಾಣುವಿನ ಹೊರಕೋಶವನ್ನು ಹೊಕ್ಕು ಅದನ್ನು ಛಿದ್ರಗೊಳಿಸುತ್ತದೆ. ಪದರದ್ದು ರಾಸಾಯನಿಕ ಬಲವೆನ್ನುವುದರ ಬದಲು ಯಾಂತ್ರಿಕ ಬಲ ಎನ್ನಬಹುದು.

ಮನುಷ್ಯರನ್ನು ಕಾಡುವ ಬ್ರಾಂಕೈಟಿಸ್ ಮತ್ತು ನ್ಯುಮೋನಿಯಾ ರೋಗಗಳಿಗೆ ಕಾರಣವಾಗುವ ಪ್ಯಾರೈನ್‌ಫ್ಲೂಯೆಂಜ ವೈರಸ್-3 ಮೇಲೆ ನಡೆಸಿದ ಪ್ರಯೋಗ ಯಶಸ್ವಿಯಾಗಿದೆ. ಪ್ಲಾಸ್ಟಿಕ್ ಪದರವು ರೋಗಾಣುಗಳ ಜೊತೆ ಒಂದೇ ತಾಸಿನ ಸಂಪರ್ಕದಲ್ಲಿದ್ದರೂ ಶೇ 94ರಷ್ಟು ವೈರಾಣುಗಳು ನಾಶಗೊಳ್ಳುತ್ತವೆ. ಈ ಪದರದ ಸಾಮರ್ಥ್ಯ ಮತ್ತು ವ್ಯಾಪ್ತಿಯನ್ನು ಹೆಚ್ಚಿಸುವ ಪ್ರಯತ್ನ ನಡೆದಿದೆ. ಭವಿಷ್ಯದಲ್ಲಿ ಮೊಬೈಲ್ ಸ್ಕ್ರೀನ್, ಕೀಬೋರ್ಡ್ ಅಥವಾ ಆಸ್ಪತ್ರೆಗಳಲ್ಲಿನ ಪೀಠೋಪಕರಣಗಳಿಗೆ ಕ್ರಿಮಿನಾಶಕಗಳನ್ನು ಸಿಂಪಡಿಸುವ ಅಗತ್ಯವೆ ಇರದು. ಈ ವಿಶೇಷ ಪ್ಲಾಸ್ಟಿಕ್ ಹಾಳೆಯನ್ನು ಅವುಗಳ ಮೇಲ್ಮೈಗೆ ಅಂಟಿಸಿದರಾಯ್ತು! ಇತರೆ ಸೋಂಕುನಿವಾರಕಗಳೇನೊ ಲಭ್ಯ. ಆದರೆ ಅವು ಬಹುತೇಕ ಗ್ರ್ಯಾಫಿನ್ (ಒಂದು ಪರಮಾಣು ದಪ್ಪದ ಇಂಗಾಲದ ರೂಪ) ಮತ್ತು ಟ್ಯಾನಿಕ್ ಆಮ್ಲವನ್ನು ಒಳಗೊಂಡಿರುತ್ತದೆ. ರಾಸಾಯನಿಕ ಸೋರಿಕೆಯ ಸಂಭವದ ಕಾರಣ ಮಾಸ್ಕ್, ಕೈಗವಸು ಹಾಗೂ ಗಾಗಲ್ ಧರಿಸಿ ಅಂಥವನ್ನು ಬಳಸಿದರೂ ಆತಂಕ ತಪ್ಪಿದ್ದಲ್ಲ. ಸ್ವತಃ ಉಪಯೋಗಿಸುವವರಿಗೆ ಅಪಾಯ ಮತ್ತು ಪರಿಸರಕ್ಕೂ ಹಾನಿ. ಮೇಲಾಗಿ ಅವು ಕಾಲಕ್ರಮೇಣ ದುರ್ಬಲಗೊಳ್ಳುವುದು.

ಅಂದಹಾಗೆ, ಸೋಂಕುನಿವಾರಕಗಳು ಅಧಿಕ ಪ್ರಯಾಸವಿಲ್ಲದೆ ಒರೆಸಬಹುದಾದಂತೆ ಮತ್ತು ಸಿಂಪಡಿಸಬಹುದಾದಂತೆ ಇರುವುದು ಅಪೇಕ್ಷಣೀಯ. ತೇವವು ತಕ್ಕಷ್ಟು ಸಮಯ ಉಳಿದಿರಬೇಕು, ಇದಲ್ಲದೆ ಯಾರಾದರೂ ಮೇಲ್ಮೈಗಳನ್ನು ಮುಟ್ಟಿದರೆ ಅವರಿಗೆ ಸೂಕ್ಷ್ಮಾಣುಜೀವಿಗಳು ತಗುಲದಂತಿರಬೇಕು. ಇವೆಲ್ಲ ಗುಣಗಳು ಇದೀಗ ಆವಿಷ್ಕರಿಸಿದ ವ್ಯಾಧಿಹರ ಪ್ಲಾಸ್ಟಿಕ್ ಹಾಳೆಯಲ್ಲಿದೆ. ಅದು ರೋಗಾಣುಗಳಿಗೆ ಹಾಕಿದ ತಡೆಗೋಡೆಯಾಗಿದೆ. ಮೂಲತಃ ಪ್ಲಾಸ್ಟಿಕ್ ಗುಣ ಅದೇ ಅಲ್ಲವೆ. ಯಾವ ವಸ್ತುವನ್ನೂ ಹೊರಗೂ ಬಿಡದು, ಒಳಗೂ ಬಿಟ್ಟುಕೊಡದು. ಈ ಮೊಂಡುತನವನ್ನೇ ವೈರಾಣವನ್ನು ಛಿದ್ರಗೊಳಿಸಲು ಧನಾತ್ಮಕವಾಗಿ ಅಳವಡಿಸಿಕೊಳ್ಳಬಹುದಲ್ಲ! ಡೊಂಕು ಮೇಲ್ಮೈಯಾದರೆ ನ್ಯಾನೋ ಕಂಬಗಳ ನಡುವಿನ ಅಂತರ ಅಧಿಕವಾಗುವುದು. ಇದಕ್ಕೇನು ಪರಿಹಾರ ಎಂಬ ನಿಟ್ಟಿನಲ್ಲಿ ಉನ್ನತ ಸಂಶೋಧನೆಗಳಾಗಬೇಕಿದೆ.

ಪೆಟ್ರೋಲಿಯಂನಿಂದ ತಯಾರಿಸಿದ ಈ ತೆಳುವಾದ ಪ್ಲಾಸ್ಟಿಕ್ ರಾಳವನ್ನು ಸುಲಭವಾಗಿ ಅಧಿಕಮಟ್ಟದಲ್ಲಿ ಉತ್ಪಾದಿಸಬಹುದು. ಒಂದರ್ಥದಲ್ಲಿ 'ಪರಭಕ್ಷಕ ಪ್ಲಾಸ್ಟಿಕ್' ಎಂದು ಬಣ್ಣಿಸಬಹುದಾದ ಈ ಪದರವನ್ನು ಮರುಹೊಂದಿಸಬೇಕಿಲ್ಲ. ಅದನ್ನು ಸಾಂಪ್ರದಾಯಿಕ ರಾಸಾಯನಿಕಗಳಿಗೆ ಪರ್ಯಾಯವಾಗಿ ಬಳಸಬಹುದು. ಸ್ವಾರಸ್ಯವೆಂದರೆ, ಕಿರಿದಾದ ಆವರಣರಹಿತ ಅಂಗಾಂಶಗಳ ಮೇಲೂ ಪ್ರಯೋಗ ನಡೆದಿದೆ. ಅತಿ ಚಿಕ್ಕದಾದ ಮೇಲ್ಮೈಗಳನ್ನೂ ರೋಗಹರ ಪ್ಲಾಸ್ಟಿಕ್ ವ್ಯಾಪ್ತಿಗೆ ತರಬಹುದೆ ಎನ್ನುವ ಚಿಂತನೆ ಮಹತ್ವದ್ದಾಗಿದೆ.



ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ವಿಜ್ಞಾನ

ಎಸ್ಸೆಸ್ಸೆಲ್ಸಿ–ಪಿಯುಸಿ ಪರೀಕ್ಷೆ ದಿಕ್ಸೂಚಿ

ರಾಸಾಯನಿಕ ಕ್ರಿಯೆಗಳು ಮತ್ತು ಸಮೀಕರಣ

30) ವಿಭಜನ ಕ್ರಿಯೆಯ ಮೂರು ವಿಧಗಳನ್ನು ತಿಳಿಸಿ
ಉತ್ತರ:– ರಾಸಾಯನಿಕ ಕ್ರಿಯೆ ಜರಗುವುದಕ್ಕೆ ಅಗತ್ಯವಿರುವ ಶಕ್ತಿಯನ್ನು ಯಾವ ರೂಪದಲ್ಲಿ ಒದಗಿಸಿದೆ ಎಂಬುದನ್ನು ಆಧರಿಸಿ ವಿಭಜನೆ ಕ್ರಿಯೆಯನ್ನು 3 ವಿಧಗಳಾಗಿ ವಿಂಗಡಿಸಿದ್ದಾರೆ 1) ಉಷ್ಣ ವಿಭಜನೆ 2) ದ್ಯುತಿ ವಿಭಜನೆ 3) ವಿದ್ಯುತ್ ವಿಭನೆ

31) ಸ್ಥಾನಪಲ್ಲಟ ಕ್ರಿಯೆ ಎಂದರೇನು?
ಉತ್ತರ:– ಹೆಚ್ಚು ಕ್ರಿಯಾಪಟುವಾಗಿರುವ ಧಾತುಗಳು ಕಡಿಮೆ ಕ್ರಿಯಾಪಟುತ್ವವುಳ್ಳ ಧಾತುಗಳನ್ನು ವಿಸ್ಥಾಪಿಸುವುದನ್ನು ಒಳಗೊಳ್ಳುವ ರಾಸಾಯನಿಕ ಕ್ರಿಯೆಗಳಿಗೆ ಸ್ಥಾನಪಲ್ಲಟ ಕ್ರಿಯೆಗಳು ಎಂದು ಹೆಸರು, ಉದಾ:– ಕಬ್ಬಿಣವು ತಾಮ್ರಕ್ಕಿಂತ ಹೆಚ್ಚು ಕ್ರಿಯಾಪಟುತ್ವವುಳ್ಳ ಧಾತು, ಆದ್ದರಿಂದ ತಾಮ್ರದ ಸಲ್ಫೇಟಿನಲ್ಲಿರುವ ತಾಮ್ರವನ್ನು ಕಬ್ಬಿಣವು ಸ್ಥಾನಪಲ್ಲಟಗೊಳಿಸುತ್ತದೆ. ".

ಆಮ್ಲಗಳು, ಪ್ರತ್ಯಾಮ್ಲಗಳು ಮತ್ತು ಲವಣಗಳು

I) ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ

1) ಒಂದು ದ್ರಾವಣ ಕೆಂಪು ಬಣ್ಣದ ಲಿಟ್ಮಸ್ ಕಾಗದವನ್ನು ನೀಲಿ ಬಣ್ಣಕ್ಕೆ ಬದಲಾಯಿಸಿದರೆ ಅದರ ಪಿಎಚ್ (PH) ಮೌಲ್ಯವು
ಎ) 1 ಬಿ) 4
ಸಿ) 5 ಡಿ) 10
ಉತ್ತರ:– **(ಡಿ) 10**

2) ಒಂದು ದ್ರಾವಣ ಪುಡಿ ಮಾಡಿದ ಮೊಟ್ಟೆಯ ಚಿಪ್ಪುಗಳೊಂದಿಗೆ ವರ್ತಿಸಿ ಬಿಡುಗಡೆ ಮಾಡುವ ಅನಿಲ ಸುಣ್ಣದ ತಿಳಿನೀರನ್ನು ಬಿಳಿಯಾಗಿಸುತ್ತದೆ. ದ್ರಾವಣ ಇದನ್ನು ಒಳಗೊಂಡಿದೆ.
(a) NaCl (b) HCl
(c) LiCl (d) KCl
ಉತ್ತರ:– **(b) HCl**

3. 10 mL NaOH ದ್ರಾವಣವು 8mL HCl ದ್ರಾವಣದಿಂದ ಸಂಪೂರ್ಣವಾಗಿ ತಟಸ್ಥೀಕರಣಗೊಳಿಸಲ್ಪಡುತ್ತದೆ. ನಾವು ಇದೇ NaOH ದ್ರಾವಣವನ್ನು 20 mLನಷ್ಟು ತೆಗೆದುಕೊಂಡರೆ, ಇದನ್ನು ತಟಸ್ಥಗೊಳಿಸಲು ಬೇಕಾದ HCl ದ್ರಾವಣದ (ಈ ಮೊದಲು ತೆಗೆದುಕೊಂಡ ದ್ರಾವಣ) ಪ್ರಮಾಣ,
(a) 4 mL (b) 8 mL
(c) 12 mL (d) 16 mL.
ಉತ್ತರ:– **(d) 16 mL**

4. ಈ ಕೆಳಗಿನವುಗಳಲ್ಲಿ ಯಾವ ಪ್ರಕಾರದ ಔಷಧಗಳನ್ನು ಅಜೀರ್ಣದ ಚಿಕಿತ್ಸೆಗೆ ಬಳಸಲಾಗುತ್ತದೆ?
(a) ಜೀವನಿರೋಧಕ (b) ನೋವುನಿವಾರಕ
(c) ಆಮ್ಲಶಾಮಕ (d) ನಂಜುನಿವಾರಕ
ಉತ್ತರ:– **(c) ಆಮ್ಲಶಾಮಕ**

5) ಸೋಡಿಯಂ ಬೈ ಕಾರ್ಬೋನೇಟ್ ಸಾರರಿಕ್ತ ಹೈಡ್ರೋಕ್ಲೋರಿಕ್ ಆಮ್ಲದೊಂದಿಗೆ ವರ್ತಿಸಿದಾಗ ಬಿಡುಗಡೆಯಾಗುವ ಅನಿಲ............
ಎ) ಹೈಡ್ರೋಜನ್ ಬಿ) ನೈಟ್ರೋಜನ್
ಸಿ) ಕಾರ್ಬನ್ ಡೈ ಆಕ್ಸೈಡ್
ಡಿ) ನೈಟ್ರೋಜನ್ ಡೈ ಆಕ್ಸೈಡ್
ಉತ್ತರ:– **(ಸಿ) ಕಾರ್ಬನ್ ಡೈ ಆಕ್ಸೈಡ್** (ಜೂನ್– 2021)

6) ಕೆಳಗಿನ ಕೋಷ್ಟಕವನ್ನು ಗಮನಿ

ವಸ್ತು	PH ಮೌಲ್ಯ
P	7,4
Q	2,2
R	10
S	1.2

ಈ ವಸ್ತುಗಳಲ್ಲಿ ಅತ್ಯಂತ ಕಡಿಮೆ ಹೈಡ್ರೋಜನ ಅಯಾನುಗಳನ್ನು ಹೊಂದಿರುವುದು
ಎ) R ಬಿ) S ಸಿ) Q ಡಿ) P
ಉತ್ತರ:– **(ಎ) R** (ಜೂನ್– 2021)

7) ನೀಲಿ ಲಿಟ್ಮಸ್ ಕಾಗದವನ್ನು ಕೆಂಪು ಬಣ್ಣಕ್ಕೆ ಬದಲಾಯಿಸುವ ವಸ್ತು ....
ಎ) ಸುಣ್ಣದ ತಿಳಿ ನೀರು ಬಿ) ಶುದ್ಧ ನೀರು
ಸಿ) ಸೋಡಿಯಂಅ ಹೈಡ್ರಾಕ್ಸೈಡ್ ಡ್ರಾವಣ
ಡಿ) ಜಠರ ರಸ
ಉತ್ತರ:– **(ಡಿ) ಜಠರ ರಸ** (ಮಾರ್ಚ್– 2021)

8) ತುರಿಕೆ ಗಿಡದ ಎಲೆಗಳ ಚುಚ್ಚುವ ಕೂದಲಿನಲ್ಲಿರುವ ಆಮ್ಲ ಯಾವುದು?
ಎ) ಮೆಥೆನೋಯಿಕ್ ಆಮ್ಲ ಬಿ) ಆಕ್ಸಾಲಿಕ್ ಆಮ್ಲ
ಸಿ) ಸಿಟ್ರಿಕ್ ಆಮ್ಲ ಡಿ) ಲ್ಯಾಕ್ಟಿಕ್ ಆಮ್ಲ
ಉತ್ತರ:– **(ಎ) ಮೆಥೆನೋಯಿಕ್ ಆಮ್ಲ** (ಮಾರ್ಚ್– 2021)

9) ಒಂದು ದ್ರಾವಣದ ಪಿಎಚ್ (PH) ಮೌಲ್ಯವು ಹೆಚ್ಚಾದಂತೆ
ಎ) ಪ್ರತ್ಯಾಮ್ಲೀಯ ಲಕ್ಷಣ ಕಡಿಮೆಯಾಗುತ್ತದೆ, ಮತ್ತು OH^- ಅಯಾನುಗಳ ಸಂಖ್ಯೆ ಹೆಚ್ಚುತ್ತದೆ.
ಬಿ) ಆಮ್ಲೀಯ ಲಕ್ಷಣ ಹೆಚ್ಚಾಗುತ್ತದೆ, ಮತ್ತು H^+ ಅಯಾನುಗಳ ಸಂಖ್ಯೆ ಕಡಿಮೆಯಾಗುತ್ತದೆ
ಸಿ) ಪ್ರತ್ಯಾಮ್ಲೀಯ ಲಕ್ಷಣ ಹೆಚ್ಚಾಗುತ್ತದೆ, ಮತ್ತು OH^- ಅಯಾನುಗಳ ಸಂಖ್ಯೆ ಹೆಚ್ಚುತ್ತದೆ.
ಡಿ) ಆಮ್ಲೀಯ ಲಕ್ಷಣ ಕಡಿಮೆಯಾಗುತ್ತದೆ, ಮತ್ತು H^- ಅಯಾನುಗಳ ಸಂಖ್ಯೆ ಹೆಚ್ಚುತ್ತದೆ.
ಉತ್ತರ:–(ಸಿ)ಪ್ರತ್ಯಾಮ್ಲೀಯ ಲಕ್ಷಣ ಹೆಚ್ಚಾಗುತ್ತದೆ, ಮತ್ತು OH^- ಅಯಾನುಗಳ ಸಂಖ್ಯೆ ಹೆಚ್ಚುತ್ತದೆ. (ಮಾರ್ಚ್– 2020)

10) ಜಲೀಯ ದ್ರಾವಣದಲ್ಲಿ ಅಪೂರ್ಣವಾಗಿ ವಿಯೋಜನೆ ಹೊಂದುವ ಸಂಯುಕ್ತಗಳ ಗುಂಪು (ಮಾರ್ಚ್– 2020)
ಎ) ಹೈಡ್ರೋಕ್ಲೋರಿಕ್ ಆಮ್ಲ, ನೈಟ್ರಿಕ್ ಆಮ್ಲ
ಬಿ) ಕಾರ್ಬೋನಿಕ್ ಆಮ್ಲ, ಫಾಸ್ಪಾರಿಕ್ ಆಮ್ಲ
ಸಿ) ಹೈಡ್ರೋಕ್ಲೋರಿಕ್ ಆಮ್ಲ, ಫಾಸ್ಪರಿಕ ಆಮ್ಲ
ಡಿ) ತಾಮ್ರದ ಸಲ್ಫೇಟ್ ದ್ರಾವಣ, ಸಕ್ಕರೆ ದ್ರಾವಣ
ಉತ್ತರ:– (ಬಿ) ಕಾರ್ಬೋನಿಕ್ ಆಮ್ಲ, ಫಾಸ್ಪಾರಿಕ್ ಆಮ್ಲ

11) ಸೋಡಿಯಂ ಕಾರ್ಬೋನೇಟ್ ಸಾರರಿಕ್ತ ಹೈಡ್ರೋಕ್ಲೋರಿಕ್ ಆಮ್ಲದೊಂದಿಗೆ ವರ್ತಿಸಿದಾಗ ಬಿಡುಗಡೆಯಾಗುವ ಅನಿಲ ...
ಎ) ಕಾರ್ಬನ್ ಡೈ ಆಕ್ಸೈಡ್ (ಮಾರ್ಚ್– 2021)
ಬಿ) ನೈಟ್ರೋಜನ್ ಡೈ ಆಕ್ಸೈಡ್
ಸಿ) ಹೈಡ್ರೋಜನ್ ಡಿ) ಕ್ಲೋರಿನ್
ಉತ್ತರ:– (ಎ) ಕಾರ್ಬನ್ ಡೈ ಆಕ್ಸೈಡ್

12) **P, Q, R ಮತ್ತು S ದ್ರಾವಣಗಳ ಮೌಲ್ಯ ಕ್ರಮವಾಗಿ 7, 8, 1.0, 13.0 ಮತ್ತು 1.4 ಇವುಗಳ ಹೆಚ್ಚಿನ H^+ ಅಯಾನುಗಳ ಸಾರತೆ ಹೊಂದಿರುವ ದ್ರಾವಣವನ್ನು ತಿಳಿಸಿ**
ಎ) **P** ಬಿ) **Q**
ಸಿ) **R** ಡಿ) **S**
ಉತ್ತರ:– (ಬಿ) **Q** (ಮಾರ್ಚ್– 2018)

ಪಿಯುಸಿ ಪರೀಕ್ಷೆ ದಿಕ್ಸೂಚಿ

CHEMISTRY

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

Types of Solutions

25. Name the types of azeotropes or azeotropic mixtures.
Ans: Azeotropic mixtures are of two types: (i) Minimum boiling azeotropes (1) Maximum boiling azte

26. What are minimum boiling azeotropes? Give an example.
Ans: The solutions which show large positive deviation from Raoult's law are called minimum boiling azeotropea. They boil at lower temperature than the boiling point of the components.
Example: 95% Ethylalcohol and 5% water by volume (rectified spirit). This mixture boils at 78.15°C Which is lower than that of pure ethyl alcohol (78.5°C pure water (100°C)

27. What are maximum boiling azeotropes? Give an examples.
Ans: Solutions which shows the large negative deviations from Raoult's law are called maximen boiling azeotropes. Example: 68% nitric acid and 32% water by mass with a boiling point of 393.5K

Fill in the blanks
1) In deep sea diving the disease called Bends is caused due to the dissolution of ________ in the blood.
Ans:- nitrogen
2) At Altitude, concentration of ________ in the blood is low. people feel weak and unable to think properly this disease is called anoxia.
Ans:- oxygen
3)Solutions having the same osmotic pressure are called___________
Ans:- isotonic solutions
4) A solution with lower osmotic pressure is called___________ with respect to a more concentrated solution .
Ans:- hypertonic,
5) The semipermeable membrane generally used in the reverse osmosis is made up of________ .
Ans:- cellulose acetate or polyamide
6) Osmotic pressure is the minimum pressure that must be applied on the__________ side to prevent the entry of solvent from solvent to solution.
Ans:- solution
7) In osmosis, there is a net flow of solvent from _______ to solution.
Ans:- higher solvent concentration
8) If van't Hoff factor is less than unity this shows that the solute undergoes_______ in the solution
Ans:- association
9) If van't Hoff factor is more than unity this shows that the solute undergoes_______ in the solution.
Ans:- dissociation
10) The constant boiling mixture of two miscible liquids of a definite mole fraction is called ________
Ans: **an** azeotrope

ELECTROCHEMISTRY

1. What is electrochemistry?
Ans:- Electrochemistry is the branch of chemistry which deals with the interconversions of chemical and electrical energies and study of the behaviour of electrolytes.

2. What are electrolytes?
Ans:- A compound which conducts electricity in the molten state and in the aqueous solution is called an electrolyte. Eg:- NaCl, $CuSO_4$, HCl, H_2SO_4, NaOH, CH_3COOH etc.,

3. What are non- electrolytes?
Ans:- A compound which does not conduct electricity in the molten state and in the aqueous solution is called an electrolyte. Eg:- Urea, glucose, benzene, ethyl alcohol etc.,

4. What are electrolytic cells?
Ans:- The electrolytic cells are the cells that convert electrical energy into the chemical energy.

5. State Faraday's I law of electrolysis.
Ans:- Faraday's I law of electrolysis states that - The amount of chemical reaction which occurs at any electrode during electrolysis by a current is proportional to the quantity of electricity passed through the electrolyte (solution or melt).

6. State Faraday's II law of electrolysis.
Ans:-Faraday's II law of electrolysis states that - The amounts of different substances liberated by the same quantity of electricity passing through the electrolytic solution are proportional to their chemical equivalent weights.

7. What is a Galvanic cell?
Ans:- A device in which electricity is produced using a spontaneous chemical reaction involving oxidation and reduction is called an electrochemical or Galvanic cell *Eg:-* Daniel cell, Leclanche cell etc.,

8. What are conductors?
Ans:- The substances which conducts electrical charges is called a conductor.
Eg:- Metals like copper, silver and the solutions of common salt, hydrochloric acid etc.,

9. What are insulators?
Ans:- The substances that do not allow electricity to pass through them are called the insulators.
Eg:- Glass, rubber, alcohol etc.,

10. Mention the types of conductors.
Ans:- The two types of conductors are –
(a) metallic conductors
(b) electrolytic conductors

11. What are metallic conductors?
Ans:- Metallic conductors are the metals that conduct electricity by allowing the flow of electrons through them. They are also called as the electronic conductors. *Eg:-* Copper, aluminium.

12. Name a non-metallic conductor.
Ans:- Graphite.

(Contd…….)

‘ಏನೂ ಹರಿಯದ ನಾನೇನು ಸಲಹೆ ಕೊಡಲಿ?’

ಫೋಟೊಕ್ಕಾಗಿ ಗಣ್ಯರ ಮನೆಗೆ, ಎಲ್ಲವನ್ನೂ ನಾನು ಬಲ್ಲೆ ಸಿ.ಎಂ ಭೇಟಿ ಬಗ್ಗೆ ಎಚ್.ಡಿ.ಕುಮಾರಸ್ವಾಮಿ ವ್ಯಂಗ್ಯ

ಪ್ರಜಾವಾಣಿ ವಾರ್ತೆ

ಮಂಡ್ಯ: ‘ಎರಡು ಬಾರಿ ಮುಖ್ಯಮಂತ್ರಿ ಆದ ಕುಮಾರಸ್ವಾಮಿ ಏನು ಹರಿದಿದ್ದಾರೆ ಎಂದು ಕೇಳಿದವ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನನ್ನ ಬಳಿ ಬಂದು ಏನು ಸಲಹೆ ಕೇಳುತ್ತಾರೆ. ಏನನ್ನೂ ಹರಿಯದ ನಾನು ಅವರಿಗೆ ಏನೆಂದು ಸಲಹೆ ನೀಡಲಿ’ ಎಂದು ಕೇಂದ್ರ ಉಕ್ಕು ಮತ್ತು ಬೃಹತ್ ಕೈಗಾರಿಕೆ ಸಚಿವ ಎಚ್.ಡಿ.ಕುಮಾರಸ್ವಾಮಿ ವ್ಯಂಗ್ಯವಾಗಿ ಪ್ರತಿಕ್ರಿಯಿಸಿದರು.

‘ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ಅವರಿಗೆ ಗಣ್ಯರಿಂದಲೇ ಫೋಟೊ ಬೇಕಿದೆ. ಅದಕ್ಕಾಗಿ ಅವರು ಎಲ್ಲೆಡೆ ಹೋಗುತ್ತಿದ್ದಾರೆ ಅಷ್ಟೇ. ಎಲ್ಲವನ್ನೂ ನಾನು ಬಲ್ಲೆ. ‘ಅತಿ ವಿನಯಂ ಧೂರ್ತ ಲಕ್ಷಣಂ’ ಎಂಬ ಮಾತು ನನಗೆ ಪದೇಪದೇ ನೆನಪಿಗೆ ಬರುತ್ತಿದೆ’ ಎಂದು ಕೈ ಮುಗಿದು ನಸು ನಕ್ಕರು.

ಡಿ.ಕೆ. ಶಿವಕುಮಾರ್ ಭೇಟಿ ಕುರಿತು ಮಂಗಳವಾರ ಶ್ರೀರಂಗಪಟ್ಟಣ ವಿಧಾನಸಭಾ ಕ್ಷೇತ್ರದ ತಗ್ಗಹಳ್ಳಿಯಲ್ಲಿ ಸುದ್ದಿಗಾರರು ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ‘ನನ್ನನ್ನು ಈ ಹಿಂದೆ ಮನಬಂದಂತೆ ಟೀಕಿಸಿದ್ದಾರೆ. ಎಲ್ಲದಕ್ಕೂ ಸಾಕ್ಷಿ ಗುಡ್ಡೆ ಕೇಳುವ ಅವರ ಭೇಟಿ ಏಕೆ?’ ಎಂದರು.

‘ಶಿವಕುಮಾರ್ ಸಿ.ಎಂ ಆಗಿರುವುದರಿಂದ ಒಕ್ಕಲಿಗರ ಮತದ ಮೇಲೆ ಯಾವುದೇ ವ್ಯತ್ಯಾಸವಾಗುವುದಿಲ್ಲ. ನಮ್ಮ ಮತ ನಮಗೆ ಬೀಳಲಿದೆ, ಅವರ ಮತ ಅವರಿಗೆ ಬೀಳಲಿದೆ. ಅವರು ಮುಖ್ಯಮಂತ್ರಿ ಆಗಿರಬಹುದು. ಆದರೆ, ಅದರಿಂದ ಯಾವುದೇ ವ್ಯತ್ಯಾಸ ಆಗುವುದಿಲ್ಲ’ ಎಂದರು.

ದೊಡ್ಡ ಗೌಡರು ಅರ್ಜಿ ಹಾಕಿಲ್ಲ: ರಾಜ್ಯಸಭೆ ಟಿಕೆಟ್‌ಗೆ ದೇವೇಗೌಡರು ಅರ್ಜಿಯೇ ಹಾಕಿಲ್ಲ. ಆದರೆ ಕಾಂಗ್ರೆಸ್ ನಾಯಕರಿಗೆ ಗೌಡರ ಬಗ್ಗೆ ಅತಿಯಾದ ಅನುಕಂಪ ಬಂದಿದೆ. ಜೆಡಿಎಸ್ ಮತ್ತು ಬಿಜೆಪಿ ನಡುವಿನ ಮೈತ್ರಿಯಲ್ಲಿ ಬಿರುಕು ಸೃಷ್ಟಿಸಲು ಯತ್ನಿಸುತ್ತಿದ್ದಾರೆ ಎಂದು ಕುಟುಕಿದರು.

ದೇವೇಗೌಡರದ್ದು ಹೋರಾಟದ ಬದುಕು. ಅಧಿಕಾರಕ್ಕಾಗಿ ಹಪಾಹಪಿಸಿದವರಲ್ಲ. ಸ್ವಾಭಿಮಾನಕ್ಕೆ ಧಕ್ಕೆಯಾದಾಗ ಪ್ರಧಾನಿ ಸ್ಥಾನವನ್ನೇ ಬಿಟ್ಟು ಬಂದವರು. ಅದೆಲ್ಲವೂ ಕಾಂಗ್ರೆಸ್ ಪಕ್ಷಕ್ಕೆ ಗೊತ್ತಿಲ್ಲವೇ ಎಂದು ಪ್ರಶ್ನಿಸಿದರು.



ಶ್ರೀರಂಗಪಟ್ಟಣ ವಿಧಾನಸಭಾ ಕ್ಷೇತ್ರದ ತಗ್ಗಹಳ್ಳಿ ಗ್ರಾಮದಲ್ಲಿ ಶಾಲಾ ಕೊಠಡಿ ಉದ್ಘಾಟಿಸಿದ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ವಿದ್ಯಾರ್ಥಿಗಳನ್ನು ಮಾತನಾಡಿಸಿದರು. ಮಾಜಿ ಶಾಸಕ ರವೀಂದ್ರ ಶ್ರೀಕಂಠಯ್ಯ ಪಾಲ್ಗೊಂಡರು

> ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ಅವರನ್ನು ರಾಜ್ಯಸಭೆಗೆ ಕಳುಹಿಸದೇ ಬಿಜೆಪಿಯು ಅಗೌರವ ತೋರಿದೆ
> **ಕೆ.ಎಂ. ಉದಯ್,** ಕಾಂಗ್ರೆಸ್ ಶಾಸಕ, ಮದ್ದೂರು


‘ಕಳೆದ ಬಾರಿ ದೇವೇಗೌಡರ ವಿರುದ್ಧ ಇಷ್ಟೂ ಅಭ್ಯರ್ಥಿ ನಿಲ್ಲುವ ಅವಕಾಶ ಇರಲಿಲ್ಲ. ಆ ಸಂದರ್ಭದಲ್ಲಿ ಯಾವುದೇ ಪಕ್ಷಕ್ಕೆ ತನ್ನ ಅಭ್ಯರ್ಥಿಯನ್ನು ನಿಲ್ಲಿಸಿ ಗೆಲ್ಲಿಸಿಕೊಳ್ಳುವಷ್ಟು ಸಂಖ್ಯಾಬಲ ಇರಲಿಲ್ಲ. ನಮ್ಮ ಪಕ್ಷಕ್ಕೆ ಸಂಖ್ಯಾಬಲ ಇತ್ತು. ಹೀಗಾಗಿ ರಾಜ್ಯಸಭೆಗೆ ದೇವೇಗೌಡರು ಆಯ್ಕೆಯಾದರು. ಅವರು ಕಾಂಗ್ರೆಸ್ ಬೆಂಬಲದಿಂದ ರಾಜ್ಯಸಭೆಗೆ ಹೋಗಲಿಲ್ಲ’ ಎಂದು ತಿರುಗೇಟು ನೀಡಿದರು.

ಯತ್ನಾಳ ಮತ ಕೇಳುತ್ತೇವೆ: ಎಚ್‌ಡಿಕೆ

ವಿಧಾನ ಪರಿಷತ್ ಚುನಾವಣೆಯಲ್ಲಿ ನಮಗೂ ಎರಡು ಮತ ಬೇಕು, ಕಾಂಗ್ರೆಸ್ ಪಕ್ಷಕ್ಕೂ ಎರಡು ಮತ ಬೇಕು. ಬಿಜೆಪಿಯಿಂದ ಉಚ್ಚಾಟನೆಗೊಂಡಿರುವ ಬಸನಗೌಡ ಪಾಟೀಲ ಯತ್ನಾಳ ಅವರನ್ನು ಮತ ಹಾಕುವಂತೆ ಕೇಳುತ್ತೇವೆ. ನಮ್ಮ ಪ್ರಯತ್ನ ನಾವು ಮಾಡುತ್ತೇವೆ. ಕಾಂಗ್ರೆಸ್ ನವರಿಗೆ ಹಣ ಬಲ, ಅಧಿಕಾರ ಬಲ ಇದೆ ಎಂದು ಕುಮಾರಸ್ವಾಮಿ ಹೇಳಿದರು. ‘ಮಾಜಿ ಸಚಿವ ಜಮೀರ್ ಅಹಮದ್ ಖಾನ್ ಅವರು ನನ್ನ ಜತೆ ಸಂಪರ್ಕ ಹೊಂದಿಲ್ಲ. ಕಾಂಗ್ರೆಸ್‌ನ ಯಾವ ನಾಯಕರನ್ನು ನಾನು ಸಂಪರ್ಕಿಸಿಲ್ಲ’ ಎಂದು ಸ್ಪಷ್ಟಪಡಿಸಿದರು.

> ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ಅವರನ್ನು ಎನ್‌ಡಿಎ ಅಭ್ಯರ್ಥಿಯಾಗಿ ಕಣಕ್ಕಿಳಿಸುವುದಿಲ್ಲ ಎಂದು ಬಿಜೆಪಿ ಮೊದಲೇ ತಿಳಿಸಿದ್ದರೆ, ಕಾಂಗ್ರೆಸ್ ಪಕ್ಷ ಅವರನ್ನು ರಾಜ್ಯಸಭೆಗೆ ಅಭ್ಯರ್ಥಿಯನ್ನಾಗಿ ಸೂಚಿಸುತ್ತಿತ್ತು. ಅವರ ಅನುಭವ ರಾಜ್ಯಸಭೆಗೆ ಅಗತ್ಯವಿದ್ದು, ಅವರನ್ನು ಆಯ್ಕೆ ಮಾಡದೆ ಬಿಜೆಪಿ ಅವಮಾನಿಸಿದೆ
> **ಎಂ. ಲಕ್ಷ್ಮಣ,** ಕೆಪಿಸಿಸಿ ವಕ್ತಾರ

ಹುಳಿ ಹಿಂಡಲು ಕಾಂಗ್ರೆಸ್ ಯತ್ನ: ವಿಜಯೇಂದ್ರ



ಬೆಂಗಳೂರು: ಕಾಂಗ್ರೆಸ್‌ನ ಕರ್ನಾಟಕ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಮತ್ತು ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್ ಅವರು ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಅವರ ಕುರಿತು ಮೊಸಳೆ ಕಣ್ಣೀರು ಸುರಿಸುವ ಅವಶ್ಯ ಇಲ್ಲ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದ್ದಾರೆ.

ಈ ಕುರಿತು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿರುವ ಅವರು, ದೇಶದ ಅತ್ಯುನ್ನತ ಪ್ರಧಾನಮಂತ್ರಿ ಸ್ಥಾನ ಅಲಂಕರಿಸಿದ ಮೊದಲ ಹೆಮ್ಮೆಯ ಕನ್ನಡಿಗ ದೇವೇಗೌಡರು. ಅವರನ್ನು ಪ್ರಧಾನಿ ಪದವಿಯಿಂದ ಕೆಳಗಿಳಿಸಿದ ಕುಖ್ಯಾತಿ ಕಾಂಗ್ರೆಸ್ ಪಕ್ಷದ ಮೇಲಿದೆ ಎಂದಿದ್ದಾರೆ.

ದೇವೇಗೌಡರನ್ನು ರಾಜಕೀಯ ಜೀವನದ ಉದ್ದಕ್ಕೂ ಕಾಡಿದ್ದು, ಅವರ ಪಕ್ಷವನ್ನು ಇಬ್ಭಾಗ ಮಾಡಲು ಯತ್ನಿಸಿದ್ದು ಕಾಂಗ್ರೆಸ್. ಇಷ್ಟಾಗಿಯೂ ಕೊಳಕು ರಾಜಕಾರಣ ಮಾಡುವುದನ್ನು ನಿಲ್ಲಿಸದ ಕಾಂಗ್ರೆಸ್ಸಿಗರು, ದೇವೇಗೌಡರ ಕುರಿತು ಕೃತಕ ಕಾಳಜಿಯ ಮಾತನಾಡುತ್ತಿರುವ ಪರಿ ಹಾಸ್ಯಾಸ್ಪದವಾಗಿದೆ ಎಂದು ಟೀಕಿಸಿದ್ದಾರೆ.

ಬಿಜೆಪಿಯು ದೇವೇಗೌಡರನ್ನು ಅತ್ಯಂತ ಗೌರವದಿಂದ ನಡೆಸಿಕೊಂಡಿದೆ. ಭಾರತದ ಸಮಗ್ರತೆ ಉಳಿಯಬೇಕಾದರೆ, ಅಭಿವೃದ್ಧಿ ಹೊಂದಬೇಕಾದರೆ ಅದು ಪ್ರಧಾನಿ ಮೋದಿ ಅವರ ಆಡಳಿತದಿಂದ ಮಾತ್ರ ಸಾಧ್ಯ ಎಂಬ ನಂಬಿಕೆಯಿಂದ ದೇವೇಗೌಡರು ಬಿಜೆಪಿಯನ್ನು ಬೆಂಬಲಿಸಿ, ಎನ್‌ಡಿಎ ಕೂಟಕ್ಕೆ ಜೆಡಿಎಸ್ ಅನ್ನು ಸೇರಿಸಿದರು. ಇದನ್ನು ಸಹಿಸಲಾಗದ ಸ್ಥಿತಿಯಲ್ಲಿರುವ ಕಾಂಗ್ರೆಸ್ಸಿಗರು ದೇವೇಗೌಡರ ಹೆಸರನ್ನು ಬಳಸಿಕೊಂಡು ರಾಜಕಾರಣ ಮಾಡಲು ಹೊರಟಿರುವುದು ನಾಚಿಕೆಗೇಡಿನ ಪರಮಾವಧಿ ಎಂದಿದ್ದಾರೆ.

ದೇವೇಗೌಡರ ಹಿರಿತನ, ಸೇವೆ ಉಲ್ಲೇಖಿಸಿ ಸಂಸತ್ತಿನಲ್ಲಿ ಮಾತನಾಡಿದ್ದ ಪ್ರಧಾನಿಯವರು, ಗೌಡರ ಕೊಡುಗೆ, ಸಾಧನೆಯನ್ನು ಮುಕ್ತಕಂಠದಿಂದ ಪ್ರಶಂಸಿಸಿದ್ದಾರೆ. ರಾಷ್ಟ್ರವನ್ನು ಮುನ್ನಡೆಸುವ ನಿಟ್ಟಿನಲ್ಲಿ ಅವರ ಮಾರ್ಗದರ್ಶನ ಸದಾ ತಮಗೆ ಬೇಕೆಂದು ಹೇಳಿದ್ದಾರೆ. ಈ ನಿಟ್ಟಿನಲ್ಲಿ ಅತ್ಯುತ್ತಮ ರಾಜಕೀಯ ಹಾಗೂ ವ್ಯಕ್ತಿಗತ ಗೌರವಗಳ ಬಾಂಧವ್ಯವಿರುವ ದೇವೇಗೌಡರೊಂದಿಗಿನ ಸಂಬಂಧಕ್ಕೆ ಹುಳಿ ಹಿಂಡುವ ಮಾತುಗಳು ‘ಕಾಂಗ್ರೆಸ್ಸಿಗರ ವಿಕೃತ ನಡೆ’ ಎನ್ನುವುದನ್ನು ಕರ್ನಾಟಕದ ಜನತೆ ಅರ್ಥೈಸಿಕೊಳ್ಳದಷ್ಟು ಮುಗ್ಧರಲ್ಲ ಎನ್ನುವ ತಿಳಿವಳಿಕೆ ಕಾಂಗ್ರೆಸ್‌ಗಿರಲಿ ಎಂದು ಹೇಳಿದ್ದಾರೆ.

ರಾಜ್ಯಸಭೆ, ಪರಿಷತ್ ಚುನಾವಣೆ: ಎಲ್ಲ ನಾಮಪತ್ರಗಳು ಕ್ರಮಬದ್ಧ

ಬೆಂಗಳೂರು: ವಿಧಾನಸಭೆಯಿಂದ ರಾಜ್ಯಸಭೆಗೆ ಆಯ್ಕೆಯಾಗಬೇಕಾದ ನಾಲ್ಕು ಸ್ಥಾನಗಳಿಗೆ ಇದೇ 18 ರಂದು ನಡೆಯುವ ಚುನಾವಣೆಗೆ ಕಾಂಗ್ರೆಸ್ ಮತ್ತು ಬಿಜೆಪಿ ಅಭ್ಯರ್ಥಿಗಳು ಸಲ್ಲಿಸಿರುವ ನಾಮಪತ್ರಗಳು ಕ್ರಮಬದ್ಧವಾಗಿವೆ.

ಇದೇ 11 ರಂದು ನಾಮಪತ್ರ ಪಡೆಯಲು ಕೊನೆಯ ದಿನವಾಗಿದೆ. ಯಾರೊಬ್ಬರೂ ನಾಮಪತ್ರ ಹಿಂದಕ್ಕೆ ಪಡೆಯದೇ ಇದ್ದರೆ ನಾಲ್ವರೂ ಅವಿರೋಧವಾಗಿ ಆಯ್ಕೆಗೊಳ್ಳಲಿದ್ದಾರೆ.

ರಾಜ್ಯಸಭೆಗೆ ಕಾಂಗ್ರೆಸ್‌ನಿಂದ ಎಂ.ಮಲ್ಲಿಕಾರ್ಜುನ ಖರ್ಗೆ, ಪವನ್ ಖೇರ, ಮನ್ಸೂರ್ ಅಲಿ ಖಾನ್ ಮತ್ತು ಬಿಜೆಪಿಯಿಂದ ಪ್ರೊ.ಎಂ.ನಾಗರಾಜ್ ಅವರು ಸ್ಪರ್ಧಿಸಿದ್ದಾರೆ.

ವಿಧಾನಪರಿಷತ್ ಚುನಾವಣೆಗೆ ನಾಮಪತ್ರ ಸಲ್ಲಿಸಿರುವ ಕಾಂಗ್ರೆಸ್‌ನ ತಿಪ್ಪಣ್ಣಪ್ಪ ಕಮಕನೂರ, ಪಿ.ವಿ. ಮೋಹನ್, ಬಿ.ಕೆ.ಹರಿಪ್ರಸಾದ್, ಶಿವಣ್ಣ ಬಿ.ಎಸ್, ವಿನಯ್ ಕಾರ್ತಿಕ್, ಬಿಜೆಪಿಯ ರಘು ಕೌಟಿಲ್ಯ, ಲಿಂಗರಾಜ ಪಾಟೀಲ ಮತ್ತು ಜೆಡಿಎಸ್‌ನ ಗೋವಿಂದರಾಜ್ ಅವರ ನಾಮಪತ್ರಗಳು ಕ್ರಮಬದ್ಧವಾಗಿವೆ ಎಂದು ಚುನಾವಣಾಧಿಕಾರಿ ಎಂ.ಕೆ. ವಿಶಾಲಾಕ್ಷಿ ಅವರು ತಿಳಿಸಿದ್ದಾರೆ. ಪರಿಷತ್ತಿನ ಏಳು ಸ್ಥಾನಗಳಿಗೆ ಎಂಟು ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿದ್ದಾರೆ. ಯಾವುದೇ ಅಭ್ಯರ್ಥಿ ನಾಮಪತ್ರ ಹಿಂದಕ್ಕೆ ಪಡೆಯದಿದ್ದರೆ, ಜೂನ್ 18 ರಂದು ಚುನಾವಣೆ ನಡೆಯಲಿದೆ.

ತನಿಖೆಗೆ ತಡೆಯಾಜ್ಞೆ: ಮಹಿಳಾ ಪಿಎಸ್‌ಐಗೆ ₹1 ಲಕ್ಷ ದಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಸ್ತೆ ರಂಪಾಟದ ಕುರಿತು ಪ್ರಕರಣ ದಾಖಲಿಸಲು ಪೊಲೀಸ್ ಠಾಣೆಗೆ ಬಂದಿದ್ದ ವಕೀಲೆಯೊಬ್ಬರ ಮೇಲೆ ಹಲ್ಲೆ ನಡೆಸಿದ ಆರೋಪ ಎದುರಿಸುತ್ತಿರುವ ಮಹಿಳಾ ಸಬ್ ಇನ್‌ಸ್ಪೆಕ್ಟರ್‌ವೊಬ್ಬರು, ಹೈಕೋರ್ಟ್ ನೀಡಿದ್ದ ಆದೇಶ ಮರೆಮಾಚಿ ರಜಾಕಾಲದ ಪೀಠದಲ್ಲಿ ತನಿಖೆಗೆ ತಡೆಯಾಜ್ಞೆ ಪಡೆದುಕೊಂಡ ಕ್ರಮಕ್ಕೆ ಕಿಡಿ ಕಾರಿರುವ ಹೈಕೋರ್ಟ್ ಅವರಿಗೆ 1 ಲಕ್ಷ ದಂಡ ವಿಧಿಸಿದೆ.

ತಮ್ಮ ವಿರುದ್ಧದ ಪ್ರಕರಣ ರದ್ದುಪಡಿಸುವಂತೆ ಕೋರಿ ಸಬ್ ಇನ್‌ಸ್ಪೆಕ್ಟರ್ ಟಿ.ಬಿ.ಪದ್ಮಾವತಿ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆಯಲ್ಲಿ ಅರ್ಜಿದಾರರ ನಡೆಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ ನ್ಯಾಯಪೀಠ, ‘ಇವರು ತಮ್ಮನ್ನು ತಾವು ಏನೆಂದು ಭಾವಿಸಿಕೊಂಡಿದ್ದಾರೆ? ಈ ಪೀಠವು ಎಫ್‌ಐಆರ್ ದಾಖಲಿಸಲು ನೀಡಿದ್ದ ಆದೇಶವನ್ನು ರಜಾಕಾಲದ ಪೀಠದ ಮುಂದೆ ಉಲ್ಲೇಖಿಸದೆ ಮಧ್ಯಂತರ ಆದೇಶ ಪಡೆದಿರುವುದು ಸತ್ಯದ ಮರೆಮಾಚುವಿಕೆ ಅಲ್ಲವೇ’ ಎಂದು ಖಾರವಾಗಿ ಪ್ರಶ್ನಿಸಿ ದಂಡ ವಿಧಿಸಿತು.

‘ಪ್ರಕರಣಕ್ಕೆ ಸಂಬಂಧಿಸಿದ ಅಂತಿಮ ವರದಿ ಸಲ್ಲಿಸುವ ಮುನ್ನ ತನಿಖಾ ವರದಿಯನ್ನು ಈ ನ್ಯಾಯಪೀಠದ ಮುಂದಿರಿಸಬೇಕು’ ಎಂದು ನಿರ್ದೇಶಿಸಿದ ನ್ಯಾಯಪೀಠ, ದಂಡದ ಮೊತ್ತವನ್ನು ಮುಂದಿನ 8 ವಾರಗಳಲ್ಲಿ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರಕ್ಕೆ ಪಾವತಿಸುವಂತೆ ನಿರ್ದೇಶಿಸಿತು.

ಪ್ರಕರಣವೇನು?: ರಸ್ತೆ ರಂಪಾಟದ ಸಂತ್ರಸ್ತ ವಕೀಲೆಯೊಬ್ಬರು ದೂರು ನೀಡಲು ಪೊಲೀಸ್ ಠಾಣೆಗೆ ಹೋದಾಗ ಅವರನ್ನು ಗಂಟೆಗಟ್ಟಲೆ ಕಾಯಿಸಲಾಗಿತ್ತು. ಇದರಿಂದ ಆಕ್ರೋಶಗೊಂಡಿದ್ದ ವಕೀಲೆ ಅಲ್ಲಿದ್ದ ಮೇಜಿನ ಮೇಲಿನ ಕಡತಗಳನ್ನು ಕೆಳಗೆ ತಳ್ಳಿದ್ದರು. ಈ ವೇಳೆ ಅಲ್ಲಿಗೆ ಬಂದ ಪದ್ಮಾವತಿ, ವಕೀಲೆಯ ಮೇಲೆ ಹಲ್ಲೆ ನಡೆಸಿ ಬೂಟು ಕಾಲಿನಿಂದ ಒದ್ದಿದ್ದರು. ಈ ದೃಶ್ಯ ಸಿಸಿಟಿವಿ ಕ್ಯಾಮರಾದಲ್ಲಿ ಸೆರೆಯಾಗಿತ್ತು.

ತಮ್ಮ ವಿರುದ್ಧ ದಾಖಲಾಗಿದ್ದ ಎಫ್ ಐಆರ್ ರದ್ದುಪಡಿಸುವಂತೆ ಕೋರಿ ವಕೀಲೆ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಈ ಅರ್ಜಿಯ ವಿಚಾರಣೆ ನಡೆಸಿದ್ದ ನ್ಯಾಯಪೀಠ, ವಕೀಲೆಯ ವಿರುದ್ಧದ ಎಫ್‌ಐಆರ್ ರದ್ದುಪಡಿಸಲು ನಿರಾಕರಿಸಿತ್ತು. ಆದರೆ, ‘ಬೂಟುಗಾಲಿನಿಂದ ಒದ್ದಿದ್ದ ಮಹಿಳಾ ಪಿಎಸ್ ಐ ವಿರುದ್ಧ ಎಫ್ ಐಆರ್ ದಾಖಲಿಸಿ ತನಿಖೆ ನಡೆಸಬೇಕು. ಜೊತೆಗೆ ಇಲಾಖಾ ತನಿಖೆಯನ್ನೂ ನಡೆಸಬೇಕು’ ಎಂದು ನಿರ್ದೇಶನ ನೀಡಿತ್ತು. ಏತನ್ಮಧ್ಯೆ ಮಹಿಳಾ ಪಿಎಸ್ ಐ, ಹೈಕೋರ್ಟ್‌ನ ಈ ಆದೇಶವನ್ನು ಮರೆಮಾಚಿ ರಜಾಕಾಲದ ಪೀಠದಲ್ಲಿ ತಮ್ಮ ವಿರುದ್ಧದ ತನಿಖೆಗೆ ತಡೆ ಆದೇಶ ಪಡೆದುಕೊಂಡಿದ್ದರು.

ಮಹೇಶ್ ಜೋಶಿ ಕಸಾಪ ಆಜೀವ ಸದಸ್ಯತ್ವ ರದ್ದು

ಬೆಂಗಳೂರು: ‘ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ (ಕಸಾಪ) ಹಣ ದುರುಪಯೋಗ ಮತ್ತು ಕರ್ತವ್ಯ ಲೋಪ ಎಸಗಲಾಗಿದೆ ಎಂಬ ಆರೋಪಗಳು ವಿಚಾರಣೆಯಲ್ಲಿ ಸಾಬೀತುಗೊಂಡಿರುವ ಕಾರಣ ಕಸಾಪ ಮಾಜಿ ಅಧ್ಯಕ್ಷ ಮಹೇಶ್ ಜೋಶಿ ಅವರ ಕಸಾಪದ ಆಜೀವ ಸದಸ್ಯತ್ವನ್ನು ವಜಾಗೊಳಿಸಲಾಗಿದೆ’ ಎಂದು ರಾಜ್ಯ ಸರ್ಕಾರ, ಹೈಕೋರ್ಟ್‌ಗೆ ಅರುಹಿದೆ.

‘ಕಸಾಪ ಪದಾಧಿಕಾರಿಗಳ ಕಾರ್ಯವೈಖರಿ, ಅನುದಾನ ಮತ್ತು ಖರ್ಚು-ವೆಚ್ಚಗಳ ಕುರಿತು ವಿಚಾರಣೆ ನಡೆಸಲು ತನಿಖಾಧಿಕಾರಿ ನೇಮಕ ಮಾಡಿ 2025ರ ಜೂನ್ 26 ಹಾಗೂ 30ರಂದು ಸಹಕಾರ ಸಂಘಗಳ ನೋಂದಣಾಧಿಕಾರಿ ಹೊರಡಿಸಿದ್ದ ಆದೇಶಕ್ಕೆ ತಡೆ ನೀಡಬೇಕು’ ಎಂಬುದೂ ಸೇರಿದಂತೆ ಮಹೇಶ್ ಜೋಶಿ ಸಲ್ಲಿಸಿರುವ ಮೂರು ರಿಟ್ ಅರ್ಜಿಗಳನ್ನು ನ್ಯಾಯಮೂರ್ತಿ ಸೂರಜ್ ಗೋವಿಂದ ರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ರಾಜ್ಯ ಸರ್ಕಾರದ ಪರ ಹಾಜರಾಗಿದ್ದ ಹೆಚ್ಚುವರಿ ಅಡ್ವೊಕೇಟ್ ಜನರಲ್ ಪ್ರತಿಮಾ ಹೊನ್ನಾಪುರ ಅವರು, ‘ಜೋಶಿ ಅವರ ವಿರುದ್ಧ ಆಪಾದನೆಗಳು ಕೇಳಿ ಬಂದ ಹಿನ್ನಲೆಯಲ್ಲಿ ಸರ್ಕಾರ, ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ–1960ರ ಕಲಂ 25ರ ಅಡಿಯಲ್ಲಿ ವಿಚಾರಣೆ ನಡೆಸಿತ್ತು. ಈ ವಿಚಾರಣೆಯಲ್ಲಿ ಆಪಾದನೆಗಳು ಸಾಬೀತಾಗಿರುವ ಕಾರಣ ಅವರ ಸದಸ್ಯತ್ವವನ್ನು ವಜಾ ಮಾಡಲಾಗಿದೆ’ ಎಂದರು.

‘ಹೈಕೋರ್ಟ್‌ನ ರಿಟ್ ಅರ್ಜಿ ಸಂಖ್ಯೆ 6086/2026ರಲ್ಲಿನ ಅಂತಿಮ ಆದೇಶಕ್ಕೆ ಒಳಪಟ್ಟಂತೆ, ತಕ್ಷಣದಿಂದ ಜಾರಿಗೆ ಬರುವಂತೆ ಮಹೇಶ್ ಜೋಶಿ ಅವರನ್ನು ಸದಸ್ಯತ್ವದಿಂದ ವಜಾಗೊಳಿಸಿ ಆಡಳಿತಾಧಿಕಾರಿ ಆದೇಶಿಸಿದ್ದಾರೆ. ಈ ಕುರಿತಂತೆ ಸಂಬಂಧಿಸಿದವರ ಜತೆ ಸಂವಹನ ನಡೆಸಲಾಗಿದೆ’ ಎಂದು ವಿವರಿಸಿದರು.



ಸೂರಜ್ ಹೆಗ್ಡೆ ಪತ್ನಿಯನ್ನು ರಾಹುಲ್ ಗಾಂಧಿ ಸಂತೈಸಿದ ಕ್ಷಣ. ಡಿ.ಕೆ. ಶಿವಕುಮಾರ್, ಸಿದ್ದರಾಮಯ್ಯ ಇದ್ದರು

ಸೂರಜ್ ಹೆಗ್ಡೆ ಕುಟುಂಬಕ್ಕೆ ರಾಹುಲ್ ಗಾಂಧಿ ಸಾಂತ್ವನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಐಸಿಸಿ ಕಾರ್ಯದರ್ಶಿ ಹಾಗೂ ರಾಜ್ಯ ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷ ಸೂರಜ್ ಹೆಗ್ಡೆ (55) ಅವರ ಕುಟುಂಬ ಸದಸ್ಯರನ್ನು ಮಂಗಳವಾರ ಭೇಟಿ ಮಾಡಿದ ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಸಾಂತ್ವನ ಹೇಳಿದರು.

ರಾಹುಲ್ ಜೊತೆ ಎಐಸಿಸಿ ಪ್ರಧಾನ ಕಾರ್ಯದರ್ಶಿಗಳಾದ ಕೆ.ಸಿ. ವೇಣುಗೋಪಾಲ್, ರಣದೀಪ್ ಸಿಂಗ್ ಸುರ್ಜೇವಾಲಾ, ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಉಪ ಮುಖ್ಯಮಂತ್ರಿ ಜಿ. ಪರಮೇಶ್ವರ, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ಸೇರಿದಂತೆ ಕಾಂಗ್ರೆಸ್ ಪ್ರಮುಖರು ಜತೆಗಿದ್ದರು.

ದೆಹಲಿಯಿಂದ ಸಂಜಯ ನಗರದಲ್ಲಿರುವ ಸೂರಜ್ ಅವರ ನಿವಾಸಕ್ಕೆ ಬಂದ ರಾಹುಲ್, ಮೃತರ ಪಾರ್ಥಿವ ಶರೀರಕ್ಕೆ ಪುಷ್ಪಗುಚ್ಛ ಇರಿಸಿ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಿದರು. ಬಳಿಕ ಅವರ ಕುಟುಂಬ ಸದಸ್ಯರ ಕೈ ಹಿಡಿದು ಮಾತನಾಡಿ, ಸಾಂತ್ವನ ಹೇಳಿದರು.

ಹೃದಯ ಸ್ತಂಭನದಿಂದ ಭಾನುವಾರ ನಿಧನರಾದ ಸೂರಜ್ ಹೆಗ್ಡೆ ಅವರ ಅಂತಿಮ ಸಂಸ್ಕಾರ ಸರ್ಕಾರಿ ಗೌರವಗಳೊಂದಿಗೆ ಹೆಬ್ಬಾಳದ ಚಿತಾಗಾರದಲ್ಲಿ ಮಂಗಳವಾರ ಬೆಳಿಗ್ಗೆ ನಡೆಯಿತು.

ಬೆದರಿಕೆ ಬಿಡಿ: ಗೃಹ ಸಚಿವ ಪ್ರಿಯಾಂಕ್ ಖರ್ಗೆ ಹೇಳಿಕೆ ವಾಗ್ವಾದಕ್ಕೆ ದಾರಿ

‘ಆರ್‌ಎಸ್‌ಎಸ್ ದಾಖಲೆ ಸಿದ್ಧವಾಗಿಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಆರ್‌ಎಸ್‌ಎಸ್ ಬಳಸಿಕೊಂಡು ನನಗೆ ಜೀವ ಬೆದರಿಕೆ ಹಾಕುತ್ತಿದ್ದೀರಿ. ನಿಮ್ಮ ಮೇಲಧಿಕಾರದ ಸಂಘಟನೆಯ ನೋಂದಣಿಗಾಗಿ ದಾಖಲೆ ಸಿದ್ಧವಾಗಿಡಿ’ ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರು, ‘ಎಕ್ಸ್’ ಪೋಸ್ಟ್ ರಾಜಕೀಯ ವಾಗ್ವಾದಕ್ಕೆ ಕಾರಣವಾಗಿದೆ.



ಪ್ರಿಯಾಂಕ್ ಖರ್ಗೆ

ಪ್ರಿಯಾಂಕ್ ಅವರ ಕುರಿತು ಸುಧೀರ್ ಬಂಗೇರ ಎಂಬುವವರು ‘ಎಕ್ಸ್’ನಲ್ಲಿ ಅವಾಚ್ಯವಾಗಿ ಬೈದಿದ್ದಲ್ಲದೇ, ‘ನೀನು ನಮ್ಮ ಎಂಜಲು ತಿನ್ನುವ ಭಿಕಾರಿ, ನಿನ್ನನ್ನು ಮುಗಿಸುವ ಸಮಯ ಬಂದಿದೆ’ ಎಂದು ಬೆದರಿಸಿದ್ದರು.

‘ಬಿಜೆಪಿ ಕರ್ನಾಟಕ’ ಎಕ್ಸ್ ಖಾತೆಯನ್ನು ಟ್ಯಾಗ್ ಮಾಡಿರುವ ಪ್ರಿಯಾಂಕ್, ‘ಪ್ರಿಯ ಬಿಜೆಪಿಯವರೇ ಯಾಕಿಷ್ಟು ಚಿಂತೆಗೊಳಗಾಗಿದ್ದೀರಿ? ನಾನು ಗೃಹ ಸಚಿವನಾಗಿ ಅಧಿಕಾರ ವಹಿಸಿಕೊಂಡು 48 ಗಂಟೆಗಳು ಕೂಡ ಆಗಿಲ್ಲ, ನಿಮ್ಮ ಭಯ, ನಿಮ್ಮಲ್ಲಿನ ಆತಂಕ, ನಿಮ್ಮಲ್ಲಿನ ದುಗುಡ ಎಲ್ಲವೂ ವ್ಯಕ್ತವಾಗುತ್ತಿದೆ. ಈಗಾಗಲೇ ಆರ್‌ಎಸ್‌ಎಸ್ ಅನ್ನು ಬಳಸಿಕೊಂಡು ನನ್ನನ್ನು ನಿಂದಿಸುತ್ತಿದ್ದೀರಿ ಹಾಗೂ ನನಗೆ ಜೀವ ಬೆದರಿಕೆ ಹಾಕುತ್ತಿದ್ದೀರಿ. ನೀವು ಮಾಡೋದನ್ನ ಮಾಡಿ’ ಎಂದಿದ್ದಾರೆ.

‘ದಯವಿಟ್ಟು ನಿಮ್ಮ ವ್ಯಕ್ತಿಗತ ಆಡಳಿತ ವ್ಯವಸ್ಥೆಗೆ ನನ್ನ ನಮಸ್ಕಾರವನ್ನೂ ತಿಳಿಸಿ ಹಾಗೂ ನಿಮ್ಮ ರಾಜಕೀಯ ಮೇಲಧಿಕಾರದ ಸಂಘಟನೆಯ ನೋಂದಣಿಗಾಗಿ ದಾಖಲೆಗಳನ್ನು ಸಿದ್ಧವಾಗಿಡಲು ಹೇಳಿ’ ಎಂದು ಹೇಳಿದ್ದಾರೆ.

ಆರ್‌ಎಸ್‌ಎಸ್ ಕುರಿತು ಪ್ರಿಯಾಂಕ್‌ಗೆ ಹತಾಶೆ: ವಿಜಯೇಂದ್ರ

‘ನಿಮ್ಮ ಮುಖ್ಯಸ್ಥ ನಿಮ್ಮ ಮೂಲಕ ಆರ್‌ಎಸ್‌ಎಸ್ ವಿರುದ್ಧ ಮಾತನಾಡಿಸುತ್ತಿದ್ದಾರೆ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ‘ಎಕ್ಸ್’ ಪೋಸ್ಟ್ ಮಾಡಿದ್ದಾರೆ.

‘ಹಲವು ಸರ್ಕಾರಗಳು ಬಂದಿವೆ, ಹೋಗಿವೆ. ಹಲವು ಸರ್ಕಾರಗಳು ಆರ್‌ಎಸ್‌ಎಸ್ ಅನ್ನು ನಿಷೇಧಿಸುವ ಪ್ರಯತ್ನ ಮಾಡಿದ್ದವು. ಆ ಪ್ರಯತ್ನವನ್ನು ಜನತೆ ತಿರಸ್ಕರಿಸಿದ್ದಾರೆ. ಹಿಂದೂ ಸಮಾಜದ ಒಗ್ಗಟ್ಟು ಮತ್ತು ಸಮೃದ್ಧ ಭಾರತ ನಿರ್ಮಾಣದ ಆರ್‌ಎಸ್‌ಎಸ್ ನಿಲುವು ಅಚಲವಾಗಿದೆ. ಹಿಂದೂ ಧರ್ಮದ ಸಂದೇಶವನ್ನು ಜಗತ್ತಿಗೆ ಸಾರುವುದರಲ್ಲಿ ಮುಂಚೂಣಿಯಲ್ಲಿದೆ’ ಎಂದು ಅವರು ಹೇಳಿದ್ದಾರೆ.

‘ಆರ್‌ಎಸ್‌ಎಸ್ ಭಾರತದ ಸಂವಿಧಾನದ ಚೌಕಟ್ಟಿನೊಳಗೇ ಕಾರ್ಯನಿರ್ವಹಿಸುತ್ತಿದೆ. ಸಂಘ ಸ್ಥಾಪನೆಗೊಂಡು ನೂರು ವರ್ಷ ಪೂರ್ಣಗೊಂಡಿರುವುದು ನಿಮ್ಮ ಹತಾಶೆಗೆ ಕಾರಣವಾಗಿದೆ. ಅದನ್ನು ಅರಗಿಸಿಕೊಳ್ಳಲು ನಿಮಗೆ ಮತ್ತು ನಿಮ್ಮ ನೈಜ ಮುಖ್ಯಸ್ಥರಿಗೆ ಆಗುತ್ತಿಲ್ಲ’ ಎಂದು ವಿಜಯೇಂದ್ರ ಕುಟುಕಿದ್ದಾರೆ.

ಜವಾಬ್ದಾರಿಯಿಂದ ಕೆಲಸ ಮಾಡಿ: ಸಿ.ಟಿ.ರವಿ

‘ಸಚಿವ ಪ್ರಿಯಾಂಕ್ ಖರ್ಗೆ ಅವರ ಅಪ್ಪನಿಂದಲೇ ಆರ್‌ಎಸ್‌ಎಸ್‌ಗೆ ಏನೂ ಮಾಡಲು ಸಾಧ್ಯವಾಗಿಲ್ಲ. ನೋಂದಣಿ ಮಾಡಿಕೊಳ್ಳಲು ಅದು ವ್ಯಾವಹಾರಿಕ ಸಂಘಟನೆಯೂ ಅಲ್ಲ’ ಎಂದು ವಿಧಾನಪರಿಷತ್ ಸದಸ್ಯ ಸಿ.ಟಿ.ರವಿ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಗೃಹ ಮಂತ್ರಿಯಾಗಿ ಜವಾಬ್ದಾರಿಯಿಂದ ಕೆಲಸ ಮಾಡುವುದನ್ನು ಬಿಟ್ಟು ಬೆಂಕಿ ಹಚ್ಚುವ ಕೆಲಸ ಮಾಡಬೇಡಿ. ಆ ಬೆಂಕಿ ನಿಮ್ಮನ್ನು ಸುಡುತ್ತದೆ’ ಎಂದರು.

‘ಹಿಂದೆ ನೆಹರೂ ಅವರು ಆರ್‌ಎಸ್‌ಎಸ್ ಅನ್ನು ಹೊಸಕಿ ಹಾಕುತ್ತೇನೆ ಎಂದಿದ್ದರು. ಅವರಿಂದ ಏನೂ ಮಾಡಲು ಸಾಧ್ಯವಾಗಲಿಲ್ಲ. ಈಗ ನಿಮ್ಮ ಪಕ್ಷದ ಅಧಿಕಾರದ ಕೊನೆ ದಿನಗಳು ಬಂದಿವೆ. ನಿಮ್ಮಪ್ಪನಾಣೆಗೂ ನೀವು ಮತ್ತೆ ಅಧಿಕಾರಕ್ಕೆ ಬರುವುದಿಲ್ಲ’ ಎಂದರು.

ಮೀನಾಕ್ಷಿ ನಟರಾಜನ್ ನಾಮಪತ್ರ ತಿರಸ್ಕೃತ

ಒಂದನೇ ಪುಟದಿಂದ...

‘ತೆಲಂಗಾಣದಲ್ಲಿ ದಾಖಲಾಗಿರುವ ಪ್ರಕರಣವೊಂದರ ಮಾಹಿತಿಯನ್ನು ಅಭ್ಯರ್ಥಿ ಮರೆಮಾಚಿದ್ದಾರೆ’ ಎಂದು ದೂರಿನಲ್ಲಿ ಆರೋಪಿಸಿದ್ದಾರೆ. ‘ಮೀನಾಕ್ಷಿ ವಿರುದ್ಧದ ಕ್ರಿಮಿನಲ್ ಪ್ರಕರಣ ತೆಲಂಗಾಣ ಕೋರ್ಟ್‌ನಲ್ಲಿ ಬಾಕಿ ಇದೆ’ ಎಂದು ಮಹೇಶ್ ಕೇವಟ್ ಅವರನ್ನು ಪ್ರತಿನಿಧಿಸುತ್ತಿರುವ ವಕೀಲ ಸಂಕೇತ್ ಗುಪ್ತಾ ಇಲ್ಲಿ ಸುದ್ದಿಗಾರರಿಗೆ ತಿಳಿಸಿದರು.

‘ಈ ಮಾಹಿತಿಯನ್ನು ಉದ್ದೇಶಪೂರ್ವಕವಾಗಿ ಮರೆಮಾಚಲಾಗಿದೆ. ಸುಪ್ರೀಂ ಕೋರ್ಟ್ ಮಾರ್ಗಸೂಚಿ ಪ್ರಕಾರ ಈ ಮಾಹಿತಿಯನ್ನು ಅಫಿಡವಿಟ್‌ನಲ್ಲಿ ತೋರಿಸಬೇಕು’ ಎಂದು ಕೇವಟ್ ಚುನಾವಣಾ ಅಧಿಕಾರಿಗೆ ತಕರಾರು ಅರ್ಜಿ ಸಲ್ಲಿಸಿದ್ದಾರೆ. ಇದಲ್ಲದೆ, ಮೀನಾಕ್ಷಿ ಅವರ ನಾಮಪತ್ರದಲ್ಲಿ ಇನ್ನೂ ಹಲವು ನ್ಯೂನತೆಗಳಿವೆ ಎಂದು ಅವರು ದೂರಿದ್ದಾರೆ.

ಬಿಜೆಪಿಯು ಕಾಂಗ್ರೆಸ್ ಶಾಸಕರಿಗೆ ಆಮಿಷವೊಡ್ಡುವ ಯತ್ನಗಳನ್ನು ನಡೆಸಿದ್ದು, ಅದಕ್ಕಾಗಿಯೇ ಕರ್ನಾಟಕದ ರಾಮನಗರದ ರೆಸಾರ್ಟ್ ಒಂದಕ್ಕೆ ಮಧ್ಯಪ್ರದೇಶದ ಆ ಶಾಸಕರನ್ನು ಸ್ಥಳಾಂತರಗೊಳಿಸಲು ನಿರ್ಧರಿಸಲಾಗಿತ್ತು. ಅವರು ಹೊರಡಬೇಕಿದ್ದ ವಿಮಾನವನ್ನು ಭೋಪಾಲ್‌ನ ರನ್ ವೇಯಲ್ಲಿಯೇ ತಡೆದು, ಶಾಸಕರ ಪ್ರಯಾಣವನ್ನು ರದ್ದುಪಡಿಸಲಾಯಿತು ಎಂದು ಮೂಲಗಳು ತಿಳಿಸಿವೆ.

ಬಿಜೆಪಿಯಿಂದ ಕಿರುಕುಳ: ‘ಮೀನಾಕ್ಷಿ ನಟರಾಜನ್ ವಿರುದ್ಧ ಯಾವುದೇ ಪ್ರಕರಣ ದಾಖಲಾಗಿಲ್ಲ. ಅವರಿಗೆ ಕೋರ್ಟ್‌ನಿಂದ ಶೋಕಾಸ್ ನೋಟಿಸ್ ಜಾರಿಯಾಗಿದೆ. ಇದನ್ನು ಪ್ರಮಾಣಪತ್ರದಲ್ಲಿ ತೋರಿಸುವ ಅಗತ್ಯ ಇಲ್ಲ. ಅವರಿಗೆ ಕಿರುಕುಳ ನೀಡುವ ಸಲುವಾಗಿಯೇ ಬಿಜೆಪಿ ಇಂತಹ ಆರೋಪಗಳನ್ನು ಮಾಡುತ್ತಿದೆ’ ಎಂದು ಕಾಂಗ್ರೆಸ್‌ನ ಮಧ್ಯಪ್ರದೇಶ ಘಟಕದ ಉಸ್ತುವಾರಿ ಹರೀಶ್ ಚೌಧರಿ ಹೇಳಿದ್ದಾರೆ.

ಸಿ.ಎಂ.ಗೆ ಕನುಗೋಲು ಮುಖ್ಯ ಸಲಹೆಗಾರ

ಬೆಂಗಳೂರು: ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಅವರ ಮುಖ್ಯ ಸಲಹೆಗಾರರಾಗಿ ಚುನಾವಣಾ ತಂತ್ರಗಾರ ಸುನೀಲ್ ಕನುಗೋಲು ಅವರನ್ನು ನೇಮಿಸಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಆದೇಶ ಹೊರಡಿಸಿದೆ.

ಕನುಗೋಲು ಅವರಿಗೆ ಸಂಪುಟ ದರ್ಜೆ ಸಚಿವರ ಸ್ಥಾನಮಾನ ನೀಡಲಾಗಿದ್ದು, ಸಚಿವರಿಗೆ ಸಿಗುವ ಎಲ್ಲ ಸರ್ಕಾರಿ ಸೌಲಭ್ಯಗಳು ಹಾಗೂ ಭತ್ಯೆಗಳು ಲಭ್ಯವಾಗಲಿವೆ ಎಂದು ಆದೇಶದಲ್ಲಿ ತಿಳಿಸಲಾಗಿದೆ. ರಾಜ್ಯದಲ್ಲಿ 2023ರಲ್ಲಿ ಕಾಂಗ್ರೆಸ್ ಪಕ್ಷ ಆಡಳಿತ ಚುಕ್ಕಾಣಿ ಹಿಡಿಯುಲು ಕಾರಣರಾದ ಹಿಂದಿನ ಶಕ್ತಿ ಎಂದೇ ಗುರುತಿಸಿಕೊಂಡಿರುವ ಕನುಗೋಲು ಅವರು, ನಿಕಟಪೂರ್ವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೂ ಮುಖ್ಯ ಸಲಹೆಗಾರ ಆಗಿದ್ದರು. ಚುನಾವಣಾ ತಂತ್ರಗಾರ ಪ್ರಶಾಂತ್ ಕಿಶೋರ್ ಅವರ ತಂಡದಲ್ಲಿ ಕೆಲಸ ಮಾಡಿದ್ದ ಕನುಗೋಲು ಬಳ್ಳಾರಿಯವರು. ಸದ್ಯ ಬೆಂಗಳೂರಿನಲ್ಲಿ ನೆಲಸಿದ್ದಾರೆ.

ಮೋದಿ ಸರ್ಕಾರಕ್ಕೆ 12 ವರ್ಷ: ಬಿಜೆಪಿ ಪೂಜೆ

ಬೆಂಗಳೂರು: ನರೇಂದ್ರ ಮೋದಿ ಅವರು ಪ್ರಧಾನಿಯಾಗಿ 12 ವರ್ಷ ಪೂರ್ಣಗೊಳಿಸುತ್ತಿರುವ ಕಾರಣ ರಾಜ್ಯದ ಎಲ್ಲ ಜಿಲ್ಲೆಗಳ ದೇವಸ್ಥಾನಗಳಲ್ಲಿ ಬುಧವಾರ ಪೂಜೆ ಹಮ್ಮಿಕೊಳ್ಳಲಾಗಿದೆ ಎಂದು ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ನಂದೀಶ್ ರೆಡ್ಡಿ ತಿಳಿಸಿದರು.

ಚುನಾಯಿತ ಪ್ರಧಾನಿಯಾಗಿ 4,399 ದಿನಗಳ ಯಶಸ್ವಿ ಆಡಳಿತ ನಡೆಸಿರುವ ಮೋದಿ ಅವರ ಆಯಸ್ಸು, ಆರೋಗ್ಯ ವೃದ್ಧಿಗಾಗಿ ಪ್ರಾರ್ಥಿಸಿ ಪೂಜೆ ಹಮ್ಮಿಕೊಳ್ಳಲಾಗಿದೆ ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ, ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ ಸೇರಿದಂತೆ ಹಲವು ನಾಯಕರು ದೇವಸ್ಥಾನಗಳಲ್ಲಿ ಪೂಜೆ ಸಲ್ಲಿಸಲಿದ್ದಾರೆ ಎಂದು ನಂದೀಶ್ ರೆಡ್ಡಿ ತಿಳಿಸಿದ್ದಾರೆ.

ಲಂಚ: ಇನ್‌ಸ್ಪೆಕ್ಟರ್ ಅಮಾನತು

ಬಳ್ಳಾರಿ: ಕಬ್ಬಿಣದ ಅದಿರು ಅಕ್ರಮ ದಾಸ್ತಾನಿಗೆ ನೆರವಾಗಿದ್ದು, ಕೆರೆಯ ಮಣ್ಣು ಸಾಗಿಸಲು ದಂಧೆಕೋರರಿಂದ ಲಂಚ ವಸೂಲಿ ಮಾಡಿದ ಆರೋಪದ ಮೇಲೆ ಬಳ್ಳಾರಿ ಗ್ರಾಮೀಣ ಠಾಣೆಯ ಇನ್‌ಸ್ಪೆಕ್ಟರ್ ಉದಯ ರವಿ ಅವರನ್ನು ಅಮಾನತು ಮಾಡಲಾಗಿದೆ.

ಹಾಲಕುಂದಿ ಗ್ರಾಮದ ಬಳಿ ನಡೆದಿದ್ದ ಅಕ್ರಮ ಅದಿರು ದಾಸ್ತಾನು ಪ್ರಕರಣವನ್ನು ಹಿರಿಯ ಅಧಿಕಾರಿಗಳ ಗಮನಕ್ಕೆ ತರದೆ ಮುಚ್ಚಿಡಲು ಉದಯರವಿ ಪ್ರಯತ್ನಿಸಿದ್ದರು ಎನ್ನಲಾಗಿದೆ. ಕೊಳಗಲ್ಲು ಗ್ರಾಮದ ಕೆರೆಯ ಮಣ್ಣನ್ನು ಇಟ್ಟಂಗಿ ಭಟ್ಟಿಗಳಿಗೆ ಅಕ್ರಮವಾಗಿ ಸಾಗಿಸಲು ಟ್ರ್ಯಾಕ್ಟರ್ ಮಾಲೀಕರಿಂದ ಹಣ ಪಡೆದು ಕುಮ್ಮಕ್ಕು ನೀಡಿದ ಆರೋಪಗಳು ಇನ್‌ಸ್ಪೆಕ್ಟರ್ ಮೇಲಿವೆ. ಅಕ್ರಮದ ಕುರಿತ ಸಾಕ್ಷ್ಯಾಧಾರಗಳು ಸಿಕ್ಕ ಹಿನ್ನೆಲೆಯಲ್ಲಿ ಈ ಶಿಸ್ತು ಕ್ರಮ ಕೈಗೊಳ್ಳಲಾಗಿದೆ ಎಂದು ಮೂಲಗಳು ತಿಳಿಸಿವೆ.

ದೋಷಾರೋಪ ಪಟ್ಟಿ ಸಲ್ಲಿಸಿದ ಎಸ್‌ಐಟಿ ● ‘ಕೈ’ ಮುಖಂಡ ಮೊಹಮ್ಮದ್ ನಲಪಾಡ್ ಹೆಸರು ಉಲ್ಲೇಖ

ಬಿಟ್ ಕಾಯಿನ್ ಹಗರಣ: ಹಣದಲ್ಲಿ ‘ಪಾಲು’

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- 2017ರಲ್ಲಿ ತುಮಕೂರಿನ ಕಂಪನಿಗೆ ಕನ್ನ
- ಹವಾಲಾ ಮೂಲಕ ಕೆಲವರಿಗೆ ‘ಪಾಲು’
- ಇ.ಡಿಯಿಂದಲೂ ತನಿಖೆ

ಬೆಂಗಳೂರು: ಬಿಟ್ ಕಾಯಿನ್ ಪ್ರಕರಣದ ತನಿಖೆ ನಡೆಸುತ್ತಿರುವ ಸಿಐಡಿಯ ವಿಶೇಷ ತನಿಖಾ ದಳವು(ಎಸ್‌ಐಟಿ) ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದು, ಹಗರಣದಿಂದ ಬಂದ ಹಣದಲ್ಲಿ ‘ಕೆಲವರಿಗೆ ಪಾಲು ಸಿಕ್ಕಿದೆ’ ಎಂಬ ಸಂಗತಿಯನ್ನು ಉಲ್ಲೇಖಿಸಿದೆ.

ಪ್ರಕರಣದ ತನಿಖೆಯನ್ನು ಇ.ಡಿ ತನಿಖೆಗೆ ಕೈಗೆತ್ತಿಕೊಳ್ಳುವುದಕ್ಕೂ ಮುನ್ನ ಸಿಐಡಿಯ ವಿಶೇಷ ತನಿಖಾ ದಳವು ತನಿಖೆ ನಡೆಸಿತ್ತು.

ತುಮಕೂರಿನ ಖಾಸಗಿ ಕಂಪನಿಯ ಬಿಟ್ ಕಾಯಿನ್ ಕಳವು ಕೃತ್ಯದ ತನಿಖೆ ಪೂರ್ಣಗೊಳಿಸಿರುವ ಎಸ್‌ಐಟಿ, ಕಳೆದ ವಾರ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದೆ ಎಂದು ಮೂಲಗಳು ತಿಳಿಸಿವೆ.

ಮುಂಬೈ ಸ್ನೇಹಿತನ ಮೂಲಕ ಹಣ ವರ್ಗ: 2017ರಲ್ಲಿ ತುಮಕೂರಿನ ಬಿಟ್ ಕಾಯಿನ್ ಟ್ರೇಡಿಂಗ್ ಕಂಪನಿಯೊಂದಕ್ಕೆ ಶ್ರೀಕೃಷ್ಣ ಅಲಿಯಾಸ್ ಶ್ರೀಕಿ ಮತ್ತು ಆತನ ಸಹಚರರು ಕನ್ನ ಹಾಕಿದ್ದರು. ಆರೋಪಿಗಳು, 60 ಬಿಟ್ ಕಾಯಿನ್‌ಗಳನ್ನು ದೋಚಿದ್ದರು. ಕೃತ್ಯದಲ್ಲಿ ದೋಚಿದ್ದ ಬಿಟ್ ಕಾಯಿನ್‌ಗಳನ್ನು ಕಾಂಗ್ರೆಸ್ ಮುಖಂಡ ಮೊಹಮ್ಮದ್ ನಲಪಾಡ್ ಸಂಪರ್ಕ ಜಾಲ ಬಳಸಿ, ನಗದೀಕರಣ ಮಾಡಲಾಗಿದೆ ಎಂಬ ಆರೋಪ ಇದೆ. ಅಲ್ಲದೇ ಮುಂಬೈನ ಸ್ನೇಹಿತರೊಬ್ಬರ ಮೂಲಕ ಹವಾಲದಲ್ಲಿ ‘ಕೆಲವರಿಗೆ ಹಣ ವರ್ಗಾವಣೆ’ ಆಗಿರುವುದು ತನಿಖೆ ವೇಳೆ ಕಂಡುಬಂದಿದೆ. ಈ ಎಲ್ಲ ಅಂಶಗಳನ್ನೂ ದೋಷಾರೋಪ ಪಟ್ಟಿಯಲ್ಲಿ ಉಲ್ಲೇಖಿಸಲಾಗಿದೆ ಎಂದು ಎಸ್‌ಐಟಿ ಮೂಲಗಳು ತಿಳಿಸಿವೆ.



ಮೊಹಮ್ಮದ್ ನಲಪಾಡ್ ಅವರ ತಮ್ಮ ಉಮರ್ ನಲಪಾಡ್ ಹಾಗೂ ಶ್ರೀಕಿ ಅವರು ಪ್ರೌಢಶಾಲೆಯಲ್ಲಿ ಒಂದೇ ತರಗತಿಯಲ್ಲಿ ಓದುತ್ತಿದ್ದರು. ಬಾಲ್ಯದಿಂದಲೂ ಸ್ನೇಹಿತರಾಗಿದ್ದರು. ಆ ಮೂಲಕ ಮೊಹಮ್ಮದ್ ನಲಪಾಡ್‌ಗೆ ಶ್ರೀಕಿ ಸಂಪರ್ಕಕ್ಕೆ ಬಂದಿರುವುದು ತನಿಖೆ ವೇಳೆ ಗೊತ್ತಾಗಿದೆ ಎಂದು ಎಸ್‌ಐಟಿ ಮೂಲಗಳು ತಿಳಿಸಿವೆ.

ಇದೇ ಪ್ರಕರಣದಲ್ಲಿ ಭಾಗಿಯಾದ ಇಬ್ಬರು ಐಷಾರಾಮಿ ಕಾರು ಖರೀದಿಸಿದ್ದನ್ನು ಎಸ್‌ಐಟಿ ಪತ್ತೆ ಹಚ್ಚಿತ್ತು. ಮೊಹಮ್ಮದ್ ನಲಪಾಡ್ ಅವರ ಆಪ್ತ ಸ್ನೇಹಿತ ಹಾಗೂ ನಿವೃತ್ತ ಐಪಿಎಸ್ ಅಧಿಕಾರಿಯೊಬ್ಬರ ಪುತ್ರ ಬಿಟ್ ಕಾಯಿನ್‌ನಿಂದ ಬಂದ ಹಣದಲ್ಲಿ ಕಾರು ಖರೀದಿಸಿದ್ದರು ಎನ್ನಲಾಗಿದೆ. ತನಿಖೆಯ ಸಂದರ್ಭದಲ್ಲಿ ಅವರಿಂದಲೂ ಹೇಳಿಕೆ ಪಡೆಯಲಾಗಿತ್ತು ಎಂದು ಮೂಲಗಳು ತಿಳಿಸಿವೆ.

ತುಮಕೂರಿನ ಹೊಸ ಬಡಾವಣೆ ಠಾಣೆಯಲ್ಲಿ ಬಿಟ್ ಕಾಯಿನ್ ಪ್ರಕರಣದ ಸಂಬಂಧ ಮೊದಲು ಎಫ್‌ಐಆರ್ ದಾಖಲಾಗಿತ್ತು. ಬಳಿಕ, ಪ್ರಕರಣವನ್ನು ಎಸ್‌ಐಟಿಗೆ ವರ್ಗಾವಣೆ ಮಾಡಲಾಗಿತ್ತು. ಇದೇ ಪ್ರಕರಣದ ತನಿಖೆಯನ್ನು ಇ.ಡಿ ಸಹ ನಡೆಸುತ್ತಿದೆ.

ಕೌನ್ಸೆಲಿಂಗ್ ಪೂರ್ವ ಸಿದ್ಧತೆ; ಇರಲಿ ಆದ್ಯತೆ

ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ



ಪ್ರಜಾವಾಣಿ ಫೋನ್‌-ಇನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿ ಶಿಕ್ಷಣ ಕೋರ್ಸ್‌ಗಳ ಪ್ರವೇಶದ ಕೌನ್ಸೆಲಿಂಗ್ ಪ್ರಕ್ರಿಯೆಯ ವೇಳಾಪಟ್ಟಿ ಎರಡು ದಿನಗಳಲ್ಲಿ ಪ್ರಕಟವಾಗಲಿದ್ದು, ಆಪ್ಷನ್ ದಾಖಲಿಸುವ ಮೊದಲು ಪ್ರತಿ ವಿದ್ಯಾರ್ಥಿಯೂ ತನ್ನ ಆದ್ಯತೆಯ ಕೋರ್ಸ್, ವಿಭಾಗ ಹಾಗೂ ಕಾಲೇಜುಗಳ ಪಟ್ಟಿ ಸಿದ್ಧ ಮಾಡಿಟ್ಟುಕೊಂಡರೆ ಉಳಿದೆಲ್ಲ ಪ್ರಕ್ರಿಯೆಗಳು ಸುಲಭವಾಗಲಿವೆ.

'ಪ್ರಜಾವಾಣಿ' ಮಂಗಳವಾರ ಆಯೋಜಿಸಿದ್ದ 'ಫೋನ್ ಇನ್ ಕಾರ್ಯಕ್ರಮ'ದಲ್ಲಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ಇಂತಹ ಹತ್ತು ಹಲವು ಸಲಹೆಗಳನ್ನು ವಿದ್ಯಾರ್ಥಿಗಳಿಗೆ ನೀಡಿದರು.

ವಿದ್ಯಾರ್ಥಿಗಳು ಸಿಇಟಿಯಲ್ಲಿ ತಾವು ಗಳಿಸಿದ ಎಂಜಿನಿಯರಿಂಗ್, ಬಿ.ಎಸ್‌ಸಿ ಕೃಷಿ, ಪಶುವೈದ್ಯಕೀಯ, ನರ್ಸಿಂಗ್, ಬಿ–ಫಾರ್ಮಾ, ಫಾರ್ಮಾ–ಡಿ, ಯೋಗ ಮತ್ತು ನ್ಯಾಚುರೋಪಥಿ ಕೋರ್ಸ್‌ಗಳ ರ‍್ಯಾಂಕಿಂಗ್ ಆಧಾರದಲ್ಲಿ ಸಿಗಬಹುದಾದ ಕಾಲೇಜುಗಳನ್ನು ಆಯ್ಕೆ ಮಾಡಿಕೊಳ್ಳಬೇಕು.

ಎಂಜಿನಿಯರಿಂಗ್ ಸೇರುವವರು ಮೊದಲು ಯಾವ ಕೋರ್ಸ್‌ಗೆ ಸೇರಬೇಕು ಎಂಬುದನ್ನು ನಿರ್ಧರಿಸಬೇಕು. ಕೋರ್ಸ್ ಹಾಗೂ ಕಾಲೇಜುಗಳನ್ನು ಆದ್ಯತೆಯ ಅನುಸಾರ ನಮೂದಿಸಬೇಕು. ಅವಸರ ಮಾಡಿಕೊಳ್ಳದೆ ಸಮಾಧಾನಚಿತ್ತರಾಗಿ ಆಪ್ಷನ್ ದಾಖಲಿಸಬೇಕು. ಬಯಸಿದ ಕಾಲೇಜುಗಳು ಸಿಗದಿದ್ದರೆ ಎರಡು ಅಥವಾ ಮೂರನೇ ಸುತ್ತಿಗೆ ತಿದ್ದುಪಡಿ, ಬದಲಾವಣೆ ಮಾಡಿಕೊಳ್ಳಬಹುದು ಎಂದು ಸಲಹೆ ನೀಡಿದರು.

ಮಧ್ಯವರ್ತಿಗಳಿಗೆ ಮನ್ನಣೆ ಸಲ್ಲ: 75 ಸಾವಿರಕ್ಕೂ ಹೆಚ್ಚು ಎಂಜಿನಿಯರಿಂಗ್ ಸೀಟುಗಳು ಹಾಗೂ ರಾಜ್ಯದಲ್ಲಿ ಲಭ್ಯವಿರುವ ವೈದ್ಯಕೀಯ ಸೀಟುಗಳಲ್ಲಿ ಶೇ 85ರಷ್ಟನ್ನು ಪ್ರಾಧಿಕಾರವೇ ಹಂಚಿಕೆ ಮಾಡುತ್ತದೆ. ಹಾಗಾಗಿ, ಪ್ರತಿಷ್ಠಿತ ಕಾಲೇಜುಗಳಲ್ಲಿ ಬೇಡಿಕೆಯ ಕೋರ್ಸ್‌ಗಳನ್ನು ಕೊಡಿಸುವುದಾಗಿ ಮಧ್ಯವರ್ತಿಗಳು ತೋರುವ ಆಮಿಷಕ್ಕೆ ಅವಕಾಶ ನೀಡಬಾರದು. ಹಿಂದೆಯೂ ಎಂಜಿನಿಯರಿಂಗ್, ವೈದ್ಯಕೀಯ ಪ್ರವೇಶದ ವೇಳೆ ಕೆಲ ಮಧ್ಯವರ್ತಿಗಳು ವಿದ್ಯಾರ್ಥಿಗಳು ಹಾಗೂ ಅವರ ಪೋಷಕರನ್ನು ನಂಬಿಸಿ, ಸೀಟು ಕೊಡಿಸುವುದಾಗಿ ಹಣ ಪಡೆದು ವಂಚಿಸುತ್ತಿದ್ದರು.

ಸೀಟ್ ಬ್ಲಾಕಿಂಗ್‌ನಂತಹ ಕೃತ್ಯಗಳ ಮೂಲಕ ಖಾಸಗಿ ಕಾಲೇಜುಗಳಿಗೆ ಅನುಕೂಲ ಮಾಡಿಕೊಡುತ್ತಿದ್ದರು. ಅಂತಹ ವಂಚನೆ ಪ್ರಕರಣಗಳ ವಿರುದ್ಧ ಪ್ರಾಧಿಕಾರ ಕಟ್ಟುನಿಟ್ಟಿನ ಕ್ರಮ ಕೈಗೊಂಡಿದೆ. ಹಲವು ಸುಧಾರಣಾ ಕ್ರಮಗಳು, ತಂತ್ರಜ್ಞಾನದ ಪರಿಣಾಮಕಾರಿ ಬಳಕೆಯಿಂದ ಪರೀಕ್ಷೆ ಹಾಗೂ ಸೀಟು ಹಂಚಿಕೆ ಸಂಪೂರ್ಣ ಪಾರದರ್ಶಕವಾಗಿದೆ. ಅಡ್ಡ ದಾರಿಯಲ್ಲಿ ಹೋಗಿ ಯಾರೂ ಮೋಸ ಹೋಗಬಾರದು ಎಂದು ಕಿವಿಮಾತು ಹೇಳಿದರು.

ಈ ಬಾರಿ ನೀಟ್ ಫಲಿತಾಂಶಕ್ಕೆ ಕಾಯದೆ ಸಿಇಟಿಗೆ ಪ್ರತ್ಯೇಕ ಕೌನ್ಸೆಲಿಂಗ್ ನಡೆಸಲಾಗುತ್ತಿದೆ. ಇದೇ ಮೊದಲ ಬಾರಿ ಪೂರ್ವ ಸುತ್ತಿನ ಕೌನ್ಸೆಲಿಂಗ್ ನಡೆಸಲಾಗುತ್ತಿದ್ದು, ಮೊದಲ ಆದ್ಯತೆಯ ಕೋರ್ಸ್, ಕಾಲೇಜು ಸಿಕ್ಕ ವಿದ್ಯಾರ್ಥಿಗಳು ಪ್ರವೇಶ ಪಡೆಯಬೇಕು. ಇದರಿಂದ ಅವರು ಮೊದಲ ಸುತ್ತಿನಿಂದ ಹೊರಗೆ ಹೋಗುತ್ತಾರೆ. ಉಳಿದ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ. ಅಣಕು ಸೀಟು ಹಂಚಿಕೆಯೂ ಇರುತ್ತದೆ. ನೀಟ್ ಬರೆಯುವ ವಿದ್ಯಾರ್ಥಿಗಳು ಸಿಇಟಿ ಕೌನ್ಸೆಲಿಂಗ್‌ಗೆ ಹೆಚ್ಚು ಸಮಯ ವ್ಯರ್ಥ ಮಾಡಬಾರದು. ಪರೀಕ್ಷೆ ಬರೆಯಲು ಗಮನ ಕೊಡಬೇಕು. ಫಲಿತಾಂಶದ ನಂತರ ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕೆ ಕೌನ್ಸೆಲಿಂಗ್ ನಡೆಸಲಾಗುವುದು ಎಂದರು.

ಸೀಟು ಆಯ್ಕೆಗೆ 'ಕೆಇಎ ಕನೆಕ್ಟ್': ವೈದ್ಯಕೀಯ, ಎಂಜಿನಿಯರಿಂಗ್ ಸೀಟು ಆಯ್ಕೆ ವೇಳೆ ವಿದ್ಯಾರ್ಥಿಗಳಿಗೆ ನೆರವಾಗಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರ 'ಕೆಇಎ ಕನೆಕ್ಟ್' ಆ್ಯಪ್ ಸಿದ್ಧಪಡಿಸಿದ್ದು, ಅನುಭವಿ ಅಧ್ಯಾಪಕರು ಹಾಗೂ ಪ್ರತಿಭಾವಂತ ವಿದ್ಯಾರ್ಥಿಗಳು ಮಾರ್ಗದರ್ಶನ ಮಾಡಲಿದ್ದಾರೆ. ನುರಿತ ಅಧ್ಯಾಪಕರ ಜತೆಗೆ, ನೀಟ್, ಸಿಇಟಿ ಮೂಲಕ ಹಿಂದಿನ ವರ್ಷಗಳಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳು ಮೆಂಟರ್‌ಗಳಾಗಿ ನೋಂದಾಯಿಸಿಕೊಂಡಿದ್ದು, ವಿದ್ಯಾರ್ಥಿಗಳಿಗೆ ನೆರವಾಗಲಿದ್ದಾರೆ. ಪ್ರತಿ ಮೆಂಟರ್‌ಗೆ ಇಬ್ಬರು ವಿದ್ಯಾರ್ಥಿಗಳನ್ನು ನಿಯೋಜಿಸಲಾಗುತ್ತಿದ್ದು, ಮಾರ್ಗದರ್ಶನ ಸಂಪೂರ್ಣ ಉಚಿತ ಎಂದರು.

ಕಾಲೇಜು ಪೋರ್ಟಲ್

ಅಭ್ಯರ್ಥಿಗಳು ಕಾಲೇಜುಗಳ ಆಯ್ಕೆಗೆ ಆಪ್ಷನ್ ದಾಖಲಿಸುವ ಮುನ್ನ ಆಯಾ ಕಾಲೇಜುಗಳ ಸಂಪೂರ್ಣ ಮಾಹಿತಿ ಕಾಲೇಜು ಪೋರ್ಟಲ್‌ನಲ್ಲಿ ಲಭ್ಯವಾಗುತ್ತದೆ. ಕಾಲೇಜುಗಳ ಮೂಲಸೌಲಭ್ಯ, ಶೈಕ್ಷಣಿಕ ವಾತಾವರಣ, ಪ್ರಯೋಗಾಲಯ, ಗ್ರಂಥಾಲಯ, ಕೊಠಡಿ, ಹಾಸ್ಟೆಲ್, ಕೋರ್ಸ್‌ವಾರು ಶುಲ್ಕ, ಅಧ್ಯಾಪಕ ವರ್ಗ ಸೇರಿದಂತೆ ಪೂರ್ಣ ವಿವರಗಳನ್ನು ವೀಕ್ಷಿಸಬಹುದು.

ಹಿಂದಿನ ಶೈಕ್ಷಣಿಕ ಸಾಲುಗಳಲ್ಲಿ ವಿದ್ಯಾರ್ಥಿಗಳು ಕಾಲೇಜುಗಳನ್ನು ಆಯ್ಕೆ ಮಾಡಿಕೊಂಡು, ಅಲ್ಲಿಗೆ ತೆರಳಿದಾಗ ಮೂಲಸೌಕರ್ಯ, ಸಮರ್ಪಕ ಅಧ್ಯಾಪಕ ವರ್ಗ ಇಲ್ಲದೇ ಇರುವುದು. ಕಾಲೇಜುಗಳ ಸ್ಥಳ ಬದಲಾವಣೆಗಳಿಂದ ಸಂಕಷ್ಟ ಅನುಭವಿಸುತ್ತಿದ್ದರು. ಇಂತಹ ಯಾವುದೇ ಗೊಂದಲಗಳಿಗೆ ಇನ್ನು ಮುಂದೆ ಅವಕಾಶ ಇರುವುದಿಲ್ಲ.

ಕೆಇಎ ಮೊಬೈಲ್ ಆ್ಯಪ್: ಕೆಇಎ ವೆಬ್‌ಸೈಟ್‌ನಲ್ಲಿ ಲಭ್ಯವಾಗುವ ಎಲ್ಲ ಮಾಹಿತಿಯನ್ನೂ 'ಕೆಇಎ ಮೊಬೈಲ್ ಆ್ಯಪ್' ಒಳಗೊಂಡಿರುತ್ತದೆ. ಆ್ಯಪ್ ಮೂಲಕವೇ ಅರ್ಜಿ ಹಾಕುವುದು, ಆಪ್ಷನ್ ದಾಖಲಿಸುವುದು, ಛಾಯ್ಸ್, ಶುಲ್ಕ ಪಾವತಿ ಸೇರಿದಂತೆ ಎಲ್ಲ ಪ್ರಕ್ರಿಯೆಗಳನ್ನು ಮಾಡಬಹುದು. ವಿದ್ಯಾರ್ಥಿಗಳ ಪ್ರವೇಶವನ್ನೂ ಆಯಾ ಕಾಲೇಜುಗಳು ಅಂದೇ ಖಚಿತಪಡಿಸುತ್ತವೆ. ಆ್ಯಪ್ ಡೌನ್‌ಲೋಡ್ ಮಾಡಿಕೊಂಡವರಿಗೆ ಸಂದೇಶ ಕಳುಹಿಸುವ ವ್ಯವಸ್ಥೆ ಕೂಡ ಇರುತ್ತದೆ.

ಆಯ್ಕೆ ಪ್ರಕ್ರಿಯೆಗೆ ಎ.ಐ ನೆರವು

ಬೆಂಗಳೂರು: ಸಿಇಟಿ ಮೂಲಕ ಎಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿಶಿಕ್ಷಣ ಕೋರ್ಸ್‌ಗಳ ಪ್ರವೇಶ ಪ್ರಕ್ರಿಯೆಯನ್ನು ಅತ್ಯಂತ ಸುಲಭ ಹಾಗೂ ತ್ವರಿತಗೊಳಿಸಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಕೃತಕ ಬುದ್ಧಿಮತ್ತೆ ಆಧಾರಿತ ತಂತ್ರಜ್ಞಾನವನ್ನು ಅಳವಡಿಸಿಕೊಂಡಿದೆ.

ವಿದ್ಯಾರ್ಥಿಗಳು ತಾವು ಪಡೆದ ರ‍್ಯಾಂಕಿಂಗ್‌ಗೆ ಅನುಗುಣವಾಗಿ ಕಾಲೇಜುಗಳನ್ನು ಆಯ್ಕೆ ಮಾಡಿಕೊಳ್ಳುವ ಮೊದಲು ಕೆಇಎ ಕಾಲೇಜು ಪೋರ್ಟಲ್‌ಗೆ ಭೇಟಿ ನೀಡಿದರೆ ಆಯಾ ಕಾಲೇಜುಗಳ ಚಿತ್ರಸಹಿತ ಸಂಪೂರ್ಣ ಮಾಹಿತಿ ಸಿಗಲಿದೆ ಎಂದು ತಿಳಿಸಿದರು.

'ಕೆಇಎ ಮೊಬೈಲ್ ಆ್ಯಪ್' ಅಪ್ಲಿಕೇಷನ್ ಡೌನ್‌ಲೋಡ್ ಮಾಡಿಕೊಂಡರೆ ಸಿಇಟಿ ಅರ್ಜಿ ಸಲ್ಲಿಕೆಯಿಂದ ಕಾಲೇಜುಗಳ ಆಯ್ಕೆ, ಪ್ರವೇಶದವರೆಗೂ ಅಂಗೈನಲ್ಲಿರುವ ಮೊಬೈಲ್‌ನಲ್ಲೇ ನಿರ್ವಹಣೆ ಮಾಡಬಹುದು ಎಂದು ಪ್ರಸನ್ನ ಮಾಹಿತಿ ನೀಡಿದರು.

ಪ್ರಶ್ನೋತ್ತರ

- **ನೀಟ್ ಪರೀಕ್ಷೆಗೂ ಮುನ್ನವೇ ಕೌನ್ಸೆಲಿಂಗ್ ಪ್ರಕ್ರಿಯೆ ನಡೆಯಲಿದೆಯೇ?**

ಸುಶ್ಮಿತಾ, ಮಸ್ಕಿ

ಹೌದು. ಆಪ್ಷನ್ ದಾಖಲಿಸಿ, ಕಾಲೇಜಿಗೆ ಪ್ರವೇಶ ಪಡೆಯಬೇಕಿಲ್ಲ. ಮುಂದಿನ ಸುತ್ತಿಗೆ ತಡೆಹಿಡಿಯಹುದು. ವೈದ್ಯಕೀಯ ಫಲಿತಾಂಶಕ್ಕೂ ಮೊದಲು ಪೂರ್ವ ಸುತ್ತು ಮತ್ತು ಮೊದಲ ಸುತ್ತು ನಡೆದಿರುತ್ತದೆ. ಎರಡನೇ ಸುತ್ತಿನವರೆಗೂ ವೈದ್ಯಕೀಯ ಫಲಿತಾಂಶ ಬಾರದಿದ್ದರೆ ಪ್ರವೇಶ ಪಡೆಯಲು ಹೇಳುತ್ತೇವೆ. ಮೂರನೇ ಸುತ್ತಿನಲ್ಲಿ ವೈದ್ಯಕೀಯ ಸೀಟು ಸಿಗದವರಿಗೆ ನಂತರ ಎಂಜಿನಿಯರಿಂಗ್ ಸೀಟು ಹಂಚಿಕೆ ಮಾಡಲಾಗುವುದು

- **ವೆರಿಫಿಕೇಷನ್ ಸ್ಲಿಪ್ ಯಾವಾಗ ಸಿಗುತ್ತದೆ?**

ಶರತ್, ಹೊಸಕೋಟೆ

ವೆರಿಫಿಕೇಷನ್ ಸ್ಲಿಪ್ ಬುಧವಾರ ಪ್ರಕಟಿಸಲಾಗುವುದು. ಕರ್ನಾಟಕ ಪರೀಕ್ಷಾ ಪ್ರಾಧಿಕಾರದ (ಕೆಇಎ) ವೆಬ್‌ಸೈಟ್ ವೀಕ್ಷಿಸಿ ಹಾಗೂ ವಾಟ್ಸ್‌ಆ್ಯಪ್ ಸಂದೇಶ ಕಳುಹಿಸಲಾಗುವುದು.

- **ಅಂಗವಿಕಲರ ವೈದ್ಯಕೀಯ ದಾಖಲೆಗಳ ಪರಿಶೀಲನೆ ಪಟ್ಟಿ ಯಾವಾಗ?**

ಲಿಂಗ್ರೋ, ಬೀದರ್

ಅಂಗವಿಕಲ ವಿದ್ಯಾರ್ಥಿಗಳ ವೈದ್ಯಕೀಯ ದಾಖಲೆಗಳ ಪರಿಶೀಲನೆ ಆಗಿರಬೇಕು. ತಪಾಸಣೆ ಮಾಡಿದ ವೈದ್ಯರು ವರದಿಯನ್ನು ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡುತ್ತಾರೆ. ಸರ್ಕಾರದ ಆದೇಶ ಪ್ರಕಾರ ಅಂಗವಿಕಲರಿಗೆ ಎಲ್ಲಾ ಕೋರ್ಸ್‌ಗಳಲ್ಲೂ ಶೇ 5ರಷ್ಟು ಮೀಸಲಾತಿ ಇದೆ. ಅಂಗವಿಕಲ ವಿದ್ಯಾರ್ಥಿಗಳು ಇಲ್ಲದಿದ್ದರೆ ಆ ಕೋಟಾ ಬೇರೆ ವಿದ್ಯಾರ್ಥಿಗಳಿಗೆ ಸೀಟು ಹಂಚಿಕೆ ಮಾಡಲಾಗುತ್ತದೆ

- **ಎರಡನೇ ಸುತ್ತಿನ ನಂತರ ಕಾಲೇಜು ಪ್ರವೇಶ ಕಡ್ಡಾಯವೇ?**

ಮಹೇಶ, ಕಲಬುರಗಿ

ಮೊದಲ ಸುತ್ತಿನಲ್ಲಿ ಒಂದು ಸೀಟು ಹಂಚಿಕೆಯಾಗುತ್ತದೆ. ಮೊದಲು ಆಪ್ಷನ್ ದಾಖಲು ಮಾಡುವಾಗ ಗರಿಷ್ಠ ಕಾಲೇಜು ಹಾಗೂ ಕೋರ್ಸ್‌ಗಳನ್ನು ದಾಖಲು ಮಾಡಬೇಕು. ನಂತರ ತೆಗೆದು ಹಾಕಲು ತಿದ್ದುಪಡಿ ಮಾಡಿಕೊಳ್ಳಬಹುದು

- **ಮಗನ ರ‍್ಯಾಂಕಿಂಗ್ 1 ಲಕ್ಷಕ್ಕೂ ಹೆಚ್ಚಿದೆ. ಎಂಜಿನಿಯರಿಂಗ್ ಸೀಟು ಸಿಗಲಿದೆಯೇ ?**

ಜ್ಯೋತಿ, ಕಮಸಾಗರ

ಎಂಜಿನಿಯರಿಂಗ್ ಸೀಟು ಒಂದೂವರೆ ಲಕ್ಷ, ಎರಡೂವರೆ ಲಕ್ಷ ರ‍್ಯಾಂಕಿಂಗ್ ಇದ್ದರೂ ಸಿಗುತ್ತದೆ. ಆದರೆ, ಯಾವ ಕಾಲೇಜು, ವಿಭಾಗ ಎಂಬುದು ಮುಖ್ಯ. ಹಾಗಾಗಿ ನಿಮ್ಮ ಮಗನಿಗೆ ಯಾವ ಕಾಲೇಜು, ವಿಭಾಗದಲ್ಲಿ ಆಸಕ್ತಿ ಎಂಬುದನ್ನು ತಿಳಿದುಕೊಳ್ಳಬೇಕು. ಕಳೆದ ವರ್ಷ ರಾಜ್ಯದಲ್ಲಿರುವ ಎಲ್ಲಾ ವಿಭಾಗಗಳಲ್ಲಿ ಎಷ್ಟು ರ‍್ಯಾಂಕ್‌ಗೆ ಸೀಟು ಸಿಕ್ಕಿದೆ ಎಂಬುದನ್ನು ಕೆಇಎ ವೆಬ್‌ಸೈಟ್‌ನಲ್ಲಿ ಹಾಕಲಾಗಿದೆ. ಕೆಇಎ ಚಾಟ್ ಬಾಟ್‌ಪ್ರಶ್ನೆ ಕೇಳಬಹುದು.

- **ಆಪ್ಷನ್ ದಾಖಲಾತಿ ದಿನಾಂಕ ಯಾವಾಗ?**

ಕಾಶಿನಾಥ್ ಮಾದರ, ಬಾಗಲಕೋಟೆ

ಪ್ರತಿ ಕಾಲೇಜಿನಲ್ಲೂ ಲಭ್ಯವಿರುವ ಸೀಟುಗಳ ಲಭ್ಯತಾ ಕರಡು ಪಟ್ಟಿ ಈಗಾಗಲೇ ಪ್ರಕಟಿಸಲಾಗಿದೆ. ಯಾವ ಮೀಸಲಾತಿಗೆ ಎಷ್ಟು ಸೀಟು ಇತ್ಯಾದಿ ವಿವರಗಳನ್ನು ಒಳಗೊಂಡ ಅಂತಿಮ ಪಟ್ಟಿ ಸಿದ್ಧವಾಗುತ್ತಿದೆ. ಎರಡು ಅಥವಾ ಮೂರು ದಿನದಲ್ಲಿ ವೇಳಾಪಟ್ಟಿ ಪ್ರಕಟಿಸಲಾಗುವುದು

- **ಕೌನ್ಸೆಲಿಂಗ್ ಯಾವಾಗಿನಿಂದ ಪ್ರಾರಂಭವಾಗಲಿದೆ?**

ಜೂಹಿಜೂವಾ, ಭದ್ರಾವತಿ

ಎರಡು, ಮೂರು ದಿನದಲ್ಲಿ ದಿನಾಂಕ ಪ್ರಕಟಿಸಲಾಗುವುದು. ಕೆಇಎ ವೆಬ್‌ಸೈಟ್‌ನಲ್ಲಿ ಕಳೆದ ವರ್ಷ ಎಷ್ಟು ರ‍್ಯಾಂಕಿಂಗ್ ಯಾವ ಕೋರ್ಸ್ ಸಿಕ್ಕಿದೆ ಎಂಬುದನ್ನು ನೋಡಿ ತಿಳಿದುಕೊಳ್ಳಬಹುದು. ವೆರಿಫಿಕೇಷನ್ ಸ್ಲಿಪ್ ಡೌನ್ ಲೋಡ್ ಮಾಡಿಕೊಂಡು ಆಪ್ಷನ್ ದಾಖಲಿಸಬೇಕು

- **ಆಪ್ಷನ್ ದಾಖಲಾತಿ ಬಗ್ಗೆ ಮಾಹಿತಿ ಬೇಕಿತ್ತು. ಮಗಳು ಮೆಡಿಕಲ್ ಮಾಡಬೇಕು ಎನ್ನುತ್ತಿದ್ದಾಳೆ?**

ರೇಖಾ, ಕೊಡಗು

ಸದ್ಯ ನೀಟ್ ಪರೀಕ್ಷೆ ಕಡೆ ಗಮನಹರಿಸಲಿ. ಫಲಿತಾಂಶ ಬಂದ ಬಳಿಕ ಕೌನ್ಸೆಲಿಂಗ್ ಶುರು ಮಾಡಲಾಗುವುದು. ವೇಳಾಪಟ್ಟಿ ತಿಳಿಸಲಾಗುವುದು. ಆಗ ನಮ್ಮಲ್ಲೂ ಆಪ್ಷನ್ ದಾಖಲು ಮಾಡಿ, ನಂತರ ನೀಟ್ ಫಲಿತಾಂಶ ಬಂದ ಬಳಿಕ ಆಪ್ಷನ್ ದಾಖಲು ಮಾಡಲು ಅವಕಾಶ ನೀಡಲಾಗುವುದು.

- **ದಾಖಲೆ ಪರಿಶೀಲನೆಯಲ್ಲಿ ಕಡ್ಡಾಯ ಕನ್ನಡ ದಾಖಲೆ ನೀಡಿಲ್ಲ. ಏನು ಮಾಡಬೇಕು?**

ಸುಷ್ಮಾ, ಮೈಸೂರು

ಕಾಲೇಜಿಗೆ ದಾಖಲೆ ಸಲ್ಲಿಸಲು ಆಗಲಿಲ್ಲ ಎಂದರೆ ಬೆಂಗಳೂರಿನಲ್ಲಿರುವ ಕೆಇಎ ಕಚೇರಿಗೆ ಮೂಲ ದಾಖಲೆಗಳನ್ನು ತೆಗೆದುಕೊಂಡು ಬಂದು ಸರಿಪಡಿಸಿಕೊಳ್ಳಬೇಕು. ಕಾಲೇಜಿನಲ್ಲಿ ಪರಿಶೀಲನೆಗೆ ಆರು ತಿಂಗಳು ಅವಕಾಶ ನೀಡಲಾಗಿತ್ತು. ಕಾಲೇಜು ಪೋರ್ಟಲ್ ಬಂದ್ ಮಾಡಲಾಗಿದೆ. ಕೆಇಎಗೆ ಬಂದು ಸರಿಪಡಿಸಿಕೊಳ್ಳಬಹುದು

- **ನೀಟ್ ಪರೀಕ್ಷೆ ಬರೆಯುತ್ತಿದ್ದೇನೆ. ಸಿಇಟಿ ಮೂಲಕ ಫಿಸಿಯೋಥೆರಪಿ ಬೇಕು?**

ವಿನುತಾ, ಉತ್ತರಕನ್ನಡ

ನೀಟ್ ಪರೀಕ್ಷೆಗೆ ಚೆನ್ನಾಗಿ ಅಭ್ಯಾಸ ಮಾಡಿಕೊಳ್ಳಿ. ನೀಟ್ ಬರೆಯುವ ವಿದ್ಯಾರ್ಥಿಗಳು ಕೌನ್ಸೆಲಿಂಗ್ ಬಗ್ಗೆ ಹೆಚ್ಚು ತಲೆಕೆಡಿಸಿಕೊಳ್ಳಬೇಡಿ. ಆಪ್ಷನ್ ದಾಖಲು ಮಾಡಿ, ನಿಮಗೆ ತೊಂದರೆ ಆಗದಂತೆ ಮಾರ್ಗಸೂಚಿ ಹೊರಡಿಸಲಾಗುವುದು

- **ತಮ್ಮನಿಗೆ ಬಿ.ಎಸ್‌ಸಿ–ಕೃಷಿಯಲ್ಲಿ 23 ಸಾವಿರ ರ‍್ಯಾಂಕ್ ಬಂದಿದೆ. ಸೀಟು ಸಿಗುತ್ತದೆಯೇ?**

ಸೌಮ್ಯಾ, ಹುಬ್ಬಳ್ಳಿ

ಈ ವರ್ಷ ಹೇಳಲು ಆಗುವುದಿಲ್ಲ. ಕಳೆದ ವರ್ಷ, ಅದರ ಹಿಂದಿನ ವರ್ಷ ಎಷ್ಟು ರ‍್ಯಾಂಕ್‌ನವರಿಗೆ ಸೀಟು ದೊರಕಿತ್ತು ಎಂಬುದು ಕೆಇಎ ವೆಬ್‌ಸೈಟ್ ವೀಕ್ಷಿಸಿ, ಖಚಿತಪಡಿಸಿಕೊಳ್ಳಬಹುದು

ಕರೆ ಮಾಡಿದವರು: ಹೊಸಪೇಟೆಯ ಪ್ರಜ್ವಲ್, ಮೈಸೂರಿನ ಅನು ಎಂ, ಗುರುಪ್ರಸಾದ್, ಮೂಡುಬಿದರೆ ಕೌಶಿಕ್, ಅಥಣಿಯ ಸಂಜನಾ, ಕಾಸರಗೋಡಿನ ಶ್ರೀವತ್ಸ, ದಾವಣಗೆರೆ ಕಿರಣ್, ಕಲಬುರಗಿಯ ಭಾಗ್ಯಶ್ರೀ, ಮಾರತ್‌ಹಳ್ಳಿಯ ಶಿವ

ಪಡಿತರ ವಿತರಣೆ: ಒಂದು ಬಾರಿಯಷ್ಟೇ ಬಯೊಮೆಟ್ರಿಕ್



ಬೆಂಗಳೂರು: ಆಹಾರ ಇಲಾಖೆ ಮೇ ಮತ್ತು ಜೂನ್ ತಿಂಗಳ ಪಡಿತರ ಬಿಡುಗಡೆ ಮಾಡಿದ್ದು, ಒಂದು ಬಾರಿ ಬಯೊಮೆಟ್ರಿಕ್ ನೀಡಿ ಪಡಿತರ ಪಡೆಯಲು ಗ್ರಾಹಕರಿಗೆ ಅವಕಾಶ ನೀಡಿದೆ.

ಮೊಬೈಲ್ ಬಳಕೆ ಜನಪ್ರಿಯವಾದ ನಂತರ ಪಡಿತರ ವಿತರಣೆಯಲ್ಲಿ ಉಪಯೋಗಿಸುತ್ತಿದ್ದ ಒಟಿಪಿ (ಒನ್ ಟೈಮ್ ಪಾಸ್‌ವರ್ಡ್) ಸೌಲಭ್ಯ ರದ್ದು ಮಾಡಿ ನ್ಯಾಯಬೆಲೆ ಅಂಗಡಿಗಳೂ ಸೇರಿದಂತೆ ರಾಜ್ಯದ ಪಡಿತರ ವಿತರಣಾ ಕೇಂದ್ರಗಳಲ್ಲಿ ಬಯೋಮೆಟ್ರಿಕ್ ನೀಡಿ ಪಡಿತರ ಪಡೆಯಲು ಸೂಚಿಸಲಾಗಿತ್ತು. ಆದರೆ, ಸರ್ವರ್ ಸಮಸ್ಯೆಯಿಂದ ಜನರು ಸಕಾಲದಲ್ಲಿ ಪಡಿತರ ಪಡೆಯಲು ಸಾಧ್ಯವಾಗದೆ ಪರದಾಡುವಂತಾಗಿತ್ತು. ಇದರಿಂದ ಪೂರ್ಣ ಪ್ರಮಾಣದಲ್ಲಿ ಪಡಿತರ ವಿತರಣೆ ಆಗಿರಲಿಲ್ಲ.

ಎರಡು ತಿಂಗಳ ಪಡಿತರ ವಿತರಣಾ ಕಾರ್ಯ ಜೂನ್ 5ರಿಂದ ಆರಂಭವಾಗಿದ್ದು, ಬೆಳಿಗ್ಗೆ 6ರಿಂದ ರಾತ್ರಿ 10ರವರೆಗೂ ವಿತರಣೆ ಮಾಡಲು, ಎರಡು ಬಾರಿ ಬಯೋಮೆಟ್ರಿಕ್ ಪಡೆಯುವ ಬದಲು, ಒಂದು ಬಾರಿ ಪಡೆದು ಪಡಿತರ ಪದಾರ್ಥಗಳನ್ನು ನೀಡಲು ಸೂಚಿಸಲಾಗಿದೆ.

ಪಡಿತರ ವಿತರಣೆಯಲ್ಲಿ ಪ್ರಗತಿ ಸಾಧಿಸಲು ಹಿಂದಿನಂತೆ ಒಟಿಪಿ ಅಗತ್ಯವಿದೆ. ಬಯೊಮೆಟ್ರಿಕ್ ವಿನಾಯಿತಿ ಜತೆಗೆ ಒಟಿಪಿಗೂ ಅವಕಾಶ ಮಾಡಿಕೊಡಬೇಕು ಎಂದು ಹಲವು ಗ್ರಾಹಕರು ಒತ್ತಾಯಿಸಿದ್ದರು.

ಬೈಲಹೊಂಗಲ–ಮುನವಳ್ಳಿ ದಾರಿಯಲ್ಲಿ ಸೇತುವೆ ಕುಸಿತ

ಮಳೆ: 10 ಮನೆಗಳು ನೆಲಸಮ

ಪ್ರಜಾವಾಣಿ ವಾರ್ತೆ



ಬೆಳಗಾವಿ ಜಿಲ್ಲೆಯ ಬೈಲಹೊಂಗಲ ನಗರದ ಕಲ್ಮಠ ಗಲ್ಲಿಯಲ್ಲಿ ಮಳೆಯಿಂದ ನೆಲಸಮವಾದ ಮನೆಗಳು ಪ್ರಜಾವಾಣಿ ಚಿತ್ರ: ರವಿಕುಮಾರ ಎಂ. ಹುಲಕುಂದ

ಮುಖ್ಯಾಂಶಗಳು

- ಮನೆಗಳ ಗೋಡೆಗಳಲ್ಲಿ ಭಾರಿ ಬಿರುಕು
- ತಗ್ಗು ಪ್ರದೇಶದ ಮನೆಗಳಿಗೆ ನುಗ್ಗಿದ ನೀರು
- ನೀರಿನಲ್ಲಿ ಕೊಚ್ಚಿ ಹೋದ ದಾಖಲೆಗಳು

ಭಾರಿ ಮಳೆಯಿಂದ ಸಾಕಷ್ಟು ಅವಾಂತರ ಉಂಟಾಗಿದೆ. ಮನೆ ಕಳೆದುಕೊಂಡ ಕುಟುಂಬಸ್ಥರೊಂದಿಗೆ ಮಾತುಕತೆ ನಡೆಸಿ ಆಶ್ರಯ ಕಲ್ಪಿಸಲು ಕ್ರಮ ವಹಿಸಲಾಗುವುದು

ಮಹಾಂತೇಶ ಕೌಜಲಗಿ, ಶಾಸಕ

ಬೈಲಹೊಂಗಲ (ಬೆಳಗಾವಿ ಜಿಲ್ಲೆ): ನಗರದಲ್ಲಿ ಸೋಮವಾರ ಸುರಿದ ಭಾರಿ ಮಳೆಯಿಂದ 10 ಮನೆಗಳು ಸಂಪೂರ್ಣ ಕುಸಿದಿದ್ದು, ಐದು ಮನೆಗಳು ಬಿರುಕು ಬಿಟ್ಟಿವೆ.

ಬೈಲಹೊಂಗಲ– ಮುನವಳ್ಳಿ ಮಾರ್ಗದಲ್ಲಿ ನಿರ್ಮಾಣ ಹಂತದಲ್ಲಿದ್ದ ಸೇತುವೆ ಕೊಚ್ಚಿಹೋಗಿದೆ. ತಗ್ಗು ಪ್ರದೇಶದ 300 ಮನೆಗಳಿಗೆ ನೀರು ನುಗ್ಗಿದ್ದರಿಂದ ದಾಖಲೆಗಳು, ದಿನಬಳಕೆ ಸಾಮಗ್ರಿಗಳಿಗೆ ಹಾನಿಯಾಗಿದೆ.

ಕಲ್ಮಠ ಗಲ್ಲಿಯಲ್ಲಿ ಕಲ್ಲು–ಮಣ್ಣಿನ ಮನೆಗಳು ಸೋಮವಾರ ರಾತ್ರಿ ನೆಲ ಸಮವಾಗಿವೆ. ಮಳೆಯಿಂದ ಭಯಗೊಂಡ ಮನೆಯ ಸದಸ್ಯರು ಮುಂಚಿತವಾಗಿಯೇ ಹೊರಗೆ ಹೋಗಿದ್ದರಿಂದ ಯಾರಿಗೂ ಅಪಾಯವಾಗಿಲ್ಲ. ಹೆಂಚಿನ ಚಾವಣಿ, ಮಣ್ಣಿನ ಗೋಡೆಗಳು ಕುಸಿದು ಅವಶೇಷಗಳಾಗಿ ಮಾರ್ಪಟ್ಟಿವೆ. ಹುಡೇದಬಾವಿ ಪ್ರದೇಶದಲ್ಲಿ ಎರಡು ಮನೆಗಳು ಸಂಪೂರ್ಣ ನೆಲಕಚ್ಚಿವೆ, ಆಸುಪಾಸಿನ ಐದು ಮನೆಗಳು ದೊಡ್ಡ ಪ್ರಮಾಣದಲ್ಲಿ ಬಿರುಕು ಬಿಟ್ಟಿವೆ.

ಮನೆ ಕಳೆದುಕೊಂಡವರಿಗೆ ನಗರದ ಬಿಸಿಎಂ ವಸತಿ ನಿಲಯದಲ್ಲಿ ತಾತ್ಕಾಲಿಕ ವಸತಿ ವ್ಯವಸ್ಥೆ ಮಾಡಲಾಗಿದೆ. ಆದರೆ, ಇಲ್ಲಿ ಯಾರೂ ಉಳಿದುಕೊಂಡಿಲ್ಲ. ಅವರ ಸಂಬಂಧಿಕರ ಮನೆಗೆ ತೆರಳಿದ್ದಾರೆ. ಬೈಲಹೊಂಗಲ– ಬೆಳಗಾವಿ ಮಾರ್ಗದ ರಸ್ತೆ ಮೇಲೆ 5 ಅಡಿಯಷ್ಟು ನೀರು ಹರಿದಿದ್ದರಿಂದ ಸೋಮವಾರ ಮಧ್ಯಾಹ್ನದಿಂದ ಸಂಚಾರ ಬಂದ್ ಆಗಿತ್ತು. ಮಂಗಳವಾರ ಸಂಚಾರ ಆರಂಭವಾಯಿತು.

ಏಕಾಏಕಿ ಉಕ್ಕೇರಿದ ನದಿಯಂತೆ ಹರಿದ ಮಳೆ ನೀರು ಅಂಗಡಿ, ಮನೆಗಳಿಗೂ ನುಗ್ಗಿತು. ಕಿರಾಣಿ ಸಾಮಗ್ರಿಗಳು, ಬಟ್ಟೆ ಅಂಗಡಿಯ ವಸ್ತುಗಳು, ದಿನಸಿ ಪದಾರ್ಥಗಳು ನೀರಿನೊಂದಿಗೆ ಹರಿದು ಹೋದವು. ಮನೆಗಳಲ್ಲಿದ್ದ ಬಟ್ಟೆ, ಆಹಾರ ಪದಾರ್ಥಗಳು ನೀರುಪಾಲಾದವು. ತಿಜೋರಿಯಲ್ಲಿ ಇದ್ದ ಆಸ್ತಿಪತ್ರಗಳು, ಶೈಕ್ಷಣಿಕ ದಾಖಲೆಗಳೆಲ್ಲವೂ ತೊಯ್ದವು. ಮಂಗಳವಾರ ಬೆಳಿಗ್ಗೆ ಶಾಲಾ ಮಕ್ಕಳು ತಮ್ಮ ದಾಖಲೆಗಳು ಹಾಗೂ ಪುಸ್ತಕಗಳನ್ನು ಒಣಗಲು ಹಾಕಿದ್ದು ಎಲ್ಲೆಡೆ ಕಂಡುಬಂತು.

ತಹಶೀಲ್ದಾರ ಸದಾಶಿವ ಮಕ್ಕೋಜಿ, ಪೌರಾಯುಕ್ತೆ ಭಾಗ್ಯಶ್ರೀ ಹುಗ್ಗಿ, ಮಾಜಿ ಶಾಸಕ ಡಾ.ವಿಶ್ವನಾಥ ಪಾಟೀಲ ಕೂಡ ಮಳೆ ಹಾನಿ ಸ್ಥಳಗಳ ಪರಿಶೀಲನೆ ನಡೆಸಿದರು. ಇದರ ಮಧ್ಯೆ, ನಗರಸಭೆಯ ನಿರ್ಲಕ್ಷ್ಯದಿಂದಲೇ ಅವಾಂತರ ಸೃಷ್ಟಿಯಾಗಿದೆ. ಹಾನಿಗೆ ಪರಿಹಾರ ಒದಗಿಸಬೇಕು ಎಂದು ಆಗ್ರಹಿಸಿ ನಾಗರಿಕರು, ಮಂಗಳವಾರ ನಗರಸಭೆಗೆ ಮುತ್ತಿಗೆ ಹಾಕಿದರು.

ಕೊಚ್ಚಿಹೋದ ತಾತ್ಕಾಲಿಕ ರಸ್ತೆ

ಪ್ರಜಾವಾಣಿ ವಾರ್ತೆ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಂಗಳವಾರ ಆಗಾಗ ಧಾರಾಕಾರ ಮಳೆಯಾಗಿದೆ. ಬೆಳ್ತಂಗಡಿ ತಾಲ್ಲೂಕಿನಾದ್ಯಂತ ಗಾಳಿ–ಮಳೆಯಾಗಿದ್ದು, ಉಜಿರೆ ಹಾಗೂ ಕನ್ಯಾಡಿ-1 ಗ್ರಾಮ ವ್ಯಾಪ್ತಿಯ ಅಂಬಡಬೆಟ್ಟು ಪ್ರದೇಶದ ಹಳ್ಳವೊಂದರ ಸೇತುವೆ ಕಾಮಗಾರಿ ಸಲುವಾಗಿ ತಾತ್ಕಾಲಿಕವಾಗಿ ನಿರ್ಮಿಸಿದ್ದ ರಸ್ತೆ ಕೊಚ್ಚಿ ಹೋಗಿದೆ.

ಅಂಬಡಬೆಟ್ಟು ಕಿರು ಸೇತುವೆ ₹2.50 ಕೋಟಿ ವೆಚ್ಚದಲ್ಲಿ ನಿರ್ಮಾಣವಾಗುತ್ತಿದ್ದು, ಅದರ ಪಕ್ಕದಲ್ಲಿ ಮಣ್ಣು ಹಾಕಿ ತಾತ್ಕಾಲಿಕ ರಸ್ತೆ ನಿರ್ಮಿಸಲಾಗಿತ್ತು. ಮಂಗಳವಾರ ಮಧ್ಯಾಹ್ನ ಸುರಿದ ಭಾರಿ ಮಳೆಗೆ ಹಳ್ಳ ಉಕ್ಕಿ ಹರಿದು, ರಸ್ತೆಯ ಮಣ್ಣು ಕೊಚ್ಚಿಕೊಂಡು ಹೋಗಿದೆ. ಅಂಬಡಬೆಟ್ಟು ಪ್ರದೇಶಕ್ಕೆ ಸಂಪರ್ಕ ಕಡಿತಗೊಂಡಿದ್ದು, ದಾರಿಯಲ್ಲಿ ಸಾಗುವವರು 20 ಕಿ.ಮೀ. ಸುತ್ತಿ ಬಳಸಿ ಉಜಿರೆ ತಲುಪಬೇಕಾಗಿದೆ.

ಉಡುಪಿ ಜಿಲ್ಲೆಯಾದ್ಯಂತ ಮಧ್ಯಾಹ್ನದ ಬಳಿಕ ಸಾಧಾರಣ ಮಳೆಯಾಗಿದೆ. ಚಿಕ್ಕಮಗಳೂರು ನಗರ ಸೇರಿ ಮಲೆನಾಡು ಭಾಗದಲ್ಲಿ ಅಲ್ಲಲ್ಲಿ ಉತ್ತಮ ಮಳೆ ಸುರಿಯಿತು.

ಕಲಬುರಗಿಯಲ್ಲಿ ಬಿರುಸಿನ ಮಳೆ: ಕಲಬುರಗಿ ಹಾಗೂ ಯಾದಗಿರಿಯಲ್ಲಿ ಮಂಗಳವಾರ ಕೆಲಕಾಲ ಮಳೆ ಸುರಿಯಿತು. ಮುಂಗಾರು ಮಳೆಯ ಮೊದಲ ಸಿಂಚನ ಇದಾಗಿದೆ. ಬೆಳಿಗ್ಗೆಯಿಂದ ತೀವ್ರ ಬಿಸಿಲು, ಸೆಕೆಯಿತ್ತು. ಸಂಜೆ 6 ಗಂಟೆ ಮಳೆಯಾಯಿತು.


ಯಾದಗಿರಿ ಜಿಲ್ಲೆಯ ಹುಣಸಗಿ ತಾಲ್ಲೂಕಿನ ಅಗ್ನಿ, ಕೋಳಿಹಳ್ಳ, ಬೈಚಬಾಳ ಅರಕೇರಾ (ಜೆ), ಸುರಪುರ ತಾಲ್ಲೂಕಿನ ಮಾಲಗತ್ತಿ, ಮಲ್ಲಾ (ಬಿ), ದೇವಪುರ ವ್ಯಾಪ್ತಿಯಲ್ಲಿ ಸಾಧಾರಣ ಮಳೆಯಾಗಿದೆ.



ಬೆಳ್ತಂಗಡಿ ತಾಲ್ಲೂಕಿನ ಅಂಬಡಬೆಟ್ಟು ಪ್ರದೇಶದಲ್ಲಿ ಕಾಮಗಾರಿ ಸಲುವಾಗಿ ಹಳ್ಳಕ್ಕೆ ತಾತ್ಕಾಲಿಕವಾಗಿ ನಿರ್ಮಿಸಿದ್ದ ರಸ್ತೆ ಮಳೆಗೆ ಕೊಚ್ಚಿಹೋಗಿದೆ

ಪತ್ನಿ, ಮಗನನ್ನು ಕೊಂದು ಬಟ್ಟೆ ವ್ಯಾಪಾರಿ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ



ಪ್ರಭಾಕರ್



ಜ್ಯೋತಿ



ಸಂತೋಷ್

ಮಂಡ್ಯ: ವ್ಯಾಪಾರದಲ್ಲಿ ನಷ್ಟ ಹಾಗೂ ವಿಪರೀತವಾಗಿ ಮಾಡಿಕೊಂಡ ಸಾಲ ತೀರಿಸಲಾಗದೇ ಒತ್ತಡದಿಂದಾಗಿ ನಗರದ ಬಟ್ಟೆ ವ್ಯಾಪಾರಿಯೊಬ್ಬರು ಮಂಗಳವಾರ ಪತ್ನಿ ಮತ್ತು ಮಗನನ್ನು ಕೊಂದು ನಂತರ ತಾನೂ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಇಲ್ಲಿಯ ನೆಹರೂ ನಗರದ ನಿವಾಸಿ ಪ್ರಭಾಕರ್(65) ಮಂಗಳವಾರ ಬೆಳಗಿನ ಜಾವ ಪತ್ನಿ ಜ್ಯೋತಿ(55) ಅವರನ್ನು ಪಂಚೆಯಿಂದ ಉಸಿರುಗಟ್ಟಿಸಿ ಕೊಲೆ ಮಾಡಿದ್ದಾರೆ. ಅದೇ ವೇಳೆ ಕೊಠಡಿಗೆ ಬಂದ ಮಗ ಸಂತೋಷ್(30) ಅವರನ್ನೂ ಅದೇ ರೀತಿ ಕೊಲೆ ಮಾಡಿದ್ದಾರೆ.

ಇಬ್ಬರೂ ಮೃತಪಟ್ಟಿರುವುದನ್ನು ಖಚಿತಪಡಿಸಿಕೊಂಡ ನಂತರ ಬಟ್ಟೆ ಅಂಗಡಿಗೆ ತೆರಳಿ ತಾವೂ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಗಾಢನಿದ್ರೆಯಲ್ಲಿದ್ದ ಸೊಸೆಗೆ ಅತ್ತೆ ಮತ್ತು ಪತಿಯನ್ನು ಕೊಲೆ ಮಾಡಿರುವುದು ಗೊತ್ತಾಗಿಲ್ಲ. ಹೀಗಾಗಿ ಸೊಸೆ ಪಾರಾಗಿದ್ದಾರೆ.

ಪ್ರಭಾಕರ್ ಮತ್ತು ಜ್ಯೋತಿ ದಂಪತಿಗೆ ಇಬ್ಬರು ಮಕ್ಕಳು. ಮಗಳು ಸಾಫ್ಟ್‌ವೇರ್ ಉದ್ಯೋಗಿಯಾಗಿದ್ದು ಬೆಂಗಳೂರಿನಲ್ಲಿ ವಾಸವಿದ್ದಾರೆ. ಪ್ರಭಾಕರ್, ಪತ್ನಿ, ಮಗ ಮತ್ತು ಸೊಸೆಯೊಂದಿಗೆ ಬಾಡಿಗೆ ಮನೆಯಲ್ಲಿ ವಾಸವಿದ್ದರು. ತಿಂಗಳ ಹಿಂದೆಯಷ್ಟೇ ಸಂತೋಷ್ ವಿವಾಹವಾಗಿತ್ತು ಎಂದು ತಿಳಿದು ಬಂದಿದೆ.

ಮಂಡ್ಯ ಪೂರ್ವ ಠಾಣಾ ವ್ಯಾಪ್ತಿಯಲ್ಲಿ ಪ್ರಕರಣ ದಾಖಲಾಗಿದೆ. ಮಿಮ್ಸ್‌ನಲ್ಲಿ ಶವಗಳ ಮರಣೋತ್ತರ ಪರೀಕ್ಷೆ ನಡೆಸಿ ವಾರಸುದಾರರಿಗೆ ಹಸ್ತಾಂತರ ಮಾಡಲಾಯಿತು.

ಮರಣಪತ್ರ ಪತ್ತೆ

ಪ್ರಭಾಕರ್ ಆತ್ಮಹತ್ಯೆ ಮಾಡಿಕೊಳ್ಳುವ ಮುನ್ನ ಮರಣಪತ್ರ ಬರೆದಿಟ್ಟಿದ್ದಾರೆ. ಶಕ್ತಿ ಯೋಜನೆ ಶುರುವಾದ ನಂತರ ಉಚಿತ ಬಸ್‌ನಲ್ಲಿ ಮಹಿಳೆಯರು ಖರೀದಿಗಾಗಿ ಬೆಂಗಳೂರಿಗೆ ತೆರಳುತ್ತಿರುವ ಕಾರಣ ಬಟ್ಟೆ ವ್ಯಾಪಾರ ಕುಸಿದಿದೆ ಎಂದು ಮರಣಪತ್ರದಲ್ಲಿ ಉಲ್ಲೇಖಿಸಿದ್ದಾರೆ. ಸ್ಥಳದಲ್ಲಿ ಸಿಕ್ಕ ಪತ್ರವನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

'ಗೃಹ ಸಾಲ ಮಾಡಿದ್ದ ವರ್ತಕ ಪ್ರಭಾಕರ್ ವ್ಯಾಪಾರ ನಷ್ಟದಿಂದ ಸಾಲದ ಕಂತು ಕಟ್ಟಲು ಸಾಧ್ಯವಾಗಿರಲಿಲ್ಲ. ಬಟ್ಟೆ ವ್ಯಾಪಾರ ಮಾಡಲು ಮೈಕ್ರೊ ಫೈನಾನ್ಸ್ ಸೇರಿದಂತೆ ವಿವಿಧೆಡೆ ಸಾಲ ಮಾಡಿಕೊಂಡಿದ್ದರು. ಸಾಲ ತೀರಿಸಲು ಸಾಧ್ಯವಾಗದೆ ಸಂಕಷ್ಟಕ್ಕೆ ಸಿಲುಕಿದ್ದರು. ಸಾಲ ಕೊಟ್ಟವರು ವಾಪಸ್ ಕೊಡಿ ಎಂದು ಪೀಡಿಸುತ್ತಿದ್ದರು. ಇದರಿಂದ ಬೇಸತ್ತು ಈ ನಿರ್ಧಾರ ಕೈಗೊಂಡಿದ್ದಾರೆ' ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ದಾಖಲಿಸಿದ್ದ ದೂರು

'ವಕೀಲರ ವಿರುದ್ಧ ಕ್ರಿಮಿನಲ್ ಅಸ್ತ್ರ ಪ್ರಯೋಗ ಆಘಾತಕಾರಿ'

ಪ್ರಜಾವಾಣಿ ವಾರ್ತೆ



ವೈಯಕ್ತಿಕ ವ್ಯಾಜ್ಯಗಳಲ್ಲಿ ಎದುರುದಾರರ ಪರವಾಗಿ ಹಾಜರಾಗುವುದೇ ತಪ್ಪು ಎಂದು ಅಂತಹ ವಕೀಲರ ವಿರುದ್ಧ ವಿನಾಕಾರಣ ಕ್ರಿಮಿನಲ್ ಮೊಕದ್ದಮೆ ದಾಖಲಿಸುವ ಪ್ರವೃತ್ತಿಯು ಸಮಸ್ತ ವಕೀಲ ಸಮುದಾಯಕ್ಕೆ ಮರ್ಮಾಘಾತ ನೀಡಿದಂತೆ

ನ್ಯಾಯಮೂರ್ತಿ ಎಂ.ನಾಗಪ್ರಸನ್ನ

ಬೆಂಗಳೂರು:'ದಾವೆದಾರರ ಪರ ವಕೀಲರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡಿ ಅವರನ್ನು ತನಿಖಾ ಪ್ರಕ್ರಿಯೆಯ ಖೆಡ್ಡಾಕ್ಕೆ ಬೀಳಿಸಿ ನ್ಯಾಯಿಕ ವಿಚಾರಣೆಯಲ್ಲಿ ಪ್ರತಿನಿಧಿಸದಂತೆ ಹಿಂದೆ ಸರಿಸುವ, ಅಧೀರಗೊಳಿಸುವ ಎದುರು ಪಕ್ಷಗಾರರ ಪ್ರವೃತ್ತಿ ಆಘಾತಕಾರಿ' ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

'ನನ್ನ ವಿರುದ್ಧ ನಗರದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಎಚ್. ಸೀಮಾ ದಾಖಲಿಸಿರುವ ಕ್ರಿಮಿನಲ್ ಪ್ರಕರಣ ರದ್ದುಪಡಿಸಬೇಕು' ಎಂದು ಕೋರಿ ವಕೀಲ ಪ್ರದೀಪ್ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ಪುರಸ್ಕರಿಸಿರುವ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ; ಅರ್ಜಿದಾರರ ವಿರುದ್ಧ ದಾಖಲಿಸಿರುವ ವಿಚಾರಣಾ ನ್ಯಾಯಾಲಯದ ಪ್ರಕ್ರಿಯೆ ಮತ್ತು ಎಫ್ಐಆರ್ ಅನ್ನು ವಜಾಗೊಳಿಸಿದೆ.

'ವಕೀಲರು ನ್ಯಾಯಾಲಯದ ಅಧಿಕಾರಿಗಳು. ಅವರು ತಮ್ಮ ವೃತ್ತಿಪರ ಕರ್ತವ್ಯದ ಮಿತಿಯೊಳಗೆ ಮತ್ತು ತಮ್ಮ ಕಕ್ಷಿದಾರರ ಸೂಚನೆಗಳ ಮೇರೆಗೆ ಕಾರ್ಯ ನಿರ್ವಹಿಸುತ್ತಾರೆ. ಇಂತಹವರ ವಿರುದ್ಧ ಅತೃಪ್ತ ದಾವೆದಾರರು ಕ್ರಿಮಿನಲ್ ಕಾನೂನನ್ನು ಬೆದರಿಕೆಯ ಅಸ್ತ್ರವಾಗಿ ಬಳಸುವ ಮೂಲಕ ವಕೀಲಿಕೆಯ ಘನತೆ ಕುಗ್ಗಿಸಲು ಮುಂದಾದರೆ ಅಂತಹ ಕುಕೃತ್ಯಕ್ಕೆ ಸುತಾರಾಂ ಅವಕಾಶ ನೀಡುವುದಿಲ್ಲ' ಎಂದು ನ್ಯಾಯಪೀಠವು ಸೀಮಾ ಅವರನ್ನು ಎಚ್ಚರಿಸಿದೆ.



ಪ್ರಕರಣದ ಪ್ರತಿವಾದಿಯಾಗಿರುವ ಎಚ್.ಸೀಮಾ ಅವರ ಎದುರುದಾರರನ್ನು ಪ್ರತಿನಿಧಿಸುತ್ತಿದ್ದ ಪ್ರದೀಪ್ ವಿರುದ್ಧ ಸುಳ್ಳು ಆರೋಪ ಹೊರಿಸಿದ ನಡೆಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿರುವ ನ್ಯಾಯಪೀಠ, 'ತಮ್ಮ ಅಧಿಕಾರ ದುರುಪಯೋಗ ಮಾಡಿಕೊಂಡು ಹೋಗುವ ಅನಿಷ್ಟ ಪ್ರವೃತ್ತಿಯು ವಕೀಲ ವೃಂದದ ಮೇಲೆ ಗಂಭೀರ ಪರಿಣಾಮ ಬೀರುತ್ತದೆ. ವಕೀಲರನ್ನು ಆರೋಪಿಗಳನ್ನಾಗಿ ಬಿಂಬಿಸಿರುವ ಸೀಮಾ ಅವರು ಇಂತಹ ನಡವಳಿಕೆಯನ್ನು ಪುನರಾವರ್ತನೆ ಮಾಡಿದರೆ ಕಟ್ಟುನಿಟ್ಟಾದ ನ್ಯಾಯಾಂಗ ಪರಿಶೀಲನೆಗೆ ಅರ್ಹವಾಗುತ್ತಾರೆ' ಎಂದು ನ್ಯಾಯಪೀಠ ಎಚ್ಚರಿಸಿದೆ.

ಅರ್ಜಿ: 'ತಮ್ಮ ವಿರುದ್ಧ 2024 ಅಕ್ಟೋಬರ್ 8ರಂದು ದಾಖಲಾಗಿರುವ ಎಫ್ಐಆರ್ ಮತ್ತು ಇದಕ್ಕೆ ಸಂಬಂಧಿಸಿದಂತೆ 41ನೇ ಹೆಚ್ಚುವರಿ ಚೀಫ್ ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟ್ ಕೋರ್ಟ್‌ನಲ್ಲಿನ ವಿಚಾರಣೆ ರದ್ದುಪಡಿಸಬೇಕು' ಎಂದು ಅರ್ಜಿದಾರರು ಕೋರಿದ್ದರು. ಅವರ ಪರ ಪದಾಂಕಿತ ಹಿರಿಯ ವಕೀಲ ಡಿ.ಆರ್.ರವಿಶಂಕರ್ ವಾದ ಮಂಡಿಸಿದ್ದರು.

ಕೌಟುಂಬಿಕ ಕಲಹದ ಪ್ರಕರಣಕ್ಕೆ ಸಂಬಂಧಿಸಿದಂತೆ ವಕೀಲ ಪ್ರದೀಪ್ ಅವರು ಸೀಮಾ ಅವರ ಪತಿಯ ಪರ ವಕಾಲತ್ತು ವಹಿಸಿ ಕೇಸು ನಡೆಸುತ್ತಿದ್ದರು. ಈ ಕಾರಣಕ್ಕಾಗಿ ಸೀಮಾ ಅವರು ಪ್ರದೀಪ್ ವಿರುದ್ಧ ನೀಡಿದ ದೂರು ಆಧರಿಸಿ, ಎಫ್ಐಆರ್ ದಾಖಲಾಗಿತ್ತು.

ಮುಖ್ಯಾಂಶಗಳು

- ವಕೀಲರು ನ್ಯಾಯಾಲಯದ ಅಧಿಕಾರಿಗಳು
- ವೃತ್ತಿಪರ ಕರ್ತವ್ಯದ ಮಿತಿಯೊಳಗೆ ಕಾರ್ಯ ನಿರ್ವಹಣೆ
- ಕಾನೂನು ಬೆದರಿಕೆ ಸಲ್ಲದು: ಹೈಕೋರ್ಟ್


ಜಿಲ್ಲಾ ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಹುದ್ದೆ, ಪಕ್ಷದಿಂದ ಆರೋಪಿ ನಿಜಾಮ್ ಉಚ್ಚಾಟನೆ

ಉದ್ಯಮಿಯಿಂದ ₹ 2.77 ಕೋಟಿ ವಸೂಲಿ: ಬಂಧನ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಸಂತ್ರಸ್ತ ಉದ್ಯಮಿ ಜೊತೆ ಕೆಲಸಕ್ಕಿದ್ದ ಯುವಕರಿಂದಲೇ ಕೃತ್ಯ
- ಹಣ ಕಿತ್ತುಕೊಳ್ಳಲು 'ಯುವಕನ ಆತ್ಮಹತ್ಯೆ' ಕತೆ ಕಟ್ಟಿದ್ದ ಆರೋಪಿ



ನಿಜಾಮ್

ಮಂಗಳೂರು: ಉದ್ಯಮಿಯೊಬ್ಬರ ಅಶ್ಲೀಲ ವಿಡಿಯೊ ಮುಂದಿಟ್ಟುಕೊಂಡು, ಅವರಿಗೆ ಬೆದರಿಕೆ ಒಡ್ಡಿ ಹಂತ ಹಂತವಾಗಿ ಒಟ್ಟು ₹ 2.77 ಕೋಟಿ ಹಣ ವಸೂಲಿ ಮಾಡಿದ ಹಾಗೂ ಜೀವ ಬೆದರಿಕೆ ಒಡ್ಡಿದ ಪ್ರಕರಣ ಸಂಬಂಧ ದಕ್ಷಿಣ ಕನ್ನಡ ಜಿಲ್ಲಾ ಯುವ ಕಾಂಗ್ರೆಸ್ ಸಮಿತಿ ಪ್ರಧಾನ ಕಾರ್ಯದರ್ಶಿ ಸೇರಿದಂತೆ ಇಬ್ಬರು ಯುವಕರನ್ನು ಇಲ್ಲಿನ ಉರ್ವ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ನಗರದ ನಿವಾಸಿ ಜಿತೇಶ್ ಹಾಗೂ ನಿಜಾಮ್ ಅಲಿಯಾಸ್ ಇಬ್ರಾಹಿಂ (ದಕ್ಷಿಣ ಕನ್ನಡ ಜಿಲ್ಲಾ ಯುವ ಕಾಂಗ್ರೆಸ್ ಸಮಿತಿ ಪ್ರಧಾನ ಕಾರ್ಯದರ್ಶಿ) ಬಂಧಿತ ಆರೋಪಿಗಳು ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಈ ಬೆಳವಣಿಗೆ ಬೆನ್ನಲ್ಲೇ ನಿಜಾಮ್‌ನನ್ನು ಜಿಲ್ಲಾ ಯುವ ಕಾಂಗ್ರೆಸ್ ಸಮಿತಿ ಪ್ರಧಾನ ಕಾರ್ಯದರ್ಶಿ ಹುದ್ದೆಯಿಂದ ಹಾಗೂ ಪಕ್ಷದ ಪ್ರಾಥಮಿಕ ಸದಸ್ಯತ್ವದಿಂದ ಕಾಂಗ್ರೆಸ್ ಪಕ್ಷವು ಉಚ್ಚಾಟಿಸಿದೆ.

ಪ್ರಕರಣವೇನು: ಆರೋಪಿಗಳಾದ ಜಿತೇಶ್ ಹಾಗೂ ನಿಜಾಮ್ ಸಂತ್ರಸ್ತ ಉದ್ಯಮಿ ಬಳಿ ಕೆಲಸ ಮಾಡುತ್ತಿದ್ದರು. ಉದ್ಯಮಿಯು, ಜಿತೇಶ್ ಜೊತೆ ದೈಹಿಕ ಸಂಪರ್ಕ ನಡೆಸಿದ್ದರು. 2024ರ ಜನವರಿಯಲ್ಲಿ ಆರೋಪಿ ಜಿತೇಶ್, ತಾನು ಉದ್ಯಮಿ ಜೊತೆಗಿರುವ ಅಶ್ಲೀಲ ಫೋಟೊ ವನ್ನು ಅವರಿಗೇ ಕಳುಹಿಸಿದ್ದ. 'ನಾವಿಬ್ಬರೂ ಜೊತೆಯಲ್ಲಿರುವ ವಿಡಿಯೊ ಕೂಡ ಇದೆ. ಅದನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಳ್ಳುತ್ತೇನೆ ಮತ್ತು ನಿಮ್ಮ ಪತ್ನಿಗೆ ತೋರಿಸುತ್ತೇನೆ' ಎಂದು ಬೆದರಿಕೆ ಹಾಕಿ, ₹35 ಲಕ್ಷ ಹಣಕ್ಕೆ ಬೇಡಿಕೆ ಇಟ್ಟಿದ್ದ. ಮರ್ಯಾದೆಗೆ ಅಂಜಿದ ಉದ್ಯಮಿ 2024ರ ಫೆಬ್ರುವರಿಯಲ್ಲಿ ಜಿತೇಶ್‌ಗೆ ₹ 10 ಲಕ್ಷದ ಎರಡು ಚೆಕ್ ಹಾಗೂ ₹ 15 ಲಕ್ಷದ ಒಂದು ಚೆಕ್ ನೀಡಿದ್ದರು. ₹10 ಲಕ್ಷದ 2 ಚೆಕ್‌ಗಳನ್ನು ಜಿತೇಶ್ ನಗದೀಕರಿಸಿಕೊಂಡಿದ್ದ. ಉದ್ಯಮಿಯ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲದ ಕಾರಣ ₹ 15 ಲಕ್ಷದ ಚೆಕ್ ನಗದೀಕರಣ ಸಾಧ್ಯ ಆಗಿರಲಿಲ್ಲ.'

'ಬಳಿಕ ಉದ್ಯಮಿಯ ಮನೆಗೆ ಹೋಗಿದ್ದ ಆರೋಪಿ ಜಿತೇಶ್, ಹೆಚ್ಚಿನ ಹಣಕ್ಕಾಗಿ ಬೇಡಿಕೆ ಇಟ್ಟು ಬೆದರಿಕೆ ಹಾಕಿದ್ದ. ಆಗ ಉದ್ಯಮಿ ತನ್ನ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದ ನಿಜಾಮ್‌ನನ್ನು ಕರೆಸಿಕೊಂಡು ವಿಷಯ ತಿಳಿಸಿದ್ದರು. ಉದ್ಯಮಿಯ ಮನೆಯಲ್ಲಿದ್ದ ಜಿತೇಶ್‌ನನ್ನು ನಿಜಾಮ್ ಕರೆದುಕೊಂಡು ಹೋಗಿದ್ದ. ಒಂದು ವಾರದ ಬಳಿಕ ನಿಜಾಮ್, ಉದ್ಯಮಿಯನ್ನು ಸಂಪರ್ಕಿಸಿ, 'ನಿಮ್ಮ ಹೆಸರು ಬರೆದಿಟ್ಟು ಜಿತೇಶ್ ಆತ್ಮಹತ್ಯೆ ಮಾಡಿಕೊಂಡಿದ್ದಾನೆ' ಎಂದು ನಂಬಿಸಿದ್ದ. 'ಜಿತೇಶ್ ಬರೆದಿಟ್ಟ ಮರಣಪತ್ರ ಹಾಗೂ ಆತನ ಪೋಟೊ ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಂಡರೆ ನಿಮ್ಮ ಮೇಲೆ ಪ್ರಕರಣ ದಾಖಲಾಗಿ, 10 ವರ್ಷ ಜೈಲು ಶಿಕ್ಷೆಯಾಗುತ್ತದೆ' ಎಂದು ಬೆದರಿಕೆ ಒಡ್ಡಿದ್ದ. ಹೀಗೆ ಬೆದರಿಸಿ 2024ರಿಂದ 2026ರ ನಡುವೆ ಉದ್ಯಮಿಯಿಂದ ಒಟ್ಟು ₹ 2.57 ಕೋಟಿ ಹಣವನ್ನು ನಿಜಾಮ್ ಪಡೆದುಕೊಂಡಿದ್ದ.'

'ಸಂತ್ರಸ್ತ ಉದ್ಯಮಿ ಈಚೆಗೆ ಜಿತೇಶ್‌ನನ್ನು ನಗರದಲ್ಲಿ ನೋಡಿದ್ದರು. ಈ ಬಗ್ಗೆ ನಿಜಾಮ್ ಬಳಿ ವಿಚಾರಿಸಿದ್ದರು. ಜೂನ್ 1ರಂದು ಮತ್ತೆ ಉದ್ಯಮಿಗೆ ಕರೆ ಮಾಡಿದ್ದ ಜಿತೇಶ್, ಫೋಟೊ ಹಾಗೂ ವಿಡಿಯೊ ಹಂಚಿಕೊಳ್ಳುವುದಾಗಿ ಬೆದರಿಸಿ ₹ 10 ಲಕ್ಷಕ್ಕೆ ಬೇಡಿಕೆ ಇಟ್ಟಿದ್ದ. ಹಣ ಕೊಡದಿದ್ದರೆ ಕೊಲೆ ಮಾಡುತ್ತೇನೆ' ಎಂದೂ ಹೆದರಿಸಿದ್ದ. ಇದರಿಂದ ಬೇಸತ್ತ ಉದ್ಯಮಿ ದೂರು ನೀಡಿದ್ದರು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ನೀಟ್–ಯುಜಿ: ಇಂದು ಅಧಿಕಾರಿಗಳಿಂದ ವಿವರಣೆ

ನವದೆಹಲಿ (ಪಿಟಿಐ): ನೀಟ್–ಯುಜಿ ಮರು ಪರೀಕ್ಷೆಯ ಸಿದ್ಧತಾ ಕ್ರಮಗಳ ಕುರಿತು ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ) ಮತ್ತು ರಾಷ್ಟ್ರೀಯ ವೈದ್ಯಕೀಯ ಆಯೋಗದ (ಎನ್‌ಎಂಸಿ) ಅಧಿಕಾರಿಗಳು ಬುಧವಾರ ಆರೋಗ್ಯ ಸ್ಥಾಯಿ ಸಮಿತಿಗೆ ವಿವರಣೆ ನೀಡಲಿದ್ದಾರೆ.

ಎನ್‌ಟಿಎ, ಎನ್‌ಎಂಸಿ, ಆರೋಗ್ಯ ಹಾಗೂ ಉನ್ನತ ಶಿಕ್ಷಣ ಸಚಿವಾಲಯದ ಅಧಿಕಾರಿಗಳಿಗೆ ಬುಧವಾರ (ಜೂನ್ 10) ಮಧ್ಯಾಹ್ನ ಸಮಿತಿಯನ್ನು ಭೇಟಿಯಾಗಿ ವಿವರಣೆ ನೀಡುವಂತೆ ಸಮನ್ಸ್ ನೀಡಲಾಗಿತ್ತು.

ಪ್ರಶ್ನೆಪತ್ರಿಕೆ ಸೋರಿಕೆ ಹಿನ್ನೆಲೆಯಲ್ಲಿ ನೀಟ್–ಯುಜಿ ಪರೀಕ್ಷೆಯನ್ನು ರದ್ದುಪಡಿಸಲಾಗಿತ್ತು. ಮರು ಪರೀಕ್ಷೆಯನ್ನು ಇದೇ ಜೂನ್ 21ರಂದು ನಡೆಸಲು ಎನ್‌ಟಿಎ ನಿರ್ಧರಿಸಿದೆ.

ನೀಟ್–ಯುಜಿ ಮರು ಪರೀಕ್ಷೆ ನಿಡುತ್ತಿರುವ ಮೂರನೇ ಸಮಿತಿ ಇದಾಗಿದೆ. ಈ ಮೊದಲು ಶಿಕ್ಷಣ ಸಚಿವಾಲಯ ಮತ್ತು ಭದ್ರತೆಗಳ ಸಮಿತಿಯು ಅಧಿಕಾರಿಗಳಿಂದ ವಿವರಣೆ ಪಡೆದಿತ್ತು.

ಪ್ರಶ್ನೆಪತ್ರಿಕೆ ಸೋರಿಕೆ ಮತ್ತು ಸಿಬಿಐನ ಲೋಪ ಕುರಿತಂತೆ ತನಿಖೆ ನಡೆಸುತ್ತಿರುವ ದಿಗ್ವಿಜಯ ಸಿಂಗ್ ನೇತೃತ್ವದ ಸಂಸತ್ತಿನ ಸಮಿತಿಯು ಈಗಾಗಲೇ ವಿವಿಧ ಅಧಿಕಾರಿಗಳಿಂದ ವಿವರಣೆ ಪಡೆದಿದೆ.

ಸುಗಮ, ದೋಷರಹಿತ ಪರೀಕ್ಷೆ ಸಚಿವ ಪ್ರಧಾನ್ ಅಭಯ

‘ನೀಟ್–ಯುಜಿ ಮರುಪರೀಕ್ಷೆಯನ್ನು ಸುಗಮವಾಗಿ ಹಾಗೂ ಯಾವುದೇ ಲೋಪಕ್ಕೆ ಆಸ್ಪದವಿಲ್ಲದಂತೆ ನಡೆಸಲಾಗುತ್ತದೆ. ನೀವು ಕಲಿಕೆಯತ್ತ ಗಮನವನ್ನು ಕೇಂದ್ರೀಕರಿಸಿ’ ಎಂದು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು ಪರೀಕ್ಷಾರ್ಥಿಗಳಿಗೆ ಭರವಸೆ ನೀಡಿದರು.



ಧರ್ಮೇಂದ್ರ ಪ್ರಧಾನ್

ಪ್ರಶ್ನೆಪತ್ರಿಕೆಯನ್ನು ರೂಪಿಸುವುದರಿಂದ ಪರೀಕ್ಷಾ ಕೇಂದ್ರಗಳಿಗೆ ಅದನ್ನು ವಿತರಿಸುವವರೆಗೆ ಕೇಂದ್ರ ಸರ್ಕಾರ ಈ ಬಾರಿ ಹೆಚ್ಚುವರಿ ಜಾಗ್ರತೆ ವಹಿಸುತ್ತಿದೆ ಎಂದು ತಿಳಿಸಿದರು.

ಕೇಂದ್ರ ಗುಪ್ತದಳ, ಸಿಬಿಐ, ಕೇಂದ್ರ ಮಾಹಿತಿ ತಂತ್ರಜ್ಞಾನ, ಗೃಹ ಸಚಿವಾಲಯ ಕೂಡ ಸೈಬರ್ ಭದ್ರತೆಯ ಸವಾಲುಗಳನ್ನು ಎದುರಿಸಲು ಹೆಚ್ಚುವರಿ ನಿಗಾವಹಿಸಿವೆ ಎಂದು ತಿಳಿಸಿದರು.

ರಾಷ್ಟ್ರೀಯ ಪರೀಕ್ಷಾ ಸಂಸ್ಥೆಯ (ಎನ್‌ಟಿಎ) ಮುಖ್ಯ ಕಚೇರಿಯಲ್ಲಿ ಮಂಗಳವಾರ ಪರೀಕ್ಷಾ ಸಿದ್ಧತೆಗಳನ್ನು ಪರಿಶೀಲಿಸಿದ ಬಳಿಕ ಅವರು ಮಾತನಾಡಿದರು. ಸಂಪುಟ ಕಾರ್ಯದರ್ಶಿ ನೇತೃತ್ವದಲ್ಲಿ ಈಗಾಗಲೇ ಪೂರ್ವಭಾವಿ ಸಭೆ ನಡೆದಿದೆ. ಎಲ್ಲ ರಾಜ್ಯಗಳ ಸಹಕಾರ ಕೋರಿದೆ. ಹಲವು ರಾಜ್ಯ ಸರ್ಕಾರಗಳೂ ಪೂರ್ವಭಾವಿ ಸಭೆ ನಡೆಸಿವೆ ಎಂದು ಹೇಳಿದರು.

ಮೂಲಗಳ ಪ್ರಕಾರ, ಎನ್‌ಟಿಎ ಈ ಬಾರಿ ನೀಟ್ ಯುಜಿ ಮರು ಪರೀಕ್ಷೆಯ ಪ್ರಶ್ನೆಪತ್ರಿಕೆಗಳನ್ನು ಪೂರೈಸಲು ವಾಯುಪಡೆ ಸೇವೆಯನ್ನು ಪಡೆಯಲಿದೆ. ಮರು ಪರೀಕ್ಷೆಯು ವಿದೇಶದಲ್ಲಿರುವ 11 ಕೇಂದ್ರಗಳು ಸೇರಿ ದೇಶದಾದ್ಯಂತ 551 ನಗರಗಳಲ್ಲಿರುವ 5,435 ಕೇಂದ್ರಗಳಲ್ಲಿ ನಡೆಯಲಿದೆ.

ಪಟಾಕಿ ಸ್ಫೋಟ: 7 ಮಂದಿ ಸಾವು

ಜೈಪುರ (ಪಿಟಿಐ): ರಾಜಸ್ಥಾನದ ಜೈಪುರದಲ್ಲಿ ಅನಧಿಕೃತವಾಗಿ ಪಟಾಕಿ ಸಂಗ್ರಹಿಸಿಟ್ಟಿದ್ದ ಮನೆಯಲ್ಲಿ ಮಂಗಳವಾರ ಸ್ಫೋಟ ಸಂಭವಿಸಿದ್ದು, ಏಳು ಜನ ಮೃತಪಟ್ಟಿದ್ದಾರೆ.



ಆಯೇಷಾ ನಗರ ತಲೈ ಕಾಲೊನಿಯಲ್ಲಿ ಸಣ್ಣ ಮನೆಯಲ್ಲಿ ಬೆಂಕಿ ಹೊತ್ತಿಕೊಂಡ ಪರಿಣಾಮ ಸ್ಫೋಟ ಸಂಭವಿಸಿದೆ. ಆ ಮನೆಯಲ್ಲಿ ಪಟಾಕಿ ಸಂಗ್ರಹಿಸಿಟ್ಟಿದ್ದ ಬಗ್ಗೆ ಶಂಕೆ ವ್ಯಕ್ತವಾಗಿದೆ.

‘ಗಾಯಗೊಂಡಿದ್ದ ಆರು ಮಂದಿ ಆಸ್ಪತ್ರೆಯಲ್ಲಿ ಮೃತಪಟ್ಟರು. ಇನ್ನೊಬ್ಬರು ಸ್ಥಳದಲ್ಲಿಯೇ ಮೃತಪಟ್ಟರು’ ಎಂದು ಪೊಲೀಸರು ತಿಳಿಸಿದ್ದಾರೆ.

‘ಸ್ಥಳದಲ್ಲಿ ಸ್ಫೋಟಕ ವಸ್ತುಗಳನ್ನು ಸಂಗ್ರಹಿಸಿಟ್ಟಿದ್ದ ಕಾರಣ ಬೆಂಕಿ ಹೊತ್ತಿಕೊಂಡಿರುವುದಾಗಿ ಪ್ರಾಥಮಿಕ ಮಾಹಿತಿಯಿಂದ ತಿಳಿದು ಬಂದಿದೆ. ನಿಖರ ಕಾರಣ ತನಿಖೆಯ ಬಳಿಕ ತಿಳಿಯಲಿದೆ’ ಎಂದು ಜೈಪುರ ಜಿಲ್ಲಾಧಿಕಾರಿ ತಿಳಿಸಿದ್ದಾರೆ. ಘಟನೆ ನಡೆದ ಮನೆಯ ಸುತ್ತಮುತ್ತ ಪಟಾಕಿ ತಯಾರಿಕೆ ಮಾಡಲಾಗುತ್ತಿತ್ತು ಎಂದು ತಿಳಿಸಿದ್ದಾರೆ.

ಮಹಿಳೆಯರ ರಕ್ಷಣೆಗೆ ‘ಸಿಂಗಪೆಣ್’ ಕಾರ್ಯಪಡೆ

ಚೆನ್ನೈ (ಪಿಟಿಐ): ಮಹಿಳೆಯರಿಗೆ ಭದ್ರತೆ ಒದಗಿಸುವ ಸಲುವಾಗಿ ತಮಿಳುನಾಡು ಮುಖ್ಯಮಂತ್ರಿ ಸಿ. ಜೋಸೆಫ್ ವಿಜಯ್ ಅವರು ‘ಸಿಂಗಪೆಣ್’ ಎಂಬ ವಿಶೇಷ ಪೊಲೀಸ್ ಪಡೆಯನ್ನು ಸೋಮವಾರ ಉದ್ಘಾಟಿಸಿದರು.

ಮಹಿಳೆಯರು ಮತ್ತು ಮಕ್ಕಳ ಮೇಲಿನ ಅಪರಾಧ ತಡೆಗಟ್ಟಲು ಮತ್ತು ಅವರಿಗೆ ಭದ್ರತೆ ಒದಗಿಸಲು ನಿಯೋಜಿಸಿದ ವಿಶೇಷ ಕಾರ್ಯಪಡೆಯ ಲಾಂಛನವನ್ನು ಅನಾವರಣಗೊಳಿಸಿ ಅವರು, ವಿಶೇಷ ಗಸ್ತು ವಾಹನಗಳಿಗೆ ಹಸಿರು ನಿಶಾನೆ ತೋರಿಸಿದರು ಮತ್ತು ಅವರೇ ವಾಹನವನ್ನು ಚಾಲನೆ ಮಾಡಿದರು. ರಾಜಾರತಿನಂ ಕ್ರೀಡಾಂಗಣದಲ್ಲಿ ಕಾರ್ಯಕ್ರಮ ನಡೆಯಿತು.

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ

ಮನುಷ್ಯನಲ್ಲಿರುವ ಪರಿಪೂರ್ಣತೆಯನ್ನು ಹಿಗ್ಗಿಸುವುದೇ ನಿಜವಾದ ಶಿಕ್ಷಣ.

–ಸ್ವಾಮಿ ವಿವೇಕಾನಂದ

ಸಂಪಾದಕೀಯ

ರೆಪೊ: ಹುಬ್ಬೇರುವ ತೀರ್ಮಾನ ಇಲ್ಲ ತಟಸ್ಥ ಆರ್ಥಿಕ ನೀತಿ ಮುಂದುವರಿಕೆ

ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) 'ಹಣಕಾಸು ನೀತಿ ಸಮಿತಿ'ಯು (ಎಂಪಿಸಿ) ಈಚೆಗೆ ನಡೆದ ಸಭೆಯಲ್ಲಿ, ರೆಪೊ ದರವನ್ನು ಶೇ 5.25ರ ಮಟ್ಟದಲ್ಲಿಯೇ ಉಳಿಸಿಕೊಂಡಿದೆ, 'ತಟಸ್ಥ' ಹಣಕಾಸು ನೀತಿಯನ್ನು ಮುಂದುವರಿಸಿದೆ. ಈ ತೀರ್ಮಾನಗಳ ಮೂಲಕ ಅದು ಹಣಕಾಸು ತಜ್ಞರು ಹುಬ್ಬೇರಿಸುವಂತಹ ಕೆಲಸವನ್ನೇನೂ ಮಾಡಿಲ್ಲ. ಏಪ್ರಿಲ್‌ನಲ್ಲಿ ನಡೆದ ಸಭೆಯ ನಂತರದಲ್ಲಿ ದೇಶದ ಅರ್ಥವ್ಯವಸ್ಥೆಯ ಚಿತ್ರಣ ಬದಲಾಗಿದೆಯಾದರೂ, ಸಮಿತಿಯು ಕಾದುನೋಡುವ ತಂತ್ರದ ಮೊರೆಹೋಗಿದೆ. ಬದಲಾವಣೆಯ ಪ್ರಮಾಣ ಏನು, ಬದಲಾವಣೆ ಯಾವ ದಿಕ್ಕಿನಲ್ಲಿದೆ ಎಂಬುದನ್ನು ಇನ್ನಷ್ಟು ಚೆನ್ನಾಗಿ ಅರ್ಥ ಮಾಡಿಕೊಳ್ಳಲು ಅದು ಬಹುಶಃ ತೀರ್ಮಾನಿಸಿರಬಹುದು. ಏಪ್ರಿಲ್ ಹಾಗೂ ಜೂನ್ ಆರಂಭದಲ್ಲಿ ನಡೆದ ಸಭೆಗಳ ನಡುವಿನ ಅವಧಿಯಲ್ಲಿ ದೇಶದಲ್ಲಿ ಹಣದುಬ್ಬರ ಪ್ರಮಾಣ ಜಾಸ್ತಿ ಆಗುವಂತಹ ಬದಲಾವಣೆಗಳು ನಡೆದಿವೆ. ಆರ್‌ಬಿಐ ಯಾವುದೇ ತೀರ್ಮಾನ ಕೈಗೊಳ್ಳುವ ಸಂದರ್ಭದಲ್ಲಿ ಹಣದುಬ್ಬರ ಪ್ರಮಾಣವನ್ನೂ ಮುಖ್ಯವಾಗಿ ಗಮನಿಸುತ್ತದೆ. ದೇಶದಿಂದ ವಿದೇಶಿ ಬಂಡವಾಳದ ಹೊರಹರಿವಿಗೆ ಯಾವ ತಡೆಯೂ ಇಲ್ಲವಾಗಿದೆ. ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು ಕುಸಿಯುತ್ತಲೇ ಇದೆ. ಅದು 100ರ ಗಡಿಗೆ ಹತ್ತಿರವಾಗುತ್ತಿದೆ. ಇತರ ಕೆಲವು ಸಂಗತಿಗಳು ಕೂಡ ಬದಲಾವಣೆ ಕಾಣುತ್ತಿವೆ. ಅವು ಅರ್ಥವ್ಯವಸ್ಥೆಯ ಮೇಲೆ ಯಾವ ಬಗೆಯಲ್ಲಿ ಪರಿಣಾಮ ಉಂಟುಮಾಡಬಹುದು ಎಂಬುದನ್ನು ಅಂದಾಜಿಸುವುದು ಕಷ್ಟ.

ಗ್ರಾಹಕ ಬೆಲೆ ಸೂಚ್ಯಂಕ (ಸಿಪಿಐ) ಆಧಾರಿತ ಚಿಲ್ಲರೆ ಹಣದುಬ್ಬರ ಪ್ರಮಾಣವು ಈಗ ಆರ್‌ಬಿಐ ನಿಗದಿ ಮಾಡಿಕೊಂಡಿರುವ ಮಟ್ಟವನ್ನು ಮೀರಿಲ್ಲ. ಆದರೂ ಹಣದುಬ್ಬರ ಇನ್ನಷ್ಟು ಹೆಚ್ಚಾಗುವ ಅಪಾಯ ಇದ್ದೇ ಇದೆ. ಮೇ 15ರ ನಂತರದಲ್ಲಿ ಕೇಂದ್ರ ಸರ್ಕಾರವು ಇಂಧನ ಬೆಲೆಯನ್ನು ಹಲವು ಬಾರಿ ಹೆಚ್ಚು ಮಾಡಿದೆ. ಇದರಿಂದಾಗಿ ಅರ್ಥವ್ಯವಸ್ಥೆಯ ಎಲ್ಲ ವಲಯಗಳ ಮೇಲೆ ಪರಿಣಾಮ ಉಂಟಾಗಿದೆ. ಹಲವು ಕಚ್ಚಾ ವಸ್ತುಗಳ ಬೆಲೆ ಜಾಸ್ತಿಯಾಗುತ್ತಿದೆ. ಹಣದುಬ್ಬರವು ಈ ವರ್ಷದಲ್ಲಿ ಶೇ 4.6 ರಷ್ಟು ಆಗಬಹುದು ಎಂದು ಏಪ್ರಿಲ್‌ನಲ್ಲಿ ಅಂದಾಜಿಸಿದ್ದ ಆರ್‌ಬಿಐ ಈಗ ಅಂದಾಜನ್ನು ಪರಿಷ್ಕರಿಸಿದ್ದು, ಅದು ಶೇ 5.1ಕ್ಕೆ ಏರಬಹುದು ಎಂದು ಹೇಳಿದೆ. ಮುಂಗಾರು ಮಳೆಯು ಈ ಬಾರಿ ವಾಡಿಕೆಗಿಂತ ಕಡಿಮೆ ಆಗಬಹುದು ಎಂಬ ಅಂದಾಜು ನಿಜವಾದರೆ, ಆಹಾರ ವಸ್ತುಗಳ ಬೆಲೆ ಹೆಚ್ಚಬಹುದು. ಇದರ ಜೊತೆಯಲ್ಲೇ, ಆರ್ಥಿಕ ಬೆಳವಣಿಗೆಯ ವೇಗವು ತಗ್ಗುತ್ತಿದೆ. ಬೆಳವಣಿಗೆಯ ಪ್ರಮಾಣವು ಶೇ 6.9ರಷ್ಟು ಇರಬಹುದು ಎಂದು ಈ ಮೊದಲಿನ ಅಂದಾಜಿನಲ್ಲಿ ಹೇಳಿದ್ದ ಆರ್‌ಬಿಐ ಈಗ ಅದನ್ನು ಶೇ 6.6ಕ್ಕೆ ತಗ್ಗಿಸಿದೆ. 'ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಯುದ್ಧ ಎಷ್ಟು ಕಾಲ ಮುಂದುವರಿಯಬಹುದು, ಅದರ ತೀವ್ರತೆ ಎಷ್ಟಿರಬಹುದು, ಅದರಿಂದಾಗಿ ಆಗುವ ಪರಿಣಾಮಗಳು ಯಾವ ಮಟ್ಟದಲ್ಲಿರಬಹುದು, ಪೂರೈಕೆ ವ್ಯವಸ್ಥೆಯು ಯಾವ ವೇಗದಲ್ಲಿ ಸರಿಹೋಗಬಹುದು' ಎಂಬ ವಿಚಾರವಾಗಿ ಅನಿಶ್ಚಿತತೆ ಮುಂದುವರಿದಿದೆ ಎಂದು ಆರ್‌ಬಿಐ ಗವರ್ನರ್ ಸಂಜಯ್ ಮಲ್ಹೋತ್ರಾ ಹೇಳಿದ್ದಾರೆ. ಹೀಗಾಗಿ ಹೆಚ್ಚಿನ ಸ್ಪಷ್ಟತೆ ಸಿಗುವವರೆಗೆ ಕಾಯುವುದು ಸೂಕ್ತ ಎಂದವರು ಹೇಳಿದ್ದಾರೆ.



ಜಾಗತಿಕ ವಿದ್ಯಮಾನಗಳ ಪರಿಣಾಮಗಳನ್ನು ಅಂದಾಜು ಮಾಡುವುದು ಕಷ್ಟವಾಗಿರುವ ಸಂದರ್ಭದಲ್ಲಿ, 'ತಟಸ್ಥ ಹಣಕಾಸು ನೀತಿ'ಯನ್ನು ಭಾರತೀಯ ರಿಸರ್ವ್ ಬ್ಯಾಂಕ್ ಮುಂದುವರಿಸಿದೆ.

ಬಡ್ಡಿ ದರವನ್ನು ಯಥಾಸ್ಥಿತಿಯಲ್ಲಿ ಕಾಯ್ದುಕೊಂಡು, 'ತಟಸ್ಥ' ಹಣಕಾಸಿನ ನಿಲುವನ್ನು ಮುಂದುವರಿಸಿದ್ದರೂ ರೂಪಾಯಿ ಮೌಲ್ಯದ ಕುಸಿತ ತಡೆಯಲು, ವಿದೇಶಿ ಬಂಡವಾಳವನ್ನು ಆಕರ್ಷಿಸಲು ಸರ್ಕಾರದ ಜೊತೆಯಾಗಿ ಒಂದಿಷ್ಟು ಕ್ರಮಗಳನ್ನು ಆರ್‌ಬಿಐ ಪ್ರಕಟಿಸಿದೆ. ರೂಪಾಯಿ ಮೌಲ್ಯ ಚೇತರಿಕೆಯ ಉದ್ದೇಶದಿಂದ ಕೇಂದ್ರವು, ಸರ್ಕಾರಿ ಸಾಲಪತ್ರಗಳಲ್ಲಿ ಹಣ ತೊಡಗಿಸುವ ವಿದೇಶಿ ಹೂಡಿಕೆದಾರರಿಗೆ ದೀರ್ಘಾವಧಿ ಬಂಡವಾಳ ತೆರಿಗೆಯಿಂದ ವಿನಾಯಿತಿ ನೀಡಿದೆ. ವಿದೇಶಿ ಹೂಡಿಕೆದಾರರ ಬಡ್ಡಿ ವರಮಾನಕ್ಕೆ ತೆರಿಗೆಯನ್ನು ಕಡಿತ ಮಾಡಿಕೊಳ್ಳುವ ಪದ್ಧತಿಯನ್ನೂ ಕೇಂದ್ರ ಕೈಬಿಟ್ಟಿದೆ. ಇತ್ತ ಆರ್‌ಬಿಐ ಕೂಡ ರಿಯಾಯಿತಿಯ ವಿದೇಶಿ ವಿನಿಮಯ ಕೊಡು–ಕೊಳ್ಳುವಿಕೆ ಸೌಲಭ್ಯವನ್ನು ಕಲ್ಪಿಸಿದೆ. ವಿದೇಶಿ ಹೂಡಿಕೆದಾರರಿಗೆ ಸರ್ಕಾರಿ ಹಣಕಾಸು ಉತ್ಪನ್ನಗಳಲ್ಲಿ ಹೂಡಿಕೆ ಮಾಡುವ ಅವಕಾಶಗಳನ್ನು ಹೆಚ್ಚಿಸಿದೆ. ಇವೆಲ್ಲವೂ ವಿದೇಶಿ ಬಂಡವಾಳವು ಭಾರತದಿಂದ ಹೊರಹೋಗುವುದನ್ನು ತಡೆಯುವ ಹಾಗೂ ಹೆಚ್ಚಿನ ಪ್ರಮಾಣದ ಹೂಡಿಕೆಯನ್ನು ಆಕರ್ಷಿಸುವ ಕ್ರಮಗಳು. ಕಚ್ಚಾತೈಲದ ಬೆಲೆಯು ದುಬಾರಿ ಮಟ್ಟದಲ್ಲಿ ಇರುವ, ವಿದೇಶಿ ಹೂಡಿಕೆಗಳು ಭಾರತದಿಂದ ಹೊರಹೋಗುವ ಪರಿಸ್ಥಿತಿಯನ್ನು ನಿಭಾಯಿಸಲು ಆರ್‌ಬಿಐ ಸಜ್ಜಾಗುತ್ತಿರುವುದನ್ನು ಈ ಎಲ್ಲ ಕ್ರಮಗಳು ಸೂಚ್ಯವಾಗಿ ಹೇಳುತ್ತಿವೆ.

ಜಾಲಾಡಿ

ನೈತಿಕ ಅಧಃಪತನ



ನೀಟ್–ಯುಜಿ ಪ್ರಶ್ನೆಪತ್ರಿಕೆಯ ಕಟ್ಟುಗಳನ್ನು ಸೇನಾ ಹೆಲಿಕಾಪ್ಟರ್‌ಗಳ ಮೂಲಕ ಪರೀಕ್ಷಾ ಕೇಂದ್ರಗಳಿಗೆ ಕೊಂಡೊಯ್ಯಲು ವ್ಯವಸ್ಥೆ ಮಾಡಿರುವರಂತೆ. ಡ್ರೋನ್‌ಗಳನ್ನೂ ಇನ್ನು ಮುಂದೆ ಬಳಸಬಹುದು ಎಂದು ಕಾಣುತ್ತದೆ! ಮನುಷ್ಯನ ನೈತಿಕ ಅಧಃಪತನ ಪಾತಾಳ ಮುಟ್ಟಿರುವಾಗ ಪ್ರಶ್ನೆಪತ್ರಿಕೆಗಳು ಆಕಾಶದಲ್ಲಿ ಹಾರಾಡುವುದು ಸಹಜವೇ ಆಗಿದೆ.

ಸವಿತಾ ನಾಗಭೂಷಣ, ಕವಯಿತ್ರಿ, 'ಫೇಸ್‌ಬುಕ್'ನಿಂದ

ಕಿಡಿನುಡಿ



ಅಧಿಕಾರದ ಲೆಕ್ಕಾಚಾರಗಳಿಗಿಂತ ಮಕ್ಕಳ ಭವಿಷ್ಯ ದೊಡ್ಡದು. ಶಿಕ್ಷಣ ಇಲಾಖೆಗೆ ಪೂರ್ಣಾವಧಿ ಸಚಿವರನ್ನು ತಕ್ಷಣವೇ ನೇಮಿಸಿ, ರಾಜ್ಯದ ಎಲ್ಲ ಸರ್ಕಾರಿ ಶಾಲೆಗಳಿಗೆ ಅಗತ್ಯ ಮೂಲಸೌಕರ್ಯ ಒದಗಿಸಬೇಕು. ಮಕ್ಕಳ ಶಿಕ್ಷಣದೊಂದಿಗೆ ಚೆಲ್ಲಾಟವಾಡುವುದನ್ನು ಕರ್ನಾಟಕದ ಜನತೆ ಕ್ಷಮಿಸುವುದಿಲ್ಲ.

ಆರ್. ಅಶೋಕ, ಬಿಜೆಪಿ ಶಾಸಕ

25 ವರ್ಷಗಳ ಹಿಂದೆ

ಭಾನುವಾರ, 10-6-2001

- **50 ಕೋಟಿ ನಿಧಿ ಸ್ಥಾಪನೆಗೆ ಕಾಂಗ್ರೆಸ್ ನಿರ್ಧಾರ**

ನವದೆಹಲಿ, ಜೂನ್ 9– ಪಕ್ಷದ ಕಾರ್ಯ ನಿರ್ವಹಣೆಗಾಗಿ ಮುಂದಿನ ಎರಡು ವರ್ಷಗಳ ಅವಧಿಯಲ್ಲಿ 50 ಕೋಟಿ ರೂಪಾಯಿಗಳ ನಿಧಿಯನ್ನು ಸ್ಥಾಪಿಸಲು ಕಾಂಗ್ರೆಸ್ ಪಕ್ಷ ಇಂದು ನಿರ್ಧರಿಸಿತು.

ಡಾ. ಮನಮೋಹನ್ ಸಿಂಗ್ ನೇತೃತ್ವದ ಒಂಬತ್ತು ಸದಸ್ಯರ ಸಮಿತಿ ಈ ಬಗ್ಗೆ ನೀಡಿದ್ದ ವರದಿಯನ್ನು ಇಂದು ಚರ್ಚಿಸಿದ ಸೋನಿಯಾ ಗಾಂಧಿ ಅಧ್ಯಕ್ಷತೆಯ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ವಿಶೇಷ ಸಭೆಯು ಅದನ್ನು ಒಪ್ಪಿಕೊಂಡಿತು. ನಿಧಿಗೆ ಚೆಕ್ ಮೂಲಕ ಮಾತ್ರ ಹಣ ಸಂಗ್ರಹಿಸಬೇಕೆಂಬುದು ವರದಿಯ ಇನ್ನೊಂದು ಮುಖ್ಯಾಂಶವಾಗಿದೆ.

- **ಪೇಸ್–ಭೂಪತಿ ಜೋಡಿಗೆ ಫ್ರೆಂಚ್ ಓಪನ್ ಡಬಲ್ಸ್ ಪ್ರಶಸ್ತಿ**

ಪ್ಯಾರಿಸ್, ಜೂನ್ 9– ಭಾರತದ ಅಗ್ರಮಾನ್ಯ ಟೆನಿಸ್ ಜೋಡಿ ಲಿಯಾಂಡರ್ ಪೇಸ್ ಮತ್ತು ಮಹೇಶ್ ಭೂಪತಿ ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯ ಪುರುಷರ ಡಬಲ್ಸ್ ವಿಭಾಗದಲ್ಲಿ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿದ್ದಾರೆ.

ಇಂದು ನಡೆದ ಫೈನಲ್‌ನಲ್ಲಿ ಈ ಜೋಡಿ ಚೆಕ್ ಗಣರಾಜ್ಯದ ಪಾವೆಲ್ ವಿಜ್ನೆರ್– ಪೀಟರ್ ಪಾಲಾ ಜೋಡಿಯನ್ನು 7–6 (7–5), 6–3ರಲ್ಲಿ ಸೋಲಿಸಿತು.

75 ವರ್ಷಗಳ ಹಿಂದೆ

ಭಾನುವಾರ, 10-6-1951

- **ವಿಶ್ವದ ಮಹತ್ತಮ ವಿಮಾನ ಅಪಘಾತ**

ರಿಚ್ಮಂಡ್, ಜೂನ್ 9– ಒಂದು ಆಕಾರದಲ್ಲಿ ಹಾರಾಡುತ್ತಿದ್ದ 34 ವಿಮಾನಗಳಲ್ಲಿ ಎಂಟು ಜೆಟ್ ಫೈಟರ್ ವಿಮಾನಗಳು ಇಲ್ಲಿ ನಿನ್ನೆ ನೆಲಕ್ಕೆ ಉರುಳಿ ಬಿದ್ದುದನ್ನು 'ಜೆಟ್ ವಿಮಾನಯಾನದ ಇತಿಹಾಸದಲ್ಲಿ ಮಹತ್ತಮ ಅಪಘಾತ'ವೆಂದು ಕರೆಯಲಾಗಿದೆ.

ಅಪಘಾತಗಳಿಗೆ ಕಾರಣಗಳನ್ನು ವಿವರಿಸಲಾಗಿದೆ. ವಿಮಾನದಳದ ಶಾಖೆಯು ಇದರ ತನಿಖೆ ಬಗ್ಗೆ ರಹಸ್ಯದ ತೆರೆಯನ್ನೆಳೆಯಿತು.

ಮೂವರು ಚಾಲಕರು ಹತರಾದರು. ಇತರರು ಪಾರಾದರು. ಇಬ್ಬರು ತಮ್ಮ ಜಖಂ ಆದ ವಿಮಾನಗಳನ್ನು ನೆಲಕ್ಕಿಳಿಸಿದರು. ಮತ್ತೊಬ್ಬರು ಪ್ಯಾರಾಷೂಟಿನಿಂದ ಸುರಕ್ಷಿತವಾಗಿ ಕೆಳಕ್ಕಿಳಿದರು.

ಆಳುವವರಿಂದಲೇ 'ಪೌರ'ರ ಆಯ್ಕೆ



ವಿಶ್ಲೇಷಣೆ

ಯೋಗೇಂದ್ರ ಯಾದವ್

'ಎಸ್‌ಐಆರ್' ಪ್ರಕ್ರಿಯೆಗೆ ಸುಪ್ರೀಂ ಕೋರ್ಟ್‌ನಿಂದ ಹಸಿರುನಿಶಾನೆ ದೊರೆತ ನಂತರ, ಚುನಾವಣಾ ಆಯೋಗ ಮತ್ತು ಪರೋಕ್ಷವಾಗಿ ಬಿಜೆಪಿ ಮತದಾರರ ಪಟ್ಟಿಯಿಂದ ಯಾರನ್ನಾದರೂ ಅಥವಾ ಯಾವುದೇ ವರ್ಗದ ಜನರ ಹೆಸರನ್ನಾದರೂ ಕಿತ್ತುಹಾಕಲು ಸ್ವತಂತ್ರವಾಗಿವೆ.

ತುರ್ತು ಪರಿಸ್ಥಿತಿ ಸಂದರ್ಭದ ಎಡಿಎಂ ಜಬಲ್ಪುರ ಪ್ರಕರಣಕ್ಕೆ ನಮ್ಮ ಕಾಲದ ಎಡಿಆರ್ ಪ್ರಕರಣದ ಸುಪ್ರೀಂ ಕೋರ್ಟ್ ತೀರ್ಪು ಸಮಾನವಾದುದಾಗಿದೆ. ಆ ಕಾಲದ ಅತ್ಯುತ್ತಮ ಕಾನೂನು ತಜ್ಞರು ಪೌರರ ಬದುಕುವ ಹಕ್ಕನ್ನು ಕಸಿದುಕೊಳ್ಳುವಂತಹ ಆದೇಶಕ್ಕೆ ಏಕೆ ಸಹಿ ಹಾಕಿದರು ಎಂಬುದು ಇಂದಿಗೂ ಅರ್ಥವಾಗುತ್ತಿಲ್ಲ. ಈ ತೀರ್ಪಿನ ಹಿಂದಿನ ಉದ್ದೇಶವಲ್ಲ, ಬದಲಿಗೆ ಅದು ಪ್ರತಿಯೊಬ್ಬರಿಗೂ ನೀಡುವ ಸಂದೇಶವು ಬಹಳ ಮುಖ್ಯವಾದುದಾಗಿದೆ: ತುರ್ತುಪರಿಸ್ಥಿತಿಯ ನಂತರದ ಅವಧಿಗೆ ಸುಪ್ರೀಂ ಕೋರ್ಟ್‌ನ ಬಾಗಿಲು ಮುಚ್ಚಿ ಹೋಯಿತು.

ಎಸ್‌ಐಆರ್ ಕುರಿತು ಸುಪ್ರೀಂ ಕೋರ್ಟ್ ಆದೇಶದ ನಿಜವಾದ ಮಹತ್ವ ಇದು. ಪ್ರಜಾಪ್ರಭುತ್ವದ ಇತಿಹಾಸದಲ್ಲಿಯೇ ಅತಿ ದೊಡ್ಡ ಸಂಖ್ಯೆಯಲ್ಲಿ ಮತದಾರರ ಹಕ್ಕನ್ನು ರದ್ದುಪಡಿಸುವುದಕ್ಕೆ ಸುಪ್ರೀಂ ಕೋರ್ಟ್ ಸಹಿ ಮಾಡಿದ್ದಷ್ಟೇ ಅಲ್ಲ ಇದು. 'ಇದರಿಂದಾಗಿ ಬೆಲೆ ತೆತ್ತವರನ್ನು ಹೆಸರಿಸಲು ನಿರಾಕರಿಸಿದೆ, ಹೊರ ಹಾಕಿದವರನ್ನು ಎದುರಾಗಲು ನಿರಾಕರಿಸಿದೆ ಮತ್ತು ಹೊರಹಾಕುವುದು ಎಂದರೆ ಏನು ಎಂಬುದನ್ನು ಅರ್ಥೈಸಲು ನಿರಾಕರಿಸಿದೆ' ಎಂಬುದೇ ಈ ತೀರ್ಪಿನ ಕೇಂದ್ರದಲ್ಲಿರುವ ಪಾಪ' ಎಂದು ರುದ್ರಾಕ್ಷ ಲಾಕ್ರಾ ವಿಶ್ಲೇಷಿಸಿದ್ದಾರೆ. ಎಲ್ಲಕ್ಕಿಂತ ಹೆಚ್ಚಾಗಿ, 'ರಾಜಕೀಯವಾಗಿ ಸೂಕ್ಷ್ಮ'ವಾದ ಈ ವಿಚಾರದಲ್ಲಿ ಕಾನೂನುಬದ್ಧ ಪರಿಹಾರವನ್ನು ಪಡೆಯುವ ಯಾವುದೇ ಪ್ರಯತ್ನದ ಬಾಗಿಲನ್ನು ಸಂವಿಧಾನದ ಸಂರಕ್ಷಕ ಸಂಸ್ಥೆಯು ಮುಚ್ಚಿತು ಎಂಬುದಾಗಿ ಎಡಿಆರ್ ತೀರ್ಪನ್ನು ನೆನಪಿಸಿಕೊಳ್ಳಬಹುದು. ಈ ಪ್ರಕರಣದ ವಿಚಾರಣೆಯ ಸಂದರ್ಭದಲ್ಲಿ ನ್ಯಾಯಮೂರ್ತಿ ಜಾಯ್‌ಮಾಲ್ಯ ಬಾಗ್ಚಿ ಅವರು 'ನ್ಯಾಯಾಲಯವು ಶೂನ್ಯದಲ್ಲಿ ಕಾರ್ಯಾಚರಣೆ ನಡೆಸಲು ಸಾಧ್ಯವಿಲ್ಲ' ಎಂದು ಅಭಿಪ್ರಾಯಪಟ್ಟಿದ್ದಾರೆ. ಬಿಹಾರ ಚುನಾವಣೆ ಸಂದರ್ಭದಲ್ಲಿ ನಡೆದ ಎಸ್‌ಐಆರ್‌ನ ಭಾಗವಾಗಿ ಹೆಸರು ಅಳಿಸಿ ಹಾಕಿರುವುದರ ವಿರುದ್ಧ ಜನರ ಪ್ರತಿಭಟನೆ ನಡೆದಿಲ್ಲ ಎಂಬ ಗ್ರಹಿಕೆಯನ್ನು ಉಲ್ಲೇಖಿಸಿ ಅವರು ಹೀಗೆ ಹೇಳಿದ್ದರು. ನ್ಯಾಯಾಲಯದ ಹೊರಗಿನ ವಿಸ್ತೃತ ಸತ್ಯಾಂಶಗಳನ್ನು ಗಣನೆಗೆ ತೆಗೆದುಕೊಂಡು ಅದರ ಆಧಾರದಲ್ಲಿ ನ್ಯಾಯಾಂಗ ಪ್ರಕ್ರಿಯೆಯ ಚೌಕಟ್ಟು ರೂಪಿಸಲಾಗುತ್ತಿದೆ ಎಂಬುದೇ ನ್ಯಾಯಾಲಯವು ಬೇರೆ ಏನೆಲ್ಲವನ್ನು ಗಮನಿಸಿರಬಹುದು ಎಂದು ಅರ್ಥ ಮಾಡಿಕೊಳ್ಳಲು ನೆರವಾಗುತ್ತದೆ. ಕೇಂದ್ರದ ಆಡಳಿತ ಪಕ್ಷವು ಗೆಲ್ಲಲೇಬೇಕು ಎಂದು ಹತಾಶ ಪ್ರಯತ್ನ ನಡೆಸುತ್ತಿದ್ದ ರಾಜ್ಯಗಳಲ್ಲಿ ಎಸ್‌ಐಆರ್ ನಡೆಸಲು ತರಾತುರಿ ಏಕೆ ಎಂಬುದನ್ನು ನ್ಯಾಯಾಲಯವು ಗಮನಿಸಬಹುದಿತ್ತು. ಚುನಾವಣಾ ಆಯೋಗದ ನೇಮಕದಲ್ಲಿ ಸುಪ್ರೀಂ ಕೋರ್ಟ್ ಅನ್ನು ಸರ್ಕಾರವು ಹೊರಗಿಟ್ಟಾಗ ನ್ಯಾಯಾಲಯವು ವ್ಯಕ್ತಪಡಿಸಿದ್ದ ಅಭಿಪ್ರಾಯವನ್ನಾದರೂ ನೆನಪಿಸಿಕೊಳ್ಳಬಹುದಿತ್ತು. ಮುಖ್ಯ ಚುನಾವಣಾ ಆಯುಕ್ತರ ನಿರ್ಲಜ್ಜ ಪಕ್ಷಪಾತಿ ನಡವಳಿಕೆ ಮತ್ತು ಬಿಜೆಪಿ ಹಾಗೂ ಚುನಾವಣಾ ಆಯೋಗದ ಜುಗಲ್‌ಬಂದಿಯನ್ನು ಗಮನಿಸಬಹುದಿತ್ತು. ಆದರೆ ಹಾಗೆ ಮಾಡಲಿಲ್ಲ. ಅದಕ್ಕೆ ವ್ಯತಿರಿಕ್ತವಾಗಿ, ಚುನಾವಣಾ ಆಯೋಗದ ವಿಶ್ವಾಸಾರ್ಹತೆಯು ಪಾತಾಳ ತಲಪಿರುವ ಈ ಸಂದರ್ಭದಲ್ಲಿ ಆ ಸಂಸ್ಥೆಯನ್ನು ಹಿಂದೆ ಮುಂದೆ ನೋಡದೆ ನಂಬಿಬಿಟ್ಟಿತು ಮತ್ತು ಅದಕ್ಕೆ ಮನ್ನಣೆಯನ್ನೂ ಕೊಟ್ಟಿತು.

ನಿಜವಾಗಿಯೂ ನ್ಯಾಯಾಲಯವು ಶೂನ್ಯದಲ್ಲಿ ಕಾರ್ಯಾಚರಣೆ ನಡೆಸಿಲ್ಲ. ಹಾಗಾಗಿಯೇ, ಯಾವುದೇ ವಿಚಾರದಲ್ಲಿ ಸರ್ಕಾರವು ತನ್ನ ನಿಲುವನ್ನು ಸಡಿಲಿಸಲು ಸಿದ್ಧವಿಲ್ಲ ಎಂಬುದು ತಿಳಿದರೆ, ನ್ಯಾಯಾಲಯದ ಮೂಲಕ ಸಾಂವಿಧಾನಿಕ ಪರಿಹಾರ ಪಡೆಯುವ ಎಲ್ಲ ಬಾಗಿಲುಗಳೂ ಮುಚ್ಚಿಬಿಡುತ್ತವೆ ಎಂಬ ಸಂದೇಶವನ್ನು ನ್ಯಾಯಾಲಯ ನೀಡಿದೆ ಎಂಬ ಗ್ರಹಿಕೆ ನಿಮಗೆ ಬಂದರೆ, ನ್ಯಾಯಾಲಯವನ್ನು ಮನ್ನಿಸಿಬಿಡಿ.

ಎಸ್‌ಐಆರ್ ಪ್ರಕ್ರಿಯೆಯ ಸಿಂಧುತ್ವವನ್ನು ಎತ್ತಿಹಿಡಿದಿರುವುದಷ್ಟೇ ನ್ಯಾಯಾಲಯ ನೀಡಿದ ಸಂದೇಶ ಅಲ್ಲ; ಹಲವು ವಿಶ್ಲೇಷಕರು ಅಭಿಪ್ರಾಯಪಟ್ಟಿರುವಂತೆ, ಇದು ಮರುಪರಿಶೀಲನೆಯೇ ಇಲ್ಲದ ವಿಚಾರ ಎಂಬ ನಿಲುವು ತಳೆದಿದೆ. ಬಿಹಾರ ಚುನಾವಣೆ ಸಮಯದಲ್ಲಿ ಆತುರಾತುರವಾಗಿ ಎಸ್‌ಐಆರ್ ನಡೆಸಲು ಮತ್ತು ಎರಡನೇ ಹಾಗೂ ಮೂರನೇ ಹಂತದ ಎಸ್‌ಐಆರ್ ನಡೆಸಲು ನ್ಯಾಯಾಲಯವು ಅವಕಾಶ ಕೊಟ್ಟಾಗಲೇ ಈ ವಿಚಾರದ ತೀರ್ಮಾನ ಆಗಿಹೋಗಿತ್ತು. ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಅವರು ಎಸ್‌ಐಆರ್‌ಗೆ ಅಡಚಣೆ ಉಂಟು ಮಾಡುವವರಿಗೆ ಎಚ್ಚರಿಕೆ ಕೊಟ್ಟಾಗ ಮತ್ತು ಪಶ್ಚಿಮ ಬಂಗಾಳದಲ್ಲಿ ಅನುಮಾನಾಸ್ಪದ ಮತದಾರರು ಎಂದು 27 ಲಕ್ಷ ಜನರನ್ನು ಹೊರಗಿಟ್ಟಾಗ, ಅವರು ಮುಂದಿನ ಚುನಾವಣೆವರೆಗೆ ಕಾಯಲಿ ಎಂದು ನ್ಯಾಯಮೂರ್ತಿ ಜಾಯ್‌ಮಾಲ್ಯ ಬಾಗ್ಚಿ ಅವರು ಹೇಳಿದಾಗ ಅಳಿದುಳಿದ ಅನುಮಾನಗಳೂ ಪರಿಹಾರವಾದವು. ಹಾಗಾಗಿ, ನ್ಯಾಯಾಲಯವು ಎಸ್‌ಐಆರ್ ಅನ್ನು ಅಸಿಂಧುಗೊಳಿಸಬಹುದು ಎಂಬ ನಿರೀಕ್ಷೆ ಯಾರಿಗೂ ಇಲ್ಲ.

ಅಪನಂಬಿಕೆಯನ್ನು ಹೊಸಕಿಹಾಕುವ ನ್ಯಾಯಾಲಯದ ಇಚ್ಛೆಯೇ ಇಲ್ಲಿ ಇರುವ ನಿಜವಾದ ಸಂದೇಶ. ಎಸ್‌ಐಆರ್‌ನಲ್ಲಿ ಅಪಾಯಕಾರಿಯಾದ ಕಾನೂನು ಲೋಪಗಳಿವೆ– ಕಾನೂನು ಪ್ರಕಾರ ನಿಗದಿಪಡಿಸಲಾದ ಯಾವುದೇ ಪ್ರಕ್ರಿಯೆಗಳನ್ನು ಇಲ್ಲಿ ಅನುಸರಿಸಲಾಗಿಲ್ಲ; ಮತದಾರರ ಪಟ್ಟಿಗೆ ಸಂಬಂಧಿಸಿ ಚುನಾವಣಾ ಆಯೋಗವೇ ಸಿದ್ಧಪಡಿಸಿರುವ ಕೈಪಿಡಿ ಮತ್ತು ನಿಯಮಗಳನ್ನು ಕೂಡ ಪಾಲಿಸಿಲ್ಲ. ಈ ಎಲ್ಲ ಸವಾಲುಗಳಿಂದ ತಪ್ಪಿಸಿಕೊಳ್ಳಲು ಚುನಾವಣಾ ಆಯೋಗವು ನಿಗೂಢವಾದ ಮತ್ತು ಅತಿ–ತಾಂತ್ರಿಕವಾದ ವಾದವೊಂದನ್ನು ಮುಂದಿಟ್ಟಿತು; ಯಾವುದೇ ಒಂದು ಕ್ಷೇತ್ರ ಅಥವಾ ಒಂದು ಪ್ರದೇಶದ ಅಸಾಧಾರಣವಾದ ಸನ್ನಿವೇಶವನ್ನು ನಿರ್ವಹಿಸಲು ಪ್ರಮಾಣೀಕೃತ ಪ್ರಕ್ರಿಯೆಗಳೆಲ್ಲವನ್ನೂ ಬದಿಗೊತ್ತಬಹುದಾದ ಅವಕಾಶ ತನಗೆ ಇದೆ ಎಂದು ಪ್ರತಿಪಾದಿಸಿತು. ಆಯೋಗದ ಕುರಿತು ಯಾವ ತರ್ಕವೂ ಇಲ್ಲದ ವಿಶ್ವಾಸವನ್ನು ಪ್ರದರ್ಶಿಸಿದ ನ್ಯಾಯಾಲಯವು ಅಸಾಧಾರಣ ಸನ್ನಿವೇಶದಲ್ಲಿ ಬಳಸಬಹುದಾದ ಅವಕಾಶವನ್ನು ಸಾರ್ವತ್ರೀಕರಿಸಲು ಅವಕಾಶ ಕೊಟ್ಟಿತು; ಒಂದು ಕ್ಷೇತ್ರಕ್ಕೆ ಅನ್ವಯಿಸಬಹುದಾದ ಅವಕಾಶವನ್ನು ಇಡೀ ದೇಶಕ್ಕೆ ವಿಸ್ತರಿಸಲು ಅವಕಾಶ ನೀಡಲಾಯಿತು. ವಲಸೆ ಮತ್ತು ನಗರೀಕರಣದಂತಹ ವಾಡಿಕೆಯ ಅಂಶಗಳನ್ನು ಅಸಾಧಾರಣ ಪರಿಹಾರಗಳಿಗಾಗಿ ಸಮರ್ಪಕ ಕಾರಣಗಳಾಗಿ ಪರಿಗಣಿಸಲಾಯಿತು. ಸೂಜಿಯ ಕಣ್ಣಿನೊಳಗೆ ಆನೆಯೊಂದನ್ನು ತೂರಿಸುವಂತಹ ಚುನಾವಣಾ ಆಯೋಗದ ಕೋರಿಕೆಯನ್ನೇ ಮೀರಿಸುವಂತೆ ನ್ಯಾಯಾಲಯದ ಆದೇಶವು ಬಂತು.

ಅಂತಿಮವಾಗಿ, ಈಗ ಇರುವ ಮತದಾರರ ಪಟ್ಟಿಯಿಂದ 10 ಕೋಟಿ ಜನರ ಹೆಸರುಗಳನ್ನು ಅಳಿಸಲಾಗುತ್ತದೆ. ಆದರೆ, ಈ ಭಾರಿ ಪ್ರಮಾಣದ ಅಳಿಸುವಿಕೆಯು ವಯಸ್ಕ ಜನಸಂಖ್ಯೆಯ ಅಧಿಕೃತ ಅಂಕಿಅಂಶಗಳ ಜೊತೆಗೆ ಹೊಂದಿಕೆ ಆಗುವುದಿಲ್ಲ. ಮತದಾರರ ಪಟ್ಟಿಯಲ್ಲಿ ಈಗಾಗಲೇ ಇದ್ದ ಲಿಂಗತ್ವ ಅನುಪಾತದ ಅಸಮಾನತೆಯನ್ನು ಈಗಿನ ಎಸ್‌ಐಆರ್ ಇನ್ನಷ್ಟು ಹೆಚ್ಚಿಸಿದೆ. ಬಿಹಾರದಲ್ಲಿ ಮತದಾರರ ಪಟ್ಟಿಯ ಎಸ್‌ಐಆರ್ ಬಳಿಕವೂ ಮತದಾರರ ಪಟ್ಟಿಯಲ್ಲಿರುವ ಲೋಪಗಳು, ಅರ್ಥಹೀನ ಹೆಸರುಗಳು ಮತ್ತು ಒಬ್ಬರ ಹೆಸರಿನಲ್ಲಿ ಒಂದಕ್ಕಿಂತ ಹೆಚ್ಚು ಉಲ್ಲೇಖಗಳು ಮೊದಲಿಗಿಂತ ಹೆಚ್ಚಿಲ್ಲದಿದ್ದರೂ ಮೊದಲಿನಷ್ಟು ಇದ್ದೇ ಇವೆ. ಇವುಗಳನ್ನು ಸರಿಪಡಿಸುವುದಕ್ಕೆಂದೇ ಎಸ್‌ಐಆರ್ ನಡೆಸಲಾಗಿತ್ತು. ಈ ಅನನುಕೂಲಕರ ವಾಸ್ತವದ ಕುರಿತು ತೀರ್ಪಿನಲ್ಲಿ ಒಂದು ಮಾತೂ ಇಲ್ಲ.

ಮತದಾರರ ಪಟ್ಟಿಯನ್ನು ಯಾವುದೇ ರೀತಿಯಲ್ಲಿ ಪರಿಷ್ಕರಿಸುವುದರಿಂದ ಚುನಾವಣಾ ಆಯೋಗವನ್ನು ನ್ಯಾಯಾಲಯವು ತಡೆದಿಲ್ಲ ಎಂಬುದು ಇಲ್ಲಿನ ನಿಜವಾದ ಸಂದೇಶವಾಗಿದೆ. ಎಸ್‌ಐಆರ್‌ನ ಸಿಂಧುತ್ವವನ್ನು ಎತ್ತಿ ಹಿಡಿದರೂ ಮತದಾರರ ಪಟ್ಟಿಗೆ ಸಂಬಂಧಿಸಿ ಚುನಾವಣಾ ಆಯೋಗದಲ್ಲಿ ಇರುವ ಕೈಪಿಡಿಗಳನ್ನು ಕಡ್ಡಾಯಗೊಳಿಸಿ, ಕೆಲವು ಪ್ರಕ್ರಿಯೆಗಳನ್ನು ಅನುಸರಿಸಲು ಸೂಚಿಸಬಹುದಿತ್ತು. ಯಾವ ಅವಧಿಯಲ್ಲಿ ಎಸ್‌ಐಆರ್ ನಡೆಸಬಾರದು ಎಂಬುದಕ್ಕೆ ಸಮಯದ ಗಡುವನ್ನು ನಿಗದಿ ಮಾಡಬಹುದಿತ್ತು. ದಾಖಲೆಗಳ ಪರಿಶೀಲನೆಗೆ ನಿಯಮಾವಳಿಗಳನ್ನು ರೂಪಿಸಬಹುದಿತ್ತು. ಮತದಾರರ ಕರಡು ಪಟ್ಟಿಯಿಂದ ಈಗಾಗಲೇ ಇರುವ ಹೆಸರುಗಳನ್ನು ತಪ್ಪಾಗಿ ತೆಗೆದು ಹಾಕಿದ್ದರೆ ಈ ಲೋಪವನ್ನು ಸರಿಪಡಿಸಲು ವಿಧಾನವೊಂದನ್ನು ಸೂಚಿಸಬಹುದಿತ್ತು. ಪಾರದರ್ಶಕತೆ, ಸಾರ್ವಜನಿಕ ಅಹವಾಲು ಆಲಿಕೆ, ಪ್ರತಿ ಹಂತದಲ್ಲಿಯೂ ಕಂಪ್ಯೂಟರ್‌ನಲ್ಲಿ ಪರಿಶೀಲಿಸಬಹುದಾದ ಪಟ್ಟಿಯ ಪ್ರಕಟಣೆಗೆ ಒತ್ತಾಯಿಸಬಹುದಿತ್ತು. ಹೆಸರು ಅಳಿಸಲಾದ ಅಕ್ರಮವಾಗಿ ನೆಲಸಿರುವ ವಿದೇಶಿಯರ ಸಂಖ್ಯೆ ಎಷ್ಟು ಎಂದು ಕೇಳಬಹುದಿತ್ತು. ಚುನಾವಣಾ ಆಯೋಗವು ಕಳೆದ 75 ವರ್ಷಗಳಲ್ಲಿ ರೂಪಿಸಿಕೊಂಡ ನಿಯಮಗಳಿಗೆ ಅನುಗುಣವಾಗಿಯೇ ಇವು ಇವೆ ಮತ್ತು ಎಸ್‌ಐಆರ್‌ನಲ್ಲಿ ಇವೆಲ್ಲವನ್ನೂ ಉಲ್ಲಂಘಿಸಲಾಗಿದೆ. ಇವೆಲ್ಲವುಗಳ ಬದಲಿಗೆ ನ್ಯಾಯಾಲಯವು ಚುನಾವಣಾ ಆಯೋಗಕ್ಕೆ ದಿನಾಂಕವಿಲ್ಲದ ಚೆಕ್ ಅನ್ನು ಮುಕ್ತವಾಗಿ ಕೊಟ್ಟುಬಿಟ್ಟಿತು. ಎರಡು ಆದೇಶಗಳು ಸ್ವಲ್ಪ ನಿರಾಳ ತಂದವು ಎಂದು ಹೇಳಬಹುದು– ತಪ್ಪಾಗಿ ಹೆಸರು ಅಳಿಸಿ ಹಾಕಿದವರಿಗೆ ನ್ಯಾಯಾಲಯಕ್ಕೆ ಹೋಗಲು ಇರುವ ಅವಕಾಶ ಮತ್ತು ವಿದೇಶಿ ಪ್ರಜೆಗಳು ಎಂಬ ಅನುಮಾನದ ಕಾರಣಕ್ಕೆ ಹೆಸರು ಅಳಿಸಿ ಹಾಕಿದವರ ಹೆಸರುಗಳನ್ನು ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸು ಮಾಡುವ ಅವಕಾಶ– ಇವು ಈಗಾಗಲೇ ಇರುವ ಅಪಾಯಕಾರಿಯಲ್ಲದ ಕಾನೂನುಗಳ ಪುನರುಚ್ಚಾರ ಅಥವಾ ದ್ವೇಷ ಸಾಧನೆಗಾಗಿ ಇರುವ ಅಪಾಯಕಾರಿ ಕುಸಿತ.

ಅಂತಿಮವಾಗಿ, ಸಂವಿಧಾನ, ಕಾನೂನು ಅಥವಾ ನಿಯಮಗಳಿಗೆ ಯಾವ ತಿದ್ದುಪಡಿಯನ್ನೂ ಮಾಡದೆ ದೇಶದಾದ್ಯಂತ ಸುಮಾರು 10 ಕೋಟಿ ಜನರ ಹೆಸರನ್ನು ಮತದಾರರ ಪಟ್ಟಿಯಿಂದ ಅಳಿಸಿ ಹಾಕುವ ಚೌಕಟ್ಟನ್ನು ಈ ಆದೇಶವು ಹಾಕಿಕೊಟ್ಟಿತು. ಪ್ರಾತಿನಿಧಿಕ ಪ್ರಜಾಪ್ರಭುತ್ವದ ಮೂಲತತ್ವಗಳನ್ನು ಬುಡಮೇಲುಗೊಳಿಸಲು ಬೇಕಾದ ಟೂಲ್‌ಕಿಟ್ ಅನ್ನು ಇದು ಒದಗಿಸಿತು. ಈಗ, ಚುನಾವಣಾ ಆಯೋಗ ಮತ್ತು ಇಂಗಿತಾರ್ಥದಲ್ಲಿ ಬಿಜೆಪಿ ಮತದಾರರ ಪಟ್ಟಿಯಿಂದ ಯಾರನ್ನಾದರೂ ಅಥವಾ ಯಾವುದೇ ವರ್ಗದ ಜನರ ಹೆಸರನ್ನು ಕಿತ್ತುಹಾಕಲು ಸ್ವತಂತ್ರವಾಗಿದೆ. ಜರ್ಮನ್ ತತ್ವಶಾಸ್ತ್ರಜ್ಞ ಮತ್ತು ಲೇಖಕ ಬರ್ಟೋಲ್ಟ್ ಬ್ರೆಕ್ಟ್ ಬಹಳ ಹಿಂದೆಯೇ ಇದನ್ನು ಕಂಡಿದ್ದರು, ಅವರದೊಂದು ಹೇಳಿಕೆ ಹೀಗಿದೆ– ಜನರು ತಮ್ಮ ಆಡಳಿತಗಾರರನ್ನು ಆಯ್ಕೆ ಮಾಡುವುದರ ಬದಲಿಗೆ ಆಡಳಿತಗಾರರೇ ತಮ್ಮ ಜನರನ್ನು ಆಯ್ಕೆ ಮಾಡಿಕೊಳ್ಳಲು ಸ್ವತಂತ್ರರಾಗಿದ್ದಾರೆ.



ವಾಚಕರ ವಾಣಿ

ಗ್ಯಾಸ್ ಸಂಪರ್ಕ ನಿರ್ಬಂಧ: ಜನರ ಸಂಕಷ್ಟ

ರಾಜ್ಯದಲ್ಲಿ ಹೊಸದಾಗಿ ಎಲ್‌ಪಿಜಿ ಸಂಪರ್ಕಕ್ಕೆ ನಿರ್ಬಂಧ ವಿಧಿಸಲಾಗಿದೆ. ಗ್ಯಾಸ್ ಏಜೆನ್ಸಿ ಕಚೇರಿಗಳಿಗೆ ಅರ್ಜಿ ಸಲ್ಲಿಸಿದರೆ 'ಸರ್ಕಾರವು ಹೊಸ ಸಂಪರ್ಕಕ್ಕೆ ಅನುಮತಿ ನೀಡಿಲ್ಲ' ಎಂಬ ಉತ್ತರ ಬರುತ್ತದೆ. ಆಹಾರದ ಹಕ್ಕು ಕಾನೂನಾಗಿದೆ. ಹೀಗಿರುವಾಗ ಹೊಸ ಸಂಪರ್ಕ ಕೊಡದಿದ್ದರೆ ಜನಸಾಮಾನ್ಯರು ಬದುಕು ಸಾಗಿಸುವುದು ಹೇಗೆ? ದಿನಬಳಕೆಯ ಸಿಲಿಂಡರ್ ಸಂಪರ್ಕದ ಬದಲಾಗಿ ವಾಣಿಜ್ಯ ಸಿಲಿಂಡರ್ ಸಂಪರ್ಕ ನೀಡುವುದಾಗಿ ಹೇಳುತ್ತಾರೆ. ಜನಸಾಮಾನ್ಯರು ಮೂರು ಸಾವಿರದಷ್ಟು ಹಣ ತೆತ್ತು ಈ ಸಿಲಿಂಡರ್ ಬಳಸಲು ಸಾಧ್ಯವೆ? ಈ ನಿರ್ಬಂಧವನ್ನು ತೆಗೆದುಹಾಕಿದರೆ ಜನಸಾಮಾನ್ಯರಿಗೆ ಅನುಕೂಲವಾಗಲಿದೆ. ಪ್ರಸ್ತುತ ಪ್ರಧಾನ ಮಂತ್ರಿ ಉಜ್ವಲಾ ಯೋಜನೆಯ ಫಲಾನುಭವಿಗಳಿಗೆ ಸಬ್ಸಿಡಿಸಹಿತ ನೀಡುತ್ತಿದ್ದ ಸಿಲಿಂಡರ್ ಸಂಖ್ಯೆಯನ್ನು ನಾಲ್ಕಕ್ಕೆ ಕಡಿತಗೊಳಿಸಲಾಗಿದೆ. ಕನಿಷ್ಠ ಪಕ್ಷ ಆದ್ಯತೆ ಆಧಾರದಲ್ಲಾದರೂ ಹೊಸ ಸಂಪರ್ಕ ನೀಡಲಿ.

ತಿರುಪತಿ ನಾಯಕ್, ರಾಯಚೂರು

ನೈತಿಕ ನೆಲೆಗಟ್ಟು: ಶಿಕ್ಷಕರ ಪಾಲು ದೊಡ್ಡದು

ಕೆಲವು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಏಳನೇ ತರಗತಿಯಲ್ಲಿ ಉತ್ತೀರ್ಣರಾಗಿರುವ ವಿದ್ಯಾರ್ಥಿಗಳನ್ನು ಖಾಸಗಿ ಶಾಲೆಗಳಿಗೆ ದಾಖಲಿಸಲು ಮುಖ್ಯಶಿಕ್ಷಕರು ಅವಕಾಶ ಕೊಡುತ್ತಿಲ್ಲ. ಸರ್ಕಾರಿ ಪ್ರೌಢಶಾಲೆಗೆ ಸೇರುವಂತೆ ಒತ್ತಾಯಿಸುತ್ತಿದ್ದಾರೆ. ಆದರೆ, ಪೋಷಕರು, ಕ್ರಿಯಾಶೀಲ ಶಿಕ್ಷಕರು ಮತ್ತು ಗುಣಮಟ್ಟದ ಶಿಕ್ಷಣ ಸಿಗುವ ಶಾಲೆಗಳನ್ನೇ ಆಯ್ಕೆ ಮಾಡುತ್ತಾರೆ. ಯಾವುದೇ ಶಾಲೆಯಾಗಲಿ ಕ್ರಿಯಾಶೀಲತೆ, ಗುಣಮಟ್ಟ ಮತ್ತು ಬದ್ಧತೆಯ ಆಧಾರದಲ್ಲಿ ತನ್ನ ಅಸ್ತಿತ್ವ ಪ್ರದರ್ಶಿಸಬೇಕು. ಅದರ ಹೊರತು ಬಿಇಒ, ಡಿಡಿಪಿಐ ಅವರ ಆದೇಶದ ಬಲದಿಂದ ಬೇರೆ ಶಾಲೆಗೆ ವರ್ಗಾವಣೆ ಪತ್ರ ಕೊಡುವುದಿಲ್ಲ ಎನ್ನುವುದು ಮಕ್ಕಳ ಹಕ್ಕನ್ನು ಕಸಿದುಕೊಂಡಂತೆ. ಎಷ್ಟು ಶಿಕ್ಷಕರು ತಮ್ಮ ಮಕ್ಕಳನ್ನು ಸರ್ಕಾರಿ ಪ್ರೌಢಶಾಲೆಗಳಲ್ಲಿ ಓದಿಸುತ್ತಿದ್ದಾರೆ? ಬಾವಿಯ ಆಳ ಅಳೆಯಲು ಬೇರೆಯವರ ಮಕ್ಕಳನ್ನು ಬಳಸಬಾರದು. ನೈತಿಕತೆಯ ನೆಲೆಗಟ್ಟು ಕಾಪಾಡುವಲ್ಲಿ ಶಿಕ್ಷಕರ ಪಾಲು ಮಹತ್ವದ್ದಾಗಿದೆ.

ಮಹೇಶ್ ಮುನಿಯಪ್ಪ, ಹೆಬ್ಬಾಳ

ಹಿಂಸಾಪ್ರವೃತ್ತಿ ತಡೆಗೆ ಬೇಕಿದೆ ಚಿಕಿತ್ಸೆ

ಗಂಗಾವತಿ ತಾಲ್ಲೂಕಿನ ಹೊಸ ಅಯೋಧ್ಯಾ ಗ್ರಾಮದ ಯುವಕನೊಬ್ಬ ತನ್ನ ಪೋಷಕರು ಮತ್ತು ಸಹೋದರಿಗೆ ಚಾಕುವಿನಿಂದ ಇರಿದು, ತಾನೂ ಕುತ್ತಿಗೆ ಕೊಯ್ದುಕೊಂಡಿರುವುದು ವರದಿಯಾಗಿದೆ. ಯುವಕ ಮೊಬೈಲ್ ಗೀಳಿಗೆ ಬಿದ್ದಿದ್ದ; ಪೋಷಕರು ಬುದ್ಧಿವಾದ ಹೇಳಿದ್ದಕ್ಕೆ ಈ ಕೃತ್ಯ ಎಸಗಿದ್ದಾನೆ ಎನ್ನುವುದು ಪೊಲೀಸರ ಪ್ರಾಥಮಿಕ ಮಾಹಿತಿ. ಇತ್ತೀಚೆಗೆ ಯುವಕರು ಯಾವುದೇ ದುಷ್ಕೃತ್ಯ ಎಸಗಿದರೂ ಮೊಬೈಲನ್ನು ಕಾರಣ ಮಾಡುವುದು ಮಾಮೂಲಾಗಿದೆ. ಬೇರೆ ಕಾರಣಗಳಲ್ಲಿ ಇದೂ ಒಂದು ಆಗಿರುವ ಸಾಧ್ಯತೆ ಇರುತ್ತದೆ; ಅದೊಂದೇ ಮುಖ್ಯ ಕಾರಣವಾಗಿರುವುದಿಲ್ಲ. ಯುವಜನರನ್ನು ಕಾಡುತ್ತಿರುವ ಮಾನಸಿಕ ಅಭದ್ರತೆಯು ಇಂಥ ಹಿಂಸಾಕೃತ್ಯಗಳ ಹಿಂದೆ ಕೆಲಸ ಮಾಡಿರುತ್ತದೆ. ಜಟಿಲಗೊಳ್ಳುತ್ತಿರುವ ಕೌಟುಂಬಿಕ ಸಂಬಂಧಗಳು ಅವರ ಮನಸ್ಸಿನ ಮೇಲೆ ಗಂಭೀರ ಪರಿಣಾಮ ಬೀರುತ್ತಿವೆ.

ಹರೀಶ್ ಹಂದನಕೆರೆ, ಬೆಂಗಳೂರು

'ಮುಂಗಾರು' ಹಳೆ ಸಂಚಿಕೆಗಳಿಗೆ ಕೋರಿಕೆ

ವಡ್ಡರ್ಸೆ ರಘುರಾಮಶೆಟ್ಟಿ ಅವರ ಸಂಪಾದಕತ್ವದ 'ಮುಂಗಾರು' ಪತ್ರಿಕೆಯು 80–90ರ ದಶಕದಲ್ಲಿ ಪ್ರಕಟವಾಗುತ್ತಿತ್ತು. ಈ ಪತ್ರಿಕೆಯ ಸಂಚಿಕೆಗಳನ್ನು ಮುಂದಿನ ತಲೆಮಾರಿಗೆ ತಲಪಿಸುವ ಉದ್ದೇಶದಿಂದ ಪತ್ರಿಕೆಯ ಡಿಜಿಟಲೀಕರಣ ಕಾರ್ಯ ನಡೆಯುತ್ತಿದೆ. ಪತ್ರಿಕೆಯ ಹಳೆಯ ಸಂಚಿಕೆಗಳು ಯಾರ ಬಳಿಯಾದರೂ ಇದ್ದರೆ, ಯಾರಾದರೂ ತಮ್ಮ ಸಂಗ್ರಹದಲ್ಲಿ ಪತ್ರಿಕೆಯ ಸಂಚಿಕೆಗಳನ್ನು ಕಾಪಿಟ್ಟುಕೊಂಡಿದ್ದರೆ ನಮಗೆ ಕೊಟ್ಟು ಡಿಜಿಟಲೀಕರಣಕ್ಕೆ ಸಹಕರಿಸಲು ಮನವಿ (ಮೊಬೈಲ್: 86606 93688/ 94491 74662).

ನವೀನ್ ಶೆಟ್ಟಿ, ಬೆಂಗಳೂರು; **ಅಕ್ಷತಾ ಹುಂಚದಕಟ್ಟೆ,** ಶಿವಮೊಗ್ಗ

ದ್ರಾಕ್ಷಿ ಸಿಕ್ಕರೆ ಸಿಹಿ; ಸಿಗದೆ ಹೋದರೆ ಕಹಿ?

'ಕೊಟ್ಟರೂ ಬೆಂಗಳೂರು ಅಭಿವೃದ್ಧಿ ಖಾತೆ ಬೇಡ' ಎಂದು ಸಚಿವ ರಾಮಲಿಂಗಾರೆಡ್ಡಿ ಹೇಳಿದ್ದಾರೆ. ಈ ಸುದ್ದಿ ಓದಿದಾಗ, ನರಿಯು ದ್ರಾಕ್ಷಿ ಬಾಯಿಗೆ ಸಿಗದಿದ್ದಾಗ ಅದು ಹುಳಿ ದ್ರಾಕ್ಷಿ ಎಂದ ಈಸೋಪನ ನೀತಿಕಥೆ ನೆನಪಾಯಿತು. ಸಚಿವರಿಗೆ ಅವರ ಆಸಕ್ತಿಯ ಕ್ಷೇತ್ರ, ಅನುಭವ ಆಧರಿಸಿ ಖಾತೆ ನೀಡುವುದು ಸೂಕ್ತವೇ. ಆದರೆ, ಕನಿಷ್ಠ ಪದವಿ ಪಡೆಯದವರಿಗೆ ಶಿಕ್ಷಣ ಖಾತೆ ನೀಡಿರುವ ಉದಾಹರಣೆ ಇದೆ. ಪಶು ಸಂಗೋಪನಾ ಖಾತೆ ಎಂಬುದು ಗೊತ್ತಿಲ್ಲದ ಕಾಲದಲ್ಲಿ ಕೆ.ಎನ್. ನಾಗೇಗೌಡರು ಆ ಖಾತೆ ಪಡೆದು ಕ್ರಾಂತಿಯನ್ನೇ ಮಾಡಿದರು. ನಜೀರ್ ಸಾಬ್ 'ನೀರು ಸಾಬ್' ಎಂದೇ ಹೆಸರುಗಳಿಸಿದರು. ಮಂಡ್ಯದ ಕೆ.ವಿ. ಶಂಕರಗೌಡ ಹಾಗೂ ಎಚ್.ಜಿ. ಗೋವಿಂದೇಗೌಡ ಶಿಕ್ಷಣ ಸಚಿವರಾಗಿ ಮಾಡಿರುವ ಸಾಧನೆಗಳು ಜನಮನದಲ್ಲಿ ಉಳಿದಿವೆ. ರಾಜ್ಯದ ಅಭಿವೃದ್ಧಿಗೆ ದುಡಿಯಲು ಯಾವ ಖಾತೆಯಾದರೇನು?


ಸಿ. ಸಿದ್ದರಾಜು ಆಲಕೆರೆ, ಮಂಡ್ಯ

ಎಸ್‌ಐಆರ್: ಅರ್ಹರು ಅನರ್ಹರಾಗದಿರಲಿ

ಕರ್ನಾಟಕದಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ಆರಂಭವಾಗಿದೆ. ಇದು ಜನರನ್ನು ಆತಂಕಕ್ಕೆ ದೂಡಿದೆ. ಎಸ್‌ಐಆರ್ ನಡೆದಿರುವ ರಾಜ್ಯಗಳಲ್ಲಿ ಲಕ್ಷಾಂತರ ಜನರು ಮತದಾನದ ಹಕ್ಕು ಕಳೆದುಕೊಂಡಿರುವುದೇ ಇದಕ್ಕೆ ಕಾರಣ. ಜನರು ಪಡಿತರ ಚೀಟಿ, ಆಧಾರ್ ಕಾರ್ಡ್, ಪಾನ್ ಕಾರ್ಡ್, ಮತದಾರರ ಗುರುತಿನ ಚೀಟಿಯನ್ನೇ ಆಧಾರವಾಗಿಟ್ಟುಕೊಂಡು ದೇಶದಲ್ಲಿ ವಾಸಿಸುತ್ತ, ಮತ ಚಲಾಯಿಸುತ್ತ ಭಾರತೀಯ ಪ್ರಜೆಗಳೆಂದು ಸಾಬೀತು ಮಾಡಿಕೊಂಡು ಬರುತ್ತಿದ್ದಾರೆ. ಅಷ್ಟಕ್ಕೂ ಈ ದಾಖಲೆ ನೀಡಿರುವುದು ಸರ್ಕಾರ, ಚುನಾವಣಾ ಆಯೋಗವೇ ಅಲ್ಲವೆ? ಇರುವ ದಾಖಲೆ ಪರಿಗಣಿಸುವ ಮೂಲಕ ಎಸ್‌ಐಆರ್ ಸರಳ ಪ್ರಕ್ರಿಯೆಯಾಗಬೇಕಿದೆ. ಸಣ್ಣ ಕಾರಣ ನೀಡಿ ಮತದಾರರ ಹಕ್ಕನ್ನು ಕಸಿಯಬಾರದು.

ಮಹೇಶ್ ಕೂದುವಳ್ಳಿ, ಚಿಕ್ಕಮಗಳೂರು

ಚುರುಮುರಿ



ಜೀರೊ ಟ್ರಾಫಿಕ್ ಹೀರೊ

• ಮಣ್ಣೆ ರಾಜು

ಬೈಕ್‌ನಲ್ಲಿ ಹೆಂಡ್ತಿ ಕೂರಿಸಿಕೊಂಡು ಶಂಕ್ರಿ ತರಾತುರಿಯಲ್ಲಿ ಹೊರಟಿದ್ದ. ಪೊಲೀಸರು ತಡೆದರು.

'ಹೆಲ್ಮೆಟ್ಟು, ಡಿಎಲ್ಲು ಎಲ್ಲಾ ಇದೆ ಸಾರ್...' ಅಂದ ಶಂಕ್ರಿ.

'ಇದ್ರೂ ಹೋಗುವಂತಿಲ್ಲ, ಮಿನಿಸ್ಟ್ರು ಪಾಸ್ ಆಗ್ತಿದ್ದಾರೆ' ಅಂದ್ರು ಪೊಲೀಸ್ರು.

'ಮಿನಿಸ್ಟ್ರು ಪಾಸಾಗ್ತಾರೆ ಅಂತ ನಮ್ಮನ್ನ ಏಕೆ ಫೇಲ್ ಮಾಡ್ತಿದ್ದೀರಾ ಸಾರ್?' ಸುಮಿ ಕೇಳಿದಳು.

'ಈಗ ನಿಮ್ಮನ್ನು ಪಾಸ್ ಮಾಡಿಬಿಟ್ಟರೆ ನಾನು ಫೇಲ್ ಆಗಿಬಿಡ್ತೀನಿ! ಮಿನಿಸ್ಟ್ರು ಪಾಸಾದ ಮೇಲೆ ನೀವು ಪಾಸಾಗಿ'.

ಅಷ್ಟರಲ್ಲಿ ಆ್ಯಂಬುಲೆನ್ಸ್ ಪಾಸ್ ಆಯ್ತು. 'ಆ್ಯಂಬುಲೆನ್ಸ್ ಪಾಸ್ ಆಯ್ತಲ್ಲಾ ಸಾರ್'.

'ಆ್ಯಂಬುಲೆನ್ಸ್ ಫೇಲ್ ಆಗಬಾರದು, ಮಂತ್ರಿಗಳ ಕಾರುಗಳೂ ನಿಂತು ಆ್ಯಂಬುಲೆನ್ಸ್ ಪಾಸಾಗಲು ಬಿಡಬೇಕು'.

'ರೀ, ಇನ್ಮೇಲೆ ನೀವು ಆಫೀಸಿಗೆ ಬೈಕ್ ಬದಲು ಆ್ಯಂಬುಲೆನ್ಸ್‌ನಲ್ಲಿ ಹೋಗಿ' ಗಂಡನಿಗೆ ಹೇಳಿದಳು ಸುಮಿ.

'ಮಿನಿಸ್ಟ್ರು ಪಾಸ್ ಆಗಲು ಎಷ್ಟೊತ್ತು ಆಗುತ್ತೆ ಸಾರ್?'

'ಮಿನಿಸ್ಟ್ರು ಗಣ್ಯರ ಜೊತೆ ಬ್ರೇಕ್‌ಫಾಸ್ಟ್ ಮೀಟಿಂಗ್‌ನಲ್ಲಿದ್ದಾರೆ, ಯಾವ ಕ್ಷಣದಲ್ಲಾದರೂ ಹೊರಡಬಹುದು'.

'ಅವರ ಈಟಿಂಗ್, ಮೀಟಿಂಗ್ ಮುಗಿಯುವುದರಲ್ಲಿ ನಾವು ಪಾಸ್ ಆಗಿಬಿಡ್ತೀವಿ ಸಾರ್'.

'ಬಿಡೊಲ್ಲಾರೀ...'

'ಮಂತ್ರಿಗಳಿಗೆ ಜೀರೊ ಟ್ರಾಫಿಕ್ ಹೀರೊ ಕ್ರೇಜ್ ಇರಬಾರದು...' ಶಂಕ್ರಿ ಗೊಣಗಿಕೊಂಡ.

'ಸರ್ಕಾರ ಮಂತ್ರಿಗಳಿಗೆ ಕಾರು ಬದಲು ಒಂದೊಂದು ಹೆಲಿಕಾಪ್ಟರ್ ಕೊಟ್ಟರೆ ಹಾರಾಡಿಕೊಂಡಿರ್ತಾರೆ, ನಾವು ರೋಡ್ ಟ್ರಾಫಿಕ್‌ನಲ್ಲಿ ಹೆಣಗಾಡಿಕೊಂಡು ಹೋಗ್ತೀವಿ' ಅಂದಳು ಸುಮಿ.

'ಮೊನ್ನೆ ಮುಖ್ಯಮಂತ್ರಿಗಳು ಮೆಟ್ರೊ ಹತ್ತಿದ್ರು, ಮಂತ್ರಿಗಳು ಬಸ್ ಹತ್ತಿ ಜನರ ಕಷ್ಟಸುಖದ ಜೊತೆ ಪ್ರಯಾಣ ಮಾಡುವಂತಾಗಬೇಕು' ಎಂದುಕೊಂಡ ಶಂಕ್ರಿ, 'ಯಾವ ಮಂತ್ರಿಗಳು ಯಾವ ರಸ್ತೆಯಲ್ಲಿ ಎಷ್ಟು ಹೊತ್ತಿಗೆ ಬರ್ತಾರೆ ಅಂತ ಮೊದಲೇ ತಿಳಿಸಿಬಿಟ್ಟರೆ ಆ ಟೈಮ್ ನೋಡಿಕೊಂಡು ನಾವು ರಸ್ತೆಗೆ ಬರ್ತೀವಿ, ಇಲ್ಲಾ ದಾರಿ ಬದಲಾಯಿಸ್ತೀವಿ' ಅಂದ.

ಪೊಲೀಸರು ಸಿಟ್ಟಾಗಿ ಜೋರಾಗಿ ವಿಷಲ್ ಊದಿದರು.

ಸಂಗತ

ಎತ್ತುಗಳ ಕಣ್ಮರೆ ಮತ್ತು ಕೃಷಿ ಸಂಕಷ್ಟ ಹೆಚ್ಚಳ


ಯಂತ್ರಗಳು ಬಂದಿರುವುದರಿಂದ ಕೃಷಿ ಸಂಸ್ಕೃತಿಯಲ್ಲಿ ಭಾರೀ ಪಲ್ಲಟ ಉಂಟಾಗಿದೆ. ರೈತರ ಸಂಕಷ್ಟಗಳಿಗೂ ಎತ್ತುಗಳು ಕಣ್ಮರೆ ಆಗುತ್ತಿರುವುದಕ್ಕೂ ಸಂಬಂಧವಿದೆ.

• ಜಿ.ಎಸ್. ಗೋಪಾಲ ನಾಯ್ಕ

ನಾಲ್ಕೈದು ದಶಕಗಳ ಹಿಂದೆ ಗ್ರಾಮೀಣ ಪ್ರದೇಶಗಳಲ್ಲಿ ಮಗಳಿಗೆ ವರನನ್ನು ಹುಡುಕುವ ವಿಷಯದಲ್ಲಿ ವಿಶಿಷ್ಟ ಸಂಪ್ರದಾಯವೊಂದು ಚಾಲ್ತಿಯಲ್ಲಿತ್ತು. ಹುಡುಗಿಯ ಕಡೆಯವರು ಹುಡುಗನ ಮನೆಗೆ ಭೇಟಿ ಕೊಟ್ಟು, ಅವರ ಮನೆಯ 'ತಿಪ್ಪೇಗುಂಡಿ' ನೋಡಿದ ನಂತರ ಮಗಳನ್ನು ಆ ಮನೆಗೆ ಕೊಡುವ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತಿದ್ದ ಸಂಪ್ರದಾಯವದು!

ತಿಪ್ಪೆಯ ಸಮೃದ್ಧಿ ಆಧಾರದ ಮೇಲೆ ವರನ ಮನೆಯ ಯೋಗ್ಯತೆ, ಅರ್ಹತೆ, ಮನೆತನ ಅಳೆಯಲಾಗುತ್ತಿತ್ತು. ಯಾರ ಮನೆಯ ತಿಪ್ಪೆ ಯಾವಾಗಲೂ ಭರ್ತಿಯಾಗಿರುತ್ತೋ ಅಂಥ ವರ ಮನೆಗೆ ಮಗಳನ್ನು ಕೊಟ್ಟರೆ ಸುಖವಾಗಿರುತ್ತಾಳೆ ಎಂಬ ಲೆಕ್ಕಾಚಾರವದು. ತಿಪ್ಪೇಗುಂಡಿ ತುಂಬಿರುವುದು ಆ ಮನೆಯಲ್ಲಿ ದನಕರುಗಳಿವೆ ಎನ್ನುವುದರ ಸೂಚನೆಯಾಗಿರುತ್ತಿತ್ತು. ದನಕರುಗಳಿವೆ ಎಂದ ಮೇಲೆ ಹುಲ್ಲಿನ ಬಣವೆ, ಹೊಲ ಗದ್ದೆ, ಒಕ್ಕಲುತನ ಇರುತ್ತದೆ. ಒಕ್ಕಲುತನ ಇರುವ ಮನೆಯಲ್ಲಿ ಮಗಳು ಸುಖವಾಗಿರುತ್ತಾಳೆ ಎಂಬುದು ಅಂದಿನವರ ನಂಬಿಕೆಯಾಗಿತ್ತು. ಈಗ ಕಾಲ ಬದಲಾಗಿದೆ. ತಿಪ್ಪೇಗುಂಡಿ ಇರುವ ಮನೆಗೆ ಹೆಣ್ಣು ಕೊಡಲು ಹಿಂಜರಿಯುವಂತಾಗಿದೆ.

'ಎತ್ತು ಸಾಕಬೇಕು, ಉತ್ತು ಬೆಳೆಯಬೇಕು', 'ಎಂಟಾಣೆ ಕಟ್ಟಿದವನು ಕೂಳು ಕಾಣದಾದ, ಎಂಟೆತ್ತು ಕಟ್ಟಿದವನು ಕುಬೇರನಾದ', 'ಕೊಟ್ಟಿಗೆಗೆ ಎತ್ತು ಚೆಂದ, ಮೂಗಿಗೆ ನತ್ತು ಚಂದ'. 'ಅಂಜನ ಹಾಕಿದ ಕಣ್ಣು ಚೆಂದ, ಗೊಬ್ಬರ ಹಾಕಿದ ಹೊಲ ಚೆಂದ', 'ನಾಟಿ ಮಾಡಿದ ಹೊಲ ಚೆಂದ, ಮೇಟಿ ಕಟ್ಟಿದ ಕಣ ಚೆಂದ' –ಇಂತಹ ಗಾದೆಗಳು ಒಕ್ಕಲುತನ ಮಾಡುವ ಮನೆತನಗಳಲ್ಲಿ ಕೇಳಿ ಬರುತ್ತಿದ್ದವು. ಯಾವ ಮನೆಯ ಕೊಟ್ಟಿಗೆಯಲ್ಲಿ ಎತ್ತು, ದನಕರುಗಳು ಇರುತ್ತಿದ್ದವೋ ಅಲ್ಲಿ ಲವಲವಿಕೆ, ಜೀವಂತಿಕೆ ಇರುತ್ತಿತ್ತು. ಜಾನುವಾರುಗಳನ್ನು ಮನೆಯ ಸದಸ್ಯರಂತೆಯೇ ಕಾಣಲಾಗುತ್ತಿತ್ತು.



ಬಸವ ಜಯಂತಿ ಹಬ್ಬದ ದಿನದಂದು ದನಕರುಗಳನ್ನು ಸಿಂಗರಿಸಿ ಸಂಭ್ರಮಿಸಲಾಗುತ್ತಿತ್ತು. ಊಟದ ತಟ್ಟೆಯಲ್ಲಿ ಹಬ್ಬದ ಅಡುಗೆಯನ್ನೆಲ್ಲಾ ಬಡಿಸಿ ಒಂದೇ ತಟ್ಟೆಯಲ್ಲಿ ಎತ್ತುಗಳೊಂದಿಗೆ ಮನೆಯ ಯಜಮಾನ ಹಂಚಿಕೊಂಡು ತಿನ್ನುತ್ತಿದ್ದನು. ತುರ್ತಾಗಿ ಮನೆ ಮಂದಿ ಎಲ್ಲಿಯಾದರೂ ಹೋಗುವುದಿದ್ದರೆ ಚಿಕ್ಕ ಮಕ್ಕಳನ್ನು ಧೈರ್ಯವಾಗಿ ಮನೆಯಲ್ಲೇ ಬಿಟ್ಟು ಹೋಗುತ್ತಿದ್ದರು. ಮಕ್ಕಳು ರಾತ್ರಿ ಹೊತ್ತು ದನಕರುಗಳು ಉಸಿರಾಡುವ, ಹುಲ್ಲು ಮೇಯುವ, ಕಾಲು ಎತ್ತಿ ಹಾಕುವ, ಇತರೆ ಶಬ್ದದಿಂದ ಮಾನಸಿಕ ಬೆಂಬಲ ದೊರೆತಂತಾಗಿ ಧೈರ್ಯದಿಂದ ಮಲಗುತ್ತಿದ್ದರು.

ನಗರ ಪ್ರದೇಶದ ಕೆಲವರು ತಮ್ಮ ಕೆಲಸದ ಒತ್ತಡವನ್ನು ನಿವಾರಿಸಿಕೊಳ್ಳಲು ಸಾಕುಪ್ರಾಣಿಗಳೊಂದಿಗೆ ಸಮಯ ಕಳೆಯುವಂತೆ, ರೈತರು ತಮ್ಮ ಜಾನುವಾರುಗಳೊಂದಿಗೆ ಸಮಯ ಕಳೆಯುತ್ತಿದ್ದರು. ಎಂತಹ ಬರಗಾಲ, ಕಷ್ಟ ಬಂದರೂ, ಮನೆಯಲ್ಲಿ ಒಂದು ಜೊತೆ ಎತ್ತುಗಳಿವೆ ಎನ್ನುವುದು ರೈತರಿಗೆ ನೈತಿಕ ಬೆಂಬಲ ಆಗಿರುತ್ತಿತ್ತು. ಎತ್ತುಗಳಿಗೆ ಹೆಸರಿಡುವುದು, ಬಾಯಿಯಿಂದ ವಿಚಿತ್ರವಾಗಿ ಶಬ್ದ ಮಾಡಿ ಅವುಗಳೊಂದಿಗೆ ಸಂವಹನ ನಡೆಸುವುದು ಸಾಮಾನ್ಯವಾಗಿತ್ತು. ಎತ್ತುಗಳೊಂದಿಗೆ ಕುಟುಂಬಸಮೇತರಾಗಿ ತೆಗೆಸಿಕೊಂಡಿರುವ ಭಾವಚಿತ್ರಗಳು ಈಗಲೂ ಅಲ್ಲಲ್ಲಿ ಇವೆ.

ಉಳುಮೆ, ಬಿತ್ತನೆ, ಕಟಾವು ಮಾಡಿದ ಫಸಲನ್ನು ಎತ್ತಿನಗಾಡಿಯಲ್ಲಿ ಕಣಕ್ಕೆ ತಂದು ಹಾಕುವುದು, ಗುಂಡುಕಲ್ಲು ಹೊಡೆದು ಕಣ ಮಾಡಿ ಸುಗ್ಗಿ ಮಾಡುವುದು ಇತ್ಯಾದಿ ಕೆಲಸಗಳೆಲ್ಲ ಎತ್ತುಗಳಿಂದಲೇ ಆಗುತ್ತಿದ್ದವು. ಬಿತ್ತನೆಗಾಗಿ ಬೀಜಗಳನ್ನು ಹಿಂದಿನ ವರ್ಷದ ಬೆಳೆಯಲ್ಲೇ ತೆಗೆದಿಡುತ್ತಿದ್ದರು. ತಿಪ್ಪೇಗುಂಡಿಯಿಂದ ಚೆನ್ನಾಗಿ ಮಾಗಿದ ಗೊಬ್ಬರವನ್ನು ಜರಡಿಯಲ್ಲಿ ಸಾಣಿಸಿ ಬಿತ್ತನೆಗೆ ಬಳಸುತ್ತಿದ್ದರು. ಕ್ರಿಮಿಕೀಟದ ಹಾವಳಿ ಇದ್ದರೆ ಹಸುವಿನ ಗಂಜಳಕ್ಕೆ ಬೇವಿನ ಎಣ್ಣೆಯನ್ನು ಹಾಕಿ ಸಿಂಪಡಿಸುತ್ತಿದ್ದರು. ಆದರೆ, ಈಗ ಚಿತ್ರಣ ಸಂಪೂರ್ಣ ಬದಲಾಗಿದೆ. ಮನೆಯಲ್ಲಿ ಎತ್ತುಗಳಿವೆ ಎಂದರೆ ಬಡ ರೈತ ಎಂಬ ಹಣೆಪಟ್ಟಿ ಕಟ್ಟಲಾಗುತ್ತಿದೆ. ಎತ್ತುಗಳಿಂದ ಆಗುತ್ತಿದ್ದ ಕೆಲಸಗಳನ್ನೆಲ್ಲ ಈಗ ಯಂತ್ರಗಳು ಮಾಡುತ್ತಿವೆ, ಸಹಜವಾಗಿಯೇ ಖರ್ಚು ಹೆಚ್ಚಾಗತೊಡಗಿದೆ. ಇತ್ತೀಚೆಗೆ ಬಯಲು ಸೀಮೆಯ ಯಾವ ರೈತರನ್ನು ಕೃಷಿಯ ಬಗ್ಗೆ ಕೇಳಿದರೂ ನಷ್ಟದ ಬಗ್ಗೆಯೇ ಮಾತನ್ನಾಡುತ್ತಾರೆ. 'ಬೇಸಾಯ ಮನೆ ಮಂದಿಯೆಲ್ಲ ಸಾಯ', 'ಕಾಯಕವೇ ಕೈಸಾಲ' ಎಂಬ ಹೊಸ ಗಾದೆಗಳನ್ನು ಆಡಿ ಬೇಸರ ವ್ಯಕ್ತಪಡಿಸುತ್ತಾರೆ. ಯುವಕರು ನಗರ ಪ್ರದೇಶಗಳತ್ತ ಮುಖ ಮಾಡುವುದು ಸಾಮಾನ್ಯವಾಗಿದೆ. ಸಾಕಷ್ಟು ಮನೆಗಳಲ್ಲಿ ಕೊಟ್ಟಿಗೆಯೂ ಇಲ್ಲ, ಎತ್ತುಗಳೂ ಇಲ್ಲ.

ಈಗ ತೋಟಗಾರಿಕೆಯತ್ತ ಕೆಲವರು ಮುಖ ಮಾಡಿದ್ದಾರೆ. ಮಲೆನಾಡಿಗೆ ಸೀಮಿತವಾಗಿದ್ದ ಅಡಿಕೆ ಈಗ ಬಯಲು ಸೀಮೆಯಲ್ಲೂ ಬೆಳೆಯಲಾಗುತ್ತಿದೆ. ಎತ್ತುಗಳ ಅವಶ್ಯಕತೆ ಇರದ ಬೆಳೆಗಳನ್ನು ಬೆಳೆದು ಎತ್ತುಗಳಿಂದ ರೈತರು ದೂರವಾಗುತ್ತಿದ್ದಾರೆ. ಪ್ರತೀ ವರ್ಷ ಬೇಸಿಗೆಯಲ್ಲಿ ಅಲ್ಲಲ್ಲಿ ಎತ್ತುಗಳ ಜಾತ್ರೆ ನಡೆಯುತ್ತಿದ್ದುದು ಈಗ ಬಹುತೇಕ ನಿಂತೇ ಹೋಗಿದೆ.

ರೈತನೀಗ ಎತ್ತುಗಳಿಂದ ದೂರವಾಗಿ, ಯಂತ್ರಗಳ ಆಳಾಗುವತ್ತ ಮುಖ ಮಾಡಿದ್ದಾನೆ. ಈ ಪರಿಸ್ಥಿತಿ ಮುಂದುವರಿದರೆ, ಎತ್ತುಗಳ ಸಂತತಿ ಕಣ್ಮರೆಯಾದರೆ ಅಚ್ಚರಿಯೇನಿಲ್ಲ. ಇಂದಿನ ಕೃಷಿ ಕ್ಷೇತ್ರದ ಬಹುತೇಕ ಸಮಸ್ಯೆಗಳಿಗೂ, ರೈತ ಜಾನುವಾರುಗಳಿಂದ ದೂರವಾಗುತ್ತಿರುವುದಕ್ಕೂ ಸಂಬಂಧ ಇಲ್ಲದಿಲ್ಲ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.



ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ

ಮಕ್ಕಳ ಸಂಖ್ಯೆ ಇಳಿಕೆ ವೃದ್ಧರು ಹೆಚ್ಚಳ





ದಕ್ಷಿಣದ ರಾಜ್ಯಗಳು ಸೇರಿದಂತೆ ದೇಶದಲ್ಲಿ ಒಟ್ಟು ಫಲವಂತಿಕೆ ದರದಲ್ಲಿ (ಟಿಎಫ್‌ಆರ್) ಆಗುತ್ತಿರುವ ಕುಸಿತವು ದೇಶದ ಜನಸಂಖ್ಯೆಯ ಮೇಲೆ ಪರಿಣಾಮ ಬೀರುತ್ತಿದೆ. ಕರ್ನಾಟಕವನ್ನೂ ಒಳಗೊಂಡಂತೆ ಇಡೀ ದೇಶದಲ್ಲಿ 15 ವರ್ಷದೊಳಗಿನ ಮಕ್ಕಳ ಜನಸಂಖ್ಯೆಯಲ್ಲಿ ಕುಸಿತ ಆಗಿರುವುದನ್ನು 2023–24ನೇ ಸಾಲಿನ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆಯ ದತ್ತಾಂಶಗಳು ತೋರಿಸಿವೆ. ಇದಕ್ಕೆ ಪ್ರತಿಯಾಗಿ 60 ವರ್ಷಕ್ಕಿಂತ ಹೆಚ್ಚು ವಯಸ್ಸಿನವರ ಜನಸಂಖ್ಯೆಯ ಪ್ರಮಾಣದಲ್ಲಿ ಏರಿಕೆ ಕಂಡು ಬಂದಿದೆ

• ಸೂರ್ಯನಾರಾಯಣ ವಿ.

ಕರ್ನಾಟಕವೂ ಸೇರಿದಂತೆ ದೇಶದ ಬಹುತೇಕ ರಾಜ್ಯಗಳಲ್ಲಿ ಐದು ವರ್ಷದೊಳಗಿನ ಮತ್ತು 6ರಿಂದ 15 ವರ್ಷದೊಳಗಿನ ಮಕ್ಕಳ ಜನಸಂಖ್ಯೆಯ ಪ್ರಮಾಣ ಇಳಿಮುಖವಾಗುತ್ತಿದೆ. ಇದಕ್ಕೆ ವ್ಯತಿರಿಕ್ತವಾಗಿ 60 ವರ್ಷಕ್ಕಿಂತ ಹೆಚ್ಚು ವಯಸ್ಸಿನವರ ಜನಸಂಖ್ಯೆ ಹೆಚ್ಚುತ್ತಿದೆ ಎಂಬುದನ್ನು ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯವು ಈಚೆಗೆ ಪ್ರಕಟಿಸಿರುವ 2023–24ನೇ ಸಾಲಿನ 6ನೇ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆಯ (ಎನ್‌ಎಫ್‌ಎಚ್‌ಎಸ್–6) ದತ್ತಾಂಶಗಳು ಹೇಳುತ್ತಿವೆ.

2019–21ರ ನಡುವೆ ನಡೆದಿದ್ದ 5ನೇ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆಯ ವರದಿಯ ಅಂಕಿ ಅಂಶಗಳಿಗೆ ಹೋಲಿಸಿದರೆ ಕರ್ನಾಟಕ ಮತ್ತು ದೇಶದ ಒಟ್ಟು ಫಲವಂತಿಕೆ ದರದಲ್ಲಿ (ಟಿಎಫ್‌ಆರ್) ಹೆಚ್ಚು ಬದಲಾವಣೆ ಆಗಿಲ್ಲ. ಆದರೆ, 10–15 ವರ್ಷಗಳ ದತ್ತಾಂಶಗಳನ್ನು ಅವಲೋಕಿಸಿದರೆ, ಪ್ರಸ್ತುತ ದೇಶದ ಒಟ್ಟು ಫಲವಂತಿಕೆ ದರವು ಗಣನೀಯವಾಗಿ ಕುಗ್ಗಿದೆ. ದೇಶದ ಟಿಎಫ್‌ಆರ್ 2.0ರಷ್ಟಿದೆ. ಗ್ರಾಮೀಣ ಪ್ರದೇಶಗಳಿಗೆ ಹೋಲಿಸಿದರೆ, ನಗರ ಪ್ರದೇಶಗಳ ಅಂಕಿ ಅಂಶಗಳು ಕಳವಳಕಾರಿಯಾಗಿವೆ. 2023–24ರ ವರದಿಯ ಪ್ರಕಾರ, ದೇಶದ ಗ್ರಾಮೀಣ ಭಾಗದಲ್ಲಿ ಟಿಎಫ್‌ಆರ್ 2.1 ರಷ್ಟಿದ್ದರೆ, ನಗರ ಪ್ರದೇಶಗಳಲ್ಲಿ 1.6ರಷ್ಟಿದೆ.

2019–21 ಅವಧಿಗೆ ಹೋಲಿಸಿದರೆ, ಕರ್ನಾಟಕದಲ್ಲಿ 2023–24ರಲ್ಲಿ ಟಿಎಫ್‌ಆರ್ 0.1ರಷ್ಟು ಹೆಚ್ಚಾಗಿದೆ. 2019–21ರಲ್ಲಿ 1.7 ಇದ್ದರೆ, 2023–24ರಲ್ಲಿ ಅದು 1.8ಕ್ಕೆ ಏರಿದೆ. ಗ್ರಾಮೀಣ ಭಾಗದಲ್ಲಿ 1.8 ಇದ್ದರೆ, ನಗರಗಳಲ್ಲಿ ಈ ದರ 1.7ರಷ್ಟಿದೆ. ಇವೆರಡರ ಸರಾಸರಿ ಲೆಕ್ಕಹಾಕುವಾಗ 1.75 ಆಗುತ್ತದೆ. ವರದಿಯಲ್ಲಿ 1.8 ಎಂದು ಉಲ್ಲೇಖಿಸಲಾಗಿದೆ.


ಜನಸಂಖ್ಯೆಯ ಮೇಲೆ ಪರಿಣಾಮ: ಒಟ್ಟು ಫಲವಂತಿಕೆ ದರವು ದೇಶ ಮತ್ತು ರಾಜ್ಯದ ಜನಸಂಖ್ಯೆಯ ಮೇಲೆ ನೇರ ಪರಿಣಾಮ ಬೀರುತ್ತದೆ. ತಲೆಮಾರುಗಳ ನಡುವೆ ಸ್ಥಿರವಾದ ಜನಸಂಖ್ಯೆಯನ್ನು ಕಾಪಾಡಬೇಕಾದರೆ ಟಿಎಫ್‌ಆರ್ (ಸಂತಾನೋತ್ಪತ್ತಿ ವಯೋಮಾನದ ಪ್ರತಿಯೊಬ್ಬ ಮಹಿಳೆಯು ಮಕ್ಕಳನ್ನು ಪಡೆಯುವ ಸರಾಸರಿ ಸಾಮರ್ಥ್ಯ) ಕನಿಷ್ಠ 2.1ರಷ್ಟು ಇರಬೇಕು. ಕರ್ನಾಟಕ ಸೇರಿದಂತೆ ದಕ್ಷಿಣದ ರಾಜ್ಯಗಳಲ್ಲಿ ಟಿಎಫ್‌ಆರ್ ರಾಷ್ಟ್ರೀಯ ಸರಾಸರಿಗಿಂತ ಕಡಿಮೆ ಇದೆ. ಇದರಿಂದಾಗಿ ಮಕ್ಕಳ ಜನನ ಕಡಿಮೆಯಾಗುವುದರಿಂದ ಮಕ್ಕಳ ಸಂಖ್ಯೆಯಲ್ಲಿ ಇಳಿಮುಖವಾಗುತ್ತಿದೆ. ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆಯ ದತ್ತಾಂಶಗಳಲ್ಲಿ ಇದು ಸ್ಪಷ್ಟವಾಗಿ ಗೋಚರಿಸುತ್ತಿದೆ.

ಎನ್‌ಎಫ್‌ಎಚ್‌ಎಸ್–5ರ ಪ್ರಕಾರ, ಕರ್ನಾಟಕದಲ್ಲಿ 5 ವರ್ಷದೊಳಗಿನ ಮಕ್ಕಳ ಜನಸಂಖ್ಯೆ ಪ್ರಮಾಣ ಶೇ 7ರಷ್ಟಿತ್ತು. ಎನ್‌ಎಫ್‌ಎಚ್‌ಎಸ್–6ರ ವರದಿಯಲ್ಲಿ ಅದು ಶೇ 6.5ಕ್ಕೆ ಇಳಿದಿದೆ (ಶೇ 0.5ರಷ್ಟು ಕುಸಿತ). ಈ ಪ್ರಮಾಣ ಗ್ರಾಮೀಣ ಭಾಗದಲ್ಲಿ ಶೇ 6.3ರಷ್ಟಿದ್ದರೆ, ನಗರ ಪ್ರದೇಶಗಳಲ್ಲಿ ಶೇ 6.8ರಷ್ಟಿದೆ. 15 ವರ್ಷದೊಳಗಿನ ಮಕ್ಕಳ ಜನಸಂಖ್ಯೆಯಲ್ಲಿ ಶೇ 0.9ರಷ್ಟು ಕುಸಿತ ಕಂಡಿದೆ. 2019–21ರಲ್ಲಿ ಶೇ 22.9ರಷ್ಟು ಇದ್ದಿದ್ದರೆ, 2023–24ರಲ್ಲಿ ಶೇ 22ಕ್ಕೆ ಇಳಿದಿದೆ (ಗ್ರಾಮೀಣ ಶೇ 22, ನಗರ ಶೇ 21.9).

ಇದಕ್ಕೆ ವ್ಯತಿರಿಕ್ತವಾಗಿ 60 ವರ್ಷಕ್ಕಿಂತ ಹೆಚ್ಚು ವಯಸ್ಸಿನವರ ಜನಸಂಖ್ಯೆಯಲ್ಲಿ ಗಮನಾರ್ಹ ಹೆಚ್ಚಳ ಕಂಡು ಬಂದಿದೆ. 2019–21ರಲ್ಲಿ ಶೇ 13.3ರಷ್ಟು ಇದ್ದಿದ್ದರೆ, 2023–24ರಲ್ಲಿ ಶೇ 14.6ಕ್ಕೆ ಹೆಚ್ಚಿದೆ. ಅಂದರೆ, ವೃದ್ಧರ ಸಂಖ್ಯೆ ಶೇ 1.3ರಷ್ಟು ಜಾಸ್ತಿಯಾಗಿದೆ.

ಈ ಪ್ರವೃತ್ತಿ ದೇಶದ ಬಹುತೇಕ ರಾಜ್ಯಗಳಲ್ಲಿ ಮತ್ತು ಒಟ್ಟಾರೆ ದೇಶದಲ್ಲಿ ಕಂಡು ಬರುತ್ತಿದೆ.

ಜನಸಂಖ್ಯೆ ಪ್ರಮಾಣ (%)



ವರದಿಯ ಪ್ರಮುಖ ಅಂಶಗಳು

- ಸಾಂಕ್ರಾಮಿಕವಲ್ಲದ ರೋಗಗಳಿಗೆ ಜನರು ಒಳಗಾಗಿರುವುದು ಹೆಚ್ಚಾಗಿದೆ
- ಪುರುಷರು, ಮಹಿಳೆಯರಲ್ಲಿ ಸ್ಥೂಲಕಾಯ, ಮಧುಮೇಹ, ರಕ್ತದೊತ್ತಡದ ಸಮಸ್ಯೆ ಜಾಸ್ತಿಯಾಗುತ್ತಿದೆ
- ಮಹಿಳೆಯರ ಮೇಲಿನ ಕೌಟುಂಬಿಕ ದೌರ್ಜನ್ಯ ಇಳಿಮುಖವಾಗಿದೆ
- ತಂಬಾಕು ಸೇವನೆ ಪ್ರಮಾಣವೂ ಇಳಿದಿದೆ
- ತಾಯಿ ಮತ್ತು ಮಕ್ಕಳ ಆರೋಗ್ಯ ಸೇವೆಗಳಲ್ಲಿ ಸುಧಾರಣೆ ಕಂಡು ಬಂದಿದೆ
- ಮಕ್ಕಳಲ್ಲಿ ಅಪೌಷ್ಟಿಕತೆ ಕೊಂಚ ಕಡಿಮೆಯಾಗಿದೆ
- ಹೆಣ್ಣುಮಕ್ಕಳು 10 ವರ್ಷ ಅಥವಾ ಅದಕ್ಕಿಂತ ಹೆಚ್ಚು ಅವಧಿಗೆ ಶಿಕ್ಷಣ ಪಡೆಯುವ ಪ್ರವೃತ್ತಿ ಹೆಚ್ಚಾಗಿದೆ
- ಮಹಿಳೆಯರು ಆರ್ಥಿಕವಾಗಿ ಸಬಲರಾಗುತ್ತಿದ್ದಾರೆ. ಇಂಟರ್‌ನೆಟ್ ಬಳಸುತ್ತಿರುವ ಮಹಿಳೆಯರ ಪ್ರಮಾಣದಲ್ಲಿ ಏರಿಕೆಯಾಗಿದೆ
- ವಿದ್ಯುತ್ ಮತ್ತು ಕುಡಿಯುವ ನೀರಿನ ಸೌಲಭ್ಯ ಹೊಂದಿರುವ ಕುಟುಂಬಗಳ ಸಂಖ್ಯೆ ಹೆಚ್ಚಿದೆ
- ಆರೋಗ್ಯ ವಿಮೆ/ಆರ್ಥಿಕ ಯೋಜನೆಗಳ ವ್ಯಾಪ್ತಿಗೆ ಒಳಪಟ್ಟಿರುವವರ ಪ್ರಮಾಣದಲ್ಲೂ ಏರಿಕೆ ಕಂಡು ಬಂದಿದೆ
- ಬ್ಯಾಂಕ್ ಖಾತೆ ಅಥವಾ ಅಂಚೆ ಉಳಿತಾಯ ಮಾಡಿಸಿಕೊಂಡಿರುವವರ ಸಂಖ್ಯೆಯೂ ಹೆಚ್ಚಾಗಿದೆ

ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ (ಎನ್‌ಎಫ್‌ಎಚ್‌ಎಸ್)– 6

715	6.79 ಲಕ್ಷ	7.16 ಲಕ್ಷ	1.01 ಲಕ್ಷ
2 ಹಂತಗಳಲ್ಲಿ ಸಮೀಕ್ಷೆ ನಡೆದ ಜಿಲ್ಲೆಗಳ ಸಂಖ್ಯೆ	ಸಮೀಕ್ಷೆಗಾಗಿ ಸಂಪರ್ಕಿಸಲಾದ ಕುಟುಂಬಗಳು	ಸಮೀಕ್ಷೆಯಲ್ಲಿ ಭಾಗವಹಿಸಿದ್ದ ಮಹಿಳೆಯರು	ಸಮೀಕ್ಷೆಯಲ್ಲಿ ಪಾಲ್ಗೊಂಡಿದ್ದ ಪುರುಷರು

ಸಮೀಕ್ಷೆ ನಡೆದ ಅವಧಿ

ಮೊದಲ ಹಂತ: 2023ರ ಮೇ 28ರಿಂದ 2025ರ ಫೆ.2024

ಎರಡನೇ ಹಂತ: 2025ರ ಫೆ.7ರಿಂದ –2024ರ ಡಿ.31

ಕರ್ನಾಟಕದಲ್ಲಿ...


27,169	26,425	3,841	2024ರ ಫೆ.23ರಿಂದ 2024 ಅ.24
ಸಮೀಕ್ಷೆಗಾಗಿ ಸಂಪರ್ಕಿಸಲಾದ ಕುಟುಂಬಗಳು	ಸಮೀಕ್ಷೆಯಲ್ಲಿ ಪಾಲ್ಗೊಂಡಿದ್ದ ಮಹಿಳೆಯರು	ಸಮೀಕ್ಷೆಯಲ್ಲಿ ಭಾಗವಹಿಸಿದ್ದ ಪುರುಷರು	ಸಮೀಕ್ಷೆ ನಡೆಸಲಾದ ಅವಧಿ

ಟಿಎಫ್‌ಆರ್: ಎಸ್‌ಆರ್‌ಎಸ್‌ನಲ್ಲಿ ಇನ್ನೂ ಕಡಿಮೆ

ದೇಶ ಮತ್ತು ಕರ್ನಾಟಕದ ಒಟ್ಟು ಫಲವಂತಿಕೆ ದರಕ್ಕೆ ಸಂಬಂಧಿಸಿದಂತೆ ಕೇಂದ್ರ ಗೃಹ ಸಚಿವಾಲಯ ಇತ್ತೀಚೆಗೆ ಬಿಡುಗಡೆ ಮಾಡಿರುವ 2024ನೇ ಸಾಲಿನ ಮಾದರಿ ನೋಂದಣಿ ಸಮೀಕ್ಷೆಯ (ಎಸ್‌ಆರ್‌ಎಸ್) ವರದಿಯು ಕೊಂಚ ಭಿನ್ನ ಅಂಕಿ ಅಂಶಗಳನ್ನು ನೀಡಿದೆ. ಈ ವರದಿ ಕೂಡ ಕರ್ನಾಟಕ ಮತ್ತು ದೇಶದಲ್ಲಿ ಟಿಎಫ್‌ಆರ್ ಇಳಿಕೆಯಾಗಿರುವುದನ್ನು ಉಲ್ಲೇಖಿಸಿದೆ. ಎನ್‌ಎಫ್‌ಎಚ್‌ಎಸ್–6ಕ್ಕೆ ಹೋಲಿಸಿದರೆ ಎಸ್‌ಆರ್‌ಎಸ್–2024ರ ವರದಿಯಲ್ಲಿನ ಟಿಎಫ್‌ಆರ್ ಇನ್ನೂ ಕಡಿಮೆ ಇದೆ. ರಾಷ್ಟ್ರ ಮಟ್ಟದ ಟಿಎಫ್‌ಆರ್ 1.9ರಷ್ಟು (ಗ್ರಾಮೀಣ 2.1, ನಗರ 1.6) ಇದ್ದರೆ, ಕರ್ನಾಟದ ಟಿಎಫ್‌ಆರ್ 1.5ರಷ್ಟಿದೆ (ಗ್ರಾಮೀಣ 1.6 ಮತ್ತು ನಗರ 1.3).



131ರ ಬದಲು 101 ವಿಷಯಗಳ ಮಾಹಿತಿ



ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯವು ಈ ಬಾರಿಯ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆಯಲ್ಲಿ ಒಂದು ಪ್ರಮುಖ ಬದಲಾವಣೆಯನ್ನು ಮಾಡಿದೆ. ಇಲ್ಲಿವರೆಗೂ ಜನಸಂಖ್ಯೆ, ಕುಟುಂಬ, ಆರೋಗ್ಯ ಸೇರಿದಂತೆ ವಿವಿಧ ವಿಭಾಗಗಳಲ್ಲಿ 131 ವಿಷಯಗಳಿಗೆ (ಇಂಡಿಕೇಟರ್) ಸಂಬಂಧಿಸಿದ ಅಂಕಿ ಅಂಶಗಳನ್ನು ನೀಡುತ್ತಿತ್ತು. ಈ ಬಾರಿ 101 ವಿಷಯಗಳಿಗೆ ಸಂಬಂಧಿಸಿದ ಮಾಹಿತಿಗಳನ್ನು ಮಾತ್ರ ಈಗ ಪ್ರಕಟ ಮಾಡಿರುವ ವರದಿಯಲ್ಲಿ (ಫ್ಯಾಕ್ಟ್‌ಶೀಟ್) ನೀಡಿದೆ. ಮರಣ ಪ್ರಮಾಣ, ಜನನ ಪ್ರಮಾಣ, ರಕ್ತ ಹೀನತೆ, ಲಿಂಗ ಅನುಪಾತ ಸೇರಿದಂತೆ ಇನ್ನೂ ಕೆಲವು ಪ್ರಮುಖ ವಿಷಯಗಳಿಗೆ ಸಂಬಂಧಿಸಿದ ವಿವರಗಳನ್ನು ನೀಡಿಲ್ಲ. ಇದಕ್ಕೆ ಆಕ್ಷೇಪವೂ ವ್ಯಕ್ತವಾಗಿದೆ. ಇದಕ್ಕೆ ಸ್ಪಷ್ಟನೆ ನೀಡಿರುವ ಅಧಿಕಾರಿಗಳು ಈ ವರದಿ ಅಂತಿಮವಲ್ಲ ಎಂದು ಹೇಳಿದ್ದಾರೆ.

ಪ್ರಜಾವಾಣಿ- ಡೆಕ್ಕನ್ ಹೆರಾಲ್ಡ್ ನೆರವು ನಿಧಿ

ಎಸ್‌ಎಸ್‌ಎಲ್‌ಸಿಯಲ್ಲಿ ಉನ್ನತ ಶ್ರೇಣಿಯಲ್ಲಿ ಪಾಸಾಗಿರುವ ಬಡ ವಿದ್ಯಾರ್ಥಿಗಳಿಗೆ ದಾನಿಗಳ ನೆರವಿನಿಂದ ಪ್ರಜಾವಾಣಿ- ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳು ಆರ್ಥಿಕ ನೆರವು ನೀಡಲಿವೆ. ಇದಕ್ಕಾಗಿ ದಾನಿಗಳು ಆನ್‌ಲೈನ್ ಮೂಲಕ ಹಣವನ್ನು **'Deccan Herald- Prajavani Relief Trust'**ಗೆ ಕಳುಹಿಸಬಹುದು.

₹ 5,000ಕ್ಕಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ದಾನ ನೀಡಿದ ಹಣಕ್ಕೆ 2025ನೇ ಸಾಲಿನ ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 133ರ ಅನ್ವಯ ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಪಕ್ಕದಲ್ಲಿರುವ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ. ಚೆಕ್, ನಗದು ಮತ್ತು ಡಿ.ಡಿ ಸ್ವೀಕರಿಸುವುದಿಲ್ಲ.

https://bit.ly/3xFpoz4

‘ಪ್ರಜಾವಾಣಿ’ ಆಶಾಕಿರಣ



‘ಪ್ರಜಾವಾಣಿ’ ಪತ್ರಿಕೆ ನೀಡಿದ ವಿದ್ಯಾರ್ಥಿ ವೇತನದಿಂದ ನನ್ನ ವಿದ್ಯಾಭ್ಯಾಸಕ್ಕೆ ಅನುಕೂಲವಾಗುವಂಥ ಪುಸ್ತಕಗಳನ್ನು ಖರೀದಿ ಮಾಡಿದೆ. ನನ್ನಂಥ ಬಡ ವಿದ್ಯಾರ್ಥಿಗಳ ಪಾಲಿಗೆ ‘ಪ್ರಜಾವಾಣಿ’ ಆಶಾಕಿರಣವಾಗಿದೆ

ಫಲಕ್ ನಾಜ್, ಮಂಡ್ಯ


ಶುಲ್ಕಪಾವತಿಗೆ ಸಹಾಯ




‘ಪ್ರಜಾವಾಣಿ’ ನೀಡಿದ ವಿದ್ಯಾರ್ಥಿ ವೇತನದಿಂದ ನನ್ನ ಕಾಲೇಜು ಶುಲ್ಕ ಪಾವತಿಗೆ ಅನುಕೂಲವಾಗಿದೆ. ಹಿಂದುಳಿದ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗೆ ಆರ್ಥಿಕ ನೆರವು ನೀಡುತ್ತಿರುವ ಆಡಳಿತ ಮಂಡಳಿಗೆ ಧನ್ಯವಾದಗಳು

ಎ.ವೈ. ಕಾರ್ತಿಕ್, ಕೊಡಿಯಾಲ, ಮಂಡ್ಯ

ದೇಶದ ಒಟ್ಟು ಫಲವಂತಿಕೆ ದರ




ಕರ್ನಾಟಕದ ಒಟ್ಟು ಫಲವಂತಿಕೆ ದರ



ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಕಾಕ್ರೋಚ್ ಜನತಾ ಪಾರ್ಟಿಯು (ಸಿಜೆಪಿ) ಇದೇ 6ರಂದು ದೆಹಲಿಯ ಜಂತರ್ ಮಂತರ್‌ನಲ್ಲಿ ನಡೆಸಿದ ಪ್ರತಿಭಟನೆಗೆ ಸಂಬಂಧಿಸಿದ, ಭಾರಿ ಜನರು ಸೇರಿರುವ ಒಂದು ವಿಡಿಯೊ ಮತ್ತು ಚಿತ್ರವನ್ನು (ಒಂದು ಡ್ರೋನ್‌ನಿಂದ ಸೆರೆ ಹಿಡಿದಿರುವ ವಿಡಿಯೊ, ಇನ್ನೊಂದು ಮುಖಂಡರ ಎದುರು ಭಾರಿ ಸಂಖ್ಯೆಯಲ್ಲಿ ಬೆಂಬಲಿಗರು ಇರುವ ಚಿತ್ರ) ಹಲವರು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳುತ್ತಿದ್ದಾರೆ. ಆದರೆ, ಇದು ಸುಳ್ಳು.



ಡ್ರೋನ್ ವಿಡಿಯೊ ದೃಶ್ಯಾವಳಿಯನ್ನು ದೈನಿಕ್ ಭಾಸ್ಕರ್ ತನ್ನ ‘ಎಕ್ಸ್’ ಖಾತೆಯಲ್ಲಿ ಪೋಸ್ಟ್ ಮಾಡಿ ನಂತರ ತೆಗೆದು ಹಾಕಿತ್ತು. ಆ ವಿಡಿಯೊವನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, ಹಲವು ದೋಷಗಳು ಕಂಡು ಬಂದವು. ಇನ್ನೊಂದು ಚಿತ್ರದಲ್ಲೂ ಇಂತಹದೇ ದೋಷಗಳು ಇದ್ದವು. ಕೆಲವು ಸಾಮಾಜಿಕ ಜಾಲತಾಣಗಳ ಬಳಕೆದಾರರು ಅದನ್ನು ಉಲ್ಲೇಖಿಸಿ ಪೋಸ್ಟ್ ಕೂಡ ಮಾಡಿದ್ದರು. ಆ ವಿಡಿಯೊದ ಬಗ್ಗೆ ನಿರ್ದಿಷ್ಟ ಪದಗಳನ್ನು ಬಳಸಿ ಹುಡುಕಾಟ ನಡೆಸಿದಾಗ ಮೂಲ ವಿಡಿಯೊವನ್ನು @ಮೊಹ್ಸಿನ್_ಸುಲ್ತಾನ್_ಅಫೀಶಿಯಲ್ ಇನ್‌ಸ್ಟಾಗ್ರಾಂ ಖಾತೆಯಲ್ಲಿ ಹಂಚಿಕೊಳ್ಳಲಾಗಿತ್ತು. ಅದರಲ್ಲಿ ‘ಎಐ ಇನ್ಫೊ’ ಎಂಬ ಲೇಬಲ್ ಕೂಡ ಇತ್ತು. ಚಿತ್ರದ ಬಗ್ಗೆ ಹುಡುಕಾಟ ನಡೆಸಿದಾಗ, ಜಾಲತಾಣಗಳಲ್ಲಿ ಹರಿದಾಡುತ್ತಿರುವ ಚಿತ್ರದ ಮೂಲ ಆವೃತ್ತಿಯನ್ನು ‘ದಿ ಹಿಂದೂ’ ಪತ್ರಿಕೆ ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿರುವುದು ಸಿಕ್ಕಿತು. ಮೂಲ ಚಿತ್ರ ಮತ್ತು ಈಗ ಹರಿದಾಡುತ್ತಿರುವ ಚಿತ್ರವನ್ನು ಹೋಲಿಸಿದಾಗ ವ್ಯತ್ಯಾಸವಿರುವುದು ಕಂಡು ಬಂತು. ಒಬ್ಬ ವ್ಯಕ್ತಿಯ ಚಿತ್ರ ಹಲವು ಕಡೆಗಳಲ್ಲಿ ಸ್ಪಷ್ಟವಾಗಿ ಕಾಣಿಸುತ್ತಿತ್ತು. ಇದು ಎಐ ಮೂಲಕ ಸೃಷ್ಟಿಸಿದ ಚಿತ್ರ ಎಂಬುದಕ್ಕೆ ಇದು ಪುಷ್ಟಿ ನೀಡುತ್ತದೆ ಎಂದು ಬೂಮ್ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ಕೃತಿಗಳೆಂಬ ಸಂಪತ್ತು

ನುಡಿ ಬೆಳಗು



ವಾಸುದೇವ ನಾಡಿಗ್

ಪ್ರತಿ ವರ್ಷದಂತೆ ಆಗರ್ಭ ಶ್ರೀಮಂತನ ಮನೆಗೆ ಒಬ್ಬ ಆಗಮಿಸಿ ಇಡೀ ದಿನ ಇದ್ದು ಪೂಜೆ–ಪುನಸ್ಕಾರ, ಜಪ–ತಪ, ಅಧ್ಯಾತ್ಮ, ದೈವಿಕತೆಯ ಬಗ್ಗೆ ಚರ್ಚೆ ಮಾಡಿ ಮರುದಿನ ಹೊರಟಿದ್ದ. ಮೊದಲೇ ಶ್ರೀಮಂತರ ಮನೆ. ಮಂಚ ಕಪಾಟು ಮೂಲೆ ಕಂಡ ಕಡೆಗೆಲ್ಲ ನೋಟುಗಳು, ಜೊತೆಗೆ ಕಪಾಟಿನಲ್ಲಿ ಸಾಲು ಸಾಲಾಗಿ ಅಮೂಲ್ಯ ಕೃತಿಗಳು. ಬರೀ ಮೋಜು ಮಸ್ತಿ ಹಣ ವ್ಯವಹಾರದಲ್ಲಿ ಮುಳುಗಿ ಊರಿಗೆ ಹೋಗಿದ್ದ ಮಗ ಮರುದಿನ ಹಿಂದುರುಗಿ ಗದ್ದಲ ಎಬ್ಬಿಸಿದ. ಅಲ್ಲಲ್ಲಿ ಇಟ್ಟ ಹಣವೆಲ್ಲ ಕಾಣೆಯಾಗಿತ್ತು. ಮನೆಗೆ ಒಬ್ಬ ಸಾಧು ಬಂದು ಇದ್ದು ಉಳಿದು ಮರುದಿನ ಮರಳಿ ಹೋದ ಸಂಗತಿ ಅಪ್ಪನ ಮೂಲಕ ತಿಳಿದುಕೊಂಡ. ಹಣ ಇಟ್ಟ ಜಾಗಗಳಲ್ಲಿ ಒಂದು ರೂಪಾಯಿಯೂ ಕಾಣದಾದಾಗ ಸಾಧುವನ್ನು ಬೈಯತೊಡಗಿದ. ಅಪರಿಚಿತನನ್ನು ಮನೆಗೆ ಸೇರಿಸಿದ ತಂದೆಯನ್ನೂ ಕೋಪದಿಂದ ಮೂದಲಿಸತೊಡಗಿದ.

ಒಂದು ವರ್ಷ ಕಳೆದೇ ಹೋಯಿತು. ಹಣದ ಬಗ್ಗೆ ತಂದೆಯೂ ಮರೆತಿದ್ದ. ಮತ್ತೆ ಅದೇ ಸಾಧು ಆಗಮಿಸಿದಾಗ ಮಗ ಜೋರಾಗಿ ಕಿರುಚಾಡಿದ. ಕಳೆದ ವರ್ಷ ಇದ್ದ ಬದ್ದ ಹಣವನೆಲ್ಲ ದೋಚಿಕೊಂಡು ಹೋದ ಬಗ್ಗೆ ಅವಮಾನಿಸುವ ಹಾಗೆ ಮಾತಾಡಿದ. ಸಾಧು ಒಂದೂ ಮಾತಾಡದೆ ಒಮ್ಮೆ ಪುಸ್ತಕಗಳನ್ನು ಇಟ್ಟಿದ್ದ ಕಪಾಟಿನ ಪುಸ್ತಕಗಳನ್ನು ತೆರೆದು ನೋಡಲು ಹೇಳಿದ. ರಾಮಾಯಣ, ಮಹಾಭಾರತ ಆದಿಯಾಗಿ ಅನೇಕ ಪುಸ್ತಕಗಳನ್ನು ಬಿಡಿಸಿ ನೋಡಿದಾಗ ಪ್ರತಿ ಪುಟದ ನಡುವೆಯೂ ಒಂದೊಂದು ನೋಟು ಇಡಲಾಗಿತ್ತು. ಕಳೆದ ಸಲ ಬಂದಾಗ ಸಾಧು ಇಡೀ ರಾತ್ರಿ ಅಲ್ಲಲ್ಲಿ ಬಿದ್ದಿದ್ದ ನೋಟುಗಳನ್ನು ಆರಿಸಿ ಆರಿಸಿ ಪುಟಗಳ ನಡುವೆ ಇಟ್ಟು ಹೋಗಿದ್ದ.

ಒಂದು ವರ್ಷದವರೆಗೂ ಆ ಕಪಾಟಿನಲ್ಲಿದ್ದ ಅಮೂಲ್ಯ ಗ್ರಂಥಗಳನ್ನು ಯಾರೂ ತೆರೆದು ನೋಡಿಯೇ ಇರಲಿಲ್ಲ. ಮಗನಿಗಂತೂ ಆ ಸಂಯಮವಿರದೇ ಪ್ರತಿನಿತ್ಯ ಈ ಸಾಧುವನ್ನು ನೆನೆದು ನಿಂದಿಸಿಯೇ ಮಾತು ಮುಗಿಸುತ್ತಿದ್ದ. ಸಾಧು ಇವನ ವರ್ತನೆಯಿಂದ ನೊಂದುಕೊಳ್ಳದೇ ‘ನಾನು ಬಂದು ಹೋಗಿ ಒಂದು ವರ್ಷವಾದರೂ ನೀವ್ಯಾರೂ ಒಂದು ಪುಟವನ್ನೂ ತೆರೆದು ನೋಡದ ಈ ಪುಸ್ತಕಗಳು ದೂಳು ಹಿಡಿದಿವೆ. ನನ್ನನ್ನು ನಿಂದಿಸುವ ಬದಲು ಒಮ್ಮೆ ಕೂತು ಈ ಪುಟಗಳನ್ನು ತೆರೆದು ಓದಬಹುದಿತ್ತು. ಮನಃಸ್ಥಿತಿಯೂ ಬದಲಾಗಿ, ಅಪನಂಬಿಕೆಯೂ ಹೊರಟು ಹೋಗುತ್ತಿತ್ತು. ಆದರೆ ಪುಸ್ತಕ ಓದುವುದಿರಲಿ, ಅದನ್ನು ಮುಟ್ಟಿ ತೆರೆದು ನೋಡುವ ವ್ಯವಧಾನವೂ ಇಲ್ಲ. ಎಷ್ಟೊಂದು ನೀತಿ ತತ್ವಾದರ್ಶ ಸಂದೇಶಗಳಿರುವ ಪುಸ್ತಕಗಳು ಕಪಾಟಿನ ತುಂಬಾ ಸಾಲಾಗಿ ಇವೆ. ಆದರೆ ನೋಡುವವರೇ ಇಲ್ಲ’ ಎಂದೆಲ್ಲ ಸಾಧು ಮಾತಿಗೆ ಕೂತಾಗ ಮಗ ತಲೆ ತಗ್ಗಿಸಿ ನಿಂತ.

ಸಾಧು, ಕಳ್ಳತನ ಎಂಬುದು ಒಂದು ಕಡೆ ಇರಲಿ. ಕಪಾಟಿನಲ್ಲಿರುವ ಪುಸ್ತಕಗಳ ವಿಚಾರದಲ್ಲಿ ನಮ್ಮನ್ನು ಚಿಂತನೆಗೆ ಹಚ್ಚುತ್ತದೆ ಈ ಕತೆ. ಸದಾ ನಿಷೇಧಾತ್ಮಕ ಯೋಚನೆಯ ಇಲ್ಲಿನ ಆಗರ್ಭ ಶ್ರೀಮಂತನ ಮಗ ಅನೇಕ ಮನುಷ್ಯರನ್ನು ಪ್ರತಿನಿಧಿಸುತ್ತಾನೆ. ಪ್ರತಿ ಪುಟ ತೆರೆದಾಗಲೂ ಕಾಣುವ ನೋಟು ಇಲ್ಲಿ ಸಂಕೇತ ಮಾತ್ರ. ಒಂದಿಷ್ಟು ನೀತಿ, ಆದರ್ಶ, ನ್ಯಾಯಪರತೆ, ಸಂಯಮ, ಬಾಳನ್ನು ತೂಗಿ ನೋಡಿ ಕಲಿವ ಗುಣ ಎಲ್ಲವನ್ನೂ ಅಮೂಲ್ಯ ಗ್ರಂಥಗಳು ಕಲಿಸಬಲ್ಲವು. ಕೂತು ಒಂದು ಪುಟವನ್ನೂ ತೆರೆದು ಓದದ ಕಾಲಮಾನದ ಮನಃಸ್ಥಿತಿಗಳು ಇಲ್ಲಿ ಕಟಕಟೆಯಲ್ಲಿ ನಿಂತು ಬಿಡುತ್ತವೆ. ಈಗಿನ ಯುವಜನರಿಗೂ ಅಮೂಲ್ಯ ಕೃತಿಗಳ ಪುಟಪುಟಗಳಲ್ಲಿ ಅಡಗಿರಬಹುದಾದ ನೀತಿ ಸಂಪತ್ತನ್ನು ತೆರೆದು ಓದಲು ಇದಕ್ಕಿಂತ ಸೊಗಸಾಗಿ ಹೇಗೆ ಹೇಳುವುದು? ❖

ಪದಬಂಧ 6429


ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಮೈನಾ ಹಕ್ಕಿಯನ್ನು ಹೀಗೂ ಕರೆವರು (4)
3.ಅದೇ ತಾನೆ ಮೂಡುತ್ತಿರುವ ಸೂರ್ಯ (4)
5.ಕೊನೆಗೆ ಫಲವಿಟ್ಟರೆ ಇದು ಸೋಲು! (3)
6.ಮಣ್ಣು ಕಲೆಸಿದ ನೀರು (3)
8.ಸಾಮರ್ಥ್ಯ ಇಲ್ಲಿ ಕಾಣುತ್ತಿದೆ (3)
9.ಅಂತಃಪುರವನ್ನು ಹೀಗೂ ಹೇಳುವರು (3)
10.ಕೊನೆಗೆ ಹಾರವನ್ನಿಟ್ಟು ನೀಡಿದ ಹೊಡೆತ (3)
11.ಅರ್ಚನೆ ಮಾಡುತ್ತಿರುವ ಪೂಜಾರಿ (3)
12.ರೀತಿಯೊಡಗೂಡುವ ಜೋಡು ನುಡಿ (3)
14.ಬರ ಬಂದಾಗ ಬರೆದುದು! (3)
16.ಆದಾಯ ತೆರಿಗೆ ತಪ್ಪಿಸಿದ ಹಣ (4)
17.ಖೈದಿಗಳನ್ನು ಕೂಡಿಹಾಕುವ ಜಾಗ (4)

ಮೇಲಿಂದ ಕೆಳಕ್ಕೆ

1.ನಿದ್ರಿಸುವಾಗ ಉಸಿರಾಟದಿಂದಾಗುವ ಶಬ್ದ (3)
2.ಈತ ಕವಿತೆ ಬರೆಯುವವನು (2)
3.ಬಾಲಕನಿಗೆ ಮೂಡಿರುವ ಲಾಂಗೂಲ (2)
4.ಆ ಹೊತ್ತು ಎದುರಾದ ತೊಂದರೆ (3)
7.ದುಂಖಾಂತವಾದ ಪ್ರಹಸನ (5)
8.ಅನುಪಸ್ಥಿತಿಯನ್ನು ಹೀಗೆನ್ನಿ (5)
11.ಎಂಟು ಭಾಗಗಳುಳ್ಳದ್ದು (3)
13.ತಪ್ಪಿಗಾಗಿ ತೆರಬೇಕಾದ ದಂಡ (3)
14.ದಿಬ್ಬಣದಲ್ಲಿ ಸಾಗುತ್ತಿರುವ ಗುಂಪು ಕಾಣುತ್ತಿದೆಯೆ? (2)
15.ಹಾವಸೆಯಿರುವ ಜಾಗದಲ್ಲಿ ಹಾಕಿರುವ ರಂಗೋಲಿ (2)



6428ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಉಪವಾಸ 3.ಅಭಿಮಾನ 5.ಗಡುಸು 6.ರಿಪು 7.ಒಣಹರಟೆ 10.ಕಸ 12.ನೆನಪು 14.ನತದೃಷ್ಟ 15.ವರ್ಧಮಾನ

ಮೇಲಿಂದ ಕೆಳಕ್ಕೆ: 1.ಉಸಾಬರಿ 2.ಸಮೀಕರಣ 3.ಅಣ್ಣ 4.ನವಸುಮ 5.ಗಲಾಟೆ 7.ಒನಪು 8.ರಜತೋತ್ಸವ 9.ಮನೆತನ 11.ಸಮಾಧಾನ 13.ಇಷ್ಟ

ಸುಡೊಕು 6812

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

			1		3	5		7
7		6	4					1
	3	9			7	4		
6	1				4			
			8	1	2	6		4
8	2						1	
	6	3		2		9		8
9			3		6		7	
4		1		8			6	

6811 ಸುಡೊಕು

3	5	2	1	9	4	8	6	7
6	1	4	5	8	7	9	3	2
7	9	8	6	3	2	5	1	4
2	7	9	8	1	3	6	4	5
1	3	6	7	4	5	2	9	8
4	8	5	9	2	6	3	7	1
5	4	1	2	6	9	7	8	3
9	2	3	4	7	8	1	5	6
8	6	7	3	5	1	4	2	9

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

10 ಜೂನ್ 2026 ಬುಧವಾರ, ಶ್ರೀ ಪರಾಭವ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಅಧಿಕ ಜ್ಯೇಷ್ಠ ಕೃಷ್ಣ ದಶಮಿ ಗಂ. 24-58 ನಕ್ಷತ್ರ: ಉತ್ತರಾಭಾದ್ರ ಗಂ. 9-22 ಯೋಗ: ಆಯುಷ್ಮಾನ್ ಗಂ. 6-30 ನಂತರ ಸೌಭಾಗ್ಯ ಗಂ. 28-03 ಕರಣ: ವಣಿಜ ಗಂ. 13-53, ವೃಷಭ ಮಾಸದ 27 ನೇ ದಿನ. ಮಳೆ ನಕ್ಷತ್ರ : ಮೃಗಶಿರ 1 ನೇ ಪಾದ. ರಾಹುಕಾಲ: ಮಧ್ಯಾಹ್ನ 12-00 - 01-30, ಸೂರ್ಯೋದಯ : 06-07 ಸೂರ್ಯಾಸ್ತ : 06-53, ಮುಸ್ಲಿಂ ದಿನಾಂಕ : 24 ದುಲ್ ಹಿಜ್ಜಾ, ಅದೃಷ್ಟ ಸಂಖ್ಯೆ : 1, 7

ಮೇಷ: ಪ್ರೀತಿಯ ವಿಷಯವನ್ನು ಸಂಬಂಧಪಟ್ಟವರ ಮುಂದಿಡುವುದು ಲೇಸು, ನಾಳೆ ಎನ್ನುವುದು ಈ ವಿಷಯದಲ್ಲಿ ಸೂಕ್ತವಲ್ಲ. ಕೌಟುಂಬಿಕವಾಗಿ ಮೂಡಿದ್ದ ಅನುಮಾನಗಳು ದೂರವಾಗಲಿವೆ. ಆರೋಗ್ಯದ ಬಗ್ಗೆ ನಿಗಾ ವಹಿಸಿ.

ವೃಷಭ: ಮಾರ್ಗದರ್ಶನ ಮಾಡುವ ಸಮಯದಲ್ಲಿ ಸ್ವಾರ್ಥವನ್ನು ಯೋಚಿಸಬೇಡಿ. ಅತೀವ ಪ್ರಯತ್ನದಿಂದ ಕೆಲಸ ಪೂರ್ಣಗೊಳಿಸುವಲ್ಲಿ ಯಶಸ್ವಿಯಾಗುವಿರಿ. ಮಕ್ಕಳ ವಿಷಯದಲ್ಲಿ ಅಸಡ್ಡೆ ತೋರಿಸಬೇಡಿ.

ಮಿಥುನ: ವಿದ್ಯುತ್ ಉಪಕರಣ, ಯಂತ್ರೋಪಕರಣಗಳ ಮಾರಾಟದಿಂದ ಲಾಭ ಸಿಗಲಿದೆ. ಮನೋಭಿಲಾಷೆ, ಯೋಚನೆಗಳು ಖರ್ಚಿಗೆ ದಾರಿಯಾದರೂ ಉಪಕಾರಿಯಾಗಿರುತ್ತವೆ.

ಕರ್ಕಾಟಕ: ಅರಿಶಿಣ, ಕುಂಕುಮ ಇತ್ಯಾದಿ ಮಂಗಳದ್ರವ್ಯಗಳ ಮಾರಾಟದಿಂದ ಲಾಭ. ಕುಟುಂಬದ ಜಟಿಲ ಸಮಸ್ಯೆಗಳು ಬಗೆಹರಿದು ಮನೆಯವರಿಗೆ ನೆಮ್ಮದಿ ಸಿಗಲಿದೆ. ಸಂಘ ಸಂಸ್ಥೆಯಲ್ಲಿ ಸ್ಥಾನಮಾನ ಸಿಗಲಿದೆ.

ಸಿಂಹ: ಸಹಜ ಜೀವನಶೈಲಿಯಲ್ಲಿ ಸಂತಸದ ಕ್ಷಣಗಳನ್ನು ಕಾಣುವಿರಿ. ಸಾಫ್ಟ್‌ವೇರ್ ಕ್ಷೇತ್ರದ ಉದ್ಯೋಗಿಗಳಿಗೆ ಕೆಲಸದಲ್ಲಿ ಉನ್ನತಸ್ಥಾನ ಸಿಗಲಿದೆ. ಹಣ್ಣು-ತರಕಾರಿ ವ್ಯಾಪಾರಿಗಳಿಗೆ ಲಾಭ ವೃದ್ಧಿ.

ಕನ್ಯಾ: ಕಷ್ಟದ ದಿನ ಎನಿಸಬಹುದು. ನಾಳಿನ ಸುಖಕ್ಕೆ ನಾಂದಿಯಾಗಲಿದೆ. ತಾಳ್ಮೆ ಜಯದ ಮಂತ್ರವಾಗಿರುತ್ತದೆ. ಆಹಾರ ಪದಾರ್ಥದ ವ್ಯಾಪಾರ ಮಾಡುವವರಿಗೆ ಶ್ರಮಕ್ಕೆ ತಕ್ಕಷ್ಟು ಆದಾಯ ಲಭಿಸಲಿದೆ.

ತುಲಾ: ನಿರ್ಧಾರ ತೆಗೆದುಕೊಳ್ಳುವ ಮೊದಲು ಸಮಯಾವಕಾಶ ಪಡೆಯಿರಿ. ಗೃಹ ಕೈಗಾರಿಕೆ ಕೆಲಸಗಳಲ್ಲಿ ಮನೆಯವರ ಪರಿಶ್ರಮ ಅನಿವಾರ್ಯ. ಅನಗತ್ಯ ಚಿಂತೆಗಳನ್ನು ಮೈಮೇಲೆ ಎಳೆದುಕೊಳ್ಳಬೇಡಿ.

ವೃಶ್ಚಿಕ: ಮಗಳ ಮುಂದಿನ ಭವಿಷ್ಯದ ಬಗ್ಗೆ ಇಂದಿನ ಘಟನೆಗಳು ತಲೆ ಕೆಡಿಸಿಕೊಳ್ಳುವಂತೆ ಮಾಡುತ್ತವೆ. ರಾಜಕಾರಣಿಗಳಿಗೆ ಮತ್ತು ಸರ್ಕಾರಿ ನೌಕರರಿಗೆ ಸುಯೋಗ. ಸತ್ಕಾರ್ಯಗಳಿಂದಾಗಿ ಮನೆಯಲ್ಲಿ ಸಡಗರ ಇರಲಿದೆ.

ಧನು: ಅನಿವಾರ್ಯ ಸಾಮಾಜಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಬೇಕಾಗಲಿದೆ. ಅಂಥ ಕೂಟಗಳಲ್ಲಿ ಭಾಗವಹಿಸುವಾಗ ಗೌರವವನ್ನು ಕಾಪಾಡಿಕೊಳ್ಳುವ ಬಗ್ಗೆ ಹೆಚ್ಚಿನ ಗಮನವಿರಲಿ.

ಮಕರ: ಬೆಂಕಿಯಿಂದ ಅನಾಹುತಗಳು ಸಂಭವಿಸುವ ಲಕ್ಷಣಗಳಿರುವುದರಿಂದ ಜಾಗ್ರತರಾಗಿ. ಮನೋಭಿಲಾಷೆಯಂತೆ ನಿಶ್ಚಯಿಸಿದ ಕಾರ್ಯ ಸಾಗುವುದು. ಮಗಳ ವಿವಾಹ ಪ್ರಸ್ತಾವನೆ ನಡೆಯಲಿದೆ.


ಕುಂಭ: ಏನೇ ಆದರೂ ಅದನ್ನು ಮುಕ್ತವಾಗಿ ಸ್ವೀಕರಿಸಿ. ಮನೋಭಿಲಾಷೆ ಈಡೇರುವುದು. ಸಾಮಾಜಿಕ ಚಟುವಟಿಕೆಗಳಲ್ಲಿನ ನಿಮ್ಮ ಕೊಡುಗೆಯು ಎಲ್ಲರ ಪ್ರಶಂಸೆಗೆ ಪಾತ್ರವಾಗುವುದು.

ಮೀನ: ಸಂಕಷ್ಟ ಪರಿಸ್ಥಿತಿಯಲ್ಲಿ ಕುಟುಂಬವನ್ನು ಮುನ್ನಡೆಸಲು ಪಾಲುದಾರಿಕೆ ಅನಿವಾರ್ಯ. ಅಗಾಧ ಜ್ಞಾನ ಶಕ್ತಿ ಹೊರ ಹೊಮ್ಮಿಬರಲು ಸೂಕ್ತ ಕಾಲವಿದು. ಬರಬೇಕಿದ್ದ ಹಣ ಹಿಂತಿರುಗಿ ಬಂದು ಕೈ ಸೇರಲಿದೆ.

ಗುಂಡಣ್ಣ



ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ
ಹಿಂದಿನ ಅಂತ್ಯ: 23,123
ಇಂದಿನ ಅಂತ್ಯ: 23,242
ದಿನದ ಕನಿಷ್ಠ: 23,104
119

ಮೊಟ್ಟೆ ಧಾರಣೆ (ಎನ್‌ಇಸಿಸಿ)
ಬೆಂಗಳೂರು
100 ಕ್ಕೆ ₹635
12 ಕ್ಕೆ ₹86
ಮೈಸೂರು: 100 ಕ್ಕೆ ₹645

ರಾಮನಗರ ರೇಷ್ಮೆಗೂಡು
ಮಿಶ್ರತಳಿ(ಸಿ.ಬಿ) ₹312-702
ದ್ವಿತಳಿ (ಬಿ.ವಿ) ₹455-870

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)
ಆರ್‌ಎಸ್‌ಎಸ್-4 ₹262
ಆರ್‌ಎಸ್‌ಎಸ್-5 ₹255
ಗುಡ್ ಲಾಟ್ ₹222

ಮುದ್ರೆ-ಮನೆ ಕಾಫಿ (50 ಕೆಜಿಗೆ)
ಎಪಿ ₹22,250
ಎಸಿ ₹14,000
ಆರ್‌ಪಿ ₹18,100
ಆರ್‌ಸಿ ₹9,550

ನಗದೀಕರಣ, ಹೂಡಿಕೆ ಹಿಂತೆಗೆತಕ್ಕೆ ಬಲ?

‘ಆಮದು ವೆಚ್ಚ ಜಾಸ್ತಿಯಾಗಿದ್ದರೂ ವಿತ್ತೀಯ ಕೊರತೆ ಮಿತಿ ತಪ್ಪದು’

ಮುಖ್ಯಾಂಶಗಳು
- ಬಂಡವಾಳ ಮಾರುಕಟ್ಟೆಗಳ ವ್ಯಾಪ್ತಿ ಹೆಚ್ಚಿಸುವ ಗುರಿ
- ಬಂಡವಾಳ ಹೊರಹರಿವು ನಿರ್ಬಂಧಿಸುವ ಉದ್ದೇಶ ಇಲ್ಲ

ನವದೆಹಲಿ (ಪಿಟಿಐ): ಆರ್ಥಿಕ ಸುಧಾರಣಾ ಕ್ರಮಗಳು, ಹೂಡಿಕೆ ಹಿಂತೆಗೆತ ಹಾಗೂ ಆಸ್ತಿ ನಗದೀಕರಣದ ಯೋಜನೆಗಳಿಗೆ ಇನ್ನಷ್ಟು ಬಲ ನೀಡುವ ಉದ್ದೇಶ ಕೇಂದ್ರ ಸರ್ಕಾರಕ್ಕೆ ಇದೆ ಎಂದು ಮೂಲಗಳು ಹೇಳಿವೆ.

ಪಶ್ಚಿಮ ಏಷ್ಯಾದಲ್ಲಿನ ಯುದ್ಧದಿಂದಾಗಿ ಇಂಧನ ಹಾಗೂ ರಸಗೊಬ್ಬರ ವೆಚ್ಚ ಜಾಸ್ತಿ ಆಗಿರುವುದರ ನಡುವೆ, ದೇಶದ ಆರ್ಥಿಕ ಬೆಳವಣಿಗೆ ದರವನ್ನು ಕಾಪಾಡಿಕೊಳ್ಳುವ ಬಯಕೆ ಕೇಂದ್ರ ಸರ್ಕಾರದ್ದಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

‘ಬೆಳವಣಿಗೆಗೆ ಧಕ್ಕೆ ಆಗಿಲ್ಲ. ಆದರೆ ಬಾಹ್ಯ ಸವಾಲುಗಳು ಎದುರಾಗಿವೆ... ಆರ್ಥಿಕ ಬೆಳವಣಿಗೆ ದರವು ಒಂದು ತ್ರೈಮಾಸಿಕದಿಂದ ಇನ್ನೊಂದು ತ್ರೈಮಾಸಿಕಕ್ಕೆ ಹೆಚ್ಚುತ್ತಿದೆ. ದೇಶಿ ಅರ್ಥ ವ್ಯವಸ್ಥೆಯು ಚೆನ್ನಾಗಿಯೇ ಇದೆ, ಬೇಡಿಕೆಯು ಕಡಿಮೆ ಆಗಿಲ್ಲ’ ಎಂದು ಮೂಲವು ಹೇಳಿದೆ.



ಬಂಡವಾಳ ಮಾರುಕಟ್ಟೆಗಳ ವ್ಯಾಪ್ತಿಯನ್ನು ಹೆಚ್ಚಿಸುವ ಹಾಗೂ ದೀರ್ಘಾವಧಿಗೆ ವಿದೇಶಿ ಬಂಡವಾಳವನ್ನು ಆಕರ್ಷಿಸುವ ಗುರಿಯೊಂದಿಗೆ ಹಣಕಾಸು ವಲಯದಲ್ಲಿ ಸುಧಾರಣೆಗಳನ್ನು ತರುವ ಕೆಲಸವನ್ನು ಸರ್ಕಾರ ಮುಂದುವರಿಸಲಿದೆ ಎಂದು ಹೇಳಿದೆ.

ಸರ್ಕಾರವು ಹೆಚ್ಚಿನ ಸಾಲ ಮಾಡಬೇಕಾದ ಅಥವಾ ಪೂರಕ ವೆಚ್ಚಗಳಿಗೆ ಮುಂಗಾರು ಅಧಿವೇಶನದಲ್ಲಿ ಸಂಸತ್ತಿನ ಒಪ್ಪಿಗೆ ಪಡೆದುಕೊಳ್ಳಬೇಕಾದ ಅಗತ್ಯವೇನೂ ತಕ್ಷಣಕ್ಕೆ ಕಾಣುತ್ತಿಲ್ಲ... ಜನವರಿ-ಮಾರ್ಚ್ ತ್ರೈಮಾಸಿಕದಲ್ಲಿ ಕಂಡುಬಂದ ಬೆಳವಣಿಗೆ ಪ್ರಮಾಣವು ಪ್ರಸಕ್ತ ಹಣಕಾಸು ವರ್ಷದ ಮೊದಲ ತ್ರೈಮಾಸಿಕದಲ್ಲಿಯೂ ಮುಂದುವರಿದಿದೆ ಎಂದು ತಿಳಿಸಿದೆ.

‘ವಿದೇಶಗಳಲ್ಲಿ ಇರುವ ಭಾರತ ಮೂಲದವರು ಭಾರತಕ್ಕೆ ಹಣ ರವಾನೆ ಮಾಡುವ ಪ್ರಮಾಣ ಕೂಡ ಕಡಿಮೆಯಾದ ಸೂಚನೆಗಳು ಇಲ್ಲ’ ಎಂದು ಅಧಿಕಾರಿ ತಿಳಿಸಿದ್ದಾರೆ.


ಆಮದು ವೆಚ್ಚಗಳು ಜಾಸ್ತಿ ಆಗಿದ್ದರೂ ಪ್ರಸಕ್ತ ಹಣಕಾಸು ವರ್ಷದಲ್ಲಿ ವಿತ್ತೀಯ ಕೊರತೆಯನ್ನು ಒಟ್ಟು ಜಿಡಿಪಿಯ ಶೇ 4.3ಕ್ಕೆ ಮಿತಿಗೊಳಿಸುವ ಗುರಿ ತಲುಪಲು ಕೂಡ ಸಾಧ್ಯವಿದೆ ಎಂದು ಅವರು ಹೇಳಿದ್ದಾರೆ. ತೆರಿಗೆ ಮೂಲವಷ್ಟೇ ಅಲ್ಲದೆ ತನ್ನ ವರಮಾನವನ್ನು ಹೆಚ್ಚಿಸಿಕೊಳ್ಳಲು ಕೇಂದ್ರ ಸರ್ಕಾರವು ಹೂಡಿಕೆ ಹಿಂತೆಗೆತ ಹಾಗೂ ಆಸ್ತಿ ನಗದೀಕರಣದ ಮಾರ್ಗಗಳನ್ನೂ ಪರಿಶೀಲಿಸುತ್ತಿದೆ ಎನ್ನಲಾಗಿದೆ.

ಐಡಿಬಿಐ ಬ್ಯಾಂಕ್‌ನಲ್ಲಿ ಸರ್ಕಾರ ತಾನು ಹೊಂದಿರುವ ಷೇರುಗಳನ್ನು ಮಾರಾಟ ಮಾಡುವ ಪ್ರಕ್ರಿಯೆಗೆ ಚುರುಕು ನೀಡುವ ನಿರೀಕ್ಷೆ ಇದೆ.

ಮುಂಗಾರು ಹಂಗಾಮಿನ ಪರಿಣಾಮಗಳು ಸ್ಪಷ್ಟವಾದ ನಂತರದಲ್ಲಿ ದೇಶದ ಅರ್ಥವ್ಯವಸ್ಥೆಯ ಸ್ಥಿತಿಯ ಬಗ್ಗೆ ಜುಲೈನಲ್ಲಿ ಮರು ಅವಲೋಕನ ಮಾಡಲಾಗುತ್ತದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ವಿದೇಶಿ ಬಂಡವಾಳ ಆಕರ್ಷಣೆಯ ಉದ್ದೇಶದಿಂದ ಸರ್ಕಾರ ಇನ್ನಷ್ಟು ಕ್ರಮಗಳನ್ನು ಕೈಗೊಳ್ಳುವ ಸಾಧ್ಯತೆಯೂ ಇದೆ. ಆದರೆ, ವಿದೇಶಿ ಬಂಡವಾಳದ ಹೊರಹರಿವು ನಿರ್ಬಂಧಿಸುವ ಯಾವುದೇ ಉದ್ದೇಶ ಸದ್ಯಕ್ಕೆ ಇಲ್ಲ ಎಂದು ಗೊತ್ತಾಗಿದೆ.

ಪ್ರಶ್ನೋತ್ತರ



ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ವಸಿಷ್ಠ ಕಶ್ಯಪ್, ಮೈಸೂರು

• ಪ್ರಶ್ನೆ: ಸಾವಿರಾರು ಮ್ಯೂಚುವಲ್ ಫಂಡ್‌ಗಳು ನಮ್ಮಲ್ಲಿ ಈಗ ಇವೆ. ಇವುಗಳಲ್ಲಿ ಅನೇಕ ವರ್ಗದವು ಇವೆ. ಅದರಲ್ಲೂ ಈಕ್ವಿಟಿ ವಿಭಾಗದಲ್ಲಿ ಹಲವು ಫಂಡ್‌ಗಳು ಇವೆ. ಯಾವುದೇ ರಿಸ್ಕ್ ಇಲ್ಲದೆ ಹೂಡಿಕೆಗೆ ಲಿಕ್ವಿಡ್, ಡೆಟ್ ಫಂಡ್‌ಗಳು ಇವೆ. ಈ ಹೂಡಿಕೆಗಳಡಿ ಉಪ ವರ್ಗಗಳಿವೆ. ಇವೆಲ್ಲದರ ಕಾರ್ಯವಿಧಾನ ನೋಡಿದರೆ ನಾವು ಹೂಡಿಕೆ ಮಾಡುವುದು ತುಸು ಕಷ್ಟವೆಂದು ತೋರುತ್ತದೆ. ಇವೆಲ್ಲ ಗೊಂದಲಗಳಿಗೆ ಪರಿಹಾರ ನೀಡಬಹುದಾದ ಮಲ್ಟಿ ಅಸೆಟ್ ಅಲೋಕೇಶನ್ ಫಂಡ್ (ಎಂಎಎಎಫ್) ಸೂಕ್ತ ಆಯ್ಕೆಯಾಗಬಹುದೆಂದು ಭಾವಿಸಿದ್ದೇನೆ. ಇದಕ್ಕೆ ಪರ್ಯಾಯವಾಗಿ ಫ್ಲೆಕ್ಸಿ ಕ್ಯಾಪ್ ಫಂಡ್‌ಗಳೂ ಇವೆ. ನಾವು ಇವುಗಳ ನಡುವಿನ ಆಯ್ಕೆಯನ್ನು ಹೇಗೆ ಮಾಡಬಹುದು.
ನನ್ನ ವಯಸ್ಸು 35 ವರ್ಷ. ನಾನು ಖಾಸಗಿ ಕಂಪನಿಯೊಂದರಲ್ಲಿ ಉದ್ಯೋಗಿ. ನನ್ನೊಂದಿಗೆ ನನ್ನ ಪತ್ನಿ, ಮಗಳು ಹಾಗೂ ತಂದೆ ತಾಯಿ ಇದ್ದಾರೆ. ಪ್ರತಿ ತಿಂಗಳೂ ಸುಮಾರು ₹50 ಸಾವಿರ ಹೂಡಿಕೆಗಾಗಿ ಇರಿಸುವ ಉದ್ದೇಶ ಹೊಂದಿದ್ದೇನೆ ಹಾಗೂ ನನ್ನ ಹೂಡಿಕೆಯ ನಿರ್ಧಾರ ಆಗುವ ತನಕ ಬ್ಯಾಂಕ್ ಹಾಗೂ ಡೆಟ್ ಫಂಡ್‌ಗಳಲ್ಲಿ ಯಾವುದೇ ಸಮಯದಲ್ಲೂ ಪಡೆಯುವ ರೀತಿ ತೊಡಗಿಸಿದ್ದೇನೆ. ಹೂಡಿಕೆ ಹೇಗೆ ಶುರುಮಾಡಲಿ?

ಉತ್ತರ: ಪ್ರಸ್ತುತ ನೀವು ಸ್ಥಿರ ಆದಾಯ ಹೊಂದಿದ್ದೀರಿ. ನೀವು ಸಂಪತ್ತು ಸೃಷ್ಟಿ, ಕುಟುಂಬದ ಭವಿಷ್ಯಕ್ಕೆ ಭದ್ರತೆ ಹಾಗೂ ಹಣಕಾಸಿನ ಸ್ಥಿರತೆಯನ್ನು ಒಂದೇ ಸಮಯದಲ್ಲಿ ಸಾಧಿಸಬೇಕಾದ ಹಂತದಲ್ಲಿದ್ದೀರಿ. ಪ್ರತಿ ತಿಂಗಳು ₹50,000 ಹೂಡಿಕೆ ಮಾಡುವ ಉದ್ದೇಶವಿರುವುದರಿಂದ, ಸರಿಯಾದ ಆಸ್ತಿ ಹಂಚಿಕೆ ನಿಮ್ಮ ಹೂಡಿಕೆಯ ಯಶಸ್ಸನ್ನು ನಿರ್ಧರಿಸುವ ಪ್ರಮುಖ ಅಂಶವಾಗುತ್ತದೆ.

ಇಂದು ಮ್ಯೂಚುವಲ್ ಫಂಡ್ ಕ್ಷೇತ್ರದಲ್ಲಿ ಹಲವಾರು ಕಂಪನಿಗಳು ಮತ್ತು ನೂರಾರು ಯೋಜನೆಗಳಿವೆ. ಲಾರ್ಜ್‌ಕ್ಯಾಪ್, ಮಿಡ್‌ಕ್ಯಾಪ್, ಸ್ಮಾಲ್‌ಕ್ಯಾಪ್, ಫ್ಲೆಕ್ಸಿಕ್ಯಾಪ್, ಇಂಡೆಕ್ಸ್, ಹೈಬ್ರಿಡ್, ಡೆಟ್, ಲಿಕ್ವಿಡ್, ಚಿನ್ನ-ಬೆಳ್ಳಿ ಮುಂತಾದ ಅನೇಕ ವರ್ಗಗಳು ಸಾಮಾನ್ಯ ಹೂಡಿಕೆದಾರರನ್ನು ಮೇಲ್ನೋಟಕ್ಕೆ ಗೊಂದಲಕ್ಕೀಡು ಮಾಡುವುದು ಸಹಜ. ಈ ಹಿನ್ನೆಲೆಯಲ್ಲೇ ಮಲ್ಟಿ ಅಸೆಟ್ ಅಲೋಕೇಶನ್ ಫಂಡ್ ಎಂಬ ವರ್ಗ ವಿಶೇಷ ಮಹತ್ವ ಪಡೆಯುತ್ತಿದೆ. ಇದರ ಪ್ರಮುಖ ವೈಶಿಷ್ಟ್ಯವೆಂದರೆ, ಇಲ್ಲಿ ಒಂದೇ ಫಂಡ್‌ನಲ್ಲಿ ಕನಿಷ್ಠ ಮೂರು ಭಿನ್ನ ಆಸ್ತಿ ವರ್ಗಗಳಲ್ಲಿ ಹೂಡಿಕೆ ಮಾಡುವ ಅವಕಾಶ ಇರುತ್ತದೆ. ಪ್ರಮುಖವಾಗಿ ಇದು ಈಕ್ವಿಟಿ, ಡೆಟ್ ಮತ್ತು ಚಿನ್ನ-ಬೆಳ್ಳಿಯ ಹೂಡಿಕೆ ವರ್ಗದಲ್ಲಿ ಹಣ ತೊಡಗಿಸುತ್ತದೆ. ಕೆಲವು ಫಂಡ್‌ಗಳು ಅಲ್ಪ ಪ್ರಮಾಣದಲ್ಲಿ ರಿಯಲ್ ಎಸ್ಟೇಟ್ ಇನ್ವೆಸ್ಟ್‌ಮೆಂಟ್ ಟ್ರಸ್ಟ್ ಮತ್ತು ಇನ್‌ಫ್ರಾಸ್ಟ್ರಕ್ಚರ್ ಇನ್ವೆಸ್ಟ್‌ಮೆಂಟ್ ಟ್ರಸ್ಟ್ ಅಥವಾ ವಿದೇಶಿ ಈಕ್ವಿಟಿಗಳಲ್ಲಿಯೂ ಹೂಡಿಕೆ ಮಾಡಬಹುದು. ಮಾರುಕಟ್ಟೆಯ ಪರಿಸ್ಥಿತಿಗೆ ಅನುಗುಣವಾಗಿ ಫಂಡ್ ಮ್ಯಾನೇಜರ್ ಆಸ್ತಿ ಹಂಚಿಕೆಯನ್ನು ಬದಲಾಯಿಸುವ ಮೂಲಕ ಆರ್ಥಿಕ ಅಪಾಯವನ್ನು ನಿಯಂತ್ರಿಸುತ್ತಾರೆ.

ಮಲ್ಟಿ ಅಸೆಟ್ ಅಲೋಕೇಶನ್ ಫಂಡ್‌ಗಳು ಪ್ರತಿ ವಿಭಾಗದಲ್ಲೂ ಕನಿಷ್ಠ ಶೇ 10ರಷ್ಟು ಹೂಡಿಕೆ ಮಾಡುವುದು ಕಡ್ಡಾಯ. ಅದೇ ರೀತಿ ಈಕ್ವಿಟಿ ಹಂಚಿಕೆಯು ಸಾಮಾನ್ಯವಾಗಿ ಶೇ. 10ರಿಂದ ಶೇ 70ರವರೆಗೆ ಆಗಬಹುದು. ಈ ವರ್ಗದ ಕೆಲವು ಫಂಡ್‌ಗಳು ಶೇ 50ರಿಂದ ಶೇ 65ರವರೆಗೆ ಈಕ್ವಿಟಿಯಲ್ಲಿ ಹೂಡಿಕೆ ಮಾಡುವುದಿದೆ. ಮತ್ತೊಂದೆಡೆ, ಸಂಪ್ರದಾಯಬದ್ಧ ಅಥವಾ ರಕ್ಷಣಾತ್ಮಕ ಸ್ವರೂಪದ ಫಂಡ್‌ಗಳು ಶೇ 35ರಿಂದ ಶೇ 50ರವರೆಗೆ ಈಕ್ವಿಟಿ ಹಂಚಿಕೆಯನ್ನು ಹೊಂದಿರುತ್ತವೆ. ಇದರ ಮತ್ತೊಂದು ವಿಶೇಷ ಎಂದರೆ, ಕೆಲವು ಯೋಜನೆಗಳು ತಮ್ಮ ಒಟ್ಟು ಹೂಡಿಕೆಯ ಶೇ 65ಕ್ಕಿಂತ ಹೆಚ್ಚು ಭಾಗವನ್ನು ಈಕ್ವಿಟಿ ಮತ್ತು ಈಕ್ವಿಟಿ-ಸಂಬಂಧಿತ ಆಸ್ತಿಗಳಲ್ಲಿ ಹೂಡಿಕೆ ಮಾಡುವುದರಿಂದ, ಅವುಗಳಿಗೆ ಈಕ್ವಿಟಿ ಫಂಡ್‌ಗಳ ತೆರಿಗೆ ಸೌಲಭ್ಯ ಸಿಗುತ್ತದೆ. ಕೆಲವು ಬ್ಯಾಲೆನ್ಸ್ಡ್ ಮಲ್ಟಿ ಅಸೆಟ್ ಫಂಡ್‌ಗಳು ಈಕ್ವಿಟಿ, ಡೆಟ್ ಹಾಗೂ ಚಿನ್ನಕ್ಕೆ ಸಮಾನ ಪ್ರಾಮುಖ್ಯ ನೀಡುತ್ತವೆ. ಇನ್ನೂ ಕೆಲವು ಡೈನಾಮಿಕ್ ಅಸೆಟ್ ಅಲೋಕೇಷನ್ ಫಂಡ್‌ಗಳು ಮಾರುಕಟ್ಟೆ ಮೌಲ್ಯಮಾಪನವನ್ನು ಆಧರಿಸಿ ಹಂಚಿಕೆಯನ್ನು ಬದಲಾಯಿಸುತ್ತವೆ. ಹೀಗಾಗಿ ಮಲ್ಟಿ ಅಸೆಟ್ ಅಲೋಕೇಶನ್ ಫಂಡ್‌ಗಳನ್ನು ಆಯ್ಕೆ ಮಾಡುವಾಗ ಈಕ್ವಿಟಿಯ ಸರಾಸರಿ ಪ್ರಮಾಣ, ಮರುಸಮತೋಲನ ನೀತಿ, ಚಿನ್ನ-ಬೆಳ್ಳಿಯಂತಹ ಆಸ್ತಿಗಳಲ್ಲಿನ ಹಂಚಿಕೆ ಹಾಗೂ ಹಿಂದಿನ ಮಾರುಕಟ್ಟೆ ಆವರ್ತನಗಳಲ್ಲಿ ಕಂಡುಬಂದ ವ್ಯತ್ಯಾಸ ಪರಿಶೀಲಿಸುವುದು ಮುಖ್ಯ.

ಫ್ಲೆಕ್ಸಿಕ್ಯಾಪ್ ಫಂಡ್‌ಗಳು ಸಂಪೂರ್ಣವಾಗಿ ಈಕ್ವಿಟಿ ಆಧಾರಿತವಾಗಿದ್ದು, ಲಾರ್ಜ್, ಮಿಡ್ ಹಾಗೂ ಸ್ಮಾಲ್ ಕ್ಯಾಪ್ ಕಂಪನಿಗಳ ನಡುವೆ ಮುಕ್ತವಾಗಿ ಹೂಡಿಕೆ ಮಾಡುತ್ತವೆ. ಇವುಗಳಲ್ಲಿ ದೀರ್ಘಾವಧಿಯಲ್ಲಿ ಸಂಪತ್ತಿನ ಸೃಷ್ಟಿಯ ಸಾಮರ್ಥ್ಯ ಹೆಚ್ಚು. ಆದರೆ ಮಾರುಕಟ್ಟೆ ಕುಸಿತದ ಸಂದರ್ಭಗಳಲ್ಲಿ ಅಸ್ಥಿರತೆಯೂ ಹೆಚ್ಚು. ಆದ್ದರಿಂದ ಫ್ಲೆಕ್ಸಿಕ್ಯಾಪ್ ಫಂಡ್‌ಗಳು ಉತ್ತಮ ‘ಈಕ್ವಿಟಿ ಫಂಡ್’ ಎಂದು ಪರಿಗಣಿಸಬಹುದು; ಮಲ್ಟಿ ಅಸೆಟ್ ಅಲೋಕೇಶನ್ ಫಂಡ್‌ಗಳನ್ನು ‘ಸಂಪೂರ್ಣ ಹೂಡಿಕೆ’ಯ ಉತ್ಪನ್ನವಾಗಿ ಪರಿಗಣಿಸಬಹುದು. ಮಾರುಕಟ್ಟೆ ಕುಸಿತದ ಸಮಯ ಈಕ್ವಿಟಿ ವಿಭಾದ ಹೂಡಿಕೆ ನಷ್ಟದಲ್ಲಿದ್ದರೂ, ಸಾಮಾನ್ಯವಾಗಿ ಚಿನ್ನ-ಬೆಳ್ಳಿ, ಡೆಟ್ ವಿಭಾಗದಲ್ಲಿ ಉತ್ತಮ ಲಾಭ ಬರುವ ಕಾರಣ ದೀರ್ಘಾವಧಿಯಲ್ಲಿ ಒಟ್ಟಾರೆ ಮಧ್ಯಮ ಅಥವಾ ಉತ್ತಮ ಲಾಭ ನಿರೀಕ್ಷಿಸಬಹುದು.

ನಿಮ್ಮ ವಿಚಾರದಲ್ಲಿ ಉತ್ತಮ ಆದಾಯ, ದೀರ್ಘ ಸೇವಾ ಅವಧಿ, ಹಾಗೂ ಪೋಷಕರ ಜವಾಬ್ದಾರಿ ಇರುವುದರಿಂದ ₹50,000 ಹೂಡಿಕೆಯನ್ನು ಒಂದೇ ವರ್ಗದ ಫಂಡ್‌ನಲ್ಲಿ ತೊಡಗಿಸುವುದಕ್ಕಿಂತ, ಮೇಲಿನ ಎರಡೂ ವರ್ಗಗಳಲ್ಲಿ ಕ್ರಮಾಗತವಾಗಿ ಹೂಡಿಕೆ ಮಾಡುವ ಸಂಯೋಜಿತ ಯೋಜನೆ ಉತ್ತಮ. ಇದಲ್ಲದೆ ಇಂಡೆಕ್ಸ್ ಫಂಡ್‌ಗಳಲ್ಲಿ ತುಸು ಹಣ ತೊಡಗಿಸುವುದೂ ಉತ್ತಮ. ಇವು ನೇರ ಈಕ್ವಿಟಿ ಫಂಡ್ ಅಥವಾ ಷೇರು ಹೂಡಿಕೆಗಳಷ್ಟು ಹಠಾತ್ ಏರಿಳಿತ ಕಾಣುವುದಿಲ್ಲ. ನಿಮ್ಮ ಈಗಿನ ಡೆಟ್ ಹೂಡಿಕೆಯಿಂದ ಎಸ್‌ಟಿಪಿ (ವ್ಯವಸ್ಥಿತ ವರ್ಗಾವಣೆ ಯೋಜನೆ) ವಿಧಾನದ ಮೂಲಕ ನಿಯೋಜಿತ ಫಂಡ್ ಯೋಜನೆಗಳಿಗೆ ಮೊತ್ತ ವರ್ಗಾಯಿಸುವ ವ್ಯವಸ್ಥೆ ಮಾಡಿಕೊಳ್ಳಿ.

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001.
ಇ-ಮೇಲ್: businessdesk@prajavani.co.in

ಮುಂಬೈ ಧಾರಣೆ (ಶೇಂಗಾ)

09-06-2026	
ಜಾವಾ 70/80(ಹೊಸ)	11100-11200
ಜಾವಾ 80/90(ಹೊಸ)	10400-10500
ದಪ್ಪ ಮಧ್ಯಪ್ರದೇಶ (ಹೊಸ)	8500-8600
ದಪ್ಪ ಗುಜರಾತ್ (ಹೊಸ)	9200-9300
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1610 (1610)
ಒಂದು ವಾರದ ಡೆಲಿವರಿ	1605 (1605)
ಪಾಮ್ ವಾರದ ಡೆಲಿವರಿ	1463 (1468)
ಸೂರ್ಯಕಾಂತಿ ಎಣ್ಣೆ ಕಚ್ಚಾ	1550 (1560)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,51,800 (1,51,400)
ಬೆಳ್ಳಿ ಕೆ.ಜಿಗೆ	2,45,500 (2,45,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಡಾರ್ಕ್ ಪ್ಯಾಟರ್ನ್ ಅನುಸರಿಸುತ್ತಿರುವ ವಿವಿಧ ಕಂಪನಿಗಳು

ವರ್ಷಕ್ಕೆ ₹28 ಸಾವಿರ ಕೋಟಿ ನಷ್ಟ

ನವದೆಹಲಿ (ಪಿಟಿಐ): ಗ್ರಾಹಕರ ಕಣ್ಣಿಗೆ ಮಣ್ಣೆರಚುವ ಉದ್ದೇಶದಿಂದ ಆನ್‌ಲೈನ್ ಮಾರುಕಟ್ಟೆಗಳಲ್ಲಿ ಚಾಲ್ತಿಗೆ ತಂದಿರುವ ಕೆಲವು ಪದ್ಧತಿಗಳ ಪರಿಣಾಮವಾಗಿ ಗ್ರಾಹಕರು ವರ್ಷಕ್ಕೆ ₹28 ಸಾವಿರ ಕೋಟಿವರೆಗೆ ನಷ್ಟ ಅನುಭವಿಸುತ್ತಿದ್ದಾರೆ ಎಂದು ವರದಿಯೊಂದು ಹೇಳಿದೆ.

ಮಾರುಕಟ್ಟೆ ಸಂಶೋಧನಾ ಸಂಸ್ಥೆ ‘ಡಾಟಂ ಇಂಟೆಲಿಜೆನ್ಸ್’ ಈ ವರದಿ ಸಿದ್ಧಪಡಿಸಿದೆ. ‘ದೇಶದಲ್ಲಿ 30.4 ಕೋಟಿ ಮಂದಿ ಆನ್‌ಲೈನ್ ವೇದಿಕೆಗಳ ಮೂಲಕ ಉತ್ಪನ್ನಗಳನ್ನು ಖರೀದಿಸುತ್ತಾರೆ. ಇವರ ಪೈಕಿ ಶೇ 88ರಷ್ಟು ಮಂದಿ ಮರೆಮಾಚಿದ ಶುಲ್ಕಗಳು, ಒತ್ತಾಯದಿಂದಾಗಿ ಖರೀದಿ ಬುಟ್ಟಿಗೆ ಸೇರುವ ಉತ್ಪನ್ನಗಳು, ಚಂದಾದಾರಿಕೆ, ಉತ್ಪನ್ನದ ಬೆಲೆಯನ್ನು ಕಡಿಮೆ ಮಟ್ಟದಲ್ಲಿ ತೋರಿಸುವುದು ಮುಂತಾದ ತಂತ್ರಗಳ ಕಾರಣದಿಂದಾಗಿ ಪ್ರತಿ ತಿಂಗಳು ತಲಾ ₹87ರಷ್ಟು ಕಳೆದು ಕೊಳ್ಳುತ್ತಿದ್ದಾರೆ’ ಎಂದು ವರದಿ ಹೇಳಿದೆ.

‘ಈಗ ಚಾಲ್ತಿಯಲ್ಲಿರುವ ನಿಯಮಗಳು, ಲಕ್ಷಾಂತರ ಮಂದಿ ಗ್ರಾಹಕರ ಮೇಲೆ ಪರಿಣಾಮ ಬೀರುವ ಡಿಜಿಟಲ್ ಮೋಸದ ಇಂತಹ ಪದ್ಧತಿ ಹತ್ತಿಕ್ಕುವಲ್ಲಿ ಸೀಮಿತವಾದ ಯಶಸ್ಸನ್ನು ಮಾತ್ರ ಕಂಡಿವೆ’ ಎಂದು ವರದಿ ತಿಳಿಸಿದೆ.

ಮೊದಲು ಮರೆಮಾಚಲಾಗಿದ್ದ ಕೆಲವು ಶುಲ್ಕಗಳು ಉತ್ಪನ್ನಗಳ ಖರೀದಿಯ ಅಂತಿಮ ಹಂತದಲ್ಲಿ ಕಾಣಿಸಿಕೊಳ್ಳುತ್ತಿರುವುದು ಈಗ ಶೇ 63ರಷ್ಟು ಗ್ರಾಹಕರ ಅನುಭವಕ್ಕೆ ಬಂದಿದೆ. ಅಲ್ಲದೆ ಶೇ 73ರಷ್ಟು ವೇದಿಕೆಗಳು ಗ್ರಾಹಕರು ನಿರ್ದಿಷ್ಟ ಬಗೆಯ ತೀರ್ಮಾನ ತೆಗೆದುಕೊಳ್ಳಬೇಕಾದ ಒತ್ತಡವನ್ನು ಸೃಷ್ಟಿಸುತ್ತಿವೆ.

ಈ ವರದಿಯು ಇ-ವಾಣಿಜ್ಯ, ಕ್ವಿಕ್-ಕಾಮರ್ಸ್ ಹಾಗೂ ಆನ್‌ಲೈನ್ ಮೂಲಕ ಪ್ರವಾಸ ಸೇವೆ ಒದಗಿಸುವ ಒಟ್ಟು 12 ವೇದಿಕೆಗಳನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿತ್ತು. ಅಧ್ಯಯನವನ್ನು ಈ ವರ್ಷದ ಮೊದಲ ತ್ರೈಮಾಸಿಕದಲ್ಲಿ ನಡೆಸಲಾಗಿದೆ, 50 ನಗರಗಳ 2,590 ಗ್ರಾಹಕರಿಂದ ಅಭಿಪ್ರಾಯ ಸಂಗ್ರಹಿಸಲಾಗಿದೆ.

ಇ-ವಾಣಿಜ್ಯ ವೇದಿಕೆಗಳ ಪೈಕಿ ಅಮೆಜಾನ್ ಹೆಚ್ಚು ವಿಶ್ವಾಸಾರ್ಹ ಎಂದು ಗ್ರಾಹಕರು ಅಭಿಪ್ರಾಯ ದಾಖಲಿಸಿದ್ದಾರೆ. ತಮ್ಮ ಮೊದಲ ಆಯ್ಕೆ ಅಮೆಜಾನ್ ಎಂದು ಶೇ 50ರಷ್ಟು ಮಂದಿ ಗ್ರಾಹಕರು ಹೇಳಿ ದ್ದಾರೆ. ಫ್ಲಿಪ್‌ಕಾರ್ಟ್ ಬಗ್ಗೆ ವಿಶ್ವಾಸ ವ್ಯಕ್ತ ಪಡಿಸಿದ ಗ್ರಾಹಕರ ಪ್ರಮಾಣಕ್ಕಿಂತ (ಶೇ 37ರಷ್ಟು) ಅವಿಶ್ವಾಸ ವ್ಯಕ್ತಪಡಿಸಿದ ಗ್ರಾಹಕರ (ಶೇ 41ರಷ್ಟು) ಪ್ರಮಾಣ ಜಾಸ್ತಿ ಇದೆ.

ಬಿಜೆಪಿಯು ಜೆಡಿಎಸ್ ಅನ್ನು ಹಂತ ಹಂತವಾಗಿ ಮುಗಿಸುತ್ತಿದೆ ಎಂಬ ಕಾಂಗ್ರೆಸ್ ಆರೋಪ ನಿಜವೇ?
ಹೌದು ಇಲ್ಲ
ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

‘ವೇತನ ಹೆಚ್ಚಳ ಈ ಬಾರಿ ಶೇ 10ರಷ್ಟು’

ಮುಂಬೈ (ಪಿಟಿಐ): ಪ್ರಸಕ್ತ ಹಣಕಾಸು ವರ್ಷದಲ್ಲಿ ದೇಶದ ಕಾರ್ಪೊರೇಟ್ ವಲಯದಲ್ಲಿ ಕೆಲಸ ಮಾಡುವವರ ವೇತನವು ಶೇ 8.6ರಿಂದ ಶೇ 10.2ರ ಮಟ್ಟದಲ್ಲಿ ಹೆಚ್ಚಳ ಆಗಬಹುದು ಎಂದು ಟೀಮ್‌ಲೀಸ್ ಸರ್ವಿಸಸ್ ಸಿದ್ಧಪಡಿಸಿದ ವರದಿಯೊಂದು ಹೇಳಿದೆ.

ವೇತನ ಹೆಚ್ಚಳದಲ್ಲಿ ಇ.ವಿ. ಮತ್ತು ಇ.ವಿ. ಮೂಲಸೌಕರ್ಯ ವಲಯ, ಫಿನ್‌ಟೆಕ್, ಆರೋಗ್ಯಸೇವೆ ಹಾಗೂ ಫಾರ್ಮಾ ವಲಯವು ಮುಂಚೂಣಿಯಲ್ಲಿ ಇರಲಿವೆ ಎಂದು ಅದು ಹೇಳಿದೆ. ಇ.ವಿ. ಮತ್ತು ಇ.ವಿ. ಮೂಲಸೌಕರ್ಯ ವಲಯದ ಬೆಳವಣಿಗೆ ಹೆಚ್ಚಿನ ಪ್ರಮಾಣದಲ್ಲಿ ಇರಲಿದ್ದು, ಅಲ್ಲಿ ವೇತನ ಏರಿಕೆ ಪ್ರಮಾಣವು ಶೇ 9.6ರಿಂದ ಶೇ 10.2ರವರೆಗೆ ಇರಲಿದೆ ಎಂದು ವರದಿಯು ಅಂದಾಜು ಮಾಡಿದೆ. 20 ನಗರಗಳಲ್ಲಿನ 23 ವಲಯಗಳ 1,268 ಕಂಪನಿಗಳಿಂದ ಮಾಹಿತಿ ಪಡೆದು ಈ ವರದಿ ಸಿದ್ಧಪಡಿಸಲಾಗಿದೆ.

ಬೀದರ್: ವಿಮಾನ ಸಮಯ ಬದಲು

ಬೀದರ್: ‘ಸ್ಟಾರ್ ಏರ್’ ಸಂಸ್ಥೆಯು ಬುಧವಾರದಿಂದ (ಜೂ.10) ಜಾರಿಗೆ ಬರುವಂತೆ ಬೀದರ್-ಬೆಂಗಳೂರು, ಬೆಂಗಳೂರು-ಬೀದರ್ ನಡುವಿನ ವಿಮಾನ ಸಂಚಾರದ ಸಮಯವನ್ನು ಏಕಾಏಕಿ ಬದಲಾವಣೆ ಮಾಡಿದೆ.

ಪ್ರತಿದಿನ ಮಧ್ಯಾಹ್ನ 12.30ಕ್ಕೆ ಬೆಂಗಳೂರು ವಿಮಾನ ನಿಲ್ದಾಣದಿಂದ ವಿಮಾನ ಹೊರಟು 1.45ಕ್ಕೆ ಬೀದರ್ ಸೇರಲಿದೆ. ಮತ್ತೆ ಬೀದರ್‌ನಿಂದ ಮಧ್ಯಾಹ್ನ 2.30ಕ್ಕೆ ಹೊರಟು ಮಧ್ಯಾಹ್ನ 3.30ಕ್ಕೆ ಬೆಂಗಳೂರು ತಲುಪಲಿದೆ.

ಇದುವರೆಗೆ ಪ್ರತಿದಿನ ಬೆಂಗಳೂರಿನಿಂದ ಬೆಳಿಗ್ಗೆ 6.30ಕ್ಕೆ ಹಾರಾಟ ಆರಂಭಿಸಿ, ಬೆಳಿಗ್ಗೆ 7.45ಕ್ಕೆ ಬೀದರ್ ತಲುಪುತ್ತಿತ್ತು. ಬೆಳಿಗ್ಗೆ 8.15ಕ್ಕೆ ಬೀದರ್‌ನಿಂದ ಹೊರಟು ಬೆಳಿಗ್ಗೆ 9.30ಕ್ಕೆ ಬೆಂಗಳೂರು ಸೇರುತ್ತಿತ್ತು.

ಹಠಾತ್ ಸಮಯ ಬದಲಿಸಿರುವುದಕ್ಕೆ ಅಸಮಾಧಾನ ವ್ಯಕ್ತಪಡಿಸಿರುವ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಖಾತೆ ಸಚಿವ ಈಶ್ವರ ಬಿ. ಖಂಡ್ರೆ ಅವರು ಮುಖ್ಯಮಂತ್ರಿಗೆ ಪತ್ರ ಬರೆದು, ಸಮಯ ಬದಲಾವಣೆ ಮಾಡದಂತೆ ಕೋರಿದ್ದಾರೆ.

ಭಾರತದ ಮಾವಿಗೆ ನೇಪಾಳ ನಿರ್ಬಂಧ

ಕಠ್ಮಂಡು (ಪಿಟಿಐ): ಅತಿಯಾದ ಕ್ರಿಮಿನಾಶಕ ಬಳಕೆ ಮಾಡಲಾಗುತ್ತಿದೆ ಎಂಬ ಕಾರಣ ನೀಡಿ ಭಾರತದಿಂದ ಮಾವು ಆಮದು ಮಾಡಿಕೊಳ್ಳುವುದಕ್ಕೆ ನೇಪಾಳ ನಿರ್ಬಂಧ ವಿಧಿಸಿದೆ.

ಇದರಿಂದ, ಸ್ಥಳೀಯ ಮಾರುಕಟ್ಟೆಗಳಲ್ಲಿ ಭಾರತದ ಮಾವುಗಳೊಂದಿಗೆ ಸ್ಪರ್ಧೆ ಇಲ್ಲದೆ ನೇಪಾಳದ ರೈತರು ಅನುಕೂಲ ಪಡೆಯುತ್ತಿದ್ದಾರೆ.

‘ಈ ಋತುವಿನಲ್ಲಿ ಮಾವಿನ ಹಣ್ಣಿಗೆ ಹೆಚ್ಚಿನ ಬೇಡಿಕೆ ಇರುವುದರಿಂದ ಸರ್ಕಾರವು ಸ್ಥಳೀಯ ಮಾವಿಗೆ ಪ್ರಾಮುಖ್ಯ ನೀಡುತ್ತಿದೆ. ಹೀಗಾಗಿ ಇದು ಸಕಾರಾತ್ಮಕ ಬೆಳವಣಿಗೆ’ ಎಂದು ಕೃಷಿ ಇಲಾಖೆಯ ಮಾಹಿತಿ ಅಧಿಕಾರಿ ಅಜಯ್ ಗ್ಯಾವಾಲಿ ಅವರು ಹೇಳಿದರು.

ಅಡಿಕೆ ಧಾರಣೆ

ಪುತ್ತೂರು		ಸರಕು/ಹಸ	55509-96059	ಬೆಟ್ಟೆ	40200-50509
ಕೋಕ	20000-33500	ಬೆಟ್ಟೆ	53039-53599	ಬಿಳಿಗೋಟು	23199-36099
ಹೊಸತು	30000-47000	ರಾಶಿಇಡಿ	48069-54689	ಚಾಲಿ	43899-48569
ಹಳತು	49000-55000	ಗೊರಬಲು	21800-44069	ಕೆಂಪುಗೋಟು	21109-35599
ಸಾಗರ		**ಸಿದ್ದಾಪುರ**		ರಾಶಿ	49699-53309
ಬಿಳಿಗೋಟು	15111-32399	ಬಿಳಿಗೋಟು	26600-36089	**ಯಲ್ಲಾಪುರ**	
ಚಾಲಿ	40300-41299	ಚಾಲಿ	39000-47919	ಆಪಿ	60399-60399
ಕೋಕ	16709-29399	ಕೋಕ	22899-32499	ಬಿಳಿಗೋಟು	16899-34899
ಕೆಂಪುಗೋಟು	36009-36009	ಕೆಂಪುಗೋಟು	31700-36300	ಚಾಲಿ	37569-48211
ರಾಶಿ	44089-51929	ರಾಶಿ	48469-53009	ಕೋಕ	15109-32699
ಸಿಪ್ಪೆಗೋಟು	8599-21899	ತಟ್ಟಿಬೆಟ್ಟೆ	40300-50299	ರಾಶಿ	48869-55199
ಶಿವಮೊಗ್ಗ		**ಶಿರಸಿ**		ತಟ್ಟಿಬೆಟ್ಟೆ	37200-46899

ಮುಂಬೈ ಖಾದ್ಯ ತೈಲ
(ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1600 (1600)
ಸೋಯಾ (ರಿಫೈನ್ಡ್)	₹1485 (1495)
ಸೂರ್ಯಕಾಂತಿ (ರಿಫೈನ್ಡ್)	₹1640 (1650)
ಪಾಮೋಲಿನ್	₹1465 (1470)

ಈರುಳ್ಳಿ ಧಾರಣೆ
(ಪ್ರತಿ ಕ್ವಿಂಟಾಲ್) ಬೆಂಗಳೂರು

ದೊಡ್ಡ	₹1600-2200
ಮಧ್ಯಮ	₹1000-1400
ಸಣ್ಣ	₹400-1000

ಅಂತಿಮ ಹಂತಕ್ಕೆ ಶಾಂತಿ ಒಪ್ಪಂದ: ಟ್ರಂಪ್

ವಾಷಿಂಗ್ಟನ್, ಅಮೆರಿಕ (ಎಎಫ್‌ಪಿ): ‘ಪಶ್ಚಿಮ ಏಷ್ಯಾದಲ್ಲಿನ ಯುದ್ಧ ಕೊನೆಗೊಳಿಸುವ ನಿಟ್ಟಿನಲ್ಲಿ, ಇರಾನ್ ಜೊತೆಗಿನ ಶಾಂತಿ ಮಾತುಕತೆಯು ಅಂತಿಮ ಹಂತದಲ್ಲಿದೆ’ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಿಳಿಸಿದ್ದಾರೆ.

ದಕ್ಷಿಣ ಲೆಬನಾನ್‌ನ ಹಿಜ್ಬುಲ್ಲಾ ಬಂಡುಕೋರರನ್ನು ಗುರಿಯಾಗಿರಿಸಿ ಇಸ್ರೇಲ್ ಸೇನಾ ದಾಳಿ ನಡೆಸಿದ ಬೆನ್ನಲ್ಲೇ, ಇರಾನ್ ಕೂಡ ಇಸ್ರೇಲ್ ಮೇಲೆ ಕ್ಷಿಪಣಿ ದಾಳಿ ನಡೆಸಿತ್ತು. ಇದಾದ ಬಳಿಕ, ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಜೊತೆ ಮಾತನಾಡಿದ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ದಾಳಿ ನಿಲ್ಲಿಸುವಂತೆ ಸೂಚನೆ ನೀಡಿದ್ದರು.

‘ಇಸ್ರೇಲ್ ಹಾಗೂ ಇರಾನ್ ದೇಶವು ದಾಳಿ ಸ್ಥಗಿತಗೊಳಿಸಲು ಪರಸ್ಪರ ಒಪ್ಪಿಗೆ ಸೂಚಿಸಿವೆ. ಅತ್ಯುತ್ತಮ ಒಪ್ಪಂದವು ಅತ್ಯಂತ ಸನಿಹದಲ್ಲಿದೆ’ ಎಂದು ಟ್ರಂಪ್ ತಿಳಿಸಿದ್ದಾರೆ.

ಒಪ್ಪಂದ ಯಾವಾಗ ಏರ್ಪಡಲಿದೆ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ‘ಮುಂದಿನ ಎರಡರಿಂದ ಮೂರು ದಿನಗಳಲ್ಲಿ ಒಪ್ಪಂದ ಏರ್ಪಡಲಿದೆ’ ಎಂದು ವಿವರಿಸಿದ್ದಾರೆ.

ಅಫ್ಗನ್ ಮೇಲೆ ಪಾಕ್ ದಾಳಿಗೆ ಭಾರತ ಖಂಡನೆ

ವಿಶ್ವಸಂಸ್ಥೆ (ಪಿಟಿಐ): ಅಫ್ಗಾನಿಸ್ತಾನದ ಮೇಲೆ ಪಾಕಿಸ್ತಾನ ಸೇನೆಯು ನಡೆಸುತ್ತಿರುವ ವಾಯುದಾಳಿಯನ್ನು ವಿಶ್ವಸಂಸ್ಥೆ ಭದ್ರತಾ ಮಂಡಳಿ ಸಭೆಯಲ್ಲಿ ಭಾರತ ಸೋಮವಾರ ಕಟುವಾಗಿ ಟೀಕಿಸಿದೆ.

‘ಅಫ್ಗಾನಿಸ್ತಾನದಲ್ಲಿ ನಡೆಸಿರುವ ನರಮೇಧವನ್ನು ಸೇನಾ ಕಾರ್ಯಾಚರಣೆ ಎಂದು ಬಿಂಬಿಸುವುದರಿಂದ ಪಾಕಿಸ್ತಾನವು ಅಪರಾಧವನ್ನು ತಪ್ಪಿಸಿಕೊಳ್ಳಲಾಗದು’ ಎಂದು ಹೇಳಿದೆ.

ಬಡ್ಡಿ ದರ ಹೆಚ್ಚಿಸಿದ ಎಚ್‌ಡಿಎಫ್‌ಸಿ

ನವದೆಹಲಿ (ಪಿಟಿಐ): ಎಂಸಿಎಲ್‌ಆರ್ ಆಧಾರಿತ ಸಾಲಗಳ ಮೇಲಿನ ಬಡ್ಡಿ ದರವನ್ನು ಎಚ್‌ಡಿಎಫ್‌ಸಿ ಬ್ಯಾಂಕ್ ಶೇ 0.10 ರವರೆಗೆ ಹೆಚ್ಚು ಮಾಡಿದೆ. ಇದು ಸೋಮವಾರದಿಂದ ಜಾರಿಗೆ ಬಂದಿದೆ.

ವಿವಿಧ ಬಗೆಯ ಸಾಲಗಳ ಮೇಲಿನ ಪರಿಷ್ಕೃತ ಬಡ್ಡಿ ದರವನ್ನು ಬ್ಯಾಂಕ್ ತನ್ನ ವೆಬ್‌ಸೈಟ್‌ನಲ್ಲಿ ಪ್ರಕಟಿಸಿದೆ. ಆರ್‌ಬಿಐನ ಹಣಕಾಸು ನೀತಿ ಸಮಿತಿಯು ರೆಪೊ ದರವನ್ನು ಯಥಾಸ್ಥಿತಿಯಲ್ಲಿ ಉಳಿಸಿಕೊಳ್ಳುವ ತೀರ್ಮಾನ ಪ್ರಕಟಿಸಿದ ದಿನಗಳ ನಂತರ ಎಚ್‌ಡಿಎಫ್‌ಸಿ ಬ್ಯಾಂಕ್ ಈ ನಿರ್ಧಾರ ಕೈಗೊಂಡಿದೆ.

ಪಿಒಕೆಯಲ್ಲಿ ನಾಗರಿಕರ ಹತ್ಯೆ: ತೀವ್ರ ಆಕ್ರೋಶ

ಇಸ್ಲಾಮಾಬಾದ್, ಲಂಡನ್ (ಪಿಟಿಐ): ಪಾಕಿಸ್ತಾನ ಆಕ್ರಮಿತ ಕಾಶ್ಮೀರದಲ್ಲಿ ಅಂತ್ಯಕ್ರಿಯೆ ನಡೆಸುತ್ತಿದ್ದವರ ಮೇಲೆ ಭದ್ರತಾ ಪಡೆಗಳು ನಡೆಸಿದ ಗುಂಡಿನ ದಾಳಿಯಲ್ಲಿ 20ಕ್ಕೂ ಹೆಚ್ಚು ಮಂದಿ ಸಾವಿಗೀಡಾಗಿದ್ದಾರೆ.

ನಾಗರಿಕರ ಹತ್ಯೆ ಖಂಡಿಸಿ ಜಂಟಿ ಅವಾಮಿ ಕ್ರಿಯಾ ಸಮಿತಿ (ಜೆಎಎಸಿ) ಮಂಗಳವಾರ ಪ್ರತಿಭಟನೆಗೆ ಕರೆ ನೀಡಿತ್ತು. ಹಲವೆಡೆ ಅಂಗಡಿಗಳನ್ನು ಬಂದ್ ಮಾಡಿ ಪ್ರತಿಭಟನೆ ವ್ಯಕ್ತಪಡಿಸಲಾಯಿತು.

ಪಿಒಕೆಯ ಭಿಂಬರ್‌ನಲ್ಲಿ ನಡೆದ ಪ್ರತಿಭಟನಾ ಮೆರವಣಿಗೆಯಲ್ಲಿ ಸಾವಿರಾರು ಮಂದಿ ಪಾಲ್ಗೊಂಡಿದ್ದರು.

ಬ್ರಿಟನ್‌ನಲ್ಲಿ ಪ್ರತಿಭಟನೆ: ನಾಗರಿಕರ ಹತ್ಯೆ ಖಂಡಿಸಿ ಕಾಶ್ಮೀರ ಪ್ರಜೆಗಳು ಬ್ರಿಟನ್‌ನಲ್ಲಿರುವ ಪಾಕಿಸ್ತಾನ ಕಾನ್ಸುಲೇಟ್ ಕಚೇರಿಯ ಮುಂದೆ ಮಂಗಳವಾರ ಪ್ರತಿಭಟನೆ ನಡೆಸಿದರು.



ಹಿಂಸಾಚಾರ ನಡೆದ ಸ್ಥಳದಲ್ಲಿ ಪೊಲೀಸರು ಗಸ್ತು ನಡೆಸಿದರು – ಪಿಟಿಐ ಚಿತ್ರ

ಕಾನ್ಸುಲೇಟ್ ಕಚೇರಿ ಮುಂದೆ ಜಮಾಯಿಸಿದ್ದ ಪ್ರತಿಭಟನಕಾರರು, ‘ಪಿಒಕೆಯಾದ್ಯಂತ ಪ್ರತಿಭಟನೆಯಲ್ಲಿ ಭಾಗಿಯಾಗಿದ್ದವರ ಮೇಲೆ ಪಾಕಿಸ್ತಾನಿ ಭದ್ರತಾ ಪಡೆಗಳು ಅತಿಯಾದ ಬಲಪ್ರಯೋಗ ಮಾಡುತ್ತಿದ್ದಾರೆ’ ಎಂದು ಆರೋಪಿಸಿದರು.

‘ಭದ್ರತಾ ಪಡೆಗಳ ಗುಂಡಿನ ದಾಳಿಯಿಂದ ಹಲವು ನಾಗರಿಕರು ಮೃತಪಟ್ಟಿದ್ದಾರೆ ಮತ್ತು ಗಾಯಗೊಂಡಿದ್ದಾರೆ’ ಎಂದು ಆರೋಪಿಸಿದರು.

ಜಂಟಿ ಅವಾಮಿ ಕ್ರಿಯಾ ಸಮಿತಿ (ಜೆಎಎಸಿ) ನಡೆಸುತ್ತಿರುವ ಪ್ರತಿಭಟನೆಯನ್ನು ಹತ್ತಿಕ್ಕುವ ಸಲುವಾಗಿ ಸ್ಥಳೀಯ ಸರ್ಕಾರವು ನಡೆಸಿರುವ ಹಿಂಸಾಚಾರಗಳ ಬಗ್ಗೆ ವರದಿ ನೀಡಿರುವ ಪಾಕ್‌ನ ಮಾನವ ಹಕ್ಕುಗಳ ಆಯೋಗವು ಈ ಕುರಿತು ಕಳವಳ ವ್ಯಕ್ತಪಡಿಸಿದೆ.

ಈ ವಿಚಾರದಲ್ಲಿ ರಾಜತಾಂತ್ರಿಕ ಹಸ್ತಕ್ಷೇಪ ಮಾಡುವಂತೆ ಬ್ರಿಟನ್‌ನ 30 ಸಂಸದರು ಸರ್ಕಾರವನ್ನು ಒತ್ತಾಯಿಸಿದ್ದರು.

‘ಪಾಕ್ ಹೊಣೆ ಮಾಡಿ’

ಪಾಕಿಸ್ತಾನ ಆಕ್ರಮಿತ ಕಾಶ್ಮೀರದ ಜನರ ಮೇಲೆ ನಡೆಯುತ್ತಿರುವ ಹಿಂಸಾಚಾರವನ್ನು ಖಂಡಿಸಿರುವ ಭಾರತ, ಈ ಕೃತ್ಯಗಳಿಗೆ ಪಾಕಿಸ್ತಾನವನ್ನು ಹೊಣೆಗಾರರನ್ನಾಗಿಸಬೇಕಾಗಿ ಅಂತರರಾಷ್ಟ್ರೀಯ ಸಮುದಾಯಕ್ಕೆ ಮಂಗಳವಾರ ಕರೆ ನೀಡಿದೆ.

ಪಾಕಿಸ್ತಾನವನ್ನು ಟೀಕಿಸಿದ ಭಾರತದ ವಿದೇಶಾಂಗ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಅವರು, ‘ಪಾಕಿಸ್ತಾನದಿಂದ ನಕಲಿ ಸುದ್ದಿ ಮತ್ತು ವಿಡಿಯೊಗಳು ಬಿತ್ತರವಾಗುತ್ತಿರುವುದನ್ನು ನೋಡುತ್ತಿದ್ದೇವೆ. ಪಾಕಿಸ್ತಾನವು ತಮ್ಮ ವೈಫಲ್ಯವನ್ನು ಮರೆಮಾಚಲು ಮತ್ತು ಮಾನವ ಹಕ್ಕುಗಳ ಉಲ್ಲಂಘನೆ ವಿಚಾರದಿಂದ ಗಮನವನ್ನು ಬೇರೆಡೆ ಸೆಳೆಯಲು ಹತಾಶ ಪ್ರಯತ್ನಗಳನ್ನು ಮಾಡುತ್ತಿದೆ’ ಎಂದು ಹೇಳಿದರು.

ಶ್ರೀನಗರ -ಲಡಾಖ್ ಸಂಪರ್ಕಿಸುವ ವಿಶ್ವದ ಅತಿ ಉದ್ದದ ಏಕ ಕೊಳವೆ ದ್ವಿಮುಖ ರಸ್ತೆ ಸುರಂಗ ಮಾರ್ಗ

ಝೋಜಿಲಾ: ಕೊನೆಯ ಹಂತದ ಸ್ಫೋಟ ಯಶಸ್ವಿ

ಶ್ರೀನಗರ (ಎಎಫ್‌ಪಿ): ಹಿಮಾಲಯ ಪರ್ವತ ಶ್ರೇಣಿಯಲ್ಲಿ ಕೊರೆಯಲಾದ ಝೋಜಿಲಾ ಸುರಂಗದ ಅಂತಿಮ ಬಂಡೆಯನ್ನು ಸ್ಫೋಟಿಸುವ ಮೂಲಕ ಶ್ರೀನಗರ ಮತ್ತು ಲಡಾಖ್ ನಡುವಿನ ಸಂಪರ್ಕ ವ್ಯವಸ್ಥೆಯ ಹೊಸ ಅಧ್ಯಾಯಕ್ಕೆ ಮುನ್ನುಡಿ ಬರೆದಿದೆ.

ಸುರಂಗದ ಅಂತಿಮ ಸ್ಫೋಟಕ್ಕೆ ಕೇಂದ್ರ ಭೂಸಾರಿಗೆ ಹಾಗೂ ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರು ಮಂಗಳವಾರ ಇಲ್ಲಿ ನಡೆದ ಕಾರ್ಯಕ್ರಮದಲ್ಲಿ ಗುಂಡಿ ಒತ್ತಿ ಚಾಲನೆ ನೀಡಿದರು. ಆ ಮೂಲಕ ಅತ್ಯಂತ ಸವಾಲಿನ ಹಂತ ಯಶಸ್ವಿಯಾಗಿ ಪೂರ್ಣಗೊಂಡಿದೆ.

ಐತಿಹಾಸಿಕ ಕ್ಷಣಕ್ಕೆ ಜಮ್ಮು ಮತ್ತು ಕಾಶ್ಮೀರದ ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ, ಮುಖ್ಯಮಂತ್ರಿ ಒಮರ್ ಅಬ್ದುಲ್ಲ ಸೇರಿದಂತೆ ನೂರಾರು ಕಾರ್ಮಿಕರು ಸಾಕ್ಷಿಯಾದರು.

13.153 ಕಿಲೋಮೀಟರ್ ಉದ್ದದ ಈ ಸುರಂಗವು ಜಮ್ಮು ಮತ್ತು ಕಾಶ್ಮೀರದ ಸೋನ್‌ಮಾರ್ಗ್‌ನ ಬಾಲ್ತಾಲ್‌ನಿಂದ ಲಡಾಖ್‌ನ ದ್ರಾಸ್‌ನಲ್ಲಿರುವ ಮೀನಮಾರ್ಗ್‌ಗೆ ಸಂಪರ್ಕ ಕಲ್ಪಿಸುತ್ತದೆ. ಸಮುದ್ರ ಮಟ್ಟದಿಂದ 11,575 ಅಡಿ ಎತ್ತರದಲ್ಲಿ ಹಾದುಹೋಗುವ ಈ ಕಾಮಗಾರಿ 2020ರಲ್ಲಿ ಆರಂಭಗೊಂಡಿತು. ಎರಡೂ ಕಡೆಗಳಿಂದ ಏಕಕಾಲದಲ್ಲಿ ಸುರಂಗ ಕೊರೆಯುವ ಕೆಲಸ ನಡೆಯುತ್ತಿತ್ತು. 3 ಸಾವಿರ ಕಾರ್ಮಿಕರು ಸತತ ಆರು ವರ್ಷಗಳ ಕೆಲಸ ಮಾಡಿ ಮುಗಿಸಿದ್ದಾರೆ.



ಝೋಜಿಲಾ ಸುರಂಗ ಮಾರ್ಗದ ಮುಂದೆ ನಿಂತಿದ್ದ ಭೂಸಾರಿಗೆ ಹಾಗೂ ಹೆದ್ದಾರಿ ಸಚಿವ ನಿತಿನ್ ಗಡ್ಕರಿ, ಜಮ್ಮು ಮತ್ತು ಕಾಶ್ಮೀರದ ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ, ಮುಖ್ಯಮಂತ್ರಿ ಒಮರ್ ಅಬ್ದುಲ್ಲ —ಪಿಟಿಐ ಚಿತ್ರ

ಮೇಘಾ ಎಂಜಿನಿಯರಿಂಗ್ ಆ್ಯಂಡ್ ಇನ್‌ಫ್ರಾಸ್ಟ್ರಕ್ಚರ್ ಲಿಮಿಟೆಡ್ (ಎಂಇಐಎಲ್) ಸಂಸ್ಥೆಯು ಕಾಮಗಾರಿಯ ಗುತ್ತಿಗೆ ವಹಿಸಿಕೊಂಡಿದೆ. ವಿಶ್ವದ ಅತಿ ಎತ್ತರದಲ್ಲಿ ನಿರ್ಮಾಣವಾಗುತ್ತಿರುವ ಅತಿ ಉದ್ದದ ಏಕ-ಕೊಳವೆ ಹಾಗೂ ದ್ವಿಮುಖ ರಸ್ತೆಯಾಗಿದೆ. ಕಾಮಗಾರಿ ವೇಳೆ ನ್ಯೂ ಆಸ್ಟ್ರಿಯನ್ ಟನಲಿಂಗ್ ವಿಧಾನ (ಎನ್‌ಎಟಿಎಂ) ಅಳವಡಿಸಲಾಗಿದ್ದು, ಬದಲಾಗುವ ಶಿಲಾಸ್ತರಗಳು ಮತ್ತು ಭೌಗೋಳಿಕ ಅನಿಶ್ಚಿತತೆಗಳಿಗೆ ಇದು ಹೊಂದಿಕೊಳ್ಳಲಿದೆ.

ಮುಖ್ಯ ಸುರಂಗದ ಜೊತೆಗೆ ಸಂಪರ್ಕ ರಸ್ತೆಗಳು, ಸೇತುವೆಗಳು, ಹಿಮರಕ್ಷಣೆ ವ್ಯವಸ್ಥೆಗಳು, ಕಟ್-ಅಂಡ್-ಕವರ್ ವಿಭಾಗಗಳು ಹಾಗೂ ಇತರೆ ಸುರಂಗ ಮೂಲಸೌಕರ್ಯಗಳ ನಿರ್ಮಾಣವೂ ಯೋಜನೆಯ ಭಾಗವಾಗಿದೆ. ಸುರಂಗದ ಒಳಭಾಗದ ಲೈನಿಂಗ್, ವಿದ್ಯುತ್-ಯಾಂತ್ರಿಕ ವ್ಯವಸ್ಥೆಗಳು, ಇತರೆ ಅಂತಿಮ ಕಾಮಗಾರಿಗಳು ಮುಂದಿನ ಹಂತದಲ್ಲಿ ನಡೆಯಲಿವೆ.

ಚೆನಾನಿ–ನಾಸಾರಿ ನಡುವೆ ಹೊಸ ಸುರಂಗಕ್ಕೆ ಅಸ್ತು

ಜಮ್ಮು (ಪಿಟಿಐ): ‘ಉಧಂಪುರವನ್ನು ರಂಬನ್ ಜಿಲ್ಲೆಯೊಂದಿಗೆ ಸಂಪರ್ಕಿಸುವ ಚೆನಾನಿ–ನಾಸಾರಿ ಮಾರ್ಗದಲ್ಲಿ ಅಸ್ತಿತ್ವದಲ್ಲಿರುವ ಸುರಂಗ ಮಾರ್ಗಕ್ಕೆ ಸಮನಾಂತರವಾಗಿ ಎರಡು ಹೊಸ ಕೊಳವೆ ಸುರಂಗ ಮಾರ್ಗ ನಿರ್ಮಾಣಕ್ಕೆ ಕೇಂದ್ರ ಸರ್ಕಾರ ಅನುಮೋದನೆ ನೀಡಿದೆ ಎಂದು ಕೇಂದ್ರ ಸಚಿವ ಜಿತೇಂದ್ರ ಸಿಂಗ್ ತಿಳಿಸಿದ್ದಾರೆ.

‘ಈ ಬೆಳವಣಿಗೆಯು ಉಧಂಪುರದ ಪಾಲಿಗೆ ಮತ್ತೊಂದು ಶುಭ ಸುದ್ದಿಯಾಗಿದೆ’ ಎಂದು ಸಿಂಗ್ ಬಣ್ಣಿಸಿದ್ದಾರೆ. ‘ಪ್ರಸ್ತಾವಕ್ಕೆ ಒಪ್ಪಿಗೆ ಸೂಚಿಸಿದ ಸಚಿವ ನಿತಿನ್ ಗಡ್ಕರಿ ಅವರಿಗೆ ಧನ್ಯವಾದ ಸಲ್ಲಿಸಿದ್ದು, ಜಮ್ಮು ಮತ್ತು ಶ್ರೀನಗರ ನಡುವಿನ ಹೆದ್ದಾರಿಯ ಒತ್ತಡವನ್ನು ಪ್ರಸ್ತಾವಿತ ಮಾರ್ಗವು ಮತ್ತಷ್ಟು ಕಡಿಮೆ ಮಾಡಲಿದೆ’ ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ.



ಅತ್ಯುತ್ತಮ ಪೋಷಕ ನಟಿ ಸ್ಪರ್ಧೆಯಲ್ಲಿ...

4ನೇ ಆವೃತ್ತಿ ಜೂನ್ 19ಕ್ಕೆ

'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ'ದ ನಾಲ್ಕನೇ ಆವೃತ್ತಿ ಜೂನ್ 19ರಂದು ನಡೆಯಲಿದೆ. ಈಗಾಗಲೇ 19 ವಿಭಾಗಗಳಲ್ಲಿ ಪ್ರಶಸ್ತಿಗೆ ನಾಮನಿರ್ದೇಶನಗೊಂಡವರ ಹೆಸರುಗಳನ್ನು, ನಾಮನಿರ್ದೇಶನಗೊಂಡ ಸಿನಿಮಾಗಳ ಪಟ್ಟಿಯನ್ನು ಪ್ರಕಟಿಸಲಾಗಿದೆ. ನಾಮನಿರ್ದೇಶಿತರಾದವರಲ್ಲಿ ಒಬ್ಬರನ್ನು ಚಿತ್ರರಂಗದ ವಿವಿಧ ಸಂಘ–ಸಂಸ್ಥೆಗಳ ಒಂದು ಸಾವಿರಕ್ಕೂ ಅಧಿಕ ಸದಸ್ಯರು ವೋಟ್ ಮಾಡುವ ಮುಖಾಂತರ ಆಯ್ಕೆ ಮಾಡಲಿದ್ದಾರೆ. ಜನಮೆಚ್ಚಿದ ನಟ, ನಟಿ, ಸಿನಿಮಾ ಹಾಗೂ ಹಾಡು ವಿಭಾಗದಲ್ಲಿ ಜನರು ಹಾಕುವ ವೋಟ್ ವಿಜೇತರನ್ನು ತೀರ್ಮಾನಿಸಲಿದೆ. ಇದೀಗ 'ಅತ್ಯುತ್ತಮ ಪೋಷಕ ನಟ' ವಿಭಾಗದಲ್ಲಿ ನಾಮನಿರ್ದೇಶನಗೊಂಡವರನ್ನು ಪರಿಚಯಿಸುವ ಸಮಯ.



ಶ್ರುತಿ

'ಎಕ್ಕ' ಹಾಗೂ 'ಮಾದೇವ' ಸಿನಿಮಾದಲ್ಲಿನ ನಟನೆಗಾಗಿ ಇವರು ನಾಮನಿರ್ದೇಶನಗೊಂಡಿದ್ದಾರೆ. 'ಎಕ್ಕ' ಸಿನಿಮಾದಲ್ಲಿ ಮಗನನ್ನು ಜೋಪಾನ ಮಾಡುವ ತಾಯಿ 'ರತ್ನ'ಳಾಗಿ ಹಾಗೂ 'ಮಾದೇವ' ಸಿನಿಮಾದಲ್ಲಿ ಖಳನಾಯಕಿಯಾಗಿ ಶ್ರುತಿ ನಟಿಸಿದ್ದರು. ತಮ್ಮೊಳಗಿನ ನಟನೆಯ ಸಾಮರ್ಥ್ಯವನ್ನು ಎರಡೂ ಸಿನಿಮಾಗಳ ಪಾತ್ರದಲ್ಲಿ ತೋರಿದ್ದರು. ಮೂರು ದಶಕಗಳಿಂದ ಸಿನಿಮಾ ರಂಗದಲ್ಲಿರುವ ಅವರು 'ಕರ್ಪೂರದ ಗೊಂಬೆ'ಯಾಗಿ ಖ್ಯಾತಿ ಪಡೆದವರು. 'ಆಸೆಗೊಬ್ಬ ಮೀಸೆಗೊಬ್ಬ' ಸಿನಿಮಾ ಮೂಲಕ ಇವರ ಸಿನಿಪಯಣ ಆರಂಭವಾಯಿತು. 'ಶ್ರುತಿ', 'ಗೌರಿ ಗಣೇಶ', 'ಸಿಂಧೂರ ತಿಲಕ', 'ಗಟ್ಟಿಮೇಳ', 'ಅಕ್ಕ ತಂಗಿ', 'ಪುಟ್ಟಕ್ಕನ ಹೈವೇ', 'ರಾಮ ಶಾಮ ಭಾಮ', 'ವೇದ' ಸೇರಿದಂತೆ ತಮಿಳು, ಮಲಯಾಳ, ತೆಲುಗಿ ಸೇರಿ 150ಕ್ಕೂ ಅಧಿಕ ಚಿತ್ರಗಳಲ್ಲಿ ನಟಿಸಿದ್ದಾರೆ. ಮೂರು ರಾಜ್ಯ ಚಲನಚಿತ್ರ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿರುವವರು. ರಿಯಾಲಿಟಿ ಶೋಗಳ ತೀರ್ಪುಗಾರರಾಗಿ, ರಾಜಕೀಯದಲ್ಲೂ ಸಕ್ರಿಯರಾಗಿರುವ ಇವರು ಇತ್ತೀಚೆಗೆ ಧಾರಾವಾಹಿಯಲ್ಲೂ ನಟಿಸಿ ಸೈ ಎನಿಸಿಕೊಂಡಿದ್ದಾರೆ.



ವಿದ್ಯಾ ಮೂರ್ತಿ

'ಭಾವ ತೀರ ಯಾನ' ಸಿನಿಮಾದಲ್ಲಿನ ನಟನೆಗಾಗಿ ಇವರು ನಾಮನಿರ್ದೇಶನಗೊಂಡಿದ್ದಾರೆ. ಮಡಿಕೇರಿಯವರಾದ ಇವರು ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ಕನ್ನಡದ ಹವ್ಯಾಸಿ ರಂಗಭೂಮಿ, ಕಿರುತೆರೆ, ಮತ್ತು ಬೆಳ್ಳಿತೆರೆಯ ಕಲಾವಿದೆ. ಕಳೆದ 31 ವರ್ಷಗಳಿಂದ ಬಣ್ಣದ ಲೋಕದಲ್ಲಿರುವ ಇವರು ಇನ್ನೂರಕ್ಕೂ ಹೆಚ್ಚು ರಂಗ ಪ್ರದರ್ಶನಗಳು, ಬೀದಿ ನಾಟಕಗಳು, ರೇಡಿಯೊ ನಾಟಕಗಳು, ಸುಮಾರು ಇನ್ನೂರೈವತ್ತು ಧಾರಾವಾಹಿಗಳು, ಇಪ್ಪತ್ತೈದು ಸಿನಿಮಾಗಳಲ್ಲಿ ನಟಿಸಿದ್ದಾರೆ. 'ಮುಕ್ತ', 'ಶಕ್ತಿ', 'ಮುಕ್ತ ಮುಕ್ತ', 'ಗೃಹ ಭಂಗ', 'ದಂಡ ಪಿಂಡಗಳು', 'ಮಗಳು ಜಾನಕಿ', 'ಹಿಟ್ಲರ್ ಕಲ್ಯಾಣ' ಇವು ಇವರ ಪ್ರಮುಖ ಧಾರಾವಾಹಿಗಳು. 'ಸ್ಪರ್ಶ', 'ಚಾರ್ ಮಿನಾರ್', 'ಕಿಚ್ಚ', 'ಪೃಥ್ವಿ', 'ವಂಶಿ', 'ಶಿವಾಜಿ ಸುರತ್ಕಲ್ 1 ಮತ್ತು 2', 'ಮಾಲ್ಗುಡಿ ಡೇಸ್', 'ಮತದಾನ', 'ಮನದ ಕಡಲು', 'ರೂಬಿ ಕ್ಯೂಬ್' ಮುಂತಾದವು ಇವರ ಪ್ರಮುಖ ಸಿನಿಮಾಗಳು. 'ಭಾವ ತೀರ ಯಾನ'ದಲ್ಲಿ ತಮ್ಮ ಅಭಿನಯದಿಂದ ಗಮನಸೆಳೆದಿದ್ದರು. 'ಕರಾವಳಿ', 'ದೊಡ್ಡವರೆಲ್ಲ ಜಾಣರಲ್ಲ' ಸೇರಿದಂತೆ ಮೂರು ಸಿನಿಮಾಗಳು ಇವರ ಕೈಯಲ್ಲಿವೆ.




ಹರಿಣಿ ಶ್ರೀಕಾಂತ್

'ಎಕ್ಕ' ಸಿನಿಮಾದಲ್ಲಿನ ನಟನೆಗಾಗಿ ಇವರು ನಾಮನಿರ್ದೇಶನಗೊಂಡಿದ್ದಾರೆ. ಬೆಂಗಳೂರಿನವರಾದ ಇವರು ಭರತನಾಟ್ಯ ಕಲಾವಿದೆ. ಸಂಗೀತದ ಕುಟುಂಬದಿಂದ ಬಂದ ಇವರು ಟಿ.ಎನ್.ಸೀತಾರಾಮ್ ಅವರು ನಿರ್ದೇಶಿಸಿದ 'ಮೀರ ಮಾಧವ ರಾಘವ' ಸಿನಿಮಾ ಮೂಲಕ ಚಿತ್ರರಂಗಕ್ಕೆ ಕಾಲಿಟ್ಟರು. 'ಬೆಂಕಿ' ಸಿನಿಮಾ ಬಳಿಕ ಸತತವಾಗಿ ಸಿನಿಮಾಗಳಲ್ಲಿ ತೊಡಗಿಸಿಕೊಂಡರು. 'ದೂರದರ್ಶನ', 'ಕೆರೆಬೇಟೆ', 'ಶಾಖಾಹಾರಿ', 'ಎಕ್ಕ', 'ರಕ್ತ ಕಾಶ್ಮೀರ', 'ವಿಕಲ್ಪ', 'ಮ್ಯಾಂಗೋ ಪಚ್ಚ' ಸಿನಿಮಾದಲ್ಲಿ ನಟಿಸಿದ್ದಾರೆ. ರೋಹಿತ್ ಪದಕಿ ನಿರ್ದೇಶಕದ 'ಎಕ್ಕ' ಸಿನಿಮಾದಲ್ಲಿ ತಾಯಿಯಾಗಿ ಇವರು ನಿಭಾಯಿಸಿದ ಪಾತ್ರ ಮೆಚ್ಚುಗೆಗೆ ಪಾತ್ರವಾಗಿತ್ತು. 'ರಕ್ಕಿ' ಎನ್ನುವ ಸಿನಿಮಾವನ್ನು ಇವರು ಒಪ್ಪಿಕೊಂಡಿದ್ದು, ಇನ್ನೊಂದು ಸಿನಿಮಾದ ಶೂಟಿಂಗ್‌ನಲ್ಲಿ ತೊಡಗಿಸಿಕೊಂಡಿದ್ದಾರೆ.



ರೂಪ ವರ್ಕಾಡಿ

'ಮಿಥ್ಯ' ಸಿನಿಮಾದಲ್ಲಿನ ನಟನೆಗಾಗಿ ಇವರು ನಾಮನಿರ್ದೇಶನಗೊಂಡಿದ್ದಾರೆ. ಮಂಜೇಶ್ವರ ತಾಲ್ಲೂಕಿನ ಇವರು ವಿಜಯ್ ಕುಮಾರ್ ಕೊಡಿಯಾಲ್‌ಬೈಲ್ ಅವರ 'ಸಂಸಾರದ ಸರ್ಕಸ್' ಎಂಬ ನಾಟಕದ ಮೂಲಕ ವೃತ್ತಿಪರ ನಾಟಕ ರಂಗಕ್ಕೆ ಪಾದಾರ್ಪಣೆ ಮಾಡಿದರು. ಸುಮಾರು 27 ವರ್ಷಗಳಿಂದ ತುಳು, ಕನ್ನಡ ಭಾಷೆಗಳ 700ಕ್ಕೂ ಅಧಿಕ ನಾಟಕಗಳಲ್ಲಿ ನಟಿಸಿದ್ದಾರೆ. 'ಬಿರ್ಸೆ' ಎಂಬ ತುಳು ಸಿನಿಮಾದ ಮೂಲಕ ಚಿತ್ರರಂಗ ಪ್ರವೇಶಿಸಿದ ಇವರು ತುಳು, ಕನ್ನಡ, ಬ್ಯಾರಿ, ಅರೆ ಭಾಷೆಗಳಲ್ಲಿ 85ಕ್ಕೂ ಹೆಚ್ಚು ಸಿನಿಮಾಗಳಲ್ಲಿ ನಟಿಸಿದ್ದಾರೆ. ಇವರು ನಟಿಸಿದ 'ಬ್ಯಾರಿ', 'ಜೀಟಿಗೆ' ಚಿತ್ರಗಳಿಗೆ ರಾಷ್ಟ್ರಪ್ರಶಸ್ತಿ ಲಭಿಸಿದೆ. 'ಒಂದು ಮೊಟ್ಟೆಯ ಕತೆ', 'ಲುಂಗಿ', 'ಮಿಥ್ಯ', 'ಸಿಂಪಲ್ ಆಗಿ ಇನ್ನೊಂದು ಲವ್ ಸ್ಟೋರಿ', 'ಮಡಮಕ್ಕಿ', 'ಪುರುಷೋತ್ತಮನ ಪ್ರಸಂಗ' ಸಿನಿಮಾಗಳಲ್ಲಿ ಬಣ್ಣಹಚ್ಚಿದ್ದಾರೆ.



ಶ್ರುತಿ ಹರಿಹರನ್

'ದೂರ ತೀರ ಯಾನ' ಸಿನಿಮಾದಲ್ಲಿನ ನಟನೆಗಾಗಿ ಇವರು ನಾಮನಿರ್ದೇಶನಗೊಂಡಿದ್ದಾರೆ. ಬಹುಭಾಷಾ ನಟಿಯಾಗಿ ಗುರುತಿಸಿಕೊಂಡಿರುವ ಇವರು 'ನಾತಿಚರಾಮಿ' ಚಿತ್ರದಲ್ಲಿನ ನಟನೆಗಾಗಿ 66ನೇ ರಾಷ್ಟ್ರೀಯ ಪ್ರಶಸ್ತಿಯಲ್ಲಿ ತೀರ್ಪುಗಾರರ ಮೆಚ್ಚುಗೆ ಪಡೆದವರು. ರಂಗಭೂಮಿ ಹಿನ್ನೆಲೆಯಿಂದ ಬಂದು ನೃತ್ಯಗಾರ್ತಿಯಾಗಿ ಸಿನಿಮಾದಲ್ಲಿ ಕಾಣಿಸಿಕೊಳ್ಳುತ್ತಿದ್ದ ಇವರು 'ಸಿನಿಮಾ ಕಂಪನಿ' ಎಂಬ ಮಲಯಾಳ ಸಿನಿಮಾ ಮೂಲಕ ಚಿತ್ರರಂಗಕ್ಕೆ ಬಂದವರು. 'ಲೂಸಿಯಾ' ಮೂಲಕ ಕನ್ನಡ ಚಿತ್ರರಂಗದಲ್ಲಿ ಪಯಣ ಆರಂಭಿಸಿದ ಇವರು 'ದ್ಯಾವ್ರೆ', 'ರಾಟೆ', 'ಜೈ ಮಾರುತಿ 800', 'ಗೋಧಿ ಬಣ್ಣ ಸಾಧಾರಣ ಮೈಕಟ್ಟು', 'ಬ್ಯೂಟಿಫುಲ್ ಮನಸುಗಳು', 'ಹಂಬಲ್ ಪೊಲಿಟೀಷಿಯನ್ ನೋಗರಾಜ್', 'ಹೆಡ್‌ಬುಷ್' ಮುಂತಾದ ಸಿನಿಮಾಗಳಲ್ಲಿ ನಟಿಸಿದ್ದಾರೆ. ಇವರು ಮುಖ್ಯಭೂಮಿಕೆಯಲ್ಲಿರುವ 'ಸ್ಟ್ರಾಬೆರಿ', 'ಎನ್‌ಎಚ್ 66' ಸಿನಿಮಾಗಳು ಬಿಡುಗಡೆಗೆ ಸಜ್ಜಾಗುತ್ತಿವೆ.



ಉಮಾ ವೈ.ಜಿ.

'ಹೆಬ್ಬುಲಿ ಕಟ್' ಸಿನಿಮಾದಲ್ಲಿನ ನಟನೆಗಾಗಿ ಇವರು ನಾಮನಿರ್ದೇಶನಗೊಂಡಿದ್ದಾರೆ. ಬಂಗಾರಪೇಟೆ ಸಮೀಪದ ಬೋಡೇನಹಳ್ಳಿಯ ಇವರು ಜನಪದ ಹಾಡುಗಾರ್ತಿ. ರಂಗಭೂಮಿ ಕಲಾವಿದೆಯಾಗಿ 'ಆದಿಮ' ಮತ್ತು 'ನೀನಾಸಂ'ನಂತಹ ರಂಗ ಶಿಕ್ಷಣ ಕೇಂದ್ರದ ಮೂಲಕ ಕರ್ನಾಟಕದಾದ್ಯಂತ ನಾಟಕಗಳ ಪ್ರದರ್ಶನ ನೀಡಿದ್ದಾರೆ. 'ಕನ್ನಡ ಕೋಗಿಲೆ' ರಿಯಾಲಿಟಿ ಶೋನಲ್ಲಿ ಸ್ಪರ್ಧಿಸಿದ್ದಾರೆ. 'ಒಂದು ಶಹರದ ಸುತ್ತ' ಎಂಬ ನಾಟಕವನ್ನು ನಿರ್ದೇಶಿಸಿದ್ದಾರೆ. 'ಪಾಲಾರ್', 'ಗುರು ಶಿಷ್ಯರು', 'ಧೂಮಂ', 'ರಮೇಶ ಸುರೇಶ', '19.20.21', 'ವರ್ಣಪಟಲ', 'ಚೆಲುವನ ಪರಂಗಿ ಗಿಡಗಳು', 'ಹೆಬ್ಬುಲಿ ಕಟ್', ತೆಲುಗಿನ 'ಸಿನಿಮಾ ಬಂಡಿ', 'ಮಂತ್ ಆಫ್ ಮಧು', 'ಶುಭಂ'ನಲ್ಲಿ ನಟಿಸಿದ್ದಾರೆ. ಇವರ ಎರಡು ಕನ್ನಡ ಮತ್ತು ತೆಲುಗು ಸಿನಿಮಾಗಳು ಶೀಘ್ರದಲ್ಲೇ ತೆರೆಕಾಣಲಿವೆ.

12 ಅಣ್ವಸ್ತ್ರ ಸಿಡಿತಲೆ ನಿಯೋಜನೆ

ಭಾರತದ ಬತ್ತಳಿಕೆಯಲ್ಲಿ 190 ಆಯುಧಗಳು

• ಯುದ್ಧ ಸನ್ನದ್ಧತೆ– ನೀತಿಯಲ್ಲಿ ಬದಲಾವಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಣ್ವಸ್ತ್ರ ಸಿಡಿತಲೆಗಳ ನಿಯೋಜನೆಯೂ ಸೇರಿ ಯುದ್ಧ ಸನ್ನದ್ಧತೆಗೆ ಸಂಬಂಧಿಸಿದ ತನ್ನ ನೀತಿಯಲ್ಲಿ ಗಮನಾರ್ಹ ಬದಲಾವಣೆ ಮಾಡಿಕೊಂಡಿರುವ ಭಾರತ, ಈ ವಿನಾಶಕಾರಿ ಶಸ್ತ್ರಾಸ್ತ್ರಗಳಿಗಾಗಿ ಮಾಡುವ ವೆಚ್ಚವನ್ನು ಕೂಡ ಹೆಚ್ಚಿಸಿದೆ. 12 ಅಣ್ವಸ್ತ್ರ ಸಿಡಿತಲೆಗಳನ್ನು ನಿಯೋಜನೆ, ದಾಳಿ ಮಾಡುವುದಕ್ಕಾಗಿ ಹೊಸ ಬಗೆಯ ಆಯುಧಗಳ ಅಭಿವೃದ್ಧಿಗೂ ಭಾರತ ಒತ್ತು ನೀಡಿದೆ...'

'ಚೀನಾದ ಯಾವುದೇ ಸ್ಥಳವನ್ನು ನಿಖರವಾಗಿ ತಲುಪಿ, ನಾಶ ಮಾಡುವ ಸಾಮರ್ಥ್ಯವಿರುವ ಆಯುಧಗಳನ್ನು ಅಭಿವೃದ್ಧಿಪಡಿಸಲು ಭಾರತ ಒತ್ತು ನೀಡಿದೆ. ತನ್ನೊಂದಿಗೆ ನಿರಂತರ ಹಗೆತನ ಸಾಧಿಸುತ್ತಿರುವ ಪಾಕಿಸ್ತಾನದಿಂದ ಎದುರಾಗಬಹುದಾದ ಬೆದರಿಕೆಗೆ ತಕ್ಕ ಉತ್ತರ ನೀಡುವುದಕ್ಕೂ ಗಮನ ಕೇಂದ್ರೀಕರಿಸಿರುವ ಭಾರತ, ಸಶಸ್ತ್ರ ಪಡೆಗಳ ಆಧುನೀಕರಣಕ್ಕೆ ಗಮನಹರಿಸಿದೆ. ಇದೇ ಜನವರಿಗೆ ಅಂತ್ಯವಾದ ಅವಧಿಯಂತೆ, ಭಾರತದ ಬತ್ತಳಿಕೆಯಲ್ಲಿ 190 ಅಣ್ವಸ್ತ್ರ ಸಿಡಿತಲೆಗಳಿವೆ. ನೆರೆಯ ಪಾಕಿಸ್ತಾನವು 170 ಸಿಡಿತಲೆಗಳನ್ನು ಹೊಂದಿದೆ...'

'ಸ್ಟಾಕ್‌ಹೋಮ್ ಇಂಟರ್‌ನ್ಯಾಷನಲ್ ಪೀಸ್ ರಿಸರ್ಚ್ ಇನ್‌ಸ್ಟಿಟ್ಯೂಟ್' (ಎಸ್‌ಐಪಿಆರ್‌ಐ) ಸೋಮವಾರ ಬಿಡುಗಡೆ ಮಾಡಿರುವ ವಾರ್ಷಿಕ ವರದಿಯಲ್ಲಿ ಈ ಮಾಹಿತಿ ಇದೆ.

ಭಾರತ ಸೇರಿದಂತೆ ವಿಶ್ವದ ಹಲವು ರಾಷ್ಟ್ರಗಳು ಅಣ್ವಸ್ತ್ರಗಳಿಗೆ ಸಂಬಂಧಿಸಿ ಮಾಡುತ್ತಿರುವ ವೆಚ್ಚ, ವಿವಿಧ ರಾಷ್ಟ್ರಗಳು ಹೊಂದಿರುವ ಅಣ್ವಸ್ತ್ರ ಸಿಡಿತಲೆಗಳು, ಕೆಲ ರಾಷ್ಟ್ರಗಳ ನಡುವಿನ ಸಂಘರ್ಷಗಳಲ್ಲಿ ಮೃತಪಟ್ಟವರ ಸಂಖ್ಯೆ ಸೇರಿ ಹಲವು ವಿವರಗಳನ್ನು ಈ ವರದಿ ಒಳಗೊಂಡಿದೆ.

ಪಾಕಿಸ್ತಾನವು ಕಳೆದ ವರ್ಷ ಪರಮಾಣು ಬಾಂಬ್‌ಗಳ ತಯಾರಿಕೆಗೆ ಅಗತ್ಯವಿರುವ ಸಾಮಗ್ರಿಗಳ ಸಂಗ್ರಹ ಹೆಚ್ಚಿಸಿದೆ. ಅಣ್ವಸ್ತ್ರಗಳ ಉಡ್ಡಯನಕ್ಕೆ ಬೇಕಾದ ವ್ಯವಸ್ಥೆಗಳ ಅಭಿವೃದ್ಧಿ ಕಾರ್ಯವನ್ನು ತ್ವರಿತಗೊಳಿಸಿದೆ. ಬರುವ ದಶಕಗಳಲ್ಲಿ ಪಾಕಿಸ್ತಾನವು ತನ್ನ ಅಣ್ವಸ್ತ್ರ ಕಾರ್ಯಕ್ರಮವನ್ನು ವಿಸ್ತರಿಸುವುದರ ಸೂಚನೆ ಇದಾಗಿದೆ ಎಂದು ವರದಿಯು ವಿಶ್ಲೇಷಿಸಿದೆ.

'ಕಳೆದ ವರ್ಷ ಮೇನಲ್ಲಿ ಭಾರತವು ಪಾಕಿಸ್ತಾನದ ವಾಯು ನೆಲೆ ಮತ್ತು ಕ್ಷಿಪಣಿ ಉಡ್ಡಯನ ನೆಲೆಗಳನ್ನು ಗುರಿಯಾಗಿಸಿ ದಾಳಿ ನಡೆಸಿತ್ತು. ಈ ದಾಳಿಯು ಪರಮಾಣು ಅಸ್ತ್ರಗಳನ್ನು ಒಳಗೊಂಡಿದ್ದ ಸಾಧ್ಯತೆಯೂ ಇತ್ತು. ಇದೇ ಕಾರಣಕ್ಕೆ, ಉಭಯ ದೇಶಗಳು ಕದನ ವಿರಾಮ ಘೋಷಣೆಗೆ ಮುಂದಾದವು' ಎಂದೂ ವರದಿಯಲ್ಲಿ ಹೇಳಲಾಗಿದೆ.



ಪ್ರಮುಖ ದೇಶಗಳ ಸಾಮರ್ಥ್ಯ
(ಇದೇ ವರ್ಷ ಜನವರಿ ವರೆಗೆ)

ದೇಶ	ಅಣ್ವಸ್ತ್ರ ಸಿಡಿತಲೆಗಳು ನಿಯೋಜಿತ	ಒಟ್ಟು
ರಷ್ಯಾ	1,796	4,400
ಅಮೆರಿಕ	1,770	3,700
ಚೀನಾ	34	620
ಫ್ರಾನ್ಸ್	280	290
ಬ್ರಿಟನ್	120	225
ಭಾರತ	12	190
ಪಾಕಿಸ್ತಾನ	-	170
ಇಸ್ರೇಲ್	-	90
ಉ. ಕೊರಿಯಾ	-	60

ಆಯಕಟ್ಟಿನ ಸ್ಥಳಗಳಲ್ಲಿ ನಿಯೋಜನೆ

ಬದಲಾಗುತ್ತಿರುವ ಭೌಗೋಳಿಕ ರಾಜಕೀಯ ಹಾಗೂ ಅಪಾಯದ ತೀವ್ರತೆ ಕಾರಣದಿಂದ ಭಾರತ ಇದೇ ಮೊದಲ ಬಾರಿಗೆ 12 ಅಣ್ವಸ್ತ್ರ ಸಿಡಿತಲೆಗಳನ್ನು ತನ್ನ ಆಯಕಟ್ಟಿನ ಸ್ಥಳಗಳಲ್ಲಿ ನಿಯೋಜನೆ ಮಾಡಿದ್ದು, ದಾಳಿಗೆ ಅವುಗಳನ್ನು ಸಜ್ಜುಗೊಳಿಸಿದೆ ಎಂದು ಎಸ್‌ಐಪಿಆರ್‌ಐ ವರದಿಯಲ್ಲಿ ಹೇಳಲಾಗಿದೆ.

'ಇತ್ತೀಚಿನ ವರ್ಷಗಳಲ್ಲಿ ಯುದ್ಧ ಸನ್ನದ್ಧತೆಗೆ ಹೆಚ್ಚು ಒತ್ತು ನೀಡುತ್ತಿರುವ ಭಾರತ, ದಾಳಿಗೆ ಸಿದ್ಧವಾಗಿರುವಂತೆ ಅಣ್ವಸ್ತ್ರ ಸಿಡಿತಲೆಗಳನ್ನು ಹೊತ್ತ ಕ್ಷಿಪಣಿಗಳನ್ನು ನಿಯೋಜಿಸಿದೆ. ಯುದ್ಧವಿಮಾನಗಳು ಹಾಗೂ ನೆಲದಿಂದ ಉಡ್ಡಯನ ಮಾಡಬಲ್ಲ ಕ್ಷಿಪಣಿಗಳಲ್ಲಿ ಮಾತ್ರವಲ್ಲ, ಜಲಾಂತರ್ಗಾಮಿಗಳಲ್ಲಿ (ಎಸ್‌ಎಸ್‌ಬಿಎನ್) ಕೂಡ ಅಣ್ವಸ್ತ್ರ ಸಿಡಿತಲೆಗಳನ್ನು ಅಳವಡಿಸಿದೆ' ಎಂದು ವರದಿ ವಿವರಿಸಿದೆ.

'ಬದಲಾದ ನೀತಿ'

ಈ ಹಿಂದೆ, ಸಂಘರ್ಷವಿಲ್ಲದ ಸಮಯದಲ್ಲಿ ಅಣ್ವಸ್ತ್ರ ಸಿಡಿತಲೆಗಳು ಹಾಗೂ ಲಾಂಚರ್‌ಗಳನ್ನು ಪ್ರತ್ಯೇಕವಾಗಿ ಇರಿಸಲಾಗುತ್ತಿತ್ತು. ಈ ವಿಚಾರದಲ್ಲಿಯೂ ಭಾರತ ತನ್ನ ನೀತಿಯನ್ನು ಬದಲಾಯಿಸಿದೆ. ಇತ್ತೀಚೆಗೆ ಅಣ್ವಸ್ತ್ರ ಸಿಡಿತಲೆಗಳನ್ನು ಹೊತ್ತ ಕ್ಷಿಪಣಿಗಳನ್ನು ಯುದ್ಧನೌಕೆಗಳಲ್ಲಿ ಇರಿಸಿ, ಗಸ್ತು ಹೆಚ್ಚಿಸಲಾಗಿದೆ ಎಂದು ಎಸ್‌ಐಪಿಆರ್‌ಐ ಹೇಳಿದೆ.

ಕಳೆದ ವರ್ಷ ಭಾರತ ಮತ್ತು ಪಾಕಿಸ್ತಾನ ನಡುವೆ 'ಅಸಾಧಾರಣ ಸೇನಾ ಬಿಕ್ಕಟ್ಟು' ಕಂಡುಬಂದಿತ್ತು. ಭಾರತವು ತನ್ನ ಅಣ್ವಸ್ತ್ರ ನೀತಿಯಲ್ಲಿ ಬದಲಾವಣೆ ಮಾಡಿಕೊಳ್ಳಲು ಈ ಬೆಳವಣಿಗೆಯೂ ಕಾರಣ ಎಂದು ವಿಶ್ಲೇಷಿಸಲಾಗಿದೆ.

₹8 ಲಕ್ಷ ಕೋಟಿ ವೆಚ್ಚ

ಭಾರತವು ತನ್ನ ಸಶಸ್ತ್ರ ಪಡೆಗಳಿಗೆ ಶಸ್ತ್ರಾಸ್ತ್ರಗಳನ್ನು ಖರೀದಿಸುವುದಕ್ಕಾಗಿ ಕಳೆದ ವರ್ಷ 92.1 ಶತಕೋಟಿ ಡಾಲರ್ (ಅಂದಾಜು ₹8 ಲಕ್ಷ ಕೋಟಿ) ವ್ಯಯಿಸಿದೆ. ಅದರ ಹಿಂದಿನ ವರ್ಷಕ್ಕೆ ಹೋಲಿಸಿದಲ್ಲಿ, ಈ ವೆಚ್ಚದಲ್ಲಿ ಶೇ 8.9ರಷ್ಟು ಏರಿಕೆ ಕಂಡುಬಂದಿದೆ. ಸೇನೆಗಾಗಿ ವೆಚ್ಚ ಮಾಡುವ ವಿಚಾರದಲ್ಲಿ ಭಾರತವು ಜಗತ್ತಿನಲ್ಲಿ 5ನೇ ಸ್ಥಾನದಲ್ಲಿದೆ ಎಂದು ವರದಿಯಲ್ಲಿ ವಿವರಿಸಲಾಗಿದೆ.

ಪ್ರಮುಖ ಅಂಶಗಳು

- ಅಮೆರಿಕ 2025ರಲ್ಲಿ ಸೇನೆಗಳಿಗಾಗಿ 954 ಶತಕೋಟಿ ಡಾಲರ್ (ಅಂದಾಜು ₹90 ಲಕ್ಷ ಕೋಟಿ) ವೆಚ್ಚ ಮಾಡಿದೆ. ಇದು ವಿಶ್ವದಲ್ಲಿಯೇ ಒಂದು ರಾಷ್ಟ್ರ ಮಾಡಿರುವ ಗರಿಷ್ಠ ವೆಚ್ಚ
- 2025ರಲ್ಲಿ ಸೇನೆಗೆ ಮಾಡಿರುವ ವೆಚ್ಚಕ್ಕೆ ಸಂಬಂಧಿಸಿ ಚೀನಾ ಎರಡನೇ ಸ್ಥಾನದಲ್ಲಿದೆ. 336 ಶತಕೋಟಿ ಡಾಲರ್ (ಅಂದಾಜು ₹32 ಲಕ್ಷ ಕೋಟಿ)
- ಮೂರನೇ ಸ್ಥಾನದಲ್ಲಿರುವ ರಷ್ಯಾ ಮಾಡಿರುವ ವೆಚ್ಚ 190 ಶತಕೋಟಿ ಡಾಲರ್ (ಅಂದಾಜು ₹18 ಲಕ್ಷ ಕೋಟಿ)
- 2021–25 ಅವಧಿಯಲ್ಲಿ ಶಸ್ತ್ರಾಸ್ತ್ರಗಳನ್ನು ಖರೀದಿಸಿದ ದೇಶಗಳ ಪೈಕಿ 162 ಪ್ರಮುಖ ರಾಷ್ಟ್ರಗಳನ್ನು ಗುರುತಿಸಲಾಗಿದೆ. ಇವುಗಳ ಪೈಕಿ ಅತಿ ಹೆಚ್ಚು ಶಸ್ತ್ರಾಸ್ತ್ರಗಳನ್ನು ಖರೀದಿ ಮಾಡಿರುವುದು ಉಕ್ರೇನ್, ಭಾರತ, ಸೌದಿ ಅರೇಬಿಯಾ, ಕತಾರ್ ಹಾಗೂ ಪಾಕಿಸ್ತಾನ
- ಸೈಬರ್ ದಾಳಿಗಳು ಆಧುನಿಕ ಸಂಘರ್ಷದ ಅವಿಭಾಜ್ಯ ಅಂಗವಾಗಿವೆ. ರಷ್ಯಾ ಮತ್ತು ಉಕ್ರೇನ್ ನಡುವಿನ ಯುದ್ಧ ಇದಕ್ಕೆ ದೊಡ್ಡ ನಿದರ್ಶನ
- ಇರಾನ್ ಮತ್ತು ಇಸ್ರೇಲ್ ನಡುವಿನ ಯುದ್ಧದಲ್ಲಿ ಎರಡೂ ದೇಶಗಳು 'ಡಿಜಿಟಲ್ ಪ್ರತೀಕಾರ' (digital retaliation) ನಡೆಸಿವೆ

ಸಹಿ ನಕಲು ಆರೋಪ: ಭಾರಿ ಪೊಲೀಸ್ ಭದ್ರತೆ

ಮಮತಾ ಮನೆಯಲ್ಲಿ ಶೋಧ

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದ ಟಿಎಂಸಿ ಶಾಸಕರ ಸಹಿ ನಕಲು ಮಾಡಿರುವ ಆರೋಪದ ಕುರಿತು ತನಿಖೆ ನಡೆಸುತ್ತಿರುವ ಸಿಐಡಿ ತಂಡವು ಪಕ್ಷದ ಪ್ರಧಾನ ಕಚೇರಿಯಾಗಿರುವ ಪಕ್ಷದ ಮುಖ್ಯಸ್ಥೆ ಮಮತಾ ಬ್ಯಾನರ್ಜಿ ಅವರ ಕಾಳಿಘಾಟ್ ನಿವಾಸದಲ್ಲಿ ಮಂಗಳವಾರ ಶೋಧ ನಡೆಸಿದೆ.

ಕಾಳಿಘಾಟ್ ಪೊಲೀಸ್ ಠಾಣಾ ಸಿಬ್ಬಂದಿ ಮತ್ತು ಮಹಿಳಾ ಪೊಲೀಸರ ದೊಡ್ಡ ಪಡೆಯೊಂದಿಗೆ ಆಗಮಿಸಿದ ತನಿಖಾಧಿಕಾರಿಗಳು ಮಮತಾ ನಿವಾಸದಲ್ಲಿ ಪರಿಶೀಲನೆ ನಡೆಸಿದ್ದಾರೆ.

ವಿರೋಧಪಕ್ಷದ ನಾಯಕನ ಆಯ್ಕೆ ಮಾಡಿರುವ ಕುರಿತು ವಿಧಾನಸಭಾ ಸ್ಪೀಕರ್‌ಗೆ ಸಲ್ಲಿಸಿರುವ ಪ್ರಸ್ತಾವದಲ್ಲಿ ಶಾಸಕರ ಸಹಿ ನಕಲು ಮಾಡಲಾಗಿತ್ತು ಎಂಬ ಆರೋಪದ ಬಗ್ಗೆ ಪ್ರತಿಕ್ರಿಯೆ ನೀಡುವಂತೆ ಸಿಐಡಿ ಕೆಲ ದಿನಗಳ ಹಿಂದೆ ಟಿಎಂಸಿ ಪಕ್ಷಕ್ಕೆ ನೋಟಿಸ್ ನೀಡಿತ್ತು.

'ನೋಟಿಸ್‌ಗೆ ಉತ್ತರ ನೀಡಿದ್ದ ಟಿಎಂಸಿ ನಾಯಕ ಅಭಿಷೇಕ್ ಬ್ಯಾನರ್ಜಿ ಅವರು, ಪಕ್ಷದ ಪ್ರಧಾನ ಕಚೇರಿಯಲ್ಲಿ ಶಾಸಕರ ಸಹಿ ಸಂಗ್ರಹ ಮಾಡಲಾಗಿತ್ತು ಎಂದು ತಿಳಿಸಿದ್ದರು. ಈ ಪ್ರತಿಕ್ರಿಯೆಯ ಆಧಾರದಲ್ಲಿ ಶೋಧ ನಡೆಸಲಾಗುತ್ತಿದೆ' ಎಂದು ಸಿಐಡಿ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಅಭಿಷೇಕ್ ಕಚೇರಿಯಲ್ಲೂ ಶೋಧ: ಸಿಐಡಿಯ ಮತ್ತೊಂದು ತಂಡ ಅಭಿಷೇಕ್ ಬ್ಯಾನರ್ಜಿ ಅವರ ಕಚೇರಿಯಲ್ಲಿ ಶೋಧ ನಡೆಸಿದೆ. ಮಂಗಳವಾರ ಸಂಜೆ 5 ಗಂಟೆ ಒಳಗಾಗಿ ಸಿಐಡಿ ವಿಚಾರಣೆಗೆ ಹಾಜರಾಗುವಂತೆ ಅಭಿಷೇಕ್ ಬ್ಯಾನರ್ಜಿ ಅವರಿಗೆ ಸಮನ್ಸ್ ಜಾರಿಯಾಗಿತ್ತು. ಅಭಿಷೇಕ್ ಅವರು ಪ್ರಸ್ತುತ ಮಮತಾ ಬ್ಯಾನರ್ಜಿ ಅವರ ಜೊತೆಯಲ್ಲಿ ನವದೆಹಲಿಯಲ್ಲಿದ್ದಾರೆ.

ವಿರೋಧಪಕ್ಷದ ನಾಯಕ ಆಯ್ಕೆಗಾಗಿ ನಕಲಿ ಸಹಿ ಮಾಡಿರುವ ಆರೋಪವು ಟಿಎಂಸಿ ವಿಭಜನೆಗೂ ಕಾರಣವಾಗಿದೆ. ಬಳಿಕ ಈ ಕುರಿತು ಪ್ರಕರಣ ದಾಖಲಾಗಿ, ಸಿಐಡಿ ತನಿಖೆ ಆರಂಭಿಸಿತ್ತು.

ಸೋನಿಯಾ, ಮಮತಾ ಭೇಟಿ: ಕಾಂಗ್ರೆಸ್ ಪಕ್ಷದ ನಾಯಕಿ ಸೋನಿಯಾ ಗಾಂಧಿ ಮತ್ತು ತೃಣಮೂಲ ಕಾಂಗ್ರೆಸ್ ಪಕ್ಷದ (ಟಿಎಂಸಿ) ಮುಖ್ಯಸ್ಥೆ ಮಮತಾ ಬ್ಯಾನರ್ಜಿ ಮಂಗಳವಾರ ಇಲ್ಲಿ ಭೇಟಿಯಾಗಿ ಚರ್ಚಿಸಿದರು.

ಇತ್ತೀಚಿನ ಚುನಾವಣೆಯಲ್ಲಿ ಟಿಎಂಸಿ ಸೋಲಿನ ಹಿನ್ನೆಲೆಯಲ್ಲಿ ಉಭಯ ಪಕ್ಷಗಳು ಮುಂದಿನ ದಿನಗಳಲ್ಲಿ ಅನುಸರಿಸಬೇಕಾದ ಕಾರ್ಯತಂತ್ರ ಕುರಿತು ಚರ್ಚೆ ನಡೆಯಿತು ಎನ್ನಲಾಗಿದೆ.

ಟಿಎಂಸಿ ನಾಯಕರಿಂದ ಅಡ್ಡಿ

ಶೋಧ ನಡೆಸಲು ಆಗಮಿಸಿದ್ದ ಸಿಐಡಿ ತಂಡಕ್ಕೆ ಕಚೇರಿ ಪ್ರವೇಶಿಸಲು ಟಿಎಂಸಿ ನಾಯಕರು ಅವಕಾಶ ನೀಡಲಿಲ್ಲ. ಈ ಕಾರಣಕ್ಕೆ ಭದ್ರತಾ ಸಿಬ್ಬಂದಿ ಮತ್ತು ಪಕ್ಷದ ನಾಯಕರ ನಡುವೆ ಮಾತಿನ ಚಕಮಕಿ ನಡೆಯಿತು.

'ಅಭಿಷೇಕ್ ಬ್ಯಾನರ್ಜಿ ಅವರ ಅನುಪಸ್ಥಿತಿಯಲ್ಲಿ ಟಿಎಂಸಿ ಕಚೇರಿ ಪ್ರವೇಶಕ್ಕೆ ಸಿಐಡಿ ಅಧಿಕಾರಿಗಳಿಗೆ ಅವಕಾಶ ನೀಡಲಿಲ್ಲ. ಅವರು ಬಂದ ಮೇಲೆ ಶೋಧ ನಡೆಸಲಿ' ಎಂದು ಪಕ್ಷದ ನಾಯಕ ಸುಭಾಸಿಶ್ ಚಕ್ರವರ್ತಿ ಹೇಳಿದರು.

ಸಿಐಡಿ ತಂಡವು ಮಧ್ಯಾಹ್ನದ ಬಳಿಕ ಇನ್ನಷ್ಟು ಪೊಲೀಸರೊಂದಿಗೆ ಟಿಎಂಸಿ ಕಚೇರಿಯನ್ನು ಪ್ರವೇಶಿಸಿತು.

ಸಿಐಡಿ ದಾಳಿ ಸುದ್ದಿ ತಿಳಿದ ಬೆನ್ನಲ್ಲೇ, ಟಿಎಂಸಿ ಕಚೇರಿ ಬಳಿಗೆ ಬಂದ ಟಿಎಂಸಿ ನಾಯಕರು ಮತ್ತು ಶಾಸಕರಾಗಿರುವ ಕುನಾಲ್ ಘೋಷ್ ಮತ್ತು ಮದನ್ ಮಿತ್ರ ಅವರಿಗೆ ಒಳಪ್ರವೇಶಿಸಲು ಭದ್ರತಾ ಸಿಬ್ಬಂದಿ ಅವಕಾಶ ನೀಡಲಿಲ್ಲ.

ಬಳಿಕ ಸ್ಥಳಕ್ಕೆ ಬಂದ ಟಿಎಂಸಿ ಸಂಸದ ಮತ್ತು ವಕೀಲ ಕಲ್ಯಾಣ್ ಬ್ಯಾನರ್ಜಿ ಅವರು ಸಿಐಡಿ ಅಧಿಕಾರಿಗಳೊಂದಿಗೆ ಮಾತುಕತೆ ನಡೆಸಿದರು.

> **ಬಿಜೆಪಿ ಮತ್ತು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಸುವೇಂದು ಅಧಿಕಾರಿ ಅವರು ಟಿಎಂಸಿ ಮುಖ್ಯಸ್ಥರಿಗೆ ಕಿರುಕುಳ ನೀಡಲು ಯತ್ನಿಸುತ್ತಿದ್ದಾರೆ. ಟಿಎಂಸಿ ಕಚೇರಿಯಲ್ಲಿ ಸಹಿ ಸಂಗ್ರಹಿಸಲಾಗಿದೆ ಎಂಬ ಕಾರಣಕ್ಕೆ ಅಲ್ಲಿ ಶೋಧ ನಡೆಸುವುದು ಕಾನೂನುಬದ್ಧ ಕ್ರಮವಲ್ಲ**
>
> **ಕಲ್ಯಾಣ್ ಬ್ಯಾನರ್ಜಿ,** ಟಿಎಂಸಿ ಸಂಸದ

ಮಸೂದೆ ಮತ್ತೆ ಮಂಡನೆ?

ಕ್ಷೇತ್ರ ಮರುವಿಂಗಡಣೆ

ನವದೆಹಲಿ (ಪಿಟಿಐ): 'ಇಂಡಿಯಾ' ಒಕ್ಕೂಟದ ಎರಡು ಪಕ್ಷಗಳಲ್ಲಿ ಭಿನ್ನಮತ ಭುಗಿಲೆದ್ದು, ಅವು ಗೊಂದಲದ ಗೂಡಾಗಿವೆ. ಮತ್ತೊಂದು ಪಕ್ಷ ಮೈತ್ರಿಕೂಟದಿಂದಲೇ ಅಂತರ ಕಾಯ್ದುಕೊಂಡಿದೆ. ವಿರೋಧ ಪಕ್ಷಗಳ ಪಾಳಯದಲ್ಲಿನ ಈ ಒಡಕಿನ ಲಾಭ ಪಡೆಯಲು ಮುಂದಾಗಿರುವ ಕೇಂದ್ರ ಸರ್ಕಾರ, ಕ್ಷೇತ್ರಗಳ ಮರುವಿಂಗಡಣೆ ಹಾಗೂ ಮಹಿಳೆಯರಿಗೆ ಮೀಸಲಾತಿ ಮಸೂದೆಗಳನ್ನು ಸಂಸತ್‌ನಲ್ಲಿ ಮತ್ತೊಮ್ಮೆ ಮಂಡಿಸುವ ಉತ್ಸಾಹದಲ್ಲಿದೆ.

ವಿರೋಧ ಪಕ್ಷಗಳ ಬಹಳಷ್ಟು ಸಂಸದರು ಆಡಳಿತಾರೂಢ ಎನ್‌ಡಿಎ ಜೊತೆ ಗುರುತಿಸಿಕೊಳ್ಳಲು ಮುಂದಾಗಿದ್ದಾರೆ. ಹೀಗಾಗಿ, ಮೂರು ಮಹತ್ವದ ಮಸೂದೆಗಳನ್ನು ಸಂಸತ್‌ನಲ್ಲಿ ಹೊಸದಾಗಿ ಮಂಡಿಸಿ, ಅಂಗೀಕರಿಸುವುದಕ್ಕೆ ಸಂಬಂಧಿಸಿದ ಮಾರ್ಗೋಪಾಯಗಳ ಕುರಿತು ಎನ್‌ಡಿಎ ಚಿಂತನೆ ನಡೆಸುತ್ತಿದೆ ಎಂದು ಮೂಲಗಳು ಹೇಳಿವೆ.

ಲೋಕಸಭಾ ಮತ್ತು ವಿಧಾನಸಭಾ ಕ್ಷೇತ್ರಗಳ ಮರುವಿಂಗಡಣೆ ಕುರಿತ 'ಸಂವಿಧಾನ (131ನೇ ತಿದ್ದುಪಡಿ) ಮಸೂದೆ- 2026', ಮಹಿಳಾ ಮೀಸಲು ಕಾನೂನಿಗೆ ತಿದ್ದುಪಡಿ ಮಾಡುವ ಸಂವಿಧಾನ (131ನೇ ತಿದ್ದುಪಡಿ) ಮಸೂದೆ–2026 ಹಾಗೂ 'ಕೇಂದ್ರಾಡಳಿತ ಪ್ರದೇಶಗಳ ಕಾನೂನುಗಳು (ತಿದ್ದುಪಡಿ) ಮಸೂದೆ–2026' ಅನ್ನು ಕೇಂದ್ರ ಸರ್ಕಾರ ಈ ಹಿಂದೆ ಮಂಡಿಸಿತ್ತು.

ಈ ಪೈಕಿ, ಏಪ್ರಿಲ್ 17ರಂದು ಲೋಕಸಭೆಯಲ್ಲಿ ಮಂಡಿಸಿದ್ದ ಮಹಿಳಾ ಮೀಸಲಾತಿ ಮಸೂದೆಗೆ ಸೋಲುಂಟಾಗಿತ್ತು.

ಒಡಕು–ಮುನಿಸು: ಪಶ್ಚಿಮ ಬಂಗಾಳ ವಿಧಾನಸಭೆ ಚುನಾವಣೆಯಲ್ಲಿ ಹೀನಾಯವಾಗಿ ಸೋತಿರುವ ಟಿಎಂಸಿಯಲ್ಲಿ ಭಿನ್ನಮತ ಭುಗಿಲೆದ್ದಿದ್ದು, ಪಕ್ಷ ವಿಭಜನೆಯಾಗುವ ಅಂಚಿನಲ್ಲಿದೆ. ಟಿಎಂಸಿಯ ಹೆಚ್ಚು ಸಂಖ್ಯೆಯ ಸಂಸದರು ಎನ್‌ಡಿಎ ಜೊತೆ ಕೈಜೋಡಿಸಲು ಒಲವು ವ್ಯಕ್ತಪಡಿಸಿದ್ದಾರೆ.

ತಮಿಳುನಾಡಿನಲ್ಲಿ ಅಧಿಕಾರ ಕಳೆದುಕೊಂಡಿರುವ ಡಿಎಂಕೆ, 'ಇಂಡಿಯಾ' ಮೈತ್ರಿಕೂಟದಿಂದ ದೂರವೇ ಉಳಿದಿದೆ. ತನ್ನೊಂದಿಗೆ ಚುನಾವಣಾ ಪೂರ್ವ ಮೈತ್ರಿ ಮಾಡಿಕೊಂಡಿದ್ದ ಕಾಂಗ್ರೆಸ್, ಫಲಿತಾಂಶದ ಬಳಿಕ ಟಿವಿಕೆಗೆ ಬೆಂಬಲ ನೀಡಿ ಸರ್ಕಾರದ ಭಾಗವಾಗಿರುವುದು ಡಿಎಂಕೆ ಮುನಿಸಿಕೊಳ್ಳಲು ಕಾರಣ.

ಆಮ್ ಆದ್ಮಿ ಪಕ್ಷದ (ಎಎಪಿ) 10 ರಾಜ್ಯಸಭಾ ಸಂಸದರು ಈಗಾಗಲೇ ಬಿಜೆಪಿಗೆ ಸೇರ್ಪಡೆಗೊಂಡಿದ್ದಾರೆ. ಇದರಿಂದ ಸಂಸತ್‌ನ ಮೇಲ್ಮನೆಯಲ್ಲಿ ಎನ್‌ಡಿಎ ಸಂಖ್ಯಾಬಲ ಹೆಚ್ಚಿದೆ.

'ಮೋದಿ ಸರ್ಕಾರ ಅಧಿಕಾರದ ಅಮಲಿನಲ್ಲಿದೆ'

ನವದೆಹಲಿ (ಪಿಟಿಐ): ಪ್ರಧಾನಮಂತ್ರಿ ಉಜ್ವಲಾ ಯೋಜನೆ (ಪಿಎಂಯುವೈ) ಫಲಾನುಭವಿಗಳಿಗೆ ಪ್ರತಿ ವರ್ಷ ಸಬ್ಸಿಡಿ ಸಹಿತ ನೀಡುತ್ತಿದ್ದ ಎಲ್‌ಪಿಜಿ ಸಿಲಿಂಡರ್‌ಗಳ ಸಂಖ್ಯೆಯನ್ನು ನಾಲ್ಕಕ್ಕೆ ಇಳಿಕೆ ಮಾಡಿದ ಕೇಂದ್ರ ಸರ್ಕಾರದ ವಿರುದ್ಧ ಕಾಂಗ್ರೆಸ್ ವಾಗ್ದಾಳಿ ನಡೆಸಿದೆ.

'ಕೇಂದ್ರದಲ್ಲಿರುವ ನರೇಂದ್ರ ಮೋದಿ ನೇತೃತ್ವದ ಸರ್ಕಾರವು ಅಧಿಕಾರದ ಅಮಲಿನಲ್ಲಿ, ಮಹಿಳೆಯರ ದುಃಸ್ಥಿತಿಯ ಕುರಿತಂತೆ ಮೊಸಳೆ ಕಣ್ಣೀರು ಸುರಿಸುತ್ತಿದೆ' ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಟೀಕಿಸಿದ್ದಾರೆ.

'ಕಟ್ಟಿಗೆಯ ಒಲೆ ಬಳಸಿಕೊಂಡು ಅಡುಗೆ ತಯಾರಿಸಿ ಹೊಗೆಯಿಂದ ಬಳಲುತ್ತಿದ್ದ ಮಹಿಳೆಯರು 'ಉಜ್ವಲಾ' ಯೋಜನೆಯಿಂದ ಮುಕ್ತಿ ಪಡೆಯಲಿದ್ದಾರೆ ಎಂದು 2016ರಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಹೇಳಿಕೊಂಡಿದ್ದರು. ವರ್ಷಕ್ಕೆ 12 ಸಬ್ಸಿಡಿ ಸಹಿತ ಸಿಲಿಂಡರ್‌ಗಳನ್ನು ಒದಗಿಸುವುದಾಗಿ ವಾಗ್ದಾನ ನೀಡಿದ್ದರು. 2026ರಲ್ಲಿ ಈ ಸಿಲಿಂಡರ್‌ಗಳ ಸಂಖ್ಯೆಯನ್ನು 12ರಿಂದ 9ಕ್ಕೆ ಇಳಿಕೆ ಮಾಡಲಾಯಿತು. ಇದೀಗ ಈ ಸಂಖ್ಯೆಯನ್ನು 9ರಿಂದ 4ಕ್ಕೆ ಇಳಿಕೆ ಮಾಡಲಾಗಿದೆ' ಎಂದು ಖರ್ಗೆ ಅವರು 'ಎಕ್ಸ್'ನಲ್ಲಿ ಪೋಸ್ಟ್‌ನಲ್ಲಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಕನಿಷ್ಠ ವೇತನ ಹೆಚ್ಚಿಸಬೇಕು– ಖಂಡ್ರೆ

ಬೆಂಗಳೂರು: 'ವಿಬಿ ಜಿ ರಾಮ್ ಜಿ' ಯೋಜನೆಯಡಿ ನೀಡಲಾಗುವ ಕನಿಷ್ಠ ವೇತನವನ್ನು ಹೆಚ್ಚಳ ಮಾಡಬೇಕು' ಎಂದು ಗ್ರಾಮೀಣಾಭಿವೃದ್ಧಿ ಸಚಿವ ಈಶ್ವರ ಖಂಡ್ರೆ ಕೇಂದ್ರ ಸಚಿವರನ್ನು ಒತ್ತಾಯಿಸಿದ್ದಾರೆ.

ಕೇಂದ್ರ ಸಚಿವ ಶಿವರಾಜ್ ಸಿಂಗ್ ಚವ್ಹಾಣ್ ಅಧ್ಯಕ್ಷತೆಯಲ್ಲಿ ಮಂಗಳವಾರ ನಡೆದ ಎಲ್ಲ ರಾಜ್ಯಗಳ ಗ್ರಾಮೀಣಾಭಿವೃದ್ಧಿ ಸಚಿವರ ಜೊತೆಗಿನ ವಿಡಿಯೊ ಸಂವಾದದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

'ಯೋಜನೆಯಡಿ ರಾಜ್ಯಕ್ಕೆ ಕೇಂದ್ರ ಸರ್ಕಾರ 60:40ರ ಅನುಪಾತದಲ್ಲಿ ₹5,709.90 ಕೋಟಿ ಮಧ್ಯಂತರ ಹಂಚಿಕೆ ಮಾಡಿದೆ. ಶೇ 40ರ ಅನುಪಾತದಲ್ಲಿ ರಾಜ್ಯ ಸರ್ಕಾರ ₹3,806.60 ಕೋಟಿ ನೀಡಬೇಕಿದೆ. ಈ ಯೋಜನೆ ಅನುಷ್ಠಾನಕ್ಕಾಗಿ ಮುಖ್ಯಮಂತ್ರಿ ಅವರಿಗೆ ಪ್ರಸ್ತಾವ ಸಲ್ಲಿಸಲಾಗುವುದು. ಇದೇ 28 ಮತ್ತು 29ರಂದು ಯೋಜನೆ ಅನುಷ್ಠಾನದ ಬಗ್ಗೆ ಎಲ್ಲ ರಾಜ್ಯಗಳ ಸಚಿವರ ಸಭೆ ಕರೆಯಲಾಗಿದೆ. ಇಲ್ಲಿ ರಾಜ್ಯದ ಬೇಡಿಕೆಗಳನ್ನು ಮಂಡಿಸಲಾಗುವುದು' ಎಂದರು.

ವಿಬಿ ಜಿ ರಾಮ್ ಜಿ
ಕೇಂದ್ರದಿಂದ ಮಧ್ಯಂತರ ಹಂಚಿಕೆ

ನವದೆಹಲಿ (ಪಿಟಿಐ): 'ಯಾವ ರಾಜ್ಯಕ್ಕೂ ಅನುದಾನ ಹಂಚಿಕೆಯಲ್ಲಿ ಕಡಿತವಾಗದಂತೆ ನೋಡಿಕೊಳ್ಳಲಾಗುವುದು. ವಿಜಿ ಜಿ ರಾಮ್ ಜಿ ಯೋಜನೆಗಾಗಿ ರಾಜ್ಯಗಳಿಗೆ ಮತ್ತು ಇತರೆ ಆಡಳಿತಾತ್ಮಕ ವೆಚ್ಚಗಳಿಗಾಗಿ ಒಟ್ಟು ₹95,692 ಕೋಟಿ ಮಧ್ಯಂತರ ಹಂಚಿಕೆ ಮಾಡಲಾಗಿದೆ' ಎಂದು ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಮಂಗಳವಾರ ಘೋಷಿಸಿದರು. ಈ ಬಗ್ಗೆ ಮಾಧ್ಯಮಗೋಷ್ಠಿ ನಡೆಸಿದ ಅವರು, 'ಹೊಸ ಯೋಜನೆಯನ್ನು ಜಾರಿ ಮಾಡುವ ಸಂಬಂಧ ಪೂರ್ಣಗೊಳಿಸಬೇಕಾದ ಅಗತ್ಯ ಪ್ರಕ್ರಿಯೆಗಳನ್ನು 26 ರಾಜ್ಯಗಳು ಪೂರ್ಣಗೊಳಿಸಿವೆ. ಆದರೆ, ಕರ್ನಾಟಕ, ಜಾರ್ಖಂಡ್, ತೆಲಂಗಾಣ ಮತ್ತು ಮಿಜೋರಾಂ ರಾಜ್ಯಗಳು ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿಲ್ಲ' ಎಂದರು.

ಪಶ್ಚಿಮ ಬಂಗಾಳಕ್ಕೆ ₹8,508 ಕೋಟಿ

ಪಶ್ಚಿಮ ಬಂಗಾಳದಲ್ಲಿ ಟಿಎಂಸಿ ಸರ್ಕಾರ ಇದ್ದ ಸಂದರ್ಭದಲ್ಲಿ ನರೇಗಾ ಅನುದಾನ ಹಂಚಿಕೆ ವಿಚಾರವಾಗಿ ಹಲವು ವರ್ಷಗಳಿಂದ ವಿವಾದ ನಡೆಯುತ್ತಿತ್ತು. ಈಗ ಇಲ್ಲಿ ಬಿಜೆಪಿ ಸರ್ಕಾರ ರಚನೆಯಾಗಿದ್ದು, ರಾಜ್ಯಕ್ಕೆ ₹8,508 ಕೋಟಿ ಮಧ್ಯಂತರ ಹಂಚಿಕೆ ಘೋಷಿಸಲಾಗಿದೆ. ಈ ಬಗ್ಗೆ ಸಚಿವರು ಪ್ರತಿಕ್ರಿಯಿಸಿ, 'ವಿವಾದ ಹಾಗೆಯೇ ಇದೆ. ಉಳಿದ ಅವಧಿಯಲ್ಲಿ ಕೇಂದ್ರ ಸರ್ಕಾರದ ಎಲ್ಲ ನಿಯಮಗಳನ್ನು ಅನುಸರಿಸುವುದಾಗಿ ರಾಜ್ಯ ಸರ್ಕಾರ ಪತ್ರ ಬರೆದಿದೆ. ಜೂನ್ 30ರ ಒಳಗೆ ನರೇಗಾ ಅಡಿಯಲ್ಲಿನ ಕಾಮಗಾರಿಗಳು ಪೂರ್ಣಗೊಳ್ಳುವ ಸಲುವಾಗಿ ₹700 ಕೋಟಿ ನೀಡಲಾಗಿದೆ' ಎಂದರು.

ಯಾವ ರಾಜ್ಯಕ್ಕೆ ಎಷ್ಟು ಹಂಚಿಕೆ? (ಕೋಟಿಗಳಲ್ಲಿ)

ರಾಜ್ಯ	ಹಂಚಿಕೆ
ಉತ್ತರ ಪ್ರದೇಶ	₹12,221.48
ಪಶ್ಚಿಮ ಬಂಗಾಳ	₹8,508.00
ತಮಿಳುನಾಡು	₹7,957.57
ಆಂಧ್ರ ಪ್ರದೇಶ	₹7,707.21
ರಾಜಸ್ಥಾನ	₹7,581.87
ಬಿಹಾರ	₹6,715.83
ಮಧ್ಯ ಪ್ರದೇಶ	₹6,252.03
ಕರ್ನಾಟಕ	₹5,709.09
ತೆಲಂಗಾಣ	₹4,229.74
ಕೇಂದ್ರಾಡಳಿತ ಪ್ರದೇಶಗಳು	₹1,291.32
ಇತರ ರಾಜ್ಯಗಳು	₹25,667.35

₹1,850.62 ಕೋಟಿ ಸಾಮಾಜಿಕ ಪರಿಶೀಲನೆ ಕೇಂದ್ರಾಡಳಿತ ವೆಚ್ಚ



₹95,692 ಕೋಟಿ ಒಟ್ಟು

ಅಭಿಯಾನಕ್ಕೆ ಸಜ್ಜಾದ ಫ್ರಾನ್ಸ್, ಸ್ಪೇನ್

ಅಂತಿಮ ಹಂತದ ಸಿದ್ಧತಾ ಪಂದ್ಯದಲ್ಲಿ ಸ್ಪೇನ್‌ಗೆ 3–1 ರಿಂದ ಪೆರು ವಿರುದ್ಧ ಗೆಲುವು



ಲಿಲ್ಲೀ (ಫ್ರಾನ್ಸ್), (ಎಎಫ್‌ಪಿ): ಫ್ರಾನ್ಸ್‌ನ ತಾರೆ ಮೈಕೆಲ್ ಒಲೀಸ್ ಅವರು ಉತ್ತರ ಐರ್ಲೆಂಡ್ ವಿರುದ್ಧ ಅಭ್ಯಾಸ ಪಂದ್ಯದಲ್ಲಿ ಹ್ಯಾಟ್ರಿಕ್ ಸಾಧಿಸುವ ಮೂಲಕ ಫಿಫಾ ವಿಶ್ವಕಪ್‌ನ ಪ್ರಭಾವಿ ಆಟಗಾರರಲ್ಲಿ ತಾವೂ ಒಬ್ಬರಾಗಬಹುದೆಂಬ ಸಂಕೇತಗಳನ್ನು ರವಾನಿಸಿದರು. ಸೋಮವಾರ ನಡೆದ ಪಂದ್ಯದಲ್ಲಿ ಫ್ರಾನ್ಸ್ 3–1 ರಿಂದ ಜಯಗಳಿಸಿ ಆತ್ಮವಿಶ್ವಾಸ ವೃದ್ಧಿಸಿತು.

ಎಂಟು ದಿನಗಳ ನಂತರ (ಜೂನ್ 16ರಂದು) ಸೆನೆಗಲ್ ವಿರುದ್ಧ ನ್ಯೂಜರ್ಸಿಯ ಮೆಟ್‌ಲೈಫ್ ಕ್ರೀಡಾಂಗಣದಲ್ಲಿ ಆಡುವ ಮೂಲಕ ಫ್ರಾನ್ಸ್ ತಂಡವು ವಿಶ್ವಕಪ್ ಅಭಿಯಾನ ಆರಂಭಿಸಲಿದೆ.

ಫ್ರಾನ್ಸ್‌ನ ಆಕ್ರಮಣದ ವಿಭಾಗವು ಒಲೀಸ್, ಕೈಲಿಯನ್ ಎಂಬಾಪೆ, ಡಿಸೈರ್ ದೋವ್ ಮತ್ತು ಒಸ್ಮಾನ್ ಡೆಂಬೆಲೆ ಅವರಿಂದ ಪ್ರಬಲವಾಗಿದೆ.

ನಾಂಟೆಸ್‌ನಲ್ಲಿ ಕೇವಲ ನಾಲ್ಕು ದಿನಗಳ ಹಿಂದೆ ಐವರಿ ಕೋಸ್ಟ್ ಎದುರು 2–1 ರಲ್ಲಿ ಸೋಲನುಭವಿಸಿದ್ದ ಫ್ರಾನ್ಸ್‌ಗೆ ಈ ಗೆಲುವು ಉತ್ಸಾಹ ಮೂಡಿಸಿತು. 24 ವರ್ಷ ವಯಸ್ಸಿನ ಒಲೀಸ್, ಉತ್ತರ ಐರ್ಲೆಂಡ್ ವಿರುದ್ಧದ ಪಂದ್ಯದಲ್ಲಿ ವಿರಾಮಕ್ಕೆ ಎರಡು ನಿಮಿಷ ಮೊದಲು ತಂಡಕ್ಕೆ ಮುನ್ನಡೆ ಒದಗಿಸಿದರು. 49 ಮತ್ತು 75ನೇ ನಿಮಿಷ ಮತ್ತೆರಡು ಗೋಲುಗಳನ್ನು ಗಳಿಸಿ, ಆತ್ಮವಿಶ್ವಾಸದೊಡನೆ ವಿಶ್ವಕಪ್‌ಗೆ ಸಜ್ಜಾದರು.

ಸ್ಪೇನ್‌ಗೆ ಜಯ: ಫಿಫಾ ವಿಶ್ವಕಪ್‌ನಲ್ಲಿ ಪ್ರಶಸ್ತಿಗೆ ಫೇವರಿಟ್ ತಂಡಗಳಲ್ಲಿ ಒಂದಾ ಗಿರುವ ಸ್ಪೇನ್ ತಂಡವು ಸೋಮವಾರ ಮೆಕ್ಸಿಕೊದ ಪೀಬ್ಲಾದಲ್ಲಿ ನಡೆದ ಅಂತಿಮ ಸಿದ್ಧತಾ ಪಂದ್ಯದಲ್ಲಿ ಪೆರು ತಂಡವನ್ನು 3–1 ಗೋಲುಗಳಿಂದ ಸೋಲಿಸಿತು.

ಬಾರ್ಸಿಲೋನಾ ಕ್ಲಬ್‌ನ ಸ್ಟಾರ್ ಆಟಗಾರ ಲಮಿನ್ ಯುಮಾಲ್ ಅವರು ಗಾಯದಿಂದ ಚೇತರಿಸಿಕೊಳ್ಳುತ್ತಿದ್ದು, ಈ ಪಂದ್ಯದಲ್ಲಿ ಆಡಲಿಲ್ಲ. ಆದರೂ ಪೆರು ತಂಡವನ್ನು ಸೋಲಿಸಲು ಅನುಭವಿ ಸ್ಪೇನ್‌ಗೆ ಕಷ್ಟವಾಗಲಿಲ್ಲ. ಪೆರು ಈ ಬಾರಿಯ ವಿಶ್ವಕಪ್‌ಗೆ ಅರ್ಹತೆ ಪಡೆದಿಲ್ಲ.

ಡಚ್ಚರ ಪರದಾಟ: ನ್ಯೂಯಾರ್ಕ್‌ನ ಇಕ್ಹಾನ್ ಕ್ರೀಡಾಂಗಣದಲ್ಲಿ ನಡೆದ ಮತ್ತೊಂದು ಸೌಹಾರ್ದ ಪಂದ್ಯದಲ್ಲಿ ನೆದರ್ಲೆಂಡ್ಸ್ 2–1 ಗೋಲುಗಳಿಂದ ಉಜ್ಬೇಕಿಸ್ತಾನ ವಿರುದ್ಧ ಪ್ರಯಾಸದ ಜಯಗಳಿಸಿತು. ಈ ಪಂದ್ಯದಲ್ಲಿ ಪ್ರೇಕ್ಷಕರಿಗೆ ಅವಕಾಶವಿರಲಿಲ್ಲ.



ಫ್ರಾನ್ಸ್ ತಂಡದ ಫಾರ್ವರ್ಡ್ ಆಟಗಾರ ಮೈಕೆಲ್ ಒಲೀಸ್ (ಎಡ) ಮತ್ತು ಉತ್ತರ ಐರ್ಲೆಂಡ್‌ನ ಡಿಫೆಂಡರ್ ಯಾರನ್ ಬ್ರೌನ್ ಚೆಂಡಿಗಾಗಿ ಪೈಪೋಟಿ ನಡೆಸಿದರು ಎಎಫ್‌ಪಿ ಚಿತ್ರ

ಸೊಮಾಲಿಯಾ ರೆಫ್ರಿಗೆ ವೀಸಾ ನಿರಾಕರಣೆ



ಒಮರ್ ಅರ್ತನ್

ಲಾಸ್ ಏಂಜಲಿಸ್ (ಅಮೆರಿಕ), (ಎಎಫ್‌ಪಿ): ಸೊಮಾಲಿಯಾದ ಪ್ರಶಸ್ತಿ ಪುರಸ್ಕೃತ ರೆಫ್ರಿ ಒಮರ್ ಅರ್ತನ್ ಅವರಿಗೆ ಅಮೆರಿಕ ಪ್ರವೇಶಕ್ಕೆ ವೀಸಾ ನಿರಾಕರಿಸಿದ ನಂತರ ಅವರನ್ನು ರೆಫ್ರಿಗಳ ಪಟ್ಟಿಯಿಂದ ಕೈಬಿಡಲಾಗಿದೆ ಎಂದು ವಿಶ್ವ ಫುಟ್‌ಬಾಲ್ ಸಂಸ್ಥೆ (ಫಿಫಾ) ಸೋಮವಾರ ತಿಳಿಸಿದೆ.

ಒಮರ್ ಅವರು ಶನಿವಾರ ಮಯಾಮಿ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿಳಿದಿದ್ದರು. 'ಅವರು ಇನ್ನು ವಿಶ್ವಕಪ್‌ನ ಭಾಗವಾಗಿರುವುದಿಲ್ಲ' ಎಂದು ಫಿಫಾ ತಿಳಿಸಿದೆ.

ಒಂದೊಮ್ಮೆ ಅವಕಾಶ ದೊರೆತಿದ್ದಲ್ಲಿ ಅವರು ವಿಶ್ವಕಪ್‌ನಲ್ಲಿ ಕಾರ್ಯ ನಿರ್ವಹಿಸಿದ ಸೊಮಾಲಿಯಾದ ಮೊದಲ ರೆಫ್ರಿ ಎಂಬ ಗೌರವ ಪಡೆಯುತ್ತಿದ್ದರು.

ಅವರಿಗೆ ವೀಸಾ ನಿರಾಕರಿಸಿದ ನಿರ್ಧಾರದ ಮೇಲೆ ಪ್ರಭಾವ ಬೀರಲು ತಮಗೇನೂ ಅಧಿಕಾರವಿಲ್ಲ. ಇದು ಜಂಟಿ ಆತಿಥೇಯ ರಾಷ್ಟ್ರವಾದ ಅಮೆರಿಕದ ವಿವೇಚನೆಗೆ ಬಿಟ್ಟಿದ್ದು ಎಂದು ಫಿಫಾ ವಕ್ತಾರರು ಎಎಫ್‌ಪಿಗೆ ತಿಳಿಸಿದ್ದಾರೆ.

ಮಾಮೂಲಿ ತಪಾಸಣೆ ನಂತರ ಅವರನ್ನು ಹೆಚ್ಚಿನ ಪರಿಶೀಲನೆಗೆ ಒಳಪಡಿಸಲಾಯಿತು. ಇದರ ನಂತರ ಅವರಿಗೆ ವೀಸಾ ನಿರಾಕರಿಸಲಾಯಿತು. ವಲಸೆ ಹತ್ತಿಕ್ಕಲು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಆಡಳಿತ ಜಾರಿಗೊಳಿಸಿದ ಅಮೆರಿಕಕ್ಕೆ 'ಪ್ರಯಾಣ ನಿರ್ಬಂಧವಿರುವ ದೇಶಗಳ ಪಟ್ಟಿ'ಯಲ್ಲಿ ಸೊಮಾಲಿಯಾ ಒಂದಾಗಿದೆ.

ಬೆಂಬಲ: ಅರ್ತನ್ ಅವರ ಬಳಿ ಅಮೆರಿಕದ ವೀಸಾ ಇತ್ತು ಎಂದು ಸೊಮಾಲಿಯಾ ಆಡಳಿತ ತಿಳಿಸಿದೆ. 'ಅರ್ತನ್ ಅವರಿಗೆ ವೀಸಾ ನಿರಾಕರಿಸಿರುವುದಕ್ಕೆ ವಿಷಾದ ವ್ಯಕ್ತಪಡಿಸುವುದಾಗಿ' ಸೊಮಾಲಿಯಾದ ಕ್ರೀಡಾ ಸಚಿವಾಲಯ ತಿಳಿಸಿದೆ. ಅವರಿಗೆ ಚಾರಿತ್ರ್ಯ ನಿಷ್ಕಳಂಕವಾಗಿದೆ. ಅವರ ಬೆಂಬಲಕ್ಕೆ ನಿಲ್ಲುವುದಾಗಿಯೂ ಹೇಳಿದೆ.

ಹಂಚಿಕೆಯಾದ ಟಿಕೆಟ್ ಹಿಂಪಡೆದ ಅಮೆರಿಕ: ಇರಾನ್ ಟೀಕೆ

ಟೆಹರಾನ್ (ಎಎಫ್‌ಪಿ): ಗುಂಪು ಹಂತದ ಪಂದ್ಯಗಳಿಗೆ ಇರಾನ್‌ಗೆ ಹಂಚಿಕೆಯಾಗಿದ್ದ ಟಿಕೆಟ್‌ಗಳನ್ನು ಅಮೆರಿಕ ಕೊನೆ ಗಳಿಗೆಯಲ್ಲಿ ಹಿಂದಕ್ಕೆ ಪಡೆದಿದೆ ಎಂದು ಇರಾನ್ ಫುಟ್‌ಬಾಲ್ ಫೆಡರೇಷನ್ ಮಂಗಳವಾರ ಟೀಕಿಸಿದೆ. ಆ ಮೂಲಕ ಇರಾನ್ ತಂಡದ ಅಭಿಮಾನಿಗಳು ಪಂದ್ಯಕ್ಕೆ ಬರದಂತೆ ತಡೆಯಲಾಗುತ್ತಿದೆ ಎಂದು ಫೆಡರೇಷನ್ ಆರೋಪಿಸಿದೆ.

ಜಂಟಿ ಆತಿಥೇಯವಾಗಿರುವ ಅಮೆರಿಕವು ಇರಾನ್‌ಗೆ ಸಾಕಷ್ಟು ರಾಜತಾಂತ್ರಿಕ ತಡೆಗಳನ್ನು ತಂದೊಡ್ಡಿದೆ. ತಂಡದ ಕೆಲವು ನೆರವು ಸಿಬ್ಬಂದಿಗೆ ವೀಸಾ ನಿರಾಕರಿಸಿದೆ. ಅಮೆರಿಕವು, ಇಸ್ರೇಲ್ ಜೊತೆಗೂಡಿ ಫೆಬ್ರುವರಿ ಕೊನೆಯಲ್ಲಿ ಇರಾನ್ ಮೇಲೆ ದಾಳಿ ನಡೆಸಿದ ನಂತರ ಈ ಎರಡು ರಾಷ್ಟ್ರಗಳ ಬಾಂಧವ್ಯ ಮತ್ತಷ್ಟು ಹಳಸಿದೆ.

'2026ರ ವಿಶ್ವಕಪ್‌ಗೆ ಎರಡು ದಿನಗಳು ಉಳಿದಿರುವಂತೆ ಕ್ರೀಡಾಂಗಣದಲ್ಲಿ ಇರಾನ್ ಅಭಿಮಾನಿಗಳು ಬರದ ಹಾಗೆ ಅಮೆರಿಕ ತಡೆಯೊಡ್ಡುತ್ತಿದೆ' ಎಂದು ದೂರಿದೆ. ಗುಂಪು ಹಂತದಲ್ಲಿ ಇರಾನ್ ತಂಡವು ಅಮೆರಿಕದಲ್ಲಿ ಮೂರು ಪಂದ್ಯಗಳನ್ನು ಆಡಬೇಕಾಗಿದೆ.

'ಜಿ' ಗುಂಪಿನಲ್ಲಿರುವ ಇರಾನ್ ತಂಡವು ಇದೇ 15ರಂದು ಲಾಸ್ ಏಂಜಲಿಸ್‌ನ ಸೋಫಿ ಕ್ರೀಡಾಂಗಣದಲ್ಲಿ ನ್ಯೂಜಿಲೆಂಡ್ ವಿರುದ್ಧ, 21ರಂದು ಅಲ್ಲಿಯೇ ಬೆಲ್ಜಿಯಂ ವಿರುದ್ಧ ಮತ್ತು 26ರಂದು ಸಿಯಾಟಲ್‌ನ ಲುಮೆನ್‌ಫೀಲ್ಡ್‌ನಲ್ಲಿ ಈಜಿಪ್ಟ್ ವಿರುದ್ಧ ಪಂದ್ಯಗಳನ್ನು ಆಡಲಿದೆ.

ಅಂತರರಾಷ್ಟ್ರೀಯ ಫುಟ್‌ಬಾಲ್ ಸಂಸ್ಥೆ (ಫಿಫಾ) ನಿಯಮದ ಪ್ರಕಾರ ಪ್ರತಿ ಪಂದ್ಯದ ಶೇ 8ರಷ್ಟು ಟಿಕೆಟ್‌ಗಳನ್ನು ಅಧಿಕೃತ ಸಂಸ್ಥೆಯ ಮೂಲಕ ಪಂದ್ಯ ಆಡುವ ದೇಶದ ಬೆಂಬಲಿಗರಿಗೆ ಹಂಚಿಕೆ ಮಾಡಬೇಕಾಗುತ್ತದೆ ಎಂದು ಇರಾನ್ ಫುಟ್‌ಬಾಲ್ ಸಂಸ್ಥೆ ತಿಳಿಸಿದೆ.

ತನ್ನ ಪಾಲಿಗೆ ಹಂಚಿಕೆಯಾದ ಗುಂಪು ಹಂತದ ಪಂದ್ಯಗಳ ಟಿಕೆಟ್‌ಗಳ ಮಾರಾಟವನ್ನು ಈಗಾಗಲೇ ಆರಂಭಿಸಿದ್ದು, ಕೆಲವು ಅಭಿಮಾನಿಗಳು ಪ್ರಯಾಣಿಸಲು ಅಗತ್ಯ ಸಿದ್ಧತೆಗಳನ್ನೂ ಮಾಡಿಕೊಂಡಿದ್ದಾರೆ ಎಂದು ಇರಾನ್ ಹೇಳಿಕೆಯಲ್ಲಿ ತಿಳಿಸಿದೆ.

ಫಿಫಾ ಕ್ರೀಡಾಂಗಣಗಳಿಗೆ 'ಪರಿಸರ ಸ್ನೇಹಿ' ಪ್ರಮಾಣಪತ್ರ

ವಾಷಿಂಗ್ಟನ್ (ಎಪಿ): ಈ ವರ್ಷ ಫಿಫಾ ವಿಶ್ವಕಪ್ ಫುಟ್‌ಬಾಲ್ ಪಂದ್ಯಗಳಿಗೆ ಆತಿಥ್ಯ ವಹಿಸಲಿರುವ ಬಹುತೇಕ ಎಲ್ಲ ಕ್ರೀಡಾಂಗಣಗಳಿಗೆ 'ಪರಿಸರಸ್ನೇಹಿ ಕಟ್ಟಡ' ಪ್ರಮಾಣಪತ್ರ ಲಭಿಸಿದೆ.

ಪಂದ್ಯಗಳು ನಡೆಯಲಿರುವ 16 ಕ್ರೀಡಾಂಗಣಗಳ ಪೈಕಿ 13ಕ್ಕೆ 'ಲೀಡ್' ಪ್ರಮಾಣಪತ್ರ ಲಭಿಸಿದೆ. ಹಸಿರು ಕಟ್ಟಡ ರೇಟಿಂಗ್ ನೀಡುವ ವಿಶ್ವಮಟ್ಟದ ಸಂಸ್ಥೆ ಇದಾಗಿದೆ. ಇನ್ನುಳಿದಿರುವ ಮೂರು ಕ್ರೀಡಾಂಗಣಗಳಲ್ಲಿ ಕನಿಷ್ಠ ಎರಡು ಬರುವ ವಾರದಲ್ಲಿ ಪ್ರಮಾಣಪತ್ರ ಪಡೆಯಲಿವೆ ಎಂದು ಯು.ಎಸ್. ಗ್ರೀನ್ ಬಿಲ್ಡಿಂಗ್ ಕೌನ್ಸಿಲ್ ಹೇಳಿವೆ.

ಲೀಡ್ ಪ್ರಮಾಣಪತ್ರ ಪಡೆದ ಕ್ರೀಡಾಂಗಣಗಳಲ್ಲಿ 11,500 ಸೌರ ವಿದ್ಯುತ್ ಫಲಕಗಳನ್ನು ಅಳವಡಿಸಲಾಗಿದೆ. ಇದರಿಂದಾಗಿ ವಿದ್ಯುತ್ ಉತ್ಪಾದನೆಯಾಗಲಿದೆ. ಇದರಿಂದಾಗಿ ವಾರ್ಷಿಕವಾಗಿ ಸುಮಾರು 100 ಮಿಲಿಯನ್ ಗ್ಯಾಲನ್ ನೀರು ಉಳಿತಾಯವಾಗಲಿದೆ. ನಾಲ್ಕು ತಾಣಗಳಲ್ಲಿ ತ್ಯಾಜ್ಯದ ಸಂಸ್ಕರಣೆ, ಮರುಬಳಕೆ ಮತ್ತು ಕಾಂಪೋಸ್ಟ್ ಮಾಡುವ ಘಟಕಗಳನ್ನು ಸ್ಥಾಪಿಸಲಾಗಿದೆ. ಇದರಿಂದಾಗಿ ತ್ಯಾಜ್ಯ ಭೂಮಿಯ ಒಡಲು ಸೇರದಂತೆ ತಡೆಯಲು ಸಾಧ್ಯವಾಗಲಿದೆ.

ಮೆಕ್ಸಿಕೊ, ಕೆನಡಾ ಮತ್ತು ಅಮೆರಿಕ ಜಂಟಿ ಆಶ್ರಯದಲ್ಲಿ ಫಿಫಾ ವಿಶ್ವಕಪ್ ಟೂರ್ನಿ ನಡೆಯಲಿದೆ.

ಮೆಕ್ಸಿಕೊ ನಗರದಲ್ಲಿರುವ ಎಸ್ಟಾಡಿಯೊ ಅಝ್ಟೆಕಾ 60 ವರ್ಷ ಹಳೆಯ ಕ್ರೀಡಾಂಗಣವಾಗಿದೆ. ಅಕ್ಟೋಬರ್‌ನಲ್ಲಿಯೇ ಈ ಕ್ರೀಡಾಂಗಣಕ್ಕೆ ಲೀಡ್ ಪ್ರಮಾಣಪತ್ರ ನೀಡಿತ್ತು.

ಲ್ಯಾಟಿನ್ ಅಮೆರಿಕದ ಈ ಬೃಹತ್ ಫುಟ್‌ಬಾಲ್ ಕ್ರೀಡಾಂಗಣದಲ್ಲಿ 87,500 ಆಸನ ಸಾಮರ್ಥ್ಯವಿದೆ. ಇಲ್ಲಿಯ ಒಳಾಂಗಣದಲ್ಲಿ ನೀರಿನ ಬಳಕೆಯನ್ನು ಶೇ 36ರಷ್ಟು ತಗ್ಗಿಸಲಾಗಿದೆ. ವಿದ್ಯುತ್ ಕೂಡ ಶೇ 45ರಷ್ಟು ಉಳಿತಾಯವಾಗಿದೆ. ವಾತಾನುಕೂಲಿತ ಮತ್ತು ಶಾಖೋತ್ಪನ್ನದ ಆಧುನಿಕ ಸಲಕರಣೆಗಳ ಬಳಕೆಯಿಂದ ಇದು ಸಾಧ್ಯವಾಗಿದೆ. ಎಲ್ಲ ಹಂತಗಳಲ್ಲಿಯೂ ಪರಿಸರಸ್ನೇಹಿ ಕ್ರಮಗಳನ್ನು ಕೈಗೊಳ್ಳಲಾಗಿದೆ.

ತ್ರಿಕೋನ ಏಕದಿನ ಕ್ರಿಕೆಟ್ ಸರಣಿ: ಋತುರಾಜ್ ಶತಕ

ಲಂಕಾ ವಿರುದ್ಧ ಭಾರತ ಎ ಶುಭಾರಂಭ



ಶತಕ ದಾಖಲಿಸಿದ ಋತುರಾಜ್ ಗಾಯಕವಾಡ್ (ಬಲ) ಅವರನ್ನು ಅಭಿನಂದಿಸಿದ ನಾಯಕ ತಿಲಕ್ ವರ್ಮಾ ಬಿಸಿಸಿಐ ಎಕ್ಸ್ ಚಿತ್ರ

ದಂಬುಲಾ (ಪಿಟಿಐ): ಋತುರಾಜ್ ಗಾಯಕವಾಡ್ ಅವರ ಅಮೋಘ ಶತಕದ ಬಲದಿಂದ ಭಾರತ ಎ ತಂಡವು ಮಂಗಳವಾರ ಆರಂಭವಾದ ತ್ರಿಕೋನ ಏಕದಿನ ಕ್ರಿಕೆಟ್ ಸರಣಿಯಲ್ಲಿ ಶುಭಾರಂಭ ಮಾಡಿತು.

ರಣಗಿರಿ ದಂಬುಲಾ ಅಂತರ ರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣದಲ್ಲಿ ನಡೆದ ಮೊದಲ ಪಂದ್ಯದಲ್ಲಿ ಭಾರತ ಎ ತಂಡವು 8 ರನ್‌ಗಳಿಂದ ಶ್ರೀಲಂಕಾ ಎ ವಿರುದ್ಧ ಗೆದ್ದಿತು.

ಟಾಸ್ ಗೆದ್ದು ಬ್ಯಾಟಿಂಗ್ ಮಾಡಿದ ಭಾರತ ಎ ತಂಡದ ಪ್ರಮುಖ ಆಕರ್ಷಣೆ 15ರ ಪೋರ ವೈಭವ್ ಸೂರ್ಯವಂಶಿ ಅವರು 14 ರನ್ ಗಳಿಸಿದರು. ಆದರೆ ಋತುರಾಜ್ (101; 114ಎ, 4X6, 6X3) ಮತ್ತು ಅರ್ಧಶತಕ ಗಳಿಸಿದ ತಿಲಕ್ ವರ್ಮಾ (60; 97ಎ, 4X2, 6X1) ಅವರ ಅಮೋಘ ಆಟದಿಂದಾಗಿ ಭಾರತ ಎ ತಂಡವು 50 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 277 ರನ್ ಗಳಿಸಿತು.

ಅದಕ್ಕುತ್ತರವಾಗಿ ಶ್ರೀಲಂಕಾ ಎ ತಂಡವು 48.5 ಓವರ್‌ಗಳಲ್ಲಿ 269 ರನ್ ಗಳಿಸಿ ಸೋತಿತು. ಅರ್ಷದ್ ಖಾನ್, ಅನುಕೂಲ್ ರಾಯ್, ಆಯುಷ್ ಬಡೋನಿ ಮತ್ತು ವಿಪ್ರಜ್ ನಿಗಮ್ ಅವರು ತಲಾ ಎರಡು ವಿಕೆಟ್ ಗಳಿಸಿದರು. ಆತಿಥೇಯ ತಂಡದ ನಾಯಕ ಸಹನ್ ಅರ್ಚಾಚಿಗೆ (74; 72ಎ, 4X6, 6X2) ಅರ್ಧಶತಕ ಗಳಿಸಿದರು.

ಭಾರತ ಎ ತಂಡವು ಆರಂಭಿಕ ಐದು ಓವರ್‌ಗಳಲ್ಲಿ ಆತಂಕದ ಕ್ಷಣಗಳನ್ನು ಎದುರಿಸಿತ್ತು. 16 ರನ್‌ಗಳಿಗೆ ಎರಡು ವಿಕೆಟ್ ಕಳೆದುಕೊಂಡಿತ್ತು. ವೈಭವ್ ಮತ್ತು ಪ್ರಭಸಿಮ್ರನ್ ಸಿಂಗ್ ಅವರು ಪೆವಿಲಿಯನ್‌ಗೆ ಮರಳಿದ್ದರು. ಈ ಹಂತದಲ್ಲಿ ಉಪನಾಯಕ ಋತುರಾಜ್ ಮಿಂಚಿದರು. ಲಿಸ್ಟ್ ಎ ವಿಭಾಗದಲ್ಲಿ ಅವರು 21ನೇ ಶತಕ ಗಳಿಸಿದರು. ನಾಯಕ ತಿಲಕ್ ವರ್ಮಾ ಅವರೊಂದಿಗೆ ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 150 ರನ್ ಸೇರಿಸಿದರು.

ಭಾರತ ಎ ತಂಡವು ಇದೇ 11ರಂದು ಇಲ್ಲಿ ಅಫ್ಗಾನಿಸ್ತಾನ ಎ ತಂಡದ ಎದುರು ಆಡಲಿದೆ.

ಸಂಕ್ಷಿಪ್ತ ಸ್ಕೋರು: ಭಾರತ ಎ: 50 ಓವರ್‌ಗಳಲ್ಲಿ 6ಕ್ಕೆ277 (ಪ್ರಿಯಾಂಶ್ ಆರ್ಯ 32, ಋತುರಾಜ್ ಗಾಯಕವಾಡ 101, ತಿಲಕ್ ವರ್ಮಾ 60, ಆಯುಷ್ ಬಡೋನಿ 24, ಸೂರ್ಯಾಂಶ್ ಶೆಡ್ಗೆ ಔಟಾಗದೇ 26, ಮೊಹಮ್ಮದ್ ಶಿರಾಜ್ 67ಕ್ಕೆ2) ಶ್ರೀಲಂಕಾ ಎ: 48.5 ಓವರ್‌ಗಳಲ್ಲಿ 269 (ನಿರೋಷನ್ ಡಿಕ್ವೆಲ್ಲಾ 47, ಅವಿಷ್ಕಾ ಫರ್ನಾಂಡೊ 45, ಸದಿರಾ ಸಮರವಿಕ್ರಮ 46, ಸಹನ್ ಅರ್ಚಾಚಿಗೆ 74, ವನುಜ್ ಸಹನ್ 23, ಅರ್ಷದ್ ಖಾನ್ 24ಕ್ಕೆ2, ಅನುಕೂಲ್ ರಾಯ್ 49ಕ್ಕೆ2, ಆಯುಷ್ ಬಡೋನಿ 46ಕ್ಕೆ2, ವಿಪ್ರಜ್ ನಿಗಮ್ 46ಕ್ಕೆ2) ಫಲಿತಾಂಶ: ಭಾರತ ಎ ತಂಡಕ್ಕೆ 8 ರನ್ ಜಯ. ಪಂದ್ಯ ಆಟಗಾರ: ಋತುರಾಜ್ ಗಾಯಕವಾಡ್

ಅಫ್ಗನ್ ಏಕದಿನ ಸರಣಿಗೆ ರೋಹಿತ್, ಹಾರ್ದಿಕ್



ರೋಹಿತ್



ಹಾರ್ದಿಕ್

ಮುಲ್ಲನಪುರ (ಪಿಟಿಐ): ಅನುಭವಿ ಬ್ಯಾಟರ್ ರೋಹಿತ್ ಶರ್ಮಾ ಮತ್ತು ಆಲ್‌ರೌಂಡರ್ ಹಾರ್ದಿಕ್ ಪಾಂಡ್ಯ ಅವರ ಫಿಟ್‌ನೆಸ್ ಬಗ್ಗೆ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ ಶ್ರೇಷ್ಠತಾ ಕೇಂದ್ರವು ಹಸಿರು ನಿಶಾನೆ ತೋರಿದೆ. ಇದರಿಂದಾಗಿ ಇಬ್ಬರೂ ಆಟಗಾರರು ಅಫ್ಗಾನಿಸ್ತಾನ ವಿರುದ್ಧದ ಮೂರು ಏಕದಿನ ಪಂದ್ಯಗಳ ಸರಣಿಯಲ್ಲಿ ಆಡುವುದು ಖಚಿತವಾಗಿದೆ.

ಸ್ನಾಯುಸೆಳೆತದ ಸಮಸ್ಯೆಯಿಂದಾಗಿ ರೋಹಿತ್ ಮತ್ತು ಬೆನ್ನುನೋವಿನಿಂದಾಗಿ ಹಾರ್ದಿಕ್ ಅವರು ಜೂನ್ 2ರಿಂದ ಬೆಂಗಳೂರಿನ ಸಿಒಇಯಲ್ಲಿ ಚಿಕಿತ್ಸೆಯಲ್ಲಿದ್ದರು.

'ಹಾರ್ದಿಕ್ ಅವರು ಸಿಒಇಗೆ ಬರುವ ಮುನ್ನ ವಿದೇಶ ಪ್ರವಾಸದಲ್ಲಿ ರಜೆ ದಿನಗಳನ್ನು ಕಳೆದುಬಂದಿದ್ದರು. ಐದು ದಿವಸ ಅವರು ಪಂದ್ಯಪೂರ್ವ ತಯಾರಿಗಳನ್ನು ಮಾಡಿಕೊಂಡರು. ಅಲ್ಲದೇ ಬೌಲಿಂಗ್ ಮಾಡಿದರು. 10 ಓವರ್ ಕೋಟಾ ಪೂರೈಸಿದರು' ಎಂದು ಬಿಸಿಸಿಐ ಮೂಲಗಳು ತಿಳಿಸಿವೆ.

'ಸ್ಟ್ರೆಂಥ್ ಮತ್ತು ಕಂಡಿಷನಿಂಗ್ ತರಬೇತುದಾರರು ನೀಡಿರುವ ವರದಿಯ ಪ್ರಕಾರ ಇಬ್ಬರೂ ಆಟಗಾರರು ಫಿಟ್ ಆಗಿದ್ದಾರೆ' ಎಂದೂ ಮೂಲಗಳು ತಿಳಿಸಿವೆ.

ವಿರಾಟ್ ಕೊಹ್ಲಿ ಅವರು ಸ್ನಾಯುಸೆಳೆತದಿಂದಾಗಿ ಈ ಸರಣಿಯಲ್ಲಿ ಆಡುತ್ತಿಲ್ಲ.

ಐರ್ಲೆಂಡ್– ಇಂಗ್ಲೆಂಡ್ ಪ್ರವಾಸ: ಸಿರಾಜ್‌ಗೆ ವಿಶ್ರಾಂತಿ, ಪ್ರಸಿದ್ಧ ಆಯ್ಕೆ



ಮುಂಬೈ (ಪಿಟಿಐ): ಕಾರ್ಯಭಾರ ನಿರ್ವಹಣೆ ಭಾಗವಾಗಿ ವೇಗದ ಬೌಲರ್ ಮೊಹಮ್ಮದ್ ಸಿರಾಜ್ ಅವರಿಗೆ ಐರ್ಲೆಂಡ್– ಇಂಗ್ಲೆಂಡ್ ಪ್ರವಾಸದಿಂದ ವಿಶ್ರಾಂತಿ ನೀಡಲಾಗಿದೆ. ಅವರ ಬದಲು ಕನ್ನಡಿಗ ಪ್ರಸಿದ್ಧ ಕೃಷ್ಣ ಅವರನ್ನು ಸೇರ್ಪಡೆಗೊಳಿಸಲಾಗಿದೆ ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ಮಂಗಳವಾರ ತಿಳಿಸಿದೆ.


ಮುಂದೆ ದೀರ್ಘಕಾಲೀನ ಅಂತರರಾಷ್ಟ್ರೀಯ ಋತುವಿರುವ ಕಾರಣ 'ಮುಂಜಾಗ್ರತಾ ಕ್ರಮ'ವಾಗಿ ಈ ನಿರ್ಧಾರಕ್ಕೆ ಬರಲಾಗಿದೆ ಎಂದು ಮಂಡಳಿ ತಿಳಿಸಿದೆ.

ಸಿರಾಜ್ ಅವರನ್ನು ಐರ್ಲೆಂಡ್– ಇಂಗ್ಲೆಂಡ್ ಪ್ರವಾಸಕ್ಕೆ ಆಯ್ಕೆ ಮಾಡಲಾಗಿತ್ತು. ಆದರೆ ಜಪಾನ್‌ನಲ್ಲಿ ನಡೆಯಲಿರುವ ಏಷ್ಯನ್ ಗೇಮ್ಸ್‌ನ ಟಿ20 ಟೂರ್ನಿಗೆ ಕೈಬಿಡಲಾಗಿತ್ತು.

'ಬಿಸಿಸಿಐ ವೈದ್ಯಕೀಯ ತಂಡ ಮತ್ತು ತಂಡದ ಚಿಂತಕರ ಚಾವಡಿ' ನಡುವೆ ಚರ್ಚೆಯ ನಂತರ ಸಿರಾಜ್ ಅವರಿಗೆ ಕಾರ್ಯಭಾರತ ನಿರ್ವಹಣೆ ಭಾಗವಾಗಿ ವಿಶ್ರಾಂತಿ ಸಲಹೆ ಮಾಡಲಾಗಿದೆ' ಎಂದು ಹೇಳಿಕೆ ತಿಳಿಸಿದೆ.

ಭಾರತ ಮಹಿಳಾ ತಂಡದ ಜೆಮಿಮಾ ವಿಶ್ವಾಸ

ಮತ್ತೊಮ್ಮೆ ಜಯದ ಗೆರೆ ದಾಟಲು ಯತ್ನ



ಜೆಮಿಮಾ ರಾಡ್ರಿಗಸ್

ನವದೆಹಲಿ (ಪಿಟಿಐ): ಹೋದ ವರ್ಷ ಮೊದಲ ಬಾರಿಗೆ ಏಕದಿನ ಕ್ರಿಕೆಟ್ ವಿಶ್ವಕಪ್ ಜಯಿಸಿದ ನಂತರ ಭಾರತ ಮಹಿಳಾ ಕ್ರಿಕೆಟ್ ತಂಡದ ಆತ್ಮವಿಶ್ವಾಸವು ಇಮ್ಮಡಿಯಾಗಿದೆ. ಆದ್ದರಿಂದ ಇಂಗ್ಲೆಂಡ್‌ನಲ್ಲಿ ನಡೆಯಲಿರುವ ಮಹಿಳಾ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಭಾರತ ತಂಡದ ಮೇಲೆ ಅಪಾರ ನಿರೀಕ್ಷೆ ಮೂಡಿದೆ.

ಇದೇ 12ರಿಂದ ಇಂಗ್ಲೆಂಡ್‌ನಲ್ಲಿ ಆರಂಭವಾಗಲಿರುವ ಟಿ20 ವಿಶ್ವಕಪ್ ಟೂರ್ನಿಯಲ್ಲಿಯೂ ತಮ್ಮ ತಂಡ 'ಪ್ರಶಸ್ತಿ ಜಯಿಸುವ ನೆಚ್ಚಿನ ಬಳಗ'ವಾಗಿ ಕಣಕ್ಕಿಳಿಯುತ್ತಿದೆ ಎಂದು ಭಾರತ ತಂಡದ ಬ್ಯಾಟರ್ ಜೆಮಿಮಾ ರಾಡ್ರಿಗಸ್ ಭರವಸೆ ವ್ಯಕ್ತಪಡಿಸಿದ್ದಾರೆ.

ಭಾರತ ತಂಡವು ಈ ವಿಶ್ವಕಪ್ ಟೂರ್ನಿಯಲ್ಲಿ ಜೂನ್ 14ರಂದು ಬರ್ಮಿಂಗ್‌ಹ್ಯಾಮ್‌ನಲ್ಲಿ ನಡೆಯಲಿರುವ ಪಂದ್ಯದಲ್ಲಿ ಪಾಕಿಸ್ತಾನ ಎದುರು ಆಡುವ ಮೂಲಕ ಅಭಿಯಾನ ಆರಂಭಿಸಲಿದೆ. 2024ರ ಟೂರ್ನಿಯಲ್ಲಿ ನ್ಯೂಜಿಲೆಂಡ್ ಟ್ರೋಫಿ ಗೆದ್ದಿತ್ತು. ದಕ್ಷಿಣ ಆಫ್ರಿಕಾ ರನ್ನರ್ಸ್ ಅಪ್ ಆಗಿತ್ತು.


ಭಾರತ ತಂಡವು ಎ ಗುಂಪಿನಲ್ಲಿ ಆಡಲಿದೆ. ಆಸ್ಟ್ರೇಲಿಯಾ, ದಕ್ಷಿಣ ಆಫ್ರಿಕಾ, ಪಾಕಿಸ್ತಾನ, ಬಾಂಗ್ಲಾದೇಶ ಮತ್ತು ನೆದರ್ಲೆಂಡ್ಸ್ ತಂಡಗಳ ಪೈಪೋಟಿಯನ್ನು ಈ ಗುಂಪಿನಲ್ಲಿ ಎದುರಿಸಲಿದೆ.

'ಪ್ರತಿಯೊಬ್ಬರಿಗೂ ಆ ಒತ್ತಡದ ಪರಿಸ್ಥಿತಿ (ಏಕದಿನ ಕ್ರಿಕೆಟ್ ವಿಶ್ವಕಪ್ ವಿಜಯ)ಯ ಅನುಭವ ಇದೆ. ಅದೇ ಹೊತ್ತಿಗೆ ನಾವು ಒಂದು ಬಾರಿ ವಿಜಯದ ಗೆರೆಯನ್ನು ದಾಟಿದ್ದೇವೆ. ಮತ್ತೊಮ್ಮೆ ಅದನ್ನು ಸಾಧಿಸಬಲ್ಲೆವು. ಆ ವಿಶ್ವಾಸ ನಮಗಿದೆ' ಎಂದು ಜಿಯೊಸ್ಟಾರ್ ವಾಹಿನಿಯ 'ಚಾಂಪಿಯನ್ಸ್ ಹಡ್ಲ್' ಕಾರ್ಯಕ್ರಮದಲ್ಲಿ ಅವರು ಹೇಳಿದರು.

'ಒಂದು ಸಲ ಜಯಿಸಿದ ನಂತರ ಯಾರೂ ಸುಮ್ಮನಿರಲು ಬಯಸುವುದಿಲ್ಲ. ಅದನ್ನು ಎರಡು, ಮೂರು, ಮತ್ತೊಂದು ಬಾರಿ ಸಾಧಿಸಲು ಯತ್ನಿಸುತ್ತಾರೆ. ನಾವೆಲ್ಲಿಯೇ ಹೋದರು ಆ ತಾಣವು ತವರೆಂಬ ಭಾವನೆ ಬರುವಂತೆ ನಮ್ಮ ಅಭಿಮಾನಿಗಳು ಮಾಡುತ್ತಾರೆ' ಎಂದು ಜೆಮಿಮಾ ಹೇಳಿದರು.

ಮುಂಬೈನ 25 ವರ್ಷದ ಜೆಮಿಮಾ ಅವರು ಹೋದ ವರ್ಷ ಭಾರತದ ವಿಶ್ವಕಪ್ ವಿಜಯದಲ್ಲಿ ಪ್ರಮುಖ ಪಾತ್ರ ವಹಿಸಿದ್ದರು.

ಸ್ಟೋಕ್ಸ್, ಅಟ್ಕಿನ್ಸನ್‌ಗೆ ಕೊಕ್ ಸಾಧ್ಯತೆ



ಬೆನ್ ಸ್ಟೋಕ್ಸ್

ಲಂಡನ್ (ಎಪಿ): ತಂಡದ ಶಿಷ್ಟಾಚಾರಗಳನ್ನು ಉಲ್ಲಂಘಿಸಿ ಸೋಮವಾರ ಬೆಳಗಿನ ಜಾವದವರೆಗೆ ನೈಟ್ ಕ್ಲಬ್‌ನಲ್ಲಿ ಕಳೆದ ಇಂಗ್ಲೆಂಡ್ ಕ್ರಿಕೆಟ್ ತಂಡದ ನಾಯಕ ಬೆನ್ ಸ್ಟೋಕ್ಸ್ ಮತ್ತು ವೇಗದ ಬೌಲರ್ ಗಸ್ ಅಟ್ಕಿನ್ಸನ್ ಅವರು ತಂಡದಿಂದ ಸ್ಥಾನ ಕಳೆದುಕೊಳ್ಳುವ ಸಾಧ್ಯತೆ ದಟ್ಟವಾಗಿದೆ. ಈಗಾಗಲೇ ಇವರಿಬ್ಬರ ವಿರುದ್ಧ ಇಸಿಬಿ ವಿಚಾರಣೆ ನಡೆಸುತ್ತಿದೆ.

ಲಾರ್ಡ್ಸ್‌ನಲ್ಲಿ ಭಾನುವಾರ ಮೊದಲ ಟೆಸ್ಟ್ ಪಂದ್ಯ ಗೆದ್ದ ನಂತರ ಸ್ಟೋಕ್ಸ್ ಮತ್ತು ಅಟ್ಕಿನ್ಸನ್ ನೈಟ್ ಕ್ಲಬ್‌ಗೆ ಹೋಗಿದ್ದರು. ಅಲ್ಲಿ ನಡೆದ ಘಟನೆಯಲ್ಲಿ ಸಾರಸೆನ್ಸ್ ಕ್ಲಬ್‌ನ ರಗ್ಬಿ ಆಟಗಾರನೊಬ್ಬ ಅಟ್ಕಿನ್ಸನ್ ಅವರಿಗೆ ಗುದ್ದಲು ಹೋಗಿದ್ದು, ತಡೆಯಲು ಹೋದ ತಂಡದ ಭದ್ರತಾ ಅಧಿಕಾರಿಗೆ ಏಟಾಗಿದೆ ಎಂದು ಕೆಲವು ಮಾಧ್ಯಮಗಳು ವರದಿ ಮಾಡಿವೆ.

ಹೋದ ವರ್ಷದ ಕೊನೆಯಲ್ಲಿ ಆ್ಯಷಸ್ ಸರಣಿಯಲ್ಲಿ ಇಂಗ್ಲೆಂಡ್ ತಂಡವು ಮುಖಭಂಗ ಅನುಭವಿಸಿದ ನಂತರ ಅತಿಯಾದ ಮದ್ಯಸೇವನೆ ತಡೆಯಲು ಮತ್ತು ವೃತ್ತಿಪರತೆ ಮೈಗೂಡಿಸಿಕೊಳ್ಳಲು ತಂಡದ ಆಟಗಾರರಿಗೆ ಜನವರಿಯಲ್ಲಿ 'ನೈಟ್ ಕರ್ಫ್ಯೂ' ವಿಧಿಸಲಾಗಿತ್ತು.

'ಸೋಮವಾರ ನಸುಕಿನಲ್ಲಿ ನೈಟ್‌ಕ್ಲಬ್ ಘಟನೆ ವೇಳೆ ಸ್ಟೋಕ್ಸ್ ಮತ್ತು ಅಟ್ಕಿನ್ಸನ್ ಅಲ್ಲಿ ಹಾಜರಿದ್ದರು. ಇನ್ನಷ್ಟು ವಿವರ ಕಲೆಹಾಕುತ್ತಿದ್ದೇವೆ. ಎರಡನೇ ಟೆಸ್ಟ್ ತಂಡವನ್ನು ಸರಿಯಾದ ಸಮಯಕ್ಕೆ ಪ್ರಕಟಿಸಲಾಗುವುದು' ಎಂದು ಇಂಗ್ಲೆಂಡ್ ಮತ್ತು ವೇಲ್ಸ್ ಕ್ರಿಕೆಟ್ (ಇಸಿಬಿ) ತಿಳಿಸಿದೆ.

ಓವಲ್‌ನಲ್ಲಿ ಎರಡನೇ ಟೆಸ್ಟ್ ಪಂದ್ಯ ಜೂನ್ 17ರಂದು ಆರಂಭವಾಗಲಿದೆ.

ಮೈಸೂರಲ್ಲಿ ಮಹಿಳಾ ಗಾಲ್ಫ್ ಟೂರ್ನಿ ನಾಳೆಯಿಂದ

ಪ್ರಜಾವಾಣಿ ವಾರ್ತೆ

ಮೈಸೂರು: ಇಲ್ಲಿನ ಜಯಚಾಮರಾಜೇಂದ್ರ ಗಾಲ್ಫ್ ಕ್ಲಬ್ ಅಂಗಳದಲ್ಲಿ ಜೂನ್ 11ರಿಂದ 13ರವರೆಗೆ 'ಹೀರೊ ವುಮೆನ್ಸ್ ಇಂಡಿಯಾ ಓಪನ್' ರಾಷ್ಟ್ರೀಯ ಗಾಲ್ಫ್ ಟೂರ್ನಿಯು ನಡೆಯಲಿದೆ.


ಈ ವರ್ಷದ ಹೀರೊ ಮಹಿಳಾ ವೃತ್ತಿಪರ ಗಾಲ್ಫ್ ಟೂರ್‌ನ ಏಳನೇ ಟೂರ್ನಿ ಇದಾಗಿದೆ. ಶ್ರೇಯಾಂಕಿತ ಆಟಗಾರ್ತಿಯರಾದ ರಿದಿಮಾ ದಿಲಾವರ್, ಟ್ವಿಸಾ ಮಲ್ಲಿಕ್, ವಾಣಿ ಕಪೂರ್ ಜೊತೆಗೆ ಮೈಸೂರಿನ ನಾಲ್ವರು ಸೇರಿದಂತೆ 11 ಅಮೆಚೂರ್ ಆಟಗಾರ್ತಿಯರು ಸ್ಪರ್ಧೆ ಒಡ್ಡಲಿದ್ದಾರೆ.

'ವುಮೆನ್ಸ್ ಗಾಲ್ಫ್ ಅಸೋಸಿಯೇಷನ್ ಆಫ್ ಇಂಡಿಯಾ ಆಯೋಜಿಸಿರುವ ಟೂರ್ನಿಯಲ್ಲಿ ವಿವಿಧ ರಾಜ್ಯಗಳ 51 ಆಟಗಾರ್ತಿಯರು ಪಾಲ್ಗೊಳ್ಳಲಿದ್ದು, ಒಟ್ಟು ₹17 ಲಕ್ಷ ನಗದು ಬಹುಮಾನ ಪಡೆಯಲಿದ್ದಾರೆ. 2024ರಲ್ಲಿ ಇದೇ ಅಂಗಳದಲ್ಲಿ ಟೂರ್ನಿ ನಡೆದಿದ್ದು, ಮತ್ತೊಮ್ಮೆ ಆತಿಥ್ಯದ ಅವಕಾಶ ಸಿಕ್ಕಿದೆ' ಎಂದು ಜಯಚಾಮರಾಜ ಒಡೆಯರ್ ಗಾಲ್ಫ್ ಕ್ಲಬ್ ಅಧ್ಯಕ್ಷ ಅರುಣ್‌ಕುಮಾರ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಪ್ರತಿ ದಿನ ಬೆಳಿಗ್ಗೆ 7.30ರಿಂದ ಸ್ಪರ್ಧೆ ನಡೆಯಲಿದೆ. 131 ಎಕರೆಯಷ್ಟು ವಿಶಾಲವಾದ ಗಾಲ್ಫ್ ಅಂಗಳದಲ್ಲಿ ಗಾಲ್ಫರ್‌ಗಳು ಸೆಣಸಲಿದ್ದಾರೆ ಎಂದರು.

ಬ್ಲಾಕ್ ಮೂನ್ ತಂಡಕ್ಕೆ ಗೆಲುವು

ಬೆಂಗಳೂರು: ಅವಿನಾಶ್ ಎಂ. ಅವರ ಹ್ಯಾಟ್ರಿಕ್ ಗೋಲುಗಳ ನೆರವಿನಿಂದ ಬ್ಲಾಕ್ ಮೂನ್ ತಂಡವು ಕೆಎಸ್‌ಎಫ್‌ಎ ಸಿ ಡಿವಿಷನ್ ಫುಟ್‌ಬಾಲ್ ಲೀಗ್‌ನ ಪಂದ್ಯದಲ್ಲಿ 6–0ಯಿಂದ ಯಲಹಂಕ ತಂಡವನ್ನು ಮಣಿಸಿತು.



ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಪಂದ್ಯದಲ್ಲಿ ಬ್ಲಾಕ್ ಮೂನ್ ತಂಡದ ಪರ ಅವಿನಾಶ್ 42ನೇ, 47ನೇ ಮತ್ತು 54ನೇ ನಿಮಿಷದಲ್ಲಿ ಗೋಲು ದಾಖಲಿಸಿದರು. ಜೂಡ್ ಫ್ರಾಂಕ್ಲಿನ್ (3ನೇ), ಜೇಮ್ಸ್ ಎ. (24ನೇ) ಮತ್ತು ಮಾರ್ಕ್ ಸ್ಟೀಫನ್ (33ನೇ) ತಲಾ ಒಂದು ಗೋಲು ಗಳಿಸಿದರು.

ಇತರ ಪಂದ್ಯಗಳಲ್ಲಿ ರೊನಾಲ್ಡೊ ಎಫ್‌ಸಿ ಬೆಂಗಳೂರು ತಂಡವು 8–0ಯಿಂದ ವಿಕ್ಟೋರಿಯಾ ಎಫ್‌ಸಿ ಬೆಂಗಳೂರು ತಂಡವನ್ನು ಮಣಿಸಿತು. ಲುಂಜಕೈ ಬೇಟ್ ಹ್ಯಾಟ್ರಿಕ್ ಗೋಲು ದಾಖಲಿಸಿದರು. ಪ್ಲೇ 365 ಎಫ್‌ಸಿ ತಂಡವು 6–1ರಿಂದ ಅನ್ಸ್ಪೋರ್ಟ್ಸ್ ಕ್ಲಬ್ ತಂಡವನ್ನು ಸೋಲಿಸಿತು.

ಡಿ.ಬಿ. ಯುನೈಟೆಡ್ ಎಫ್‌ಸಿ 10–1ರಿಂದ ಪಯೋನೀರ್ ಎಫ್‌ಸಿ ಬೆಂಗಳೂರು ತಂಡವನ್ನು ಸೋಲಿಸಿತು. ಆರ್.ವಿ. ಎಫ್‌ಸಿ ತಂಡವು 1–0ಯಿಂದ ಅಗ್ನಿಪುತ್ರ ಎಫ್.ಎ ತಂಡವನ್ನು ಮಣಿಸಿತು.

ಸೃಷ್ಟಿ ಕಿರಣ್ ಹೊಸ ಮೈಲಿಗಲ್ಲು



ಸೃಷ್ಟಿ ಕಿರಣ್

ಬೆಂಗಳೂರು: ಅಂತರ ರಾಷ್ಟ್ರೀಯ ಜೂನಿಯರ್ ಟೆನಿಸ್ ಸರ್ಕ್ಯೂಟ್‌ನಲ್ಲಿ ಅಮೋಘ ಪ್ರದರ್ಶನ ನೀಡುತ್ತಿರುವ ಬೆಂಗಳೂರಿನ ಸೃಷ್ಟಿ ಕಿರಣ್ ಅವರು 13 ವರ್ಷದೊಳಗಿನ ವಯೋಮಾನದವರ ರ್‍ಯಾಂಕಿಂಗ್‌ನಲ್ಲಿ ವಿಶ್ವದ ಅಗ್ರಮಾನ್ಯ ಆಟಗಾರ್ತಿಯಾಗಿ ಹೊರಹೊಮ್ಮಿದ್ದಾರೆ.

ಕಳೆದ ವಾರ ಗ್ವಾಟೆಮಾಲಾದಲ್ಲಿ ನಡೆದ ಐಟಿಎಫ್ ವರ್ಲ್ಡ್ ಟೆನಿಸ್ ಟೂರ್ ಜೂನಿಯರ್ ಜೆ-100 ಟೂರ್ನಿಯಲ್ಲಿ ಸೃಷ್ಟಿ ಅವರು ರನ್ನರ್ ಅಪ್ ಆಗಿದ್ದರು. ಅದಕ್ಕೂ ಮೊದಲು ಸತತ ಐದು ಐಟಿಎಫ್ ಜೂನಿಯರ್ ಪ್ರಶಸ್ತಿಗಳನ್ನು ಗೆದ್ದಿದ್ದರು.

ಈ ಗೆಲುವಿನಿಂದಾಗಿ ಸೃಷ್ಟಿ ಅವರು ಐಟಿಎಫ್ ಜೂನಿಯರ್ ಕ್ರಮಾಂಕದಲ್ಲಿ ವೃತ್ತಿಜೀವನದ ಉನ್ನತ 357ನೇ ಸ್ಥಾನಕ್ಕೆ ಏರಿದ್ದಾರೆ. ಜೊತೆಗೆ ಅವರು 13 ವರ್ಷದೊಳಗಿನವರ ವಿಭಾಗದಲ್ಲಿ ಹೊಸ ಮೈಲಿಗಲ್ಲು ತಲುಪಿದ್ದಾರೆ.

ಆಸ್ಟ್ರೇಲಿಯನ್ ಓಪನ್: ಸನೀತ್ ಮುಖ್ಯಸುತ್ತಿಗೆ

ಸಿಡ್ನಿ (ಪಿಟಿಐ): ಭಾರತದ ಸನೀತ್ ದಯಾನಂದ್ ಅವರು ಆಸ್ಟ್ರೇಲಿಯನ್ ಓಪನ್ ಬ್ಯಾಡ್ಮಿಂಟನ್ ಟೂರ್ನಿಯ ಪ್ರಧಾನ ಸುತ್ತಿಗೆ ಅರ್ಹತೆ ಪಡೆದರು. ಅರ್ಹತಾ ಸುತ್ತಿನಲ್ಲಿ ಅವರು ನಾಲ್ಕನೇ ಶ್ರೇಯಾಂಕ ಪಡೆದಿದ್ದು, ಮಂಗಳವಾರ ಆಡಿದ ಎರಡೂ ಪಂದ್ಯಗಳನ್ನು ಗೆದ್ದುಕೊಂಡರು.

ಮೊದಲು ಸ್ಥಳೀಯ ಆಟಗಾರ ಕರೊನೊ ಅವರನ್ನು 21–17, 21–15 ರಿಂದ ಸೋಲಿಸಿದ ದಯಾನಂದ, ನಂತರ ಮಲೇಷ್ಯಾದ ಮಿಂಗ್ ಹಾಂಗ್ ಲಿಮ್ ಅವರನ್ನು 21–19, 21–16 ರಿಂದ ಮಣಿಸಿದರು.

ಕರ್ನಾಟಕದವರಾದ ಸನೀತ್ ಟೂರ್ನಿಯ ಮೊದಲ ಸುತ್ತಿನಲ್ಲಿ ಚೀನಾದ ಹು ಝು ಆನ್ ಅವರನ್ನು ಎದುರಿಸಲಿದ್ದಾರೆ. ಪುರುಷರ ಡಬಲ್ಸ್ ಮೊದಲ ಸುತ್ತಿನಲ್ಲಿ ಭಾರತದ ಅಚ್ಯುತಾದಿತ್ಯ ರಾವ್– ಪಿ.ಅರ್ಜುನ್ ರೆಡ್ಡಿ ಅವರು ಹೊರಬಿದ್ದರು. ಕನ್ಕಿ ಇಗಾವಾ– ಒಯಿ ಯಿ ಹೆರ್ನ್ (ಆಸ್ಟ್ರೇಲಿಯಾ) ಜೋಡಿಯು 21–15, 21–15ರಲ್ಲಿ ಭಾರತದ ಆಟಗಾರರನ್ನು ಸೋಲಿಸಿತು.

ಮಹಿಳೆಯರ ಸಿಂಗಲ್ಸ್‌ನಲ್ಲಿ ಮೂರನೇ ಶ್ರೇಯಾಂಕದ ಪಿ.ವಿ.ಸಿಂಧು ಬುಧವಾರ ಅಭಿಯಾನ ಆರಂಭಿಸಲಿದ್ದಾರೆ.

ಕ್ಲಬ್ ಕೇಂದ್ರಿತ ಮಾದರಿಗೆ ತಾತ್ವಿಕ ಒಪ್ಪಿಗೆ

ನವದೆಹಲಿ (ಪಿಟಿಐ): 'ಮುಂದಿನ ಎರಡು ವರ್ಷ ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಟೂರ್ನಿಯನ್ನು 'ಕ್ಲಬ್ ಕೇಂದ್ರಿತ ಮಾದರಿ'ಯಲ್ಲಿ ನಡೆಸಲು ಎಐಎಫ್‌ಎಫ್ ತಾತ್ವಿಕ ಒಪ್ಪಿಗೆ ನೀಡಿದೆ. ಈ ಬಗ್ಗೆ ಕ್ರೀಡಾ ಸಚಿವರಿಗೆ ತಿಳಿಸಲಾಗಿದೆ' ಎಂದು ಫೆಡರೇಷನ್ ಉನ್ನತ ಅಧಿಕಾರಿಯೊಬ್ಬರು ಮಂಗಳವಾರ ತಿಳಿಸಿದ್ದಾರೆ.

'ಐಎಸ್‌ಎಲ್ ಕ್ಲಬ್‌ಗಳು ನೀಡಿದ ಪ್ರಸ್ತಾವಕ್ಕೆ ಫೆಡರೇಷನ್ ತಾತ್ವಿಕ ಒಪ್ಪಿಗೆ ನೀಡಿದೆ. ಕ್ರೀಡಾ ಸಚಿವಾಲಯವೂ ಅದಕ್ಕೆ ಹಸಿರು ನಿಶಾನೆ ತೋರಿದೆ. ಇದೇ 15ರಂದು ಔಪಚಾರಿಕವಾಗಿ ಘೋಷಣೆ ಮಾಡುತ್ತೇವೆ' ಎಂದು ಎಐಎಫ್‌ಎಫ್ ಉಪ ಪ್ರಧಾನ ಕಾರ್ಯದರ್ಶಿ ಎಂ. ಸತ್ಯನಾರಾಯಣ್ ಅವರು ಪಿಟಿಐಗೆ ಹೇಳಿದ್ದಾರೆ.

ಸೆ.4ರಂದು 2026-27ರ ಐಎಸ್‌ಎಲ್ ಋತು ಆರಂಭವಾಗಲಿದೆ. ಡುರಾಂಡ್ ಕಪ್ ಜೂನ್ 25 ಮತ್ತು ಜುಲೈ 25 ರ ನಡುವೆ ನಡೆಯಲಿದೆ ಎಂದು ಮಾಹಿತಿ ನೀಡಿದ್ದಾರೆ.

2026-27ರ ಐಎಸ್‌ಎಲ್ ಟೂರ್ನಿ ಪೂರ್ಣ ಏಳು ತಿಂಗಳ ಋತುವಾಗಿದ್ದು, 14 ತಂಡಗಳಿಗೆ ತವರು ಮತ್ತು ತವರಿನಾಚೆ ಪಂದ್ಯಗಳು ನಡೆಯಲಿವೆ.

ಮೈಸೂರು ರೇಸ್

ಕ್ರೌನ್ ಡ್ರೈವ್ ಗೆಲ್ಲುವ ನಿರೀಕ್ಷೆ

ಅಂಬಾ ವಿಲಾಸ ಪ್ಯಾಲೇಸ್ ಟ್ರೋಫಿ ಬುಧವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಕ್ರೌನ್ ಡ್ರೈವ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1:30ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಏರ್ ಬೆಂಡರ್ 1, ಸ್ಟಾರ್ಮ್‌ರೈಡರ್ 3, ಡ್ಯಾಜ್ಲಿಂಗ್ ಹಾಕ್ 6
2ನೇ ರೇಸ್: ಜಸ್ಟ್ ಬ್ಲೂಸ್ 1, ಮಡೋವ ತಲ್ವೈವಿ 6, ಸೈಂಟ್ಲಿ ಸ್ಟಾರ್ 4
3ನೇ ರೇಸ್: ಐರನ್ ಕಿಂಗ್ 4, ವಾಲ್ಟರ್ 6, ಶೀರ್ ಎಲಿಗೆನ್ಸ್ 2
4ನೇ ರೇಸ್: ಪರ್ಪ್ಲ್ ಮಾರ್ಟಿನಿ 8, ಮಿಸ್ಟರ್ ಕರ್ನಾಟಕ 1, ವಿಂಡ್‌ಬೋರ್ನ್ 4
5ನೇ ರೇಸ್: ಅಮೇಜಿಂಗ್ ಅರೈಸ್ 2, ಗೋಲ್ಡ್ ಫೇಮ್ 4, ಕ್ಲೌಡಿ ಹಿಲ್ಸ್ 3
6ನೇ ರೇಸ್: ಕ್ರೌನ್ ಡ್ರೈವ್ 1, ಪರ್ಫೆಕ್ಟ್ ಬ್ಲೆಂಡ್ 8, ಗೋಲ್ಡ್ ಕೈಟ್ 9
7ನೇ ರೇಸ್: ಸಡ 12, ಚೀಫ್ ಅಡ್ಮಿರಲ್ 5, ರೀನ್ ಆಫ್ ಟೆರರ್ 2
8ನೇ ರೇಸ್: ಕ್ಲಿಂಪ್ಟ್ 7, ಬಾಲ್‌ಗೋನಿ 9, ಮ್ಯಾಜಿಕ್ ಸರ್ಕಲ್ 5

ಉತ್ತಮ ಬೆಟ್: ಏರ್ ಬೆಂಡರ್

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್	3ನೇ ಟ್ರಿಬಲ್
4,5,6,7,8	1,2,3	3,4,5	6,7,8